ವಿಶ್ವವಾಣಿ
ವಿಶ್ವಾಸವೇ ವಿಶ್ವ

ಒಲಿಂಪಿಕ್ಸ್‌ನ ಸಮಾರೋಪ ಸಮಾರಂಭಕ್ಕೂ ಮುನ್ನ ಪ್ಯಾರಿಸ್‌ನ ಟವರ್ ಮುಂದೆ, ಹಾಕಿ ಗೋಲ್ ಕೀಪರ್ ಶ್ರೀಜೇಶ್ ಸಾಂಪ್ರದಾಯಿಕ ಉಡುಪಿನಲ್ಲಿ ಕಂಡಿದ್ದು ಹೀಗೆ.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ಅಂತರಾಷ್ಟ್ರೀಯ ಯುವ ದಿನಾಚರಣೆ 2024
NACO KSAPS
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ
ಘೋಷ ವಾಕ್ಯ "ಸುಸ್ಥಿರ ಅಭಿವೃದ್ಧಿಗಾಗಿ ಯುವಜನತೆಯ ಡಿಜಿಟಲ್ ಮಾರ್ಗಗಳು"
ಹೆಚ್.ಐ.ವಿ ತಡೆಗಟ್ಟಲು ತೀವ್ರಗೊಳಿಸಿದ ಐ.ಇ.ಸಿ ಪ್ರಚಾರಾಂದೋಲನಕ್ಕೆ ಚಾಲನೆ
ಮಾನ್ಯ ಆರೋಗ್ಯ ಸಚಿವರಾದ ಶ್ರೀ ದಿನೇಶ್ ಗುಂಡೂರಾವ್ ಅವರು ಹೆಚ್.ಐ.ವಿ ಪ್ರಚಾರಾಂದೋಲನದಲ್ಲಿ ಭಾಗವಹಿಸಿರುವುದು
ಶ್ರೀ ಡಿ.ಕೆ.ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ದಿನಾಂಕ : 12-08-2024 । ಸಮಯ : ಬೆಳಗ್ಗೆ 11:00ಕ್ಕೆ । ಸ್ಥಳ : ಆರೋಗ್ಯ ಸೌಧ, ನೆಲ ಮಹಡಿ ಸಭಾಂಗಣ, ಬೆಂಗಳೂರು
"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು." ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ
ಮಾಹಿತಿ ಮತ್ತು ಸಲಹೆಗಾಗಿ ಉಚಿತ ರಾಷ್ಟ್ರೀಯ ಸಹಾಯವಾಣಿ AIDS Helpline 1097 ಕ್ಕೆ ಕರೆ ಮಾಡಿ
Download the NACO AIDS app GET IT ON Google Play
https://kspc.karnataka.gov.in
KarSAPS
ನಿಮ್ಮ ಆರೋಗ್ಯ, ನಮ್ಮ ಬದ್ಧತೆ

ಪುಟ ತೆರೆದಂತೆ...

ಸಿದು ಈಗ ಔಟ್ ಆಫ್ ಡೇಂಜರ್?
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ
ಸಂ.ಪುಟ | 6

'ಕಾಫಿ ಕಿಂಗ್' ಬಗ್ಗೆ ಒಂದಿಷ್ಟು ಮಾತು
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
ಸಂ.ಗಮ | 7

ಮಾತಂದ್ರೆ ಮಾತು

ಮುಖ್ಯಮಂತ್ರಿ ಕುರ್ಚಿ ಎಂದಿಗೂ ಅಲುಗಾಡಲ್ಲ, ಅದು ಕೆಂಗಲ್ ಹನುಮಂತಯ್ಯನವರು ಕಟ್ಟಿರುವ ವಿಧಾನಸೌಧದ ಕುರ್ಚಿ. ಆದರಲ್ಲಿ ಕುಳಿತವರು ಅಲುಗಾಡುತ್ತಾರೆ.

ಎಚ್.ಡಿ.ಕುಮಾರಸ್ವಾಮಿ
ಕೇಂದ್ರ ಸಚಿವ

ದಾರಿದೀಪೋಕ್ತಿ

ನಿಮ್ಮನ್ನು ನೀವು ನಿಯಂತ್ರಿಸಿಕೊಳ್ಳಬಲ್ಲಿರಾದರೆ ಅದೇ ನಿಮ್ಮ ದೊಡ್ಡ ತಾಕತ್ತು. ಕೋಪದಲೂ ಮೌನ ತಾಳುವ ತಾಳುವ ಗುಣ ಬೆಳೆಸಿಕೊಂಡರೆ ಅದು ನಿಮ್ಮ ಶಕ್ತಿ. ಸದಾ ಉತ್ತಮ ಆಲೋಚನೆಯಲ್ಲಿ ತೊಡಗಿದ್ದರೆ ಅದು ನಿಮ್ಮ ಅತ್ಯುತ್ತಮ ಗುಣ. ಇವನ್ನು ಯಾವ ಕಾರಣಕ್ಕೂ ಬಿಟ್ಟುಕೊಡಬಾರದು.

ವಕ್ರತುಂಡೋಕ್ತಿ

ಹಾಸಿಗೆಗೆ ವಾಪಸ್ ಬೇಗನೆ ಮರಳಿದೆ ಎಂಬುದು ಇಲ್ಲವೇ ಇಲ್ಲ, ಆದರೆ ತಡವಾಗಿ ಮಾತ್ರ ಮರಳಬಾರದು.

ಕ್ರಸ್ಟ್‌ಗೇಟ್ ಚೈನ್ ಕಟ್ | ಅಣೆಕಟ್ಟಿನಿಂದ 65 ಟಿಎಂಸಿ ನೀರು ಖಾಲಿ ಅನಿವಾರ್ಯ

ಟಿಬಿ ಡ್ಯಾಂ ತೆರೆದ ಬಾಗಿಲು

ನಿರ್ಮಾಣ ವರ್ಷ	ಒಟ್ಟು ಸಾಮರ್ಥ್ಯ	ಉದ್ದ	ಎತ್ತರ	ಆಶ್ರಿತ ರಾಜ್ಯಗಳು	ಫಲಾನುಭವಿ ಜಿಲ್ಲೆಗಳು	ಒಟ್ಟು ಜಲಾನಯನ ವ್ಯಾಪ್ತಿ
1958	135.36	2441 ಮೀ	49.38 ಮೀ	3	10	18 ಲಕ್ಷ ಹೆಕ್ಟೇರ್

ಕೊಪ್ಪಳ/ಬೆಂಗಳೂರು: ಮಧ್ಯಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕದ ಹಲವು ಜಿಲ್ಲೆಗಳಿಗೆ ನೀರುಣಿಸುವ ತುಂಗಭದ್ರಾ ಜಲಾಶಯದ ಕ್ರಸ್ಟ್‌ಗೇಟ್‌ನ ಚೈನ್ ತುಂಡರಿಸಿದ್ದು, ಇಡೀ ಜಲಾಶಯವನ್ನೇ ಖಾಲಿ ಮಾಡುವ ಅನಿವಾರ್ಯ ಎದುರಾಗಿದೆ.

ಮಲೆನಾಡಿನಲ್ಲಿನ ಭಾರಿ ಮಳೆಯಾಗಿದ್ದರಿಂದ ಕೆಲವೇ ದಿನಗಳಲ್ಲಿ ಟಿಬಿ ಡ್ಯಾಂ ಭರ್ತಿಯಾಗಿತ್ತು. ಆದರೆ ಶನಿವಾರ 19ನೇ ಗೇಟ್‌ನ ಚೈನ್ ಕತ್ತರಿಸಿ ಹೋಗಿದ್ದು, ನೀರಿನ ರಭಸಕ್ಕೆ ಗೇಟ್ ಕೊಚ್ಚಿ ಹೋಗಿದೆ. ಇದೀಗ ಜಲಾಶಯ ಭರ್ತಿಯಾಗಿರುವುದರಿಂದ, ನೂತನ ಗೇಟ್ ಅಳವಡಿಸುವುದಕ್ಕೆ ಇಡೀ ಜಲಾಶಯ ಖಾಲಿ ಮಾಡಬೇಕಾಗಿದೆ. ಆದ್ದರಿಂದ ನಿತ್ಯ 2 ಲಕ್ಷ ಕ್ಯುಸೆಕ್‌ನಂತೆ ಮುಂದಿನ ಒಂದು ವಾರ ನೀರು ಹರಿಸಿ, ಸುಮಾರು 65 ಟಿಎಂಸಿ ನೀರನ್ನು ಖಾಲಿ ಮಾಡಲು ಟಿಬಿ ಬೋರ್ಡ್ ಮುಂದಾಗಿದೆ. ಗೇಟ್ ಕೊಚ್ಚಿರುವ ವಿಷಯ ಬೆಳಕಿಗೆ ಬರುತ್ತಿದ್ದ ಡಿಸಿಎಂ ಡಿ.ಕೆ. ಶಿವಕುಮಾರ್, ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್ ತಂಗಡಿ, ಸ್ಥಳೀಯ ಜನಪ್ರತಿನಿಧಿಗಳು ಸೇರಿ ಹಲವರು ಜಲಾಶಯಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಅಧಿಕಾರಿಗಳೊಂದಿಗೆ ಸರಣಿ ಸಭೆ ನಡೆಸಿದ್ದು, ತಜ್ಞರ ಮೊರೆ ಹೋಗಿದ್ದಾರೆ. ತಜ್ಞರ ಪ್ರಕಾರ, ಯಾವುದೇ ತಜ್ಞರ ತಂಡ ಬಂದರೂ, ಈ ಗೇಟಿನ ಕಟ್ಟೆಯ ಮಟ್ಟಕ್ಕೆ ನೀರು ಬರುವ ತನಕ ದುರಸ್ತಿ ಕಾರ್ಯಚರಣೆ ಅಸಾಧ್ಯ. ಆದ್ದರಿಂದ ಕನಿಷ್ಠ 65 ಟಿಎಂಸಿ ನೀರನ್ನು ಹೊರಬಿಡಬೇಕಾದ ಅನಿವಾರ್ಯತೆಯಿದೆ ಎನ್ನಲಾಗಿದೆ.

→ 4

- ನಿರ್ವಹಣೆಯಿಲ್ಲದೇ, ಗೇಟಿನ ಚೈನ್ ಕಟ್; ಇದರಿಂದ ನೀರಿನಲ್ಲಿ ಕೊಚ್ಚಿಹೋದ ಗೇಟ್
- ಮುಂದಿನ ಒಂದು ವಾರ ಎರಡು ಲಕ್ಷ ಕ್ಯುಸೆಕ್‌ಕ್ಕೂ ಹೆಚ್ಚು ನೀರು ಬಿಟ್ಟರೆ ಮಾತ್ರ ದುರಸ್ತಿ ಸಾಧ್ಯ
- ಸುಮಾರು 65 ಟಿಎಂಸಿ ನೀರನ್ನು ಖಾಲಿ ಮಾಡಬೇಕಿದೆ ಎನ್ನುತ್ತಿರುವ ಅಧಿಕಾರಿಗಳು
- ಈಗಲೇ ಜಲಾಶಯವನ್ನು ಖಾಲಿ ಮಾಡಿಕೊಂಡರೆ, ಇಡೀ ವರ್ಷ ಈ ಭಾಗದ ಜಿಲ್ಲೆಯ ರೈತರಿಗೆ ಸಂಕಷ್ಟ

ನಾಳೆ ಸಿಎಂ ಭೇಟಿ

ತುಂಗಭದ್ರಾ ಜಲಾಶಯ ಭರ್ತಿಯಾಗಿದ್ದ ಹಿನ್ನೆಲೆಯಲ್ಲಿ ಸಿಎಂ ಸಿದ್ದರಾಮಯ್ಯ ಅವರು ಟಿಬಿ ಡ್ಯಾಂಗೆ ಮಂಗಳವಾರ ಬಾಗಿನ ಸಮರ್ಪಣೆ ಮಾಡಬೇಕಿತ್ತು. ಆದರೀಗ ಗೇಟ್ ಹಾಳಾಗಿ ಹೋಗಿರುವುದರಿಂದ ಬಾಗಿನ ಸಮರ್ಪಣೆ ಬದಲಿಗೆ, ದುರಸ್ತಿಯಾಗಿರುವ ಗೇಟ್ ವೀಕ್ಷಿಸಲು ತೆರಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಇದಕ್ಕೂ ಮೊದಲು, ಭಾನುವಾರ ಬೆಳಗ್ಗೆಯೇ ಅಧಿಕಾರಿಗಳೊಂದಿಗೆ ಚರ್ಚಿಸಿ, ವರದಿ ನೀಡುವಂತೆ ಸೂಚನೆ ನೀಡಿದ್ದಾರೆ.

ತುಂಗಭದ್ರಾ ಬೋರ್ಡ್ ನಿರ್ಲಕ್ಷ್ಯ

ಜಲಾಶಯದ ನಿರ್ವಹಣೆಗೆ ಕೇಂದ್ರ ಜಲ ಆಯೋಗದ ಅಧೀನದಲ್ಲಿ ತುಂಗಭದ್ರಾ ಬೋರ್ಡ್ ರಚಿಸಲಾಗಿದೆ. ಇದು ಅಂತಾರಾಜ್ಯದ ಯೋಜನೆಯಾಗಿರುವುದರಿಂದ ಕರ್ನಾಟಕ-ಆಂಧ್ರಪ್ರದೇಶ ಮೂಲದ ಹೊರತಾದ ಅಧಿಕಾರಿಯನ್ನೇ ನಿರ್ದೇಶಕರಾಗಿ ನಿಯೋಜನೆ ಮಾಡಬೇಕು ಎಂಬ ನಿಯಮ ಇದೆ. ಆದರೆ, ಇದ್ಯಾವುದೂ ಪಾಲನೆ ಆಗುತ್ತಿಲ್ಲ. ಹೆಚ್ಚುವರಿ ನೀರು ಹೊರಗೆ ಬಿಡಲು ಡ್ಯಾಂಗೆ ಅಳವಡಿಸಲಾದ ಕ್ರಸ್ಟ್ ಗೇಟ್ ನಿರ್ವಹಣೆ ಟಿಬಿ ಬೋರ್ಡ್‌ನ ಜವಾಬ್ದಾರಿ. ಇಲ್ಲಿನ ಅಧಿಕಾರಿಗಳು ಮತ್ತು ಎಂಜಿನಿಯರ್‌ಗಳ ಬೇಜವಾಬ್ದಾರಿ ಯಿಂದ ಗೇಟ್ ಕಿತ್ತು ಹೋಗಿದ್ದು, ಇದರಿಂದ ಕರ್ನಾಟಕ, ಆಂಧ್ರ ಮತ್ತು ತೆಲಂಗಾಣದ ರೈತರು ಸಮಸ್ಯೆ ಅನುಭವಿಸುವಂತಾಗಿದೆ.

> ಹೊಸ ಗೇಟ್ ಅಳವಡಿಸಲು 60 ಟಿಎಂಸಿ ನೀರು ನದಿಗೆ ನೀರು ಬಿಡಬೇಕಾಗಿದೆ. ಸದ್ಯ ಎಲ್ಲ ಗೇಟ್ ಮೂಲಕ 98 ಸಾವಿರ ಕ್ಯೂಸೆಕ್ ನೀರು ನದಿಗೆ ಬಿಡಲಾಗುತ್ತಿದೆ. ಹಂತ-ಹಂತವಾಗಿ ನೀರಿನ ಪ್ರಮಾಣ ಹೆಚ್ಚಿಸಲಾಗುವುದು. ಪ್ರಸ್ತುತ 19ನೇ ಗೇಟ್‌ವೊಂದರಲ್ಲಿ 38 ಸಾವಿರ ಕ್ಯೂಸೆಕ್ ನೀರು ಹೋಗುತ್ತಿದೆ. ರೈತರು ಗಾಬರಿಪಡುವ ಅಗತ್ಯವಿಲ್ಲ.
> – **ಡಿ.ಕೆ.ಶಿವಕುಮಾರ್** ಉಪಮುಖ್ಯಮಂತ್ರಿ

ವಿಜಯೇಂದ್ರ ವಿರುದ್ಧ ದೂರು ನೀಡಲು ನಿರ್ಧಾರ
ಚೌತಿ ನಂತರ ಕೂಡಲಸಂಗಮದಿಂದ ಬಳ್ಳಾರಿವರೆಗೆ ಪಾದಯಾತ್ರೆ

ಬಿಜೆಪಿ ಬಂಡಾಯ ದಿಲ್ಲಿ ತನಕ ದೂರು

ಬೆಳಗಾವಿ ತಾಲೂಕಿನ ಕಿಣಯೇ ಬಳಿಯ ರೆಸಾರ್ಟ್‌ನಲ್ಲಿ ಭಾನುವಾರ ನಡೆದ ಸಭೆಯಲ್ಲಿ ಬಸನಗೌಡ ಪಾಟೀಲ ಯತ್ನಾಳ, ಜಿ.ಎಂ.ಸಿದ್ದೇಶ್ವರ್, ರಮೇಶ್ ಜಾರಕಿಹೊಳಿ, ಪ್ರತಾಪ್ ಸಿಂಹ, ಅರವಿಂದ ಲಿಂಬಾವಳಿ ಮತ್ತಿತರರು ಭಾಗವಹಿಸಿದ್ದರು.

ಬೆಳಗಾವಿ/ಬೆಂಗಳೂರು: ಬಿಜೆಪಿ ರಾಜ್ಯಾಧ್ಯಕ್ಷರಾಗಿ ಬಿ.ವೈ.ವಿಜಯೇಂದ್ರ ನೇಮಕವಾದಾಗಿನಿಂದಲೂ ಬಿಜೆಪಿಯಲ್ಲಿ ಶುರುವಾಗಿರುವ 'ಅಸಮಾಧಾನ'ದ ಹೊಗೆ ಇದೀಗ ಪಕ್ಷದ ವರಿಷ್ಠರಿಗೆ 'ಅಧಿಕೃತ ದೂರು' ನೀಡುವ ಹಂತಕ್ಕೆ ತಲುಪಿದೆ.

ಯಡಿಯೂರಪ್ಪ ಹಾಗೂ ವಿಜಯೇಂದ್ರ ವಿರುದ್ಧ ಪದೇ ಪದೆ ವಾಗ್ದಾಳಿ ನಡೆಸುತ್ತಿರುವ ಬಸನಗೌಡ ಪಾಟೀಲ್ ಯತ್ನಾಳ್, ರಮೇಶ್ ಜಾರಕಿಹೊಳಿ ಅವರೊಂದಿಗೆ ಇದೀಗ ಮತ್ತಷ್ಟು ಪ್ರಮುಖ ನಾಯಕರು ಕಾಣಿಸಿಕೊಂಡಿದ್ದಾರೆ. ಕಳೆದ ವಾರ ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ಪ್ರತಾಪ್ ಸಿಂಹ, ಕುಮಾರ ಬಂಗಾರಪ್ಪ ಭಾಗವಹಿಸಿದ್ದರು. ಬೆಳಗಾವಿಯಲ್ಲಿ ಭಾನುವಾರ ನಡೆದ ಸಭೆಯಲ್ಲಿ ಮಾಜಿ ಸಚಿವ ಅರವಿಂದ ಲಿಂಬಾವಳಿ, ಅಣ್ಣಾಸಾಹೇಬ್ ಜೊಲ್ಲೆ, ಜಿ.ಎಂ. ಸಿದ್ದೇಶ್ವರ್ ಸೇರಿದಂತೆ ಹಲವು ಪ್ರಮುಖರು ಭಾಗವಹಿಸಿದ್ದಾರೆ. ಸಭೆಯಲ್ಲಿ ಪಕ್ಷ ಬಲವರ್ಧನೆಗೆ ಸಂಬಂಧಿಸಿದಂತೆ ಚರ್ಚಿಸಿದ್ದೇವೆ ಹಾಗೂ ಮುಂದಿನ ದಿನಗಳಲ್ಲಿ ಕೂಡಲಸಂಗಮದಿಂದ ಬಳ್ಳಾರಿವರೆಗೆ ಪಾದಯಾತ್ರೆ ಮಾಡುವ ಬಗ್ಗೆ ಚರ್ಚೆ ನಡೆಸಲಾಗಿದೆ ಎನ್ನಲಾಗಿದೆ.

→ 4

ಆರೋಪಗಳೇನು?

- ನಮ್ಮ ಹೋರಾಟ ಪಕ್ಷದ ವಿರುದ್ಧವಲ್ಲ; ಸಂಘಟನೆ ಸರಿಪಡಿಸುವುದೇ ಗುರಿ
- ಪೋಕ್ಸೊ ಆರೋಪ ಹೊತ್ತಿರುವ ಯಡಿಯೂರಪ್ಪರನ್ನು ವೇದಿಕೆ ಮೇಲೆ ಕೂರಿಸಿದ್ದು ತಪ್ಪು
- ವಿಜಯೇಂದ್ರಗೆ ಯಡಿಯೂರಪ್ಪ ಪುತ್ರ ಎನ್ನುವುದು ಬಿಟ್ಟರೆ ಬೇರೆ ಅರ್ಹತೆಯಿಲ್ಲ
- ಮೈಸೂರು ಪಾದಯಾತ್ರೆ ವೇಳೆಯೂ ಸರಕಾರದ ಭ್ರಷ್ಟಾಚಾರಗಳ ಬಗ್ಗೆ ಧ್ವನಿ ಎತ್ತಿಲ್ಲ

> ಬೆಳಗಾವಿಯಲ್ಲಿ ನಡೆದಿರುವುದು ಅತೃಪ್ತರ ಸಭೆಯಲ್ಲ. ಇದು ಬಿಜೆಪಿ ಬಲವರ್ಧನೆಗಾಗಿಯೇ ಮಾಡಿದ ಸಭೆ. ವಾಲ್ಮೀಕಿ ನಿಗಮದ ಹಣ ದುರುಪಯೋಗವಾಗಿದೆ. ಪರಿಶಿಷ್ಟರ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣವನ್ನು ಗ್ಯಾರಂಟಿ ಯೋಜನೆಗೆ ಬಳಸಲಾಗುತ್ತಿದೆ. ಇದರ ವಿರುದ್ಧ ಪಾದಯಾತ್ರೆ ಮಾಡಲು ತೀರ್ಮಾನಿಸಿದ್ದೇವೆ.
> – **ಅರವಿಂದ ಲಿಂಬಾವಳಿ** ಮಾಜಿ ಸಚಿವ

ವಾರಾಂತ್ಯದ ಹಿನ್ನೆಲೆಯಲ್ಲಿ ಹರಿದು ಬಂದ ಜನರ ದಂಡು

ಪುಷ್ಪ ಪ್ರದರ್ಶನಕ್ಕೆ ಜನಸಾಗರ

ಬೆಂಗಳೂರು: ಸಸ್ಯಕಾಶಿ ಲಾಲ್‌ಬಾಗ್‌ನಲ್ಲಿ ನಡೆಯುತ್ತಿರುವ ನಾಲ್ಕನೇ ದಿನದ ಪುಷ್ಪ ಪ್ರದರ್ಶನಕ್ಕೆ ಅಪಾರ ಸಂಖ್ಯೆಯಲ್ಲಿ ಜನರು ಆಗಮಿಸಿ ಪ್ರದರ್ಶನವನ್ನು ಕಣ್ತುಂಬಿಕೊಂಡರು.

ಭಾನುವಾರವಾಗಿರುವುದರಿಂದ ಶಾಲಾ-ಕಾಲೇಜು, ಸರಕಾರಿ ಕಚೇರಿಗಳಿಗೆ ರಜೆ ಇರುವುದರಿಂದ ಜನರ ದಂಡೇ ಹರಿದು ಬಂದಿದ್ದು, ಬೆಂಗಳೂರಿನ ನಿವಾಸಿಗಳಷ್ಟೇ ಅಲ್ಲದೆ ಹಲವು ಜಿಲ್ಲೆಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಆಗಮಿಸಿ ಪುಷ್ಪ ಪ್ರದರ್ಶನವನ್ನು ಕಣ್ತುಂಬಿಸಿಕೊಂಡರು.

ಹೆಚ್ಚಿನ ಸಂಖ್ಯೆಯಲ್ಲಿ ಕಾಲೇಜು ವಿದ್ಯಾರ್ಥಿಗಳು, ಶಾಲಾ ಮಕ್ಕಳು, ಪೋಷಕರು ಆಗಮಿಸಿರುವುದರಿಂದ ಗಾಜಿನ ಮನೆಯಲ್ಲಿ ಜನರು ಕಿಕ್ಕಿರಿದು ಸೇರಿ ಸೆಲ್ಫೀ ಕ್ಲಿಕ್ಕಿಸಿಕೊಳ್ಳುವುದರಲ್ಲಿ ಮಗ್ನರಾಗಿದ್ದರು.

ಸಂಚಾರ ದಟ್ಟಣೆ: ಹೆಚ್ಚಿನ ಸಂಖ್ಯೆಯಲ್ಲಿ ಜನರು ಆಗಮಿಸಿದ್ದರಿಂದ ಸುತ್ತಲಿನ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು. ಜನರು ಆದಷ್ಟು ಸಮೂಹ ಸಾರಿಗೆ ಹಾಗೂ ಮೆಟ್ರೊ ಬಳಸುವಂತೆ ಅಧಿಕಾರಿಗಳು ಹಾಗೂ ಸಂಚಾರಿ ಪೊಲೀಸರು ತಿಳಿಸಿದ್ದಾರೆ.

→ 4

ಧಾರವಾಡ-ಬೆಳಗಾವಿ

ರೈಲು ಮಾರ್ಗಕ್ಕೆ ಭೂಮಿ ನೀಡಿಲ್ಲ

ದೆಹಲಿ: ಧಾರವಾಡ-ಬೆಳಗಾವಿ ರೈಲು ಮಾರ್ಗ ಅಭಿವೃದ್ಧಿಗಾಗಿ ಅಗತ್ಯವಿರುವ ಜಮೀನನ್ನು ಕರ್ನಾಟಕ ಸರಕಾರ ರೈಲ್ವೆಗೆ ಹಸ್ತಾಂತರಿಸಿಲ್ಲ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಬೆಳಗಾವಿಯಿಂದ ಧಾರವಾಡವರೆಗೆ 73 ಕಿ.ಮೀ. ಉದ್ದದ ರೈಲು ಮಾರ್ಗವನ್ನು 50:50 ಪಾಲುದಾರಿಕೆಯಲ್ಲಿ ನಿರ್ಮಿಸಲು ಮಂಜೂರು ನೀಡಲಾಗಿದೆ. ಕರ್ನಾಟಕ ಸರಕಾರ ಹಾಗೂ ರೈಲ್ವೆ ಯೋಜನಾ ವೆಚ್ಚದಲ್ಲಿ ತಲಾ ಶೇ.50 ಭರಿಸಬೇಕು. ಇದಕ್ಕೆ ಅಗತ್ಯವಿರುವ ಜಮೀನನ್ನು ಕರ್ನಾಟಕ ಸರಕಾರ ಉಚಿತವಾಗಿ ನೀಡಬೇಕಿದೆ' ಎಂದು ಅವರು ಲೋಕಸಭೆಯಲ್ಲಿ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಸೀತಾಪುರ ಗ್ರಾಮದ ಬಳಿಯ ರೈತರ ಜಮೀನಿನಲ್ಲಿ ಭಾನುವಾರ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಭತ್ತದ ಪೈರು ನಾಟಿ ಮಾಡಿ ಕೃಷಿ ಚಟುವಟಿಕೆ ನಿರತ ರೈತರನ್ನು ಹುರಿದುಂಬಿಸಿದರು.

ರೇಣುಕಾಸ್ವಾಮಿ ಕೊಲೆ

ಚಾರ್ಜ್‌ಶೀಟ್ ಸಲ್ಲಿಕೆಗೆ ಸಿದ್ಧತೆ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದ ತನಿಖೆ ಅಂತಿಮ ಹಂತಕ್ಕೆ ಬಂದಿದ್ದು, ಪೊಲೀಸರು ಚಾರ್ಜ್‌ಶೀಟ್ ಸಲ್ಲಿಕೆಗೆ ತಯಾರಿ ನಡೆಸಿದ್ದಾರೆ.

ಪ್ರಕರಣದ ಸಂಬಂಧ ಸಾಕ್ಷ್ಯಗಳ ಒಟ್ಟುಗೂಡಿಸುವಿಕೆ, ತಂತ್ರಜ್ಞಾನ ಬಳಸಿ ಕಲೆಹಾಕಿರುವ ಕೊಲೆ ಸಂಬಂಧಿತ ಅಂಶಗಳು, ಕೊಲೆಯಲ್ಲಿ ಆರೋಪಿಗಳ ಪಾತ್ರ ಅವರ ವಿರುದ್ಧ ಇರುವ ಸಾಕ್ಷ್ಯಗಳು ಸೇರಿದಂತೆ ಎಲ್ಲವನ್ನೂ ಸವಿಸ್ತಾರವಾಗಿ ಚಾರ್ಜ್‌ಶೀಟ್‌ನಲ್ಲಿ ಸೇರಿಸಿದ್ದಾರೆ. ಈ ಪ್ರಕರಣದಲ್ಲಿ ನಟ ದರ್ಶನ್ ಜೈಲು ಪಾಲಾಗಿ 50 ದಿನ ಕಳೆದಿವೆ. ಆದರೆ ಇದುವರೆಗೆ ಜಾಮೀನಿಗಾಗಿ ಕೋರ್ಟ್‌ಗೆ ಅರ್ಜಿ ಸಲ್ಲಿಸಿಲ್ಲ.

10 ಸಾವಿರ ಕೋಟಿ ಮೌಲ್ಯದ

ಎಚ್‌ಎಂಟಿ ಭೂಮಿ ವಾಪಸಿಗೆ ಸೂಚನೆ

ಬೆಂಗಳೂರು: ಪೀಣ್ಯ ಜಾಲಹಳ್ಳಿಯಲ್ಲಿರುವ ಹತ್ತು ಸಾವಿರ ಕೋಟಿ ಬೆಲೆ ಬಾಳುವ 599 ಎಕರೆ ಅಧಿಸೂಚಿತ ಅರಣ್ಯ ಪ್ರದೇಶ ವನ್ನು ಇಲಾಖೆಗೆ ಮರಳಿ ಪಡೆಯುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚಿಸಿದ್ದಾರೆ. ಈ ಸಂಬಂಧ ಅಪರ ಮುಖ್ಯ ಕಾರ್ಯದರ್ಶಿಗೆ ತಿಳಿಸಿರುವ ಅವರು, ಸಾವಿರಾರು ಕೋಟಿ ಬೆಲೆ ಬಾಳುವ ಭೂಮಿಯನ್ನು ಕೇಂದ್ರ ಸರಕಾರಿ ಸ್ವಾಮ್ಯದ ಎಚ್.ಎಂ.ಟಿ. ಅಕ್ರಮವಾಗಿ ಖಾಸಗಿಯವರಿಗೆ ಮಾರಾಟ ಮಾಡುತ್ತಿದ್ದು, ಕೂಡಲೇ ಒಟ್ಟು 599 ಎಕರೆ ಪೈಕಿ ಎಚ್‌ಎಂಟಿಗೆ ನೀಡಲಾಗಿದ್ದ, 469ಎಕರೆ 32 ಗುಂಟೆಯಲ್ಲಿರುವ 281 ಎಕರೆ ಜಮೀನನ್ನು ಮೊದಲಿಗೆ ವಶಕ್ಕೆ ಪಡೆದು ನಂತರ ಉಳಿದ ಜಮೀನನ್ನು ವಶಕ್ಕೆ ಪಡೆಯಲು ಕಾನೂನು ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ನನಗೆ ಕೈಕಾಲು ಗಟ್ಟಿ ಇದೆ, ಸಿಎಂನ್ನು ಸೋಲಿಸಿ ಮನೆಗೆ ಕಳಿಸುತ್ತೇನೆ – ಬಿಎಸ್‌ವೈ
ಸುದ್ದಿ

ಢಾಕಾ, ಚಿತ್ತಗಾಂಗ್ ರ‍್ಯಾಲಿಯಲ್ಲಿ 7 ಲಕ್ಷ ಜನ ಭಾಗಿ | ಬಾಂಗ್ಲಾ ಅಲ್ಪಸಂಖ್ಯಾತರ ಮೇಲಿನ ದಾಳಿಗೆ ಖಂಡನೆ

ಬಾಂಗ್ಲಾ: ಹಿಂದೂಗಳಿಂದ ಬಲ ಪ್ರದರ್ಶನ

ಢಾಕಾ: ಬಾಂಗ್ಲಾದೇಶದಲ್ಲಿ ಆ.5ರಂದು ಪ್ರಧಾನಿ ಶೇಖ್ ಹಸೀನಾ ಪದಚ್ಯುತಿ ನಂತರ ಹಿಂದೂಗಳು ಸೇರಿದಂತೆ ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ನಡೆಯುತ್ತಿರುವ 'ಧರ್ಮದ್ವೇಷದ ದಾಳಿ-ಹಿಂಸಾಚಾರ'ವನ್ನು ಖಂಡಿಸಿ ದೇಶದಲ್ಲಿನ ಅಲ್ಪಸಂಖ್ಯಾತ ಸಮುದಾಯಗಳ ಲಕ್ಷಾಂತರ ಜನರು ರಾಜಧಾನಿ ಢಾಕಾ ಮತ್ತು ಚಿತ್ತಗಾಂಗ್‌ನಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ ವಿಶ್ವದ ಗಮನ ಸೆಳೆದಿದ್ದಾರೆ.

ಅಲ್ಪಸಂಖ್ಯಾತ ಸಮುದಾಯದವರ ಮೇಲೆ ಅಪ್ರಚೋದಿತ ದಾಳಿ ನಡೆಸುವವರ ವಿರುದ್ಧ ಪ್ರಕರಣ ದಾಖಲಿಸಿ ತ್ವರಿತಗತಿಯಲ್ಲಿ ವಿಚಾರಣೆ ನಡೆಸಬೇಕು. ಅದಕ್ಕಾಗಿಯೇ ವಿಶೇಷ ನ್ಯಾಯಮಂಡಳಿ ರಚಿಸಬೇಕು. ಸಂಸತ್‌ನಲ್ಲಿ ಅಲ್ಪಸಂಖ್ಯಾತ ಸಮುದಾಯದವರಿಗೆ ಶೇ.10 ರಷ್ಟು ಸ್ಥಾನ ನೀಡಬೇಕು. ಅಲ್ಪಸಂಖ್ಯಾತರ ರಕ್ಷಣೆಗಾಗಿ ಪ್ರತ್ಯೇಕ ಕಾನೂನು ಜಾರಿಗೊಳಿಸಬೇಕು ಎಂದು ಆಗ್ರಹಿಸಿ ಬಾಂಗ್ಲಾದೇಶದಲ್ಲಿನ ಹಿಂದೂ, ಬೌದ್ಧ, ಸಿಖ್, ಕ್ರೈಸ್ತ ಸಮುದಾಯಗಳ ಜನರು ಲಕ್ಷ ಸಂಖ್ಯೆಯಲ್ಲಿ ಬೀದಿಗಿಳಿದು ಪ್ರತಿಭಟನೆ ನಡೆಸಿದರು. ಬಾಂಗ್ಲಾದಲ್ಲಿ ಹಿಂದೂಗಳ ಮೇಲಿನ ದಾಳಿ ಖಂಡಿಸಿ ಅಮೆರಿಕ, ಬ್ರಿಟನ್‌ನಲ್ಲೂ ಪ್ರತಿಭಟನೆ ನಡೆದಿವೆ.

ಢಾಕಾದಲ್ಲಿ ನಡೆದ ಬೃಹತ್ ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಬಾಂಗ್ಲಾದಲ್ಲಿನ ಅಲ್ಪಸಂಖ್ಯಾತರು.

ಬೇಡಿಕೆಗಳೇನು?

- ಅಲ್ಪಸಂಖ್ಯಾತ ಸಮುದಾಯದವರ ಮೇಲೆ ದಾಳಿ ನಡೆಸುವವರ ವಿರುದ್ಧ ಪ್ರಕರಣ ದಾಖಲಿಸಿ ತ್ವರಿತಗತಿಯಲ್ಲಿ ವಿಚಾರಣೆ ನಡೆಸಬೇಕು. ಅದಕ್ಕಾಗಿಯೇ ವಿಶೇಷ ನ್ಯಾಯಮಂಡಳಿ ರಚಿಸಬೇಕು.
- ಸಂಸತ್‌ನಲ್ಲಿ ಅಲ್ಪಸಂಖ್ಯಾತ ಸಮುದಾಯದವರಿಗೆ ಶೇ.10ರಷ್ಟು ಸ್ಥಾನ ನೀಡಬೇಕು. ಅಲ್ಪಸಂಖ್ಯಾತರ ರಕ್ಷಣೆಗಾಗಿ ಪ್ರತ್ಯೇಕ ಕಾನೂನು ಜಾರಿಗೊಳಿಸಬೇಕು.

ಜಾಲತಾಣದಲ್ಲಿ ವೈರಲ್

ಬಾಂಗ್ಲಾದೇಶದಲ್ಲಿನ ಹಿಂದೂಗಳ ಬೃಹತ್ ಪ್ರತಿಭಟನೆ ಸುದ್ದಿ-ಚಿತ್ರಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ಬಗೆ ಬಗೆ ಪ್ರತಿಕ್ರಿಯೆ ವ್ಯಕ್ತವಾಗಿವೆ. 'ಭಾರತದಲ್ಲಿನ ಹಿಂದೂ ಸಮುದಾಯದಿಂದ ಇಂತಹ ಒಗ್ಗಟ್ಟಿನ ಪ್ರದರ್ಶನ ನಿರೀಕ್ಷೆ ಮಾಡಲೂ ಸಾಧ್ಯವಿಲ್ಲ' ಎಂದು ನೆಟ್ಟಿಗರೊಬ್ಬರು ಪ್ರತಿಕ್ರಿಯಿಸಿದ್ದಾರೆ. 'ಬಾಂಗ್ಲಾ ಹಿಂದೂಗಳು ತೋರಿರುವ ಈ ಒಗ್ಗಟ್ಟು ಮತ್ತು ಬೃಹತ್ ಪ್ರದರ್ಶನದಿಂದ ಭಾರತೀಯರೂ ಪಾಠ ಕಲಿಯಬೇಕಿದೆ' ಎಂಬ ಪ್ರತಿಕ್ರಿಯೆಯೂ ವ್ಯಕ್ತವಾಗಿದೆ.

ಸಿಜೆಐ ಸೈಯದ್ ರೆಫಾತ್ ಅಹ್ಮದ್ ಪ್ರಮಾಣ

ಬಾಂಗ್ಲಾದೇಶದ ಸುಪ್ರೀಂ ಕೋರ್ಟ್‌ನ ನೂತನ ಮುಖ್ಯ ನ್ಯಾಯಮೂರ್ತಿಯಾಗಿ ನ್ಯಾ.ಸೈಯದ್ ರೆಫಾತ್ ಅಹ್ಮದ್ ಭಾನುವಾರ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ನ್ಯಾ.ಸೈಯದ್ ಅವರು ಬಾಂಗ್ಲಾದ 25ನೇ ಮುಖ್ಯ ನ್ಯಾಯಮೂರ್ತಿಯಾಗಿದ್ದಾರೆ.

ರಾಜ್ಯಸಭೆಯ 12 ಸ್ಥಾನಗಳಿಗೆ ಸೆ.3ರಂದು ಉಪಚುನಾವಣೆ

ಉಪಚುನಾವಣೆ ಬಳಿಕ ಎನ್‌ಡಿಎಗೆ ಬಹುಮತ?

ದೆಹಲಿ: ತೆರವಾಗಿರುವ 12 ಸ್ಥಾನಗಳಿಗೆ ಸೆಪ್ಟೆಂಬರ್ 3ರಂದು ಉಪಚುನಾವಣೆ ನಡೆಯಲಿದೆ. ಪ್ರತಿ ಸ್ಥಾನಕ್ಕೂ ಪ್ರತ್ಯೇಕವಾಗಿ ಚುನಾವಣೆ ನಡೆಸುವುದಾಗಿ ಚುನಾವಣೆ ಆಯೋಗ ಘೋಷಿಸಿದ್ದು, ಇದು ಆಯಾ ರಾಜ್ಯಗಳಲ್ಲಿನ ಆಡಳಿತಾರೂಢ ಪಕ್ಷಗಳಿಗೆ ಅನುಕೂಲವಾಗಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ರಾಜ್ಯಸಭೆಯಲ್ಲಿಯೂ ಎನ್‌ಡಿಎಗೆ ಬಹುಮತ ಸಿಕ್ಕಲ್ಲಿ, ವಕ್ಫ್ ತಿದ್ದುಪಡಿ ಮಸೂದೆ ಸೇರಿದಂತೆ ಪ್ರಮುಖ ಮಸೂದೆಗಳನ್ನು ಅಂಗೀಕರಿಸಲು ದಾರಿ ಸುಗಮವಾಗಲಿದೆ ಎಂಬ ಲೆಕ್ಕಾಚಾರವನ್ನು ಎನ್‌ಡಿಎ ಹೊಂದಿದೆ.

ರಾಜ್ಯಸಭೆ ಸದಸ್ಯ ಬಲ ಸದ್ಯ 229 ಇದ್ದು, ಬಿಜೆಪಿಯ 87 ಸಂಸದರಿದ್ದಾರೆ. ಮಿತ್ರ ಪಕ್ಷಗಳ ಸಂಸದರ ಸಂಖ್ಯೆಯನ್ನೂ ಸೇರಿಸಿದಲ್ಲಿ ಎನ್‌ಡಿಎ ಸದಸ್ಯರ ಸಂಖ್ಯೆ 105 ಆಗುತ್ತದೆ. 6 ಜನ ನಾಮನಿರ್ದೇಶನಗೊಂಡ ಸದಸ್ಯರಿದ್ದು, ಇವರು ಸಾಮಾನ್ಯವಾಗಿ ಸರಕಾರದ ನಿಲುವಿನ ಪರವಾಗಿಯೇ ಮತ ಚಲಾವಣೆ ಮಾಡುವರು. ಇದರೊಂದಿಗೆ ಎನ್‌ಡಿಎ ಸದಸ್ಯ ಬಲ 111 ಆಗುವುದು. ಸರಳ ಬಹುಮತಕ್ಕೆ 115 ಸ್ಥಾನಗಳು ಅಗತ್ಯ. ಹೀಗಾಗಿ ಎನ್‌ಡಿಎ ಒಕ್ಕೂಟಕ್ಕೆ ನಾಲ್ಕು ಸ್ಥಾನಗಳ ಕೊರತೆ ಎದುರಾಗಲಿದೆ.

ರಾಜ್ಯಸಭೆಯಲ್ಲಿ ಕಾಂಗ್ರೆಸ್ 26 ಸದಸ್ಯರನ್ನು ಹೊಂದಿದೆ. ಮಿತ್ರ ಪಕ್ಷಗಳ 58 ಸದಸ್ಯರು ಸೇರಿ ಪ್ರತಿಪಕ್ಷಗಳ ಸದಸ್ಯರ ಸಂಖ್ಯೆ 84 ಆಗುವುದು. ಇನ್ನು 11 ಸಂಸದರನ್ನು ಹೊಂದಿರುವ ವೈಎಸ್‌ಆರ್ ಕಾಂಗ್ರೆಸ್, 8 ಸದಸ್ಯ ಬಲದ ಬಿಜೆಡಿ ಎರಡೂ ಒಕ್ಕೂಟಗಳಿಂದ ಅಂತರ ಕಾಯ್ದುಕೊಂಡಿವೆ.

ರಾಜ್ಯಸಭೆಯಲ್ಲಿ ಪಕ್ಷಗಳ ಬಲಾಬಲ

ಎನ್‌ಡಿಎ	111
ಇಂಡಿಯ	84
ವೈಎಸ್‌ಆರ್‌ಸಿ	11
ಬಿಜೆಡಿ	8
ಒಟ್ಟು	229

ಸಮಾಚಾರ ಸಣ್ಣದಲ್ಲ

ಹರ ಘರ್ ತಿರಂಗಾ ಯಶಸ್ವಿಗೊಳಿಸಿ

ಬೀದರ್: ಪ್ರಧಾನಿ ಮೋದಿಯವರ ಕರೆಕೊಟ್ಟಿರುವ ಸ್ವಾತಂತ್ರ್ಯೋತ್ಸವದ ಸಂಭ್ರಮಾಚರಣೆ ನಿಮಿತ್ಯ ಪ್ರತಿಯೊಬ್ಬರು ತಮ್ಮ ತಮ್ಮ ಮನೆಗಳ ಮೇಲೆ, ಅಂಗಡಿ ಮುಗ್ಗಟ್ಟುಗಳ ಮೇಲೆ ರಾಷ್ಟ್ರಧ್ವಜವನ್ನು ಹಾರಿಸಿ, ಹರ ಘರ ತಿರಂಗಾ ಅಭಿಯಾನವನ್ನು ಯಶಸ್ವಿಗೊಳಿಸಬೇಕೆಂದು ಮಾಜಿ ಸಚಿವ ಭಗವಂತ ಖೂಬಾ ಮನವಿ ಮಾಡಿದ್ದಾರೆ. ದೇಶದೆಲ್ಲೆಡೆ ಹರ್ ಘರ ತಿರಂಗಾ ಅಭಿಯಾನದಡಿ 13 ರಿಂದ 15ನೇ ಆಗಸ್ಟ್ ವರೆಗೆ ಪ್ರತಿ ಮನೆಯ ಮೇಲೆ ರಾಷ್ಟ್ರಧ್ವಜವನ್ನು ಹಾರಿಸಿ ಸ್ವಾತಂತ್ರ್ಯೋತ್ಸವವನ್ನು ಹಬ್ಬದಂತೆ ಆಚರಿಸಲು ದೇಶದೆಲ್ಲೆಡೆ ಜನರು ಈಗಾಗಲೆ ಸಿದ್ದತೆಗಳು ಮಾಡಿಕೊಳ್ಳುತ್ತಿದ್ದಾರೆ. ಅದರಂತೆ ಬೀದರ ಲೋಕಸಭಾ ಕ್ಷೇತ್ರದ ಜನತೆಯೂ ಸಹ ಸ್ವಯಂ ಪ್ರೇರಿತರಾಗಿ ಎಲ್ಲರೂ ತಮ್ಮ ತಮ್ಮ ಮನೆ ಮೇಲೆ ಈ ಮೂರು ದಿನಗಳು ರಾಷ್ಟ್ರಧ್ವಜ ಹಾರಿಸಿ, ಈ ವರ್ಷದ ಸ್ವಾತಂತ್ರ್ಯೋತ್ಸವನ್ನು ಯಶಸ್ವಿಯಾಗಿ ಆಚರಿಸಿ, ದೇಶಕ್ಕೆ ಮಾದರಿಯಾಗಬೇಕೆಂದು ತಿಳಿಸಿದ್ದಾರೆ.

ರೈತರಿಗೆ ಬೆಳೆ ವಿಮೆ ಅವಧಿ ವಿಸ್ತರಣೆ

ಬೀದರ್: ಮುಂಗಾರು ಹಂಗಾಮಿನ ಮರು ವಿನ್ಯಾಸಗೊಳಿಸಿದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ಮಾವು ಬೆಳೆಗೆ ವಿಮೆ ನೊಂದಣಿ ಮಾಡುವ ಅವಧಿ ಆ. 17 ರವರೆಗೆ ವಿಸ್ತರಣೆ ಮಾಡಲಾಗಿದೆ. ಬೆಳೆ ಸಾಲ ಪಡೆಯದ ಮತ್ತು ಬೆಳೆ ಸಾಲ ಪಡೆದ ರೈತರು ವಿಮೆ ನೊಂದಾಯಿಸಿಕೊಳ್ಳಲು ಪಹಣಿ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕದ ನಕಲು ಪ್ರತಿ ಹಾಗೂ ಸ್ವಯಂಘೋಷಿತ ದೃಡೀಕರಣ ಪತ್ರ ಒಳಗೊಂಡಂತೆ ತಮ್ಮ ಸಮೀಪದ ಬ್ಯಾಂಕ್ ಶಾಖೆಗೆ ಸಂಪರ್ಕಿಸುವುದು. ಹವಾಮಾನ ಅಂಶಗಳಾದ ಮಳೆ ಪ್ರಮಾಣ, ಗಾಳಿಯ ವೇಗ, ಆರ್ದ್ರತೆ ಇತ್ಯಾದಿ ಮಾಹಿತಿಗಳನ್ನು ಸ್ಥಳೀಯವಾಗಿ ಲಭ್ಯವಿರುವ ಟೆಲಿ ಮೆಟ್ರಿಕ್ ಮಳೆಮಾಪನ ಕೇಂದ್ರಗಳಲ್ಲಿ ದಾಖಲಿಸು ಅಂಶಗಳ ಆಧಾರದ ಮೇಲೆ ವಿಮೆ ನಷ್ಟವನ್ನು ತಿರ್ಮಾನಿಸಲಾಗುತ್ತದೆ. ಬೀದರ್ ಜಿಲ್ಲೆಗೆವಿಮಾ ಕಂಪನಿ ಆಯ್ಕೆಯಾಗಿದ್ದು, ಬೆಳೆಗಳ ಹೆಸರು ವಿಮಾ ಮೊತ್ತ ಮತ್ತು ವಿಮಾ ಕಂತಿನ ವಿವರ: ಮಾವು ಪ್ರತಿ ಹೆಕ್ಟೇರಿಗೆ ವಿಮಾ ಮೊತ್ತ 80,000 ರು. ಪ್ರತಿ ಹೆಕ್ಟೇರಿಗೆ ರೈತರು ಪಾವತಿಸಬೇಕಾದ ವಿಮಾ ಕಂತಿನ ಮೊತ್ತ 4000 ರು. ಇರುತ್ತದೆ. ಹೆಚ್ಚಿನ ವಿವರಗಳಿಗೆ ಹಾಗೂ ತಮ್ಮ ಗ್ರಾಮ ಪಂಚಾಯತಗೆ ಅನುಮೋದನೆಯಾದ ಬೆಳೆಗಳ ಬಗ್ಗೆ ತಿಳಿಯಲು ತಮಗೆ ಸಂಬಂಧಿಸಿದ ತಾಲೂಕಿನ ತೋಟಗಾರಿಕೆ ಕಛೇರಿಗಳಿಗೆ / ಸಮೀಪದ ಬ್ಯಾಂಕ್ ಅಧಿಕಾರಿಗಳನ್ನು ಸಂಪರ್ಕಿಸಲು ಬೀದರ ತೋಟಗಾರಿಕೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೀದರ್‌ಗೆ ಅಧ್ಯಕ್ಷ ಶಿವಕಾಂತಮ್ಮ ಭೇಟಿ

ಬೀದರ್: ಕರ್ನಾಟಕ ಕೌಶಲಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶಿವಕಾಂತಮ್ಮ (ಕಾಂತಾ) ನಾಯಕ ಅವರು ಆ. 13 ರಂದು ಬೀದರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿರುತ್ತಾರೆ. ಅಂದು ಬೆಳಗ್ಗೆ 10 ಗಂಟೆಗೆ ಕಲಬುರಗಿಯಿಂದ ರಸ್ತೆ ಮೂಲಕ ಬೀದರಗೆ ಆಗಮಿಸಿ ಜಿಲ್ಲಾಧಿಕಾರಿಗಳ ಕಚೇರಿಗೆ ಭೇಟಿ ನೀಡಲಿದ್ದಾರೆ. ನಂತರ ಮಧ್ಯಾಹ್ನ 12 ಗಂಟೆಗೆ ಜಿಲ್ಲಾ ಕೌಶಲ್ಯ ಸಮಿತಿ ಸಭೆಯಲ್ಲಿ ಭಾಗವಹಿ ಸಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಕೆ.ಎಸ್. ಡಿ.ಸಿ.ಯಿಂದ ಮಾನ್ಯತೆ ಪಡೆದಿರುವ ಕೌಶಲ್ಯ ತರಬೇತಿ ಕೇಂದ್ರಗಳಿಗೆ ಭೇಟಿ ನೀಡಲಿದ್ದಾರೆ. ನಂತರ ಸಂಜೆ 4 ಗಂಟೆಗೆ ಬೀದರ ಜಿಲ್ಲೆಯ ವಿದ್ಯಾಪೀಠಕ್ಕೆ ಭೇಟಿ ನೀಡುವರು. ಸಂಜೆ 6 ಗಂಟೆಗೆ ಬೀದರ ರಸ್ತೆ ಮೂಲಕ ಕಲಬುರಗಿಗೆ ಪ್ರಯಾಣಿಸಲಿದ್ದಾರೆ ಎಂದು ಅಧ್ಯಕ್ಷರ ಆಪ್ತ ಸಹಾಯಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತೆಂಗಿನಕಾಯಿ ಹರಾಜು ಪ್ರಕ್ರಿಯೆ ಇಂದು

ವಡಗೇರಾ: ತಾಲೂಕಿನ ಗ್ರಾಮದ ಹೈಯಾಳ ಗ್ರಾಮದ ಹೈಯ್ಯಾಳ ಲಿಂಗೇಶ್ವರ ಜಾತ್ರೆಯು ಆಗಸ್ಟ್ 19ರಿಂದ 23ರ ವರೆಗೆ ನಡೆಯುವ ಶ್ರೀ ಹೈಯ್ಯಾಳ ಲಿಂಗೇಶ್ವರ ಜಾತ್ರೆಯಲ್ಲಿ ನಡಿಯುವ ತೆಂಗಿನಕಾಯಿ ಮಾರಾಟ ಹಾಗೂ ಜಾಗದ ಹರಾಜು ಮಾಡಲು ಆಗಸ್ಟ್ 12 ಸೋಮವಾರ ಬೆಳಗ್ಗೆ 11 ಗಂಟೆಗೆ ವಡಗೇರಾ ತಹಸೀಲ್ದಾರ್ ಕಾರ್ಯಾಲಯದಲ್ಲಿ ಸಭೆ ಕರೆಯಲಾಗಿದ್ದು ಹರಾಜಿನಲ್ಲಿ ಭಾಗವಹಿಸುವವರು ಸರಿಯಾದ ಸಮಯಕ್ಕೆ ಆಗಮಿಸಬೇಕು ಮತ್ತು ಹರಾಜಿನಲ್ಲಿ ಭಾಗವಹಿಸುವವರು 25,000 ರು ಠೇವಣಿ ಇಟ್ಟು ಭಾಗವಹಿಸತಕ್ಕದ್ದು ಮತ್ತು ಹರಾಜು ಆದ ನಂತರ ಮೂರು ದಿನಗಳಲ್ಲಿ ಹರಾಜಿನ ಪೂರ್ತಿ ಹಣವನ್ನು ತುಂಬತಕ್ಕದ್ದು ಒಂದು ವೇಳೆ ತಪ್ಪಿದ್ದಲ್ಲಿ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಪುನಃ ಹರಾಜು ನಡೆಸಲಾಗುವುದು ಎಂದು ತಹಸೀಲ್ದಾರ್ ಶ್ರೀನಿವಾಸ್ ಚಾಪಲ್ ಪತ್ರಿಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

{ ಲಕ್ಷ್ಮೀ ಹೆಬ್ಬಾಳ್ಕರ್ } ಸಚಿವೆ
ರಾಜ್ಯದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಶಿಕ್ಷಣ ಇಲಾಖೆ ಎರಡು ಸೇರಿ ಅಂಗನವಾಡಿಯಲ್ಲಿ ಮಕ್ಕಳಿಗೆ ಮೂಲ ಸೌಕರ್ಯ ಇರಬೇಕು ಹಾಗೂ ಇಲ್ಲಿನ ಶಿಕ್ಷಣ ಗುಣಮಟ್ಟದ್ದಾಗಿರಬೇಕು.

ವರ್ಗಾವಣೆಗೆ ಮಜ್ದೂರ ಸಂಘ ಒತ್ತಾಯ

ಕೆಎಸ್ ಆರ್‌ಟಿಸಿ ವಿಭಾಗೀಯ ಕಚೇರಿಯಲ್ಲಿ 20 ವರ್ಷಗಳಿಂದ ಬೀಡು ಬಿಟ್ಟ ಅಧಿಕಾರಿಗಳು

ಬೀದರ್: ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬೀದರ್ ವಿಭಾಗೀಯ ಕೇಂದ್ರ ಕಚೇರಿಯಲ್ಲಿ ಕಳೆದ 20 ವರ್ಷಗಳಿಂದ ಒಂದೊಂದೇ ಹುದ್ದೆಗಳಲ್ಲಿ ಬೇರೂರಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಶೀಘ್ರದಲ್ಲೇ ವರ್ಗಾವಣೆ ಮಾಡಬೇಕು ಎಂದು ಭಾರತೀಯ ಮಜ್ದೂರ ಸಂಘಟನೆಯ ಪದಾಧಿಕಾರಿಗಳು ಒತ್ತಾಯಿಸಿದ್ದಾರೆ.

ಈ ಕುರಿತು ಭಾರತೀಯ ಮಜ್ದೂರ ಸಂಘಟನೆಯ ಅಧ್ಯಕ್ಷ ಜಾನಸನ್ ನೇತ್ರತ್ವದಲ್ಲಿ ಪದಾಧಿಕಾರಿಗಳು ಬೀದರ ಸಾರಿಗೆ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಬರೆದ ಮನವಿ ಪತ್ರದಲ್ಲಿ ಒತ್ತಾಯಿಸಿದ್ದಾರೆ. ಸಂಸ್ಥೆಯ ಸುಧಾರಣೆ ಹಿತದೃಷ್ಟಿಯಿಂದ ಮೂರು ವರ್ಷಕ್ಕಿಂತ ಹೆಚ್ಚು ಅವಧಿಯ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳ ವಿರುದ್ಧ ಕ್ರಮಕ್ಕೈಗೊಳ್ಳಬೇಕು. ಭ್ರಷ್ಟಾಚಾರಕ್ಕೆ ಕಡಿವಾಡ ಹಾಕಬೇಕು ಎಂದು ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

ಪ್ರಧಾನ ಕಾರ್ಯದರ್ಶಿ ಗುಂಡಪ್ಪ ವಲ್ಲೂರೆ. ಘಟಕದ ಸಂಘದ ಉಪಾಧ್ಯಕ್ಷ ಮಲ್ಲಿಕಾರ್ಜುನ್ ಪಾಟೀಲ್ ಫತ್ತೆಪುರ. ಧನಶೆಟ್ಟಿ ಮಮದಾಪುರ. ಗಣಪತಿ ಸಕ್ರೆಪ್ಪನೋರ. ಸೇರಿದಂತೆ ಇದ್ದರು.

ಮಜ್ದೂರ ಸಂಘಟನೆಯ ಅಧ್ಯಕ್ಷ ಜಾನಸನ್ ನೇತ್ರತ್ವದಲ್ಲಿ ಪದಾಧಿಕಾರಿಗಳು ಬೀದರ ಸಾರಿಗೆ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಬರೆದ ಮನವಿ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಅವ್ಯವಹಾರ ಆರೋಪ

ಒಂದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಅವ್ಯವಹಾರದಲ್ಲಿ ತೊಡಗಿದ್ದಾರೆ. ಇದಕ್ಕೆ ಕಡಿವಾಣ ಹಾಕಬೇಕು ಎಂದು ಸಂಘಟನೆಯ ಪದಾಧಿಕಾರಿಗಳು ಒತ್ತಾಯಿಸಿದ್ದಾರೆ. ಹದಿನೈದು ದಿವಸಗಳಲ್ಲಿ ಅಧಿಕಾರಿಗಳ ವಿರುದ್ಧ ಕ್ರಮಕ್ಕೈಗೊಳ್ಳದಿದ್ದರೆ ಉಗ್ರ ಹೋರಾಟ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ತನಿಖೆಗೆ ಒತ್ತಾಯ

ಬೀದರ ಸಾರಿಗೆ ಘಟಕದಲ್ಲಿ ಹಣಕಾಸು ಶಾಖೆಯಲ್ಲಿ ಸುಮಾರು 79ಲಕ್ಷ ಮತ್ತು ಹುಮನಾಬಾದ ಘಟಕದಲ್ಲಿ ವಿದ್ಯಾರ್ಥಿಗಳ ಪಾಸ್ ಹಣ ದುರುಪಯೋಗ. ಭಾಲ್ಕಿ ಘಟಕದಲ್ಲಿ ಎರಡು ಸಲ ಇಂಧನ ಕಳವು.ಬಸವಕಲ್ಯಾಣ ಘಟಕದಲ್ಲಿ 17 ಲಕ್ಷ ಹಣ ದುರುಪಯೋಗ ಮಾಡಿದ ಅಧಿಕಾರಿಗಳು ಸಾರಿಗೆ ಸಂಸ್ಥೆಗೆ ನಷ್ಟ ಮಾಡಿದ್ದಾರೆ. ಸೂಕ್ತ ತನಿಖೆ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಸುಮಾರು ವರ್ಷಗಳಿಂದ ಸಾರಿಗೆ ಸಂಸ್ಥೆ ಬೀದರ ವಿಭಾಗೀಯ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸಂಸ್ಥೆಯ ಹಿತದ್ರಷ್ಟಿಯಿಂದ ಶೀಘ್ರದಲ್ಲೇ ವರ್ಗಾವಣೆ ಮಾಡಬೇಕು ಇಲ್ಲವಾದರೆ ಉಗ್ರ ಹೋರಾಟ ಕೈಗೊಳ್ಳಲಾಗುವುದು. ವಿವಿಧ ಘಟಕದಲ್ಲಿ ಅವ್ಯವಹಾರ ಮಾಡಲಾಗಿದೆ. ಸೂಕ್ತ ತನಿಖೆ ಕೈಗೊಂಡು ತಪಿತಸ್ಥರ ವಿರುದ್ಧ ಕ್ರಮಕ್ಕೈಗೊಳ್ಳಬೇಕು.
– ಜಾನಸನ್, ಭಾರತೀಯ ಮಜ್ದೂರ ಸಂಘಟನೆ ಅಧ್ಯಕ್ಷ

ಭಗವಂತನ ಕೃಪೆಗೆ ಭಕ್ತಿಯ ಭಾವ ಮುಖ್ಯ

ಬಸವಕಲ್ಯಾಣ: ಭಗವಂತನ ಕೃಪೆಗೆ ಪಾತ್ರನಾಗಲು ಭಕ್ತಿ ಎಂಬ ಭಾವ ಮುಖ್ಯ ಎಂದು ನಗರದ ಸಂಸ್ಥಾನ ಗವಿಮಠದ ಪೀಠಾಧಿಪತಿ ಪೂಜ್ಯಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಬೋಧಿಸಿದರು.

ಪವಿತ್ರ ಶ್ರಾವಣಮಾಸ ನಿಮಿತ್ಯ ನಗರದ ಸಂಸ್ಥಾನ ಗವಿಮಠದಲ್ಲಿ ಸಂಸ್ಥಾನ ಗವಿಮಠ ಟ್ರಸ್ಟ್ ಹಾಗೂ ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ ತಾಲೂಕು ಘಟಕ ಸಹಯೋಗದಲ್ಲಿ ಗುರುವಾರ ಸಾಯಂಕಾಲ ಏರ್ಪಡಿಸಿದ ವೀರಶೈವ ಲಿಂಗಾಯತ ಧರ್ಮ ಗ್ರಂಥವಾದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು 2ನೇ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದ ದಿವ್ಯಸಾನಿಧ್ಯವಹಿಸಿ ಭಕ್ತರಿಗೆ ಉಪದೇಶಿಸುತ್ತ ಭಕ್ತನಲ್ಲಿ ಭಕ್ತಿಯ ಭಾವ ಇದ್ದಾಗ ಮಾತ್ರ ಭಗವಂತನನ್ನು ಪೂಜಿಸಿ ಕೃಪೆ ಪಡೆಯಲು ಸಾಧ್ಯ ಎಂದು ಸಿದ್ಧಾಂತ ಶಿಖಾಮಣಿ ಮೂಲಕ ಜಗದ ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರು ಉಪದೇಶಿಸಿದ್ದಾರೆ ಎಂದರು. ನಿವೃತ್ತ ಎ. ಇ. ಇ. ಮುರುಗಯ್ಯ ಸ್ತ್ರದ, ಶರಣಬಸಪ್ಪ ಅಲಗುಡೆ. ನಿವೃತ್ತ ಕೃಷಿ ಅಧಿಕಾರಿ ಬಸವಂತಪ್ಪ ಲವಾರೆ. ಪ್ರೊ. ರುದ್ರಾಕ್ಷರ್ಯ.

ಟ್ರಸ್ಟ್ ಕಾರ್ಯಾಧ್ಯಕ್ಷ ಶರಣಪ್ಪ ಬಿರಾದಾರ, ಸಂಸ್ಥೆ ಅಧ್ಯಕ್ಷ ಡಾ. ಬಸವರಾಜ ಸ್ವಾಮಿ, ಸಂಸ್ಥೆ ಕಾರ್ಯದರ್ಶಿ ರಾಕೇಶ ಪುರ ವಂತ, ಮಲ್ಲಿಕಾರ್ಜುನ ಅಲಶೆಟ್ಟಿ, ಪ್ರಾಚಾರ್ಯ ಎ. ಜಿ. ಪಾಟೀ ಲ್, ದಯಾನಂದ ಶೀಲವಂತ, ಶಿಕ್ಷಕರಾದ ಮಲ್ಲಿಕಾರ್ಜುನ ಅಲಗುಡೆ, ಬಸವಣಪ್ಪ ನೆಲೋಗಿ, ಸಾಹಿತಿ ವೀರಶೆಟ್ಟಿ. ಎಂ. ಪಾಟೀಲ, ಪ್ರೊ. ವಿ. ಎಸ್. ರಾಜೋಳೆ, ಪ್ರೊ. ಶಾಂತಲಿಂಗ ಮಠಪತಿ, ಸಂಸ್ಥೆ ಮಹಿಳಾ ಅಧ್ಯಕ್ಷೆ ಕಲ್ಪನಾ ಶೀಲವಂತ,ಗಂಗಮ್ಮ ಮಠಪತಿ, ಶಿಕ್ಷಕಿ ಸರಸ್ವತಿ ಬೆಂಬಳಿ,ಶೀಲಾದೇವಿ ಲವಾರೆ, ಪಾರ್ವತಿ ರೋಜೆ, ರೇಖಾ ಚಿಟ್ಟೆ, ಮಹಾನಂದಾ ಪುರವಂತ, ಜ್ಯೋತಿ ಪುರವಂತ, ಪೂರ್ಣಿಮಾ ಸ್ವಾಮಿ, ಮೊದಲದವರು ಪಾಲ್ಗೊಂಡಿದ್ದರು.

ಅಕ್ಕಿ ಸಾಗಣೆ: ಕ್ರಮಕ್ಕೆ ಒತ್ತಾಯ

ಕಂಡೂ ಕಾಣದಂತೆ ವರ್ತಿಸುತ್ತಿರುವ ಅಧಿಕಾರಿಗಳು

ಸುರಪುರ: ಬಡ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಬಾರದು ಎಂದು ಸರಕಾರ ಉಚಿತ ಶಿಕ್ಷಣದ ಜತೆಗೆ, ವಸತಿ, ಊಟದ ವ್ಯವಸ್ಥೆ ಕಲ್ಪಿಸಿದೆ ಆದರೆ ಅಧಿಕಾರಿಗಳ ಧನ ದಾಹದಿಂದ ವಿದ್ಯಾರ್ಥಿಗಳ ಹೊಟ್ಟೆ ಸೇರಬೇಕಾಗಿರುವ ಅಕ್ಕಿ, ಅಕ್ರಮವಾಗಿ ಕಾಳ ಸಂತೆಯಲ್ಲಿ ಮಾರಾಟ ಮಾಡಲಾಗುತ್ತಿದೆ ಎನ್ನುವ ಆರೋಪ ಕೇಳಿ ಬಂದಿದೆ.

ನಗರದ ಲಕ್ಷ್ಮಿಪುರ ಸಮೀಪದಲ್ಲಿ ಟಾಟಾ ಎಸಿ ವಾಹನ ವಸತಿ ನಿಲಯಗಳಿಗೆ ಸೇರಿದೆ ಎನ್ನಲಾದ ಪಡಿತರ ಅಕ್ಕಿ ಸಾಗಾಟವಾಗುತ್ತಿರುವ ಖಚಿತ ಮಾಹಿತಿಯ ಮೆರೆಗೆ ಸ್ಥಳೀಯರು ಪೊಲೀಸ್ ಅಧಿಕಾರಿಗಳೂ ಮತ್ತು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತಂದರು ಸಹ ಅಧಿಕಾರಿಗಳು ಸ್ಥಳಕ್ಕೆ ಬಾರದಿರುವುದು ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ ಎಂದು ದೂರಿದರು.

ಜಿಲ್ಲೆಯಾದ್ಯಂತ ಪಡಿತರ ಅಕ್ರಮದ ಪ್ರಕರಣಗಳು ಆಗಾಗ ನಡೆಯುತ್ತಿದ್ದರು ಸಹ ಸರಕಾರ ಮತ್ತು ಸಂಬಂಧಪಟ್ಟ ಅಧಿಕಾರಿಗಳು ದಿಟ್ಟ ನಿರ್ಧಾರ ತೆಗೆದುಕೊಂಡು ಅಕ್ರಮ ತಡೆಯುವಲ್ಲಿ ವಿಫಲರಾಗಿದ್ದಾರೆ. ನಗರದ ಹೊರ ಹೊಲಯದಲ್ಲಿ ಕಾಣಿಸಿಕೊಂಡ ಪಡಿತರ ಕುರಿತು ತನಿಖೆ ನಡೆಸಿ ಕ್ರಮ ಕೇಗೊಳ್ಳುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ.

ಅಕ್ರಮವಾಗಿ ಪಡಿತರ ಸಾಗಾಟ ಮಾಡುತ್ತಿದೆ ಎನ್ನಲಾದ ವಾಹನ ಮತ್ತು ಅಕ್ಕಿ ಮೂಟೆಗಳು

ಬಡ ವಿದ್ಯಾರ್ಥಿಗಳ ಹಿತದೃಷ್ಠಿಯಿಂದ ಸರಕಾರ ವಸತಿ ನಿಲಯಗಳಿಗೆ ಉಚಿತವಾಗಿ ಅಕ್ಕಿಯನ್ನು ನೀಡುತ್ತಿದೆ, ಆದರೆ ಸುರಪುರ ನಗರ ಮತ್ತು ತಾಲೂಕಿನಾದ್ಯಂತ ಸಂಭಂಧಿಸಿದ ಇಲಾಖೆಯ ಅಧಿಕಾರಿಗಳು ಮತ್ತು ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಶಾಮೀಲಾಗಿ ಅಕ್ರಮ ಅಕ್ಕಿ ಸಾಗಾಟಕ್ಕೆ ಕುಮ್ಮಕ್ಕು ನೀಡುತ್ತಿದ್ದಾರೆ.
-ಶಿವಲಿಂಗ ಹಾಸನಾಪುರ, ಜಿಲ್ಲಾ ಸಂಚಾಲಕ

ಯಾದಗಿರಿ: ಸಹಕಾರ ಸಂಘಗಳು ರೈತರ ಜೀವನಾಡಿ

ಯಾದಗಿರಿ: ಸಹಕಾರ ಸಂಘಗಳು ರೈತರ ಜೀವನಾಡಿಯಾಗಿದ್ದು, ಇಲ್ಲಿ ಸೇವಾ ಭಾವನೆಯಿಂದ ಕೆಲಸ ಮಾಡುವುದರಿಂದ ಇದರ ಪ್ರತಿಫಲವು ನೇರವಾಗಿ ರೈತರಿಗೆ ತಲುಪುತ್ತದೆ. ಇವುಗಳನ್ನು ಉಳಿಸಿ ಗ್ರಾಮೀಣಾಭಿವೃದ್ಧಿಗೆ ಎಲ್ಲರೂ ಸಹಕಾರ ನೀಡಬೇಕು ಎಂದು ಜಿಲ್ಲಾಧಿಕಾರಿ ಡಾ.ಸುಶೀಲಾ ಬಿ. ಅವರು ಸಲಹೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಸಹಕಾರ ಇಲಾಖೆಯ ಕೇಂದ್ರ ಯೋಜನೆಗಳ ಜಿಲ್ಲಾ ಸಹಕಾರ ಅಭಿವೃದ್ಧಿ ಸಮಿತಿಯ ಸಭೆ ನಡೆಸಿ ಅವರು ಮಾತನಾಡಿದರು. ಸಹಕಾರ ಸಂಘಗಳು ಗ್ರಾಮೀಣ ಜನರ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುವುದರಿಂದ ಇವುಗಳನ್ನು ಉಳಿಸಿ ಗ್ರಾಮೀಣಾಭಿವೃದ್ಧಿಗೆ ಎಲ್ಲರೂ ಸಹಕಾರ ನೀಡಬೇಕು ಎಂದರು.

ಯಾದಗಿರಿ ಜಿಲ್ಲೆಯಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಭಿವೃದ್ಧಿಗಾಗಿ ಹಾಗೂ ರಚನೆ ಮಾಡಲು ಕೆಎಮ್‌ಎಫ್ ಕಲಬುರಗಿ, ಪಶು ಸಂಗೋಪನ ಇಲಾಖೆ ಮತ್ತು ರೂಪರೇಷೆಗಳನ್ನು ರಚಿಸಿ ರೈತ ಬಾಂಧವರಿಗೆ ಉಪಯೋಗ ಆಗುವಂತೆ ಸಂಘಗಳನ್ನು ರಚನೆ ಮಾಡಲು ಜಿಲ್ಲಾಧಿಕಾರಿ ಸೂಚಿಸಿದರು.

ಪ್ರಧಾನ ಮಂತ್ರಿಗಳ ಆಶಯದಂತೆ ವಿಶ್ವದ ಅತಿ ದೊಡ್ಡದಾದ ಗೋಧಾಮು ನಿರ್ಮಾಣ ಮಾಡುವ ಕುರಿತು,ಯಾವುದಾದರೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಗೋದಾಮು ನಿರ್ಮಾಣ ಮಾಡಲು ಇಚ್ಛಿಸಿದ್ದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸೂಚಿಸಿದರು.

ಜಿಲ್ಲೆಯಲ್ಲಿ ಮಾರ್ಚ್ 2024ರ ಅಂತ್ಯಕ್ಕೆ ಒಟ್ಟು 109 ಸಂಘಗಳು ಕಾರ್ಯನಿರ್ವಹಿಸುತ್ತಿದ್ದು ಸದರಿ ಯೋಜನೆ ಅಡಿಯಲ್ಲಿ ಮೊದಲನೇ ಹಂತದಲ್ಲಿ 86 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಗಣಕಯಂತ್ರ ಹಾಗೂ ಇತರೆ ಸಾಮಾಗ್ರಿಗಳು ನೀಡಲಾಗಿರುತ್ತದೆ. ಈ ಪೈಕಿ ಒಟ್ಟು 85 ಸಂಘಗಳ ಗಣಕೀಕರಣದಲ್ಲಿ ದಾಖಲಾತಿಗಳನ್ನು ಅಪ್ಲೋಡ್ ಮಾಡುವ ಪ್ರಗತಿಯಲ್ಲಿದ್ದು 39 ಸಂಘಗಳ ಗಣಿತೀಕರಣ ಪೂರ್ಣಗೊಂಡಿರುತ್ತದೆ.

ಎರಡನೇ ಹಂತದಲ್ಲಿ 19 ಸಂಘಗಳಿಗೆ ಅನುಮೋದನೆ ನೀಡಲಾಗಿರುತ್ತದೆ. ಗಣಕಯಂತ್ರ ಮತ್ತು ಇತರ ಸಾಮಾಗ್ರಿಗಳು ಬರುವುದು ಬಾಕಿ ಇರುತ್ತದೆ ಹಾಗೂ ಮೂರನೇ ಹಂತದಲ್ಲಿ ನಾಲ್ಕು ಸಂಘಗಳಿಗೆ ಅನುಮೋದನೆ ಪಡೆಯಲು ಪ್ರಸ್ತಾವನೆ ಸಲ್ಲಿಸಿದ್ದೇವೆ ಎಂದು ಸಂಬಂಧಿಸಿದ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಸಹಕಾರ ಸಂಘಗಳ ಉಪನಿಬಂಧಕರಾದ ಆರ್ ಪವನ್‌ಕುಮಾರ್, ಜಂಟಿ ಕೃಷಿ ನಿರ್ದೇಶಕ ಪಿ ರವಿ, ಸಹಕಾರ ಸಂಘಗಳ ಲೆಕ್ಕಪರಿಶೋಧಕ ಮಹಿಬೂಬ, ಯಾದಗಿರಿ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ವಿಶ್ವನಾಥರೆಡ್ಡಿ ದರ್ಶನಪೂರ, ಸಹಾಯಕ ನಿಬಂಧಕ ಸೀಮಾ ಫಾರುಕಿ, ಕೆಎಮ್‌ಎಫ್ ವ್ಯವಸ್ಥಾಪಕ ನಿರ್ದೇಶಕ ಪಾಂಡುಗೌಡ ಪಾಟೀಲ, ಕಲಬುರಗಿ ಡಿಸಿಸಿ ಬ್ಯಾಂಕ್ ಜನರಲ್ ಮ್ಯಾನೇಜರ್ ಮುತ್ತುರಾಜ್, ನಬಾರ್ಡ್ ಬ್ಯಾಂಕ್ ಡಿಡಿಎಂ ಲೋಹಿತ್ ಸೇರಿದಂತೆ ಸಮಿತಿಯಲ್ಲಿರುವ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಸಹಕಾರ ಇಲಾಖೆಯ ಕೇಂದ್ರ ಯೋಜನೆಗಳ ಜಿಲ್ಲಾ ಸಹಕಾರ ಅಭಿವೃದ್ಧಿ ಸಮಿತಿಯ ಸಭೆ ನಡೆಸಿದರು.

ಜಿಲ್ಲೆಯಲ್ಲಿ ಹೊಸದಾಗಿ ಮೀನುಗಾರಿಕಾ ಸಹಕಾರ ಸಂಘಗಳನ್ನು ರಚಿಸಲು ನಿರ್ದೇಶಿಸಿದರು. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಸಿಎಸ್ಸಿ ಕೇಂದ್ರಗಳು, ರಸಗೊಬ್ಬರ ಮಾರಾಟ ಕೇಂದ್ರ ಹಾಗೂ ರೈತ ಉತ್ಪಾದಕ ಸಂಸ್ಥೆಯಾಗಿ ರಚಿಸಲು ರೈತರಿಗೆ ಮಾರ್ಗದರ್ಶನ ನೀಡಿ.
– ಡಾ.ಸುಶೀಲಾ ಬಿ, ಜಿಲ್ಲಾಧಿಕಾರಿ

ಭಾಲ್ಕಿಯಲ್ಲಿ ಯಶೋಧನ ಗ್ರಂಥ ಬಿಡುಗಡೆಗೊಳಿಸಿದ ಸಚಿವ

ಶೈಕ್ಷಣಿಕ ಕ್ಷೇತ್ರದಲ್ಲಿ ಜಗತಾಪ ಕೊಡುಗೆ ಅನನ್ಯ

ಯಶೋಧನ ಗ್ರಂಥ ಬಿಡುಗಡೆ ಹಾಗೂ ನಿವೃತ ಜಂಟಿ ನಿರ್ದೇಶಕ ಡಿ.ಜಿ.ಜಗಪಾತ ಅವರ ಅಮೃತ ಮಹೋತ್ಸವ ಕಾರ್ಯಕ್ರಮವನ್ನು ಡಾ.ಶರಣಪ್ರಕಾಶ್ ಪಾಟೀಲ್ ಉದ್ಘಾಟಿಸಿದರು.

ಭಾಲ್ಕಿ: ವಿಶ್ರಾಂತ ಜಂಟಿ ನಿರ್ದೇಶಕ ಡಿ.ಜಿ.ಜಗತಾಪ ಅವರು ಯಶಸ್ವಿಯಾಗಿ 75 ವರ್ಷ ಸಾಮಾಜಿಕ ಮತ್ತು ಶೈಕ್ಷಣಿಕ ಸೇವೆ ಸಲ್ಲಿಸಿ,ಶಿಕ್ಷಣ ಕ್ಷೇತ್ರ ಸುಧಾರಣೆಗಾಗಿ ಅವರ ಕೊಡುಗೆ ಅಪಾರವಾಗಿದೆ ಎಂದು ವೈದ್ಯಕೀಯ ಶಿಕ್ಷಣ ಹಾಗೂ ಕೌಶಲಭಿವೃದ್ಧಿ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಹೇಳಿದರು.

ಭಾಲ್ಕಿ ತಾಲೂಕಿನ ಅಂಬೆಸಾಂಗವಿ ಕ್ರಾಸ್ ಹತ್ತಿರ ವ್ಹಿ.ಡಿ. ಜಗತಾಪ ಫಂಕ್ಷನ್ ನಲ್ಲಿ ಆಯೋಜಿಸಿದ ಯಶೋಧನ ಗ್ರಂಥ ಬಿಡುಗಡೆ ಹಾಗೂ ನಿವೃತ ಜಂಟಿ ನಿರ್ದೇಶಕ ಡಿ.ಜಿ.ಜಗಪಾತ ಅವರ ಅಮೃತ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಜಗತಾಪ ಅವರು ಶಿಕ್ಷಣದಿಂದ ಸಮಾಜದ ಅಭಿವೃದ್ಧಿ ಎನ್ನುವ ಹಿತದೃಷ್ಟಿಯಿಂದ ನಿಸ್ವಾರ್ಥ ಭಾವನೆಯಿಂದ ಶ್ರಮಿಸಿದ್ದಾರೆ ಎಂದರು. ಮಕ್ಕಳಿಗೆ ಉತ್ತಮ ಸಂಸ್ಕಾರ ಗುಣಮಟ್ಟದ ಶಿಕ್ಷಣ ಒದಗಿಸಲು ಪಾಲಕರು ಗಮನ ಹರಿಸಬೇಕು ಎಂದರು.

ನಿವೃತ್ತ ಜಂಟಿ ನಿರ್ದೇಶಕ ಡಿ.ಜಿ.ಜಗತಾಪ ಮಾತನಾಡಿದರು.

ಡಿ.ಜಿ.ಜಗತಾಪ ಅವರು ದಕ್ಷ ಪ್ರಮಾಣಿಕ. ಜನಸ್ನೇಹಿಯಾಗಿ ಕರ್ತವ್ಯ ನಿರ್ವಹಿದ್ದಾರೆ. ಶೈಕ್ಷಣಿಕ ಕ್ಷೇತ್ರದ ಸುಧಾರಣೆಗಾಗಿ ವಿನೂತನ ಮಾದರಿ ಸಲಹೆ ಸೂಚನೆ ನೀಡುತ್ತಿರುವುದು ಹೆಮ್ಮೆಯ ವಿಷಯ.
– ಡಾ. ಶರಣ ಪ್ರಕಾಶ್ ಪಾಟೀಲ್, ವೈದ್ಯಕೀಯ ಶಿಕ್ಷಣ ಸಚಿವ

ಮಾಜಿ ಶಾಸಕ ಪ್ರಕಾಶ್ ಖಂಡ್ರೆ, ಎಮ್.ಎಲ್.ಸಿ.ಮಾರುತಿರಾವ ಮುಳೆ, ಬ್ರಿಮ್ಸ್ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಮಹೇಶ ಬಿರಾದಾರ್, ಡಾ.ಶಾರದಾ ಜಾಧವ ಮಾನೆ, ವಿಶ್ರಾಂತ್ ಪ್ರಾಂಶುಪಾಲೆ ರೇಖಾ ಮಹಾಜನ್, ಜಿಪಂ ಮಾಜಿ ಉಪಾಧ್ಯಕ್ಷ ಡಾ.ಪ್ರಕಾಶ ಪಾಟೀಲ್ ,ಛತ್ರಪತಿ ಶಿವಾಜಿ ಮಹಾರಾಜ ಸಹಕಾರ ಬ್ಯಾಂಕಿನ ಅಧ್ಯಕ್ಷ ಡಾ.ದಿನಕರರಾವ್ ಮೋರೆ, ಗ್ರಾಪಂ ಅಧ್ಯಕ್ಷೆ ಶೋಭಾಬಾಯಿ ಯಾದವರಾವ ಮಾನಕರಿ,ಬ್ರಿಮ್ಸ್ ನಿರ್ದೇಶಕ ಡಾ.ಶಿವುಕುಮಾರ್ ಶೆಟಕಾರ,ಡಾ.ಅನೀಲಕುಮಾರ ತಳವಾಡೆ ಸೇರಿದಂತೆ ಇನ್ನಿತರರು ಗಣ್ಯರು ಉಪಸ್ಥಿತರಿದ್ದರು.

ಸಂಸ್ಕೃತಿ ಉತ್ಸವದ ಯಶಸ್ಸಿಗೆ ಶ್ರಮಿಸೋಣ

ಶಹಾಪುರ: ಭಾರತವು ಸಂಸ್ಕೃತಿ, ಪರಂಪರೆಯಲ್ಲಿ ಶ್ರೀಮಂತಿಕೆಯನ್ನು ಹೊಂದಿದ ರಾಷ್ಟ್ರ. ವಿವಿಧತೆಯಲ್ಲಿ ಏಕತೆಯನ್ನು ಹೊಂದಿದ ರಾಷ್ಟ್ರ ನಮ್ಮದು. ಮಾನವ ವಿಕಾಸಕ್ಕೆ ಒತ್ತು ನೀಡುವದಕ್ಕಿಂತ ಮಾನವೀಯತೆ ಮತ್ತು ನಿಸರ್ಗ, ಪರಿಸರ ಸಂರಕ್ಷಣೆಯೊಂದಿಗೆ ವಿಕಾಸತೆಯನ್ನು ಹೊಂದುವ ನಿಟ್ಟಿನಲ್ಲಿ ಶ್ರೀಕೊತ್ತಲ ಬಸವೇಶ್ವರ ಶಿಕ್ಷಣ ಸಮಿತಿ ಮತ್ತು ಕಲಬುರಗಿ ವಿಕಾಸ ಅಕಾಡೆಮಿ ಹಾಗೂ ಭಾರತ ವಿಕಾಸ ಸಂಗಮ ಹಲವಾರು ವರ್ಷಗಳಿಂದ ಶ್ರಮಿಸುಸುತ್ತಿರುವದು ಶ್ಲಾಘನೀಯವಾದದು ಎಂದು ಚರಬಸವೇಶ್ವರ ಸಂಸ್ಥಾನದ ಡಾ.ಶರಣು ಬಿ. ಗದ್ದುಗೆ ತಿಳಿಸಿದರು.

ನಗರದ ಬಾಲಕರ ಸರಕಾರಿ ಪ್ರೌಢ ಶಾಲೆಯ ಆವರಣದಲ್ಲಿ 7 ನೇ ಭಾರತೀಯ ಸಂಸ್ಕೃತಿ ಉತ್ಸವ ಮತ್ತು ಕೊತ್ತಲ ಸ್ವರ್ಣ ಜಯಂತಿ ಅಂಗವಾಗಿ ರವಿವಾರ ತಾಲೂಕು ಮಟ್ಟದ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳ ಕಾರ್ಯಕ್ರಮವನ್ನು ಸಸಿಗೆ ನೀರೆರಿಯುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳು ಏರ್ಪಡಿಸಿದ್ದು, ವಯಸ್ಸಿನ ಮಿತಿ ಅಳವಡಿಸದಿರುವದು ಉತ್ತಮ ಕಾರ್ಯವಾಗಿದೆ. ಪ್ರತಿಭಾವಂತ ಕಲಾವಿದರಿಗೆ ವಯಸ್ಸಿನ ಮಿತಿ ನಿಗದಿ ಪಡಿಸದಿರವದು ಉತ್ತಮ ನಿರ್ಧಾರವಾಗಿದೆ. ಜಾನಪದ, ಭಜನಾ ಮಂಡಳಿ, ವಿವಿಧ ಸಂಸ್ಕೃತಿಕ ನೃತ್ಯ ಸೇರಿದಂತೆ ತತ್ವಪದ, ಕನ್ನಡ ಗೀತೆಗಳು ಇತರೆ ಕಾರ್ಯಕ್ರಮಗಳು ಇಲ್ಲಿ ಜರುಗಲಿವೆ. ಪ್ರತಿಭಾವಂತ ಮಕ್ಕಳನ್ನು ಗುರುತಿಸುವ ಕೆಲಸ ನಡೆಯಲಿದೆ. ಆಯಾ ಸಾಂಸ್ಕೃತಿಕ ತಂಡಗಳಿಗೆ ಪ್ರಶಸ್ತಿ ಪತ್ರ ವಿತರಣೆ ಕಾರ್ಯವು ನಡೆಯಲಿದೆ.

ಡಿಡಿಯು ಶಿಕ್ಷಣ ಸಂಸ್ಥೆಯ ಭೀಮಣ್ಣ ಮೇಟಿ, ಕ್ಷೇತ್ರ ಸಮನ್ವಯ ಅಧಿಕಾರಿ ರೇಣುಕಾ ಪಾಟೀಲ್ ಮತ್ತು ಕಸಾಪ ಅಧ್ಯಕ್ಷ ಡಾ. ರವೀಂದ್ರನಾಥ ಹೊಸಮನಿ ಮಾತನಾಡಿದರು. ಭೀಮಣ್ಣಗೌಡ ಬೈರಡ್ಡಿ, ಉಪ ಪ್ರಾಂಶುಪಾಲ ಮಲ್ಲಣ್ಣಗೌಡ ಬಿರೆದಾರ, ಶಿವರಾಜ ದೇಶಮುಖ, ಪತ್ರಕರ್ತರ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ ಮುದ್ನೂರ ಉಪಸ್ಥಿತರಿದ್ದರು. ಕಲ್ಬುರ್ಗಿ ವಿಕಾಸ ಅಕಾಡೆಮಿ ತಾಲೂಕು ಸಂಚಾಲಕ ಅಮೃತರಾವ್ ಮುಲಗೆ ಅಧ್ಯ ಕ್ಷತೆವಹಿಸಿದ್ದರು.

ಕಲಬುರಗಿಯ ಬೀರನಹಳ್ಳಿ ಸೇಡಂ-ಕಲ್ಬುರ್ಗಿ ರಸ್ತೆಯಲ್ಲಿರುವ ಸುಮಾರು 240 ಎಕರೆ ಪ್ರದೇಶದಲ್ಲಿ 7 ನೇ ಭಾರತೀಯ ಸಂಸ್ಕೃತಿ ಉತ್ಸವ ಜ 29 ರಿಂದ ಫೆಬ್ರವರಿ 6 ರವರೆಗೆ ಜರುಗಲಿದ್ದು. ಸುಮಾರು ನಿತ್ಯ 2 ಲಕ್ಷ ಜನರು ಭಾಗವಹಿಸಲಿದ್ದಾರೆ.
-ಅಮೃತರಾವ್ ಮುಲಗೆ. , ವಿಕಾಸ ಅಕಾಡೆಮಿ ಸಂಚಾಲಕ.

ನಾಳೆ ಬಿಜೆಪಿಯಿಂದ ಬೃಹತ್ ಪ್ರತಿಭಟನೆ

ಯಾದಗಿರಿ: ನಗರದ ಪೊಲೀಸ್ ಠಾಣೆಯ ಪಿಎಸ್‌ಐ ಪರಶುರಾಮ್ ಅವರ ಶಂಕಾಸ್ಪದ ಸಾವಿನ ಆರೋಪಿಗಳಾದ ಶಾಸಕ ಚನ್ನಾರಡ್ಡಿ ತುನ್ನೂರ್ ಹಾಗೂ ಅವರ ಪುತ್ರನನ್ನು ಕೂಡಲೇ ಬಂಧಿಸಿ ಪ್ರಕರಣವನ್ನು ಸಿಬಿಐ ಗೆ ನೀಡಬೇಕೆಂದು ಒತ್ತಾಯಿಸಿ ನಗರದಲ್ಲಿ ನಾಳೆ 10.30 ಗಂಟೆಗೆ ಬಿಜೆಪಿ ಪ್ರತಿಭಟನೆ ನಡೆಸಲಿದೆ ಎಂದು ಜಿಲ್ಲಾಧ್ಯಕ್ಷ ಅಮೀನರಡ್ಡಿ ಯಾಳಗಿ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾ ಛಲವಾದಿ ನಾರಾಯಣ ಸ್ವಾಮಿ ಮತ್ತು ಮಾಜಿ ಸಚಿವ ಎನ್ ಮಹೇಶ್ ಅವರು ನೇತೃತ್ವದಲ್ಲಿ ನಗರದ ಸುಭಾಷ್ ವೃತ್ತದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊ ಳ್ಳಲಾಗಿದೆ . ಈ ಸಂದರ್ಭದಲ್ಲಿ ಮಾಜಿ ಸಚಿವ ರಾಜೂಗೌಡ, ಮಾಜಿ ಶಾಸಕ ವೆಂಕಟರೆಡ್ಡಿಗೌಡ ಮದ್ನಾಳ್, ಬಿಜೆಪಿ ರಾಜ್ಯ ಕಾರ್ಯದರ್ಶಿ ಕು. ಲಲಿತಾ ಅನಪುರ ಭಾಗಿಯಾಗಲಿದ್ದಾರೆ ಎಂದು ಹೇಳಿದ್ದಾರೆ. ಹೀಗಾಗಿ ಪ್ರತಿಭಟನೆಗೆ ಪಕ್ಷದ ಜನಪ್ರತಿನಿಧಿಗಳು, ಮಾಜಿ ಸಂಸ ದರು, ಶಾಸಕರು, ಪಕ್ಷದ ರಾಜ್ಯ, ಜಿಲ್ಲಾ, ಮಂಡಲ, ವಿವಿಧ ಮೋ ರ್ಚಾ, ಮಹಾಶಕ್ತಿ -ಶಕ್ತಿ ಕೇಂದ್ರ, ಬೂತ್ ಪದಾಧಿಕಾರಿಗಳು, ನಗರಸಭೆ ಸದಸ್ಯರು, ನಾಮನಿರ್ದೇಶಿತ ಸದಸ್ಯರು, ವಿವಿಧ ಪ್ರಕೋ ಷ್ಠಗಳ ಸಂಚಾಲಕರು, ಸಹಸಂಚಾಲಕರು, ಹಿರಿಯ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು, ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಅವರು ಕೋರಿದ್ದಾರೆ.

ರಾಜ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನ

ಯಾದಗಿರಿ: ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಸಂಬಂಧ ಹಿರಿಯ ನಾಗರಿಕರ ಕ್ಷೇತ್ರದಲ್ಲಿ ಉತ್ತಮ ಸೇವೆಸಲ್ಲಿಸಿದ ಹಿರಿಯ ನಾಗರಿಕರ ರಾಜ್ಯ ಪ್ರಶಸ್ತಿಗೆ ಪ್ರಾಸ್ತಾವನೆಗಳನ್ನು ಆಹ್ವಾನಿಸಲಾಗಿದೆ ಎಂದು ಯಾದಗಿರಿ ಜಿಲ್ಲಾ ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣಾಧಿಕಾರಿಗಳು ಅವರು ತಿಳಿಸಿದ್ದಾರೆ.

ಅಕ್ಟೋಬರ್ 01 ರಂದು ವಿಶ್ವ ಹಿರಿಯ ನಾಗರಿಕರ ದಿನಾಚರಣೆ ರಾಜ್ಯ ಮಟ್ಟದಲ್ಲಿ ಆಚರಿಸುವ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಾದ ಶಿಕ್ಷಣ, ಸಾಹಿತ್ಯ, ಕಲೆ, ಕಾನೂನು, ಪ್ರತಿಭೆ, ಕ್ರೀಡೆ, ಮತ್ತು ಹಿರಿಯ ನಾಗರಿಕರ ಕ್ಷೇತ್ರದಲ್ಲಿ ಸಮಾಜ ಸೇವೆ ಈ ಕ್ಷೇತ್ರಗಳಲ್ಲಿ ಗಣನೀಯ ಸೇವೆಸಲ್ಲಿಸಿದ ಹಿರಿಯ ನಾಗರಿಕರಿಗೆ 6 ವೈಯಕ್ತಿಕ, ಹಾಗೂ ಹಿರಿಯ ನಾಗರಿಕರ ಕ್ಷೇತ್ರದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ 1 ಸಂಸ್ಥೆಗೆ ಪ್ರಶಸ್ತಿ ಸೇರಿ, ಒಟ್ಟು 7 ಪ್ರಶಸ್ತಿ ನೀಡಲು ಇಲಾಖೆ ಅರ್ಜಿ ಆಹ್ವಾನಿಸಿದೆ.

ಅರ್ಹ ಅರ್ಜಿದಾರರು, ಸಂಸ್ಥೆಗಳು ಆಗಸ್ಟ್ 31ರ ಒಳಗೆ ಜಿಲ್ಲಾ ವಿಶೇಷಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಯಾದಗಿರಿ ಕಚೇರಿಗೆ ಅರ್ಜಿಸಲ್ಲಿಸಬೇಕು. ನಿಗದಿಪಡಿಸಿದ ದಿನಾಂಕದ ನಂತರ ಸಲ್ಲಿಸುವ ಪ್ರಸ್ತಾವನೆಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿ ದೂ.ಸಂ.08473 253740ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲಿಂಗಾಯತ ನಿಗಮ ಯೋಜನೆಗೆ ಅರ್ಜಿ

ಯಾದಗಿರಿ: ಪ್ರಸಕ್ತ ಸಾಲಿನ ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆಗಳಲ್ಲಿ ಸೌಲಭ್ಯಕ್ಕೆ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಯಾದಗಿರಿ ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತ ಜಿಲ್ಲಾ ವ್ಯವಸ್ಥಾಪಕರು ಅವರು ತಿಳಿಸಿದ್ದಾರೆ. ವಿವಿಧ ಯೋಜನೆಗಳು ಶೈಕ್ಷಣಿಕ ಸಾಲ ಯೋಜನೆಗಳು ಬಸವ ಬೆಳಗು ಯೋಜನೆ, ವಿದೇಶ ವಿದ್ಯಾವಿಕಾಸ ಯೋಜನೆ, ಜೀವ ಜಲ ಯೋಜನೆ, ಕಾಯಕ ಕಿರಣ ಯೋಜನೆ, ಭೋಜನಾಲಯ ಕೇಂದ್ರ, ವಿಭೂತಿ ನಿರ್ಮಾಣ ಘಟಕ, ಸ್ವಾವಲಂಭಿ ಸಾರಥಿ ಯೋಜನೆ, ಸ್ವಯಂ ಉದ್ಯೋಗ ಸಾಲ ಯೋಜನೆ (ವಾಣಿಜ್ಯ ಬ್ಯಾಂಕ್‌ಗಳ ಸಹಯೋಗದೊಂದಿಗೆ), ಸ್ವಾತಂತ್ರ್ಯ ಅಮೃತ ಮಹೋತ್ಸವದ ಮುನ್ನಡೆ ಯೋಜನೆ 2024ರ ಆನ್‌ಲೈನ್‌ನಲ್ಲಿ ಆ. 31ರ ಒಳಗೆ ಅರ್ಜಿಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತ, ಜಿಲ್ಲಾ ಕಚೇರಿ, ಮಿನಿ ವಿಧಾನಸೌಧ 2ನೇ ಮಹಡಿ ಸಿ ಬ್ಲಾಕ್ ರೂ.ನಂ.14 ಚಿತ್ತಾಪೂರ ರೋಡ ಯಾದಗಿರಿ ದೂ.ಸಂ.08473 253746, ನಿಗಮದ ದೂ.ಸಂ.080 22865522, 9900012351ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಲ ಕಾರ್ಮಿಕ ತಡೆಗೆ ಜನರ ಸಹಕಾರ ಅಗತ್ಯ

ಯಾದಗಿರಿ: ಅಂಗವಾಗಿ ಬಾಲ ಹಾಗೂ ಕಿಶೋರ ಕಾರ್ಮಿಕ ರಕ್ಷಿಸಿ, ಪುನರ್ವಸತಿಗೊಳಿಸಿ ಶಿಕ್ಷಣ ಮುಂದುವರಿಕೆಗೆ ಅವಕಾಶ ಮಾಡಿಕೊಡುವ ಉದ್ದೇಶದಿಂದ 2024ರ ಆ. 1 ರಿಂದ ಆ. 31ರ ವರೆಗೆ ರಕ್ಷಣಾ ಕಾರ್ಯಚರಣೆಗೆ ಸರಕಾರದ ಪ್ರತಿಯೊಂದು ಇಲಾಖೆಯು ಕೈಜೋಡಿಸಿದಾಗ ಮಾತ್ರ ಜಿಲ್ಲೆಯಲ್ಲಿ ಬಾಲಕಾರ್ಮಿಕ ಪದ್ಧತಿ ಎಂಬ ಅನಿಷ್ಠ ಪದ್ಧತಿ ನಿರ್ಮೂಲನೆ ಮಾಡಲು ಸಾಧ್ಯ ಎಂದು ಯಾದಗಿರಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ಮರಿಯಪ್ಪ ಅವರು ಹೇಳಿದರು.

ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ನವದೆಹಲಿ ಮತ್ತು ಕಾರ್ಮಿಕ ಆಯುಕ್ತರು ಬೆಂಗಳೂರು ಸೂಚನೆಯಂತೆ, ರಕ್ಷಣೆ ಮತ್ತು ಪುನರ್ವಸತಿ ಅಭಿಯಾನ) ಅಂಗವಾಗಿ ಪೂರ್ವಭಾವಿ ಸಭೆ ನಡೆಯಿತು.

ತಹಸೀಲ್ದಾರ ಸುರೇಶ ಅಂಕಲಗಿ ಅವರು ಮಾತನಾಡಿ, ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಲು ಪ್ರತಿ ತಿಂಗಳು 15 ತಪಾಸಣೆ ಮತ್ತು ಹಠಾತ್ ದಾಳಿ, ತಪಾಸಣೆ ಆಯೋಜಿಸಿವುದು. ಮತ್ತು ಪ್ರತಿ ತಿಂಗಳು 2 ಕಾನೂನು ಅರಿವು-ನೆರವು ಮತ್ತು ಜನ ಜಾಗೃತಿ ಕಾರ್ಯಕ್ರಮ ಆಯೋಜಿಸುವುದು. ಈ ಸಂದರ್ಭದಲ್ಲಿ ತಾ.ಪಂ ತಾಲ್ಲೂಕ ಯೋಜನಾಧಿಕಾರಿ ಶಶಿಧರ, ರೇಷ್ಮೇ ಇಲಾಖೆ ಸಹಾಯಕ ನಿರ್ದೇಶಕರು (ಪ್ರಭಾರ) ಪುನೀತ್‌ಕುಮಾರ್, ಆರೋಗ್ಯ ಇಲಾಖೆಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ರವೀಂದ್ರ, ಮಕ್ಕಳ ರಕ್ಷಣ ಘಟಕದ ಗೋವಿಂದ ರಾಥೋಡ, ತಂಬಾಕು ನಿಯಂತ್ರಣ ಕೋಶದ ಸಮಾಜ ಕಾರ್ಯಕರ್ತ ವಿಜಯಕುಮಾರ್ ಚವ್ಹಾಣ ಸೇರಿ ಹಲವರಿದ್ದರು.

ಸಮಾಚಾರ ಸಣ್ಣದಲ್ಲ

ಪೊಲೀಸ್ ಇಲಾಖೆ ಗಿಡಗಳ ತೆರವು

ಮುದಗಲ್: ಮುದಗಲ್ - ತಾವರಗೇರಾ ಮುಖ್ಯ ರಸ್ತೆಯಲ್ಲಿ ಹೆಚ್ಚು ಅಪಘಾತ ಸಂಭವಿಸಿ ಸಾವು ನೋವುಗಳು ಉಂಟಾಗುತ್ತಿರುವ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆ ವತಿಯಿಂದ ರಸ್ತೆಯ ಪಕ್ಕದಲ್ಲಿ ಇರುವ ಜಾಲಿ ಗಿಡಗಳನ್ನು ಜೆಸಿಬಿ ಮೂಲಕ ತೆರವುಗೊಳಿಸಿದರು. ರಸ್ತೆಯ ಪಕ್ಕದಲ್ಲಿ ಗಿಡಗಳು ಬೆಳೆದಿದ್ದು ಅವುಗಳನ್ನು ತೆರವುಗೊಳಿಸುವಂತೆ ಪೊಲೀಸ ಇಲಾಖೆ ವತಿಯಿಂದ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಮಂಡಳಿ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದ್ದು ,ಹಾಗೂ ಮೌಖಿಕವಾಗಿ ಹೇಳಿದರೂ ಕೂಡ ಸ್ಪಂದಿಸದ ಹಿನ್ನೆಲೆಯಲ್ಲಿ ಇಂದು ಪೊಲೀಸ್ ಇಲಾಖೆ ವತಿಯಿಂದ ರಸ್ತೆಯ ಪಕ್ಕದಲ್ಲಿ ಜೆಸಿಬಿ ಮೂಲಕ ಅಲ್ಲಿ ಗಿಡಗಳನ್ನು ತೆರವುಗೊಳಿಸಿ ಸಾರ್ವಜನಿಕರಿಗೆ ಸಂಚಾರ ಅನುಕೂಲ ಮಾಡಿ ಕೊಟ್ಟರು. ಈ ಸಂದರ್ಭದಲ್ಲಿ ಸ್ಥಳೀಯ ಪೊಲೀಸ್ ಠಾಣೆಯ ಹೆಡ್ ಕಾನ್ಸ್ಟೇಬಲ್ ಅಂಬರೀಶ ಹೆಚ್, ಕೆ, ನಾಗಲಾಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ಮೇಗಪ್ಪ ರಾಥೋಡ ಭೀಮನಗೌಡ ಛತ್ತರ, ವಿರುಪಣ್ಣ ಕಂಬಳಿ, ವಿರೇಶ ಉಪಸ್ಥಿತರಿದ್ದರು.

ಕ್ರಸ್ಟ್ ಗೇಟ್ ಕುಸಿತ: ಅಧಿಕಾರಿಗಳ ನಿರ್ಲಕ್ಷ್ಯ

ರಾಯಚೂರು: ತುಂಗಭದ್ರಾ ಜಲಾಶಯದ 19ನೇ ಕ್ರಾಸ್ಟಗೇಟ್ ಕುಸಿಯಲು ತುಂಗಭದ್ರಾ ಜಲಾನಯನ

ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳ ನಿರ್ಲಕ್ಷ್ಯದ ಕಾರಣ ಎಂದು ರಾಜ್ಯ ರೈತ ಸಂಘ ಹಸಿರು ಸೇನೆಯ ರಾಜ್ಯ ಕಾರ್ಯಾಧ್ಯಕ್ಷ ಚಾಮರಾಜ ಮಾಲಿ ಪಾಟೀಲ್ ಆರೋಪಿಸಿದರು. ಶನಿವಾರ ರಾತ್ರಿ 10.50ಕ್ಕೆ 19ನೇ ಕ್ರಸ್ಟ್‌ಗೇಟ್ ಕುಸಿದಿದೆ. ಜೈನ್‌ನ ತುಂಡಾಗಿ ಕ್ರಸ್ಟ್ ಗೇಟ್ ಕುಸಿಯಲು ಕಾರಣವಾಗಿದೆ. ಬೇಸಿಗೆಯಲ್ಲಿ - ಜಲಾಶ ಯದ ನಿರ್ವಹಣೆಗೆ ಸಂಬಂಧಿಸಿ ಎಲ್ಲಾ ಎಚ್ಚರಿಕೆ ಕೈಗೊಳ್ಳಬೇಕು. ಗೇಟ್ ನಿರ್ವಹಣೆಗಳ ಸಾಮರ್ಥ್ಯ, ಹಾಗೂ ಜಲಾಶಯದ ಸುರಕ್ಷತೆ ಬಗ್ಗೆ ಪರಿಶೀಲಿಸಿ ಅಗತ್ಯ ದುರಸ್ತಿ ಕಾಮಗಾರಿ ಕೈಗೊಳ್ಳಬೇಕಾಗಿತ್ತು. ಆದರೆ, ಅಧಿಕಾರಿಗಳು ಈ ಬಗ್ಗೆ ಯಾವುದೇ ಗಮನ ಹರಿಸದಿರುವುದು 19 ಗೇಟ್ ಕುಸಿತಕ್ಕೆ ಕಾರಣವಾಗಿದೆ. ಆದರೆ 19ನೇ ಗೀಟ್ ಕುಸಿತ 60 ಟಿಎಂಸಿ ನೀರು ನದಿಗೆ ಬಿಡುವ ಸ್ಥಿತಿಗೆ ದಾರಿ ಮಾಡಿದ್ದು ಇದರಿಂದ ರೈತರ ಬೆಳೆಗೆ ನೀರು ಇಲ್ಲದ ಆತಂಕಕ್ಕೆ ಗುರಿಯಾಗುವಂತೆ ಮಾಡಿದೆ. ಅಧೀಕ್ಷಕ ಅಭಿಯಂತರ ಅವರಿಗೆ ಈ ಜವಾಬ್ದಾರಿ ನೀಡಲಾಗಿದೆ. ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಕೇವಲ ನೀರಿನ ಬಗ್ಗೆ ಚರ್ಚಿಸಲಾಗುತ್ತದೆ ವಿನಃ ತುಂಗಭದ್ರಾ ಜಲಾಶಯದ ದುರಸ್ತಿ ಮತ್ತು ಸುರಕ್ಷತೆಯ ಬಗ್ಗೆ ಯಾವುದೇ ಚರ್ಚೆ ನಡೆಯದಿರುವುದು, ಈ ಅನಾಹುತ ಸಂಭವಿಸಲು ಕಾರಣವಾಗಿದೆ ಎಂದು ಅವರು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ – ಪ್ರತಿಭಾ ಪುರಸ್ಕಾರ ಕಾರ್ಯಕ್ರಮ

ಸಮಾಜದ ಸರ್ವಕ್ಷೇತ್ರಕ್ಕೂ ವೀರಶೈವರ ಕೊಡುಗೆ

ಕಾರಟಗಿ: ಕರುನಾಡಿನ ಬಹುಸಂಖ್ಯಾತ ವೀರಶೈವ ಲಿಂಗಾಯತ ಸಮಾಜ ನಾಡಿನ ಸರ್ವಕ್ಷೇತ್ರಗಳ ಬೆಳವಣಿಗೆಯಲ್ಲಿ ಅಪಾರ ಕೊಡುಗೆ ನೀಡಿದ್ದೂ, ಇತ್ತೀಚಿನ ದಿನಗಳಲ್ಲಿ ಹರಿದುಹಂಚಿ ಹೋಗಿರುವ ವೀರಶೈವ ಎಲ್ಲ ಉಪಪಂಗಡಗಳನ್ನು ಒಂದೇ ವೇದಿಕೆಯಲ್ಲಿ ತಂದು ಮತ್ತೊಮ್ಮೆ ವೀರಶೈವ ಲಿಂಗಾಯತ ಸಮಾಜವನ್ನು ಒಗ್ಗೂಡಿಸಿ ಗಟ್ಟಿಗೊಳಿಸುವ ಪ್ರಮುಖ ಕೆಲಸ ವೇಗವಾಗಿ ಆಗಬೇಕಾಗಿದೆ ಎಂದು ಮಾಜಿ ಸಿಎಂ, ಸಂಸದ ಜಗದೀಶ ಶೆಟ್ಟರ್ ಇಂಗಿತ ವ್ಯಕ್ತಪಡಿಸಿದರು.

ಇಲ್ಲಿನ ತಾಲೂಕು ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಭಾನುವಾರ ಮಾತನಾಡಿದರು.

ವೀರಶೈವ ಲಿಂಗಾಯತ ಸಮಾಜದ ಎಲ್ಲಾ ಉಪ ಪಂಗಡಗಳ ಒಗ್ಗಟ್ಟಿಗೆ ಬಣಜಿಗ ಸಮಾಜ ನೇತೃತ್ವವಹಿಸಬೇಕಿದೆ ಎಂದು ಒತ್ತಿ ಹೇಳಿದರು. ಬಣಜಿಗ ಸಮಾಜ ಎಲ್ಲಾ ಒಳಪಂಗಡಗಳನ್ನು ಸಮನ್ವಯತೆಯಿಂದ, ಬಂಧುತ್ವ ಭಾವನೆಯಿಂದ ನೋಡಿಕೊಂಡು ಹೋಗಬೇಕು ಎಂದರು.

ಬಣಜಿಗ ಸಮಾಜದವರು, ಪ್ರತಿ ತಾಲೂಕಿನಲ್ಲಿ ಗಣತಿ ಮಾಡಿ, ತಾಲೂಕಿನಾದ್ಯಂತ ಹರಡಿರುವ ಸಮಾಜದ ಕೌಟುಂಬಿಕ ವಿವರಗಳನ್ನು ಸಂಗ್ರಹಿಸಬೇಕು. ಇದರಿಂದ ಭವಿಷ್ಯದಲ್ಲಿ ರಾಜಕೀಯ ಪ್ರಾತಿನಿಧ್ಯ ದೊರಕಲು ಅನುಕೂಲವಾಗುತ್ತದೆ ಎಂದರು

ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಮಾಜಿ ಸಿಎಂ ಜಗದೀಶ ಶೆಟ್ಟರ್ ಉದ್ಘಾಟಿಸಿದರು.

ಮಾಜಿ ಶಾಸಕರಾದ ಪರಣ್ಣ ಮುನವಳ್ಳಿ, ಬಸವರಾಜ ದಢೇಸೂಗೂರು ಮಾತನಾಡಿದರು. ಪ್ರಾಧ್ಯಾಪಕ ಅಶೋಕ ಹಂಚಳಿ ಬಣಜಿಗ ಸಮಾಜದ ಇತಿಹಾಸ ಮತ್ತು ಪರಂಪರೆಯ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು.

ತಾಲೂಕಾ ಬಣಜಿಗ ಕ್ಷೇಮಾಭಿವೃದ್ಧಿ ಸಂಘಕ್ಕೆ ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳಿಗೆ ಪದಗ್ರಹಣ ಬೋಧಿಸಲಾಯಿತು. ಕಳೆದ ಸಾಲಿನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯು ಪರೀಕ್ಷೆಯಲ್ಲಿ ಅಧಿಕ ಅಂಕಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಮತ್ತು ಪ್ರಶಂಸಾ ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು. ಜತೆಗೆ ತಾಲೂಕಿನ

ವಿವಿದಢೆ ಶಾಲೆ, ಆಸ್ಪತ್ರೆ, ಬಸ್ ನಿಲ್ದಾಣ, ದೇವಸ್ಥಾನ ಸೇರಿದಂತೆ ವಿವಿಧ ಇಲಾಖೆಗಳಿಗೆ ಭೂದಾನ ಮಾಡಿದ ಭೂದಾನಿಗಳಿಗೆ, ವಿವಿಧ-ಸಂಘ, ಸಂಸ್ಥೆ, ಸರಕಾರಿ ಹುದ್ದೆಗಳಿಗೆ ಆಯ್ಕೆಯಾದವರಿಗೆ ಸನ್ಮಾನಿಸಲಾಯಿತು.

ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಜಗದೀಶಪ್ಪ ಅವರಾದಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

> ನಾಡಿನಾದ್ಯಂತ ಹರಡಿಕೊಂಡಿರುವ ವೀರಶೈವ ಲಿಂಗಾಯತ ಸಮುದಾಯದ ಜನತೆ, ಮಠ, ಧಾರ್ಮಿಕ ಕೇಂದ್ರಗಳ ಅಭಿವೃದ್ಧಿ, ಶಿಕ್ಷಣ ಕ್ಷೇತ್ರದ ಬೆಳವಣಿಗೆಯಲ್ಲಿ ಬಹುದೊಡ್ಡ ಕೊಡುಗೆ ನೀಡಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಹರಿದುಹಂಚಿ ಹೋಗಿರುವ ಎಲ್ಲಾ ಉಪ ಪಂಗಡಗಳನ್ನು ಒಂದೇ ವೇದಿಕೆಯಲ್ಲಿ ತಂದು, ಮತ್ತೊಮ್ಮೆ ವೀರಶೈವ ಲಿಂಗಾಯತ ಸಮಾಜಗಳನ್ನು ಒಗ್ಗೂಡಿಸುವ ಕೆಲಸ ಪ್ರಮುಖವಾಗಿ ಆಗಬೇಕಿದ್ದು, ಅದರ ಜವಾಬ್ದಾರಿಯನ್ನು ಅಣ್ಣನ ಸ್ಥಾನದಲ್ಲಿ ನಿಂತು ಬಣಜಿಗ ಸಮಾಜ ಹೊತ್ತುಕೊಳ್ಳಬೇಕಾಗಿದೆ.
> -ಜಗದೀಶ ಶೆಟ್ಟರ್, ಸಂಸದ

ಕಾರ್ಯಕ್ರಮದಲ್ಲಿ ಸಂಘದ ಗೌರವಾಧ್ಯಕ್ಷ ಸಣ್ಣ ವೀರೇಶಪ್ಪ ಚಿನಿವಾಲ್, ಅಂದಾನಪ್ಪ ಜವಳಿ, ವಿಶ್ವನಾಥ್ ಬಳ್ಳೊಳ್ಳಿ, ತಹಸೀಲ್ದಾರ್ ವಿಶ್ವನಾಥ್ ಮುರಡಿ, ಪುರಸಭೆ ಮುಖ್ಯಾಧಿಕಾರಿ ಸುರೇಶ್ ಶೆಟ್ಟರ್, ಎಂಜಿನಿಯರ್ ವಿಶ್ವನಾಥ್ ಜಮತ್ನಳ್ಳಿ, ಶರಣಪ್ಪ ಭತ್ತದ, ಪಾರ್ವತಿ ಪವಾಡಶೆಟ್ಟರ್, ಬೆಳಗಲ್ ಮಲ್ಲಿಕಾರ್ಜುನಗೌಡ, ನಾಗರಾಜ ಅರಳಿ, ಮಂಜುನಾಥ ಪಗಡದಿನ್ನಿ ಇನ್ನಿತರರು ಇದ್ದರು. ಸೂಗೂರೇಶ್ ಬಪ್ಪೂರು, ಮೇಘಾ ದಿವಟರ್, ಪ್ರಭು ಉಪನಾಳ, ಸೂಗೂರೇಶ ಬಪ್ಪೂರ ಚಂದ್ರಶೇಖರ ಸೋಮಲಾಪುರ ಕಾರ್ಯಕ್ರಮ ನಿರ್ವಹಿಸಿದರು.

ಪುರಸಭೆ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಪೈಪೋಟಿ

ಮುದಗಲ್: ಕಳೆದ 17 ತಿಂಗಳಿಂದ ಮುದಗಲ್ ಪುರಸಭೆ ಆಡಳಿತ ಮಂಡಳಿಗೆ ಅಧ್ಯಕ್ಷ ಉಪಾಧ್ಯಕ್ಷರಿಲ್ಲದೆ ಆಡಳಿತಾಧಿಕಾರಿಗಳ ಕೈಯಲ್ಲಿ ಆಡಳಿತದ ಚುಕ್ಕಾಣಿಯಿದ್ದು, ರಾಜ್ಯ ಸರಕಾರ ಪುರಸಭೆಯ ಅಧ್ಯಕ್ಷ ಉಪಾಧ್ಯಕ್ಷರ ಸ್ಥಾನಕ್ಕೆ ಮೀಸಲಾತಿ ಪ್ರಕಟಣೆ ಮಾಡಿದ ಹಿನ್ನೆಲೆಯಲ್ಲಿ ಸದಸ್ಯರಲ್ಲಿ ಚಟುವಟಿಕೆಗಳು ಗರಿಗೆದರುವಂತಾಗಿದೆ.

ಅಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆಗೆ ಉಪಾಧ್ಯಕ್ಷ ಸ್ಥಾನ ಸಾಮಾನ್ಯ ಮೀಸಲಾಗಿದ್ದು, ಕಾಂಗ್ರೆಸ್ ಪಕ್ಷದಲ್ಲಿ ಐದಾರು ಹಾಗೂ ಬಿಜೆಪಿಯಲ್ಲಿ ಇಬ್ಬರು ಮಹಿಳಾಮಣಿಯರು ಅಧ್ಯಕ್ಷ ಸ್ಥಾನಕ್ಕೆ ಪೈಪೋಟಿ ನೀಡಲು ಕಾತುರಾಗಿದ್ದಾರೆ. ಈ ಭಾರಿಯಾದರೂ ಪರಿಶಿಷ್ಟ ಜಾತಿಗೆ ಮೀಸಲಾತಿ ಬರುವ ನೀರಿಕ್ಷೆಯಲ್ಲಿದ್ದ ಸದಸ್ಯ ಶರಣಪ್ಪ ವಡ್ಡರ್ ಅವರಿಗೆ ನಿರಾಸೆಯಾಗಿದೆ.

ಒಟ್ಟು 23 ಸದಸ್ಯರನ್ನು ಒಳಗೊಂಡಿರುವ ಪುರಸಭೆ ಆಡಳಿತ ಮಂಡಳಿಯಲ್ಲಿ ಕಾಂಗ್ರೆಸ್ 14 ಸದಸ್ಯರು,ಜೆಡಿಎಸ್ ನಂ 8ಸದಸ್ಯರು,ಬಿಜೆಪಿಯ ಒಬ್ಬರು ಕಳೆದ 2018 ರ ಚುನಾವಣೆಯಲ್ಲಿ ವಿಜೇತರಾಗಿದ್ದರು. ಈಗ ಕಾಂಗ್ರೆಸ್‌ನಲ್ಲಿ 16,ಬಿಜೆಪಿಯಲ್ಲಿ 05,ಜೆಡಿಎಸ್ ನಲ್ಲಿ 2 ಜನ ಸದಸ್ಯರಿದ್ದಾರೆ. ಕಾಂಗ್ರೆಸ್ ನ 16 ಜನ ಸದಸ್ಯರ ಬಲವಿದೆ.ಅಧ್ಯಕ್ಷ ಸ್ಥಾನಕ್ಕೆ ವಾರ್ಡ ನಂ 17 ರ ಕಾಸಿಂಭಿ ಅಬ್ದುಲ್ ಕೈಯುಂ,ವಾರ್ಡ ನಂ 15 ರ ಮಹಾದೇವಮ್ಮ ಗುತ್ತೇದಾರ,ವಾರ್ಡ ನಂ 8 ರ ರಾಭಿಯಾಬೇಗಂ,ವಾರ್ಡ 23 ರ ಜಯಶ್ರೀ ಜೇಡಿ, ವಾರ್ಡ 4 ರಮಜಾನಭೀ ಅಮೀರ್ ಸಾಬ ಪೈಪೋಟಿ

> ಮುದಗಲ್ ಪುರಸಭೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣೆಯ ಮೀಸಲಾತಿಯನ್ನು ರಾಜ್ಯ ಸರಕಾರ ಪ್ರಕಟಿಸಿದೆ.ಕಾಂಗ್ರೆಸ್‌ನ 16 ಜನ ಸದಸ್ಯರನ್ನು ವಿಚಾರಿಸಿ,ಒಮ್ಮತದ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗುವುದು.
> -ಡಿ.ಎಸ್.ಹೂಲಗೇರಿ, ಮಾಜಿ ಶಾಸಕರು ಲಿಂಗಸಗೂರು

ನಡೆಸಿದ್ದಾರೆ. ಮಾಜಿ ಶಾಸಕ ಡಿ.ಎಸ್.ಹೂಲಗೇರಿ ಅವರು ಯಾರಿಗೆ ಸೂಚಿಸುತ್ತಾರೋ ಅವರೇ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಾಗುವುದು ಬಹುತೇಕ ಖಚಿತವಾದಂತಿದೆ. ಬಿಜೆಪಿಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ನಿಗದಿತ ಸಂಖ್ಯಾಬಲವಿಲ್ಲದಿದ್ದರೂ ತೆರೆಮರೆಯಲ್ಲಿ ಇಬ್ಬರೂ ಮಹಿಳಾ ಮಣಿಯರು ಅಧ್ಯಕ್ಷ ಸ್ಥಾನಕ್ಕೆ ಪೈಪೋಟಿ ನೀಡಲು ಸಜ್ಜಾಗಿದ್ದಾರೆ.

ಚಿರತೆ ಸೆರೆಗೆ ಬೋನು ಇರಿಸಿದ ಇಲಾಖೆ

ಮಾನ್ವಿ: ಪಟ್ಟಣದ ಆದಪುರ ಪೇಟ್ ಸೇರಿದಂತೆ ಯರಮಲದೊಡ್ಡಿ ಹೋಗುವ ಮಾರ್ಗ ಪ್ರದೇಶದಲ್ಲಿ ಮೇಕೆ ಸೇರಿದಂತೆ ಚಿಗರೆಗಳ ಮೇಲೆ ದಾಳಿ ಮಾಡಿ ಜನರನ್ನು ಅನೇಕ ದಿನಗಳಿಂದ ಭಯಪಡಿಸುತ್ತಿದ್ದ ಚಿರತೆಯನ್ನು ಹಿಡಿಯುವುದಕ್ಕೆ ಅರಣ್ಯ ಇಲಾಖೆಯಿಂದ ಬಾರಿ ಸಿದ್ಧತೆ ಕೈಗೊಳ್ಳಲಾಗಿದೆ.

ಕಲ್ಲೂರು ಗುಡ್ಡದಲ್ಲಿ ಚಿರತೆಯನ್ನು ಸೇರೆಯಿಡಿಯುವುದಕ್ಕೆ ಅಳವಡಿಸಿದ ಬೋನನ್ನು ಶನಿವಾರ ಸಂಜೆ ವೇಳೆಗೆ ಮಾನ್ವಿ ಪಟ್ಟಣದ ಶಾಂಶಾಲಂ ದರ್ಗ ಸೇರಿದಂತೆ ಸುತ್ತಮುತ್ತಲಿನ ಜಮೀನುಗಳಲ್ಲಿ ಚಿರತೆಯ ಹೆಜ್ಜೆ ಗುರುತು ಅರಣ್ಯ ಇಲಾಖೆಯ ಸಿಬ್ಬಂದಿ ಪತ್ತೆ ಮಾಡಿದ್ದು, ನಾಗನಕೆರೆ ವ್ಯಾಪ್ತಿಯ ಗುಡ್ಡ ಪ್ರದೇಶದಲ್ಲಿ ಚಿರತೆ ನೀರು ಕುಡಿಯುವುದಕ್ಕೆ ಬರಬಹುದು ಎನ್ನುವ ವನ್ಯಜೀವಿ ತಜ್ಞ ನರೇಶ ಕೊಂಡಳ್ಳಿ ಮಾರ್ಗದರ್ಶನದಲ್ಲಿ ಡ್ರೋಣ್‌ಗಳನ್ನು ಬಳಸಿ ಗುಡ್ಡದ ಗುಹೆಗಳಲ್ಲಿ ಇರುವ ಚಿರತೆ ಹಾಗೂ ಚಿರತೆಯ ಮರಿಗಳನ್ನು ಪತ್ತೆ ಹಚ್ಚುವ ಕಾರ್ಯಾಚಾರಣೆ ತೀವ್ರಗೊಳಿಸಲಾಗಿದೆ.

ನಾಗನಕೆರೆ ವ್ಯಾಪ್ತಿಯಲ್ಲಿನ ಪ್ರದೇಶದಲ್ಲಿನ ಜಮೀನುಗಳಲ್ಲಿ ಬೆಳೆದಿರುವ ಬೆಳೆಗಳನ್ನು ತಿನ್ನುವುದಕ್ಕೆ ಬರುವ ಚಿಗರೆಗಳು ಚಿರತೆಗೆ ಸುಲಭವಾಗಿ ಆಹಾರವಾಗಿ ದೊರೆಯುತ್ತವೆ ಹಾಗೂ ಪಟ್ಟಣದ ಮಲ್ಲಿಕಾರ್ಜುನ ಗುಡ್ಡ ವಿಶಾಲವಾದ ಗುಡ್ಡ ಪ್ರದೇಶವಾಗಿದ್ದು ಇಲ್ಲಿನ ಎರಡು ಮೇಕೆಗಳು ಚಿರತೆಗೆ

ಪಟ್ಟಣದ ಹೊರವಲಯದಲ್ಲಿನ ನಾಗನಕೆರೆ ಹತ್ತಿರ ಚಿರತೆ ಸೇರೆಗೆ ವನ್ಯ ಜೀವಿ ತಜ್ಞ ನರೇಶ ಕೊಂಡಳ್ಳಿ ನೇತೃತ್ವದಲ್ಲಿ ಪರಿಶೀಲನೆ ನಡೆಸುತ್ತಿರುವ ಅರಣ್ಯ ಇಲಾಖೆ ಸಿಬ್ಬಂದಿ.

ಬಲಿಯಾಗಿದ್ದು, ನಿವಾಸಿಗಳು ಅರಣ್ಯ ಇಲಾಖೆಯ ಗಮನಕ್ಕೆ ತಂದಿರುವುದರಿಂದ ಅರಣ್ಯ ಇಲಾಖೆಯ ಅಧಿಕಾರಿಗಳು ಗಂಭಿರವಾಗಿ ಪರಿಗಣಿಸಿ ಚಿರತೆ ಹಿಡಿಯುವ ಕಾರ್ಯಚಾರಣೆಯನ್ನು ಗಂಭಿರವಾಗಿ ತೆಗೆದುಕೊಂಡಿದ್ದಾರೆ.

ಈ ಪ್ರದೇಶದ ರೈತರು ಜಮೀನುಗಳಿಗೆ ಹೋಗುವುದಕ್ಕೆ ಭಯಪಡುವಂತಾಗಿದ್ದು ತಮ್ಮ ಮೇಲೆ ಚಿರತೆ ದಾಳಿ ಮಾಡಬಹುದು ಎನ್ನುವ ಭಯದಲ್ಲಿಯೇ ತಮ್ಮ ಜಮೀನುಗಳಿಗೆ ತೆರಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಅರಿವು ಕೇಂದ್ರ

ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆ

6599 ಹೊಸ ಗ್ರಾಮ ಗ್ರಂಥಾಲಯಗಳ ಘೋಷಣೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

ಮಾದರಿ ಅರಿವು ಕೇಂದ್ರ ವಿನ್ಯಾಸ ಅನಾವರಣ
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

ಉಪಸ್ಥಿತಿ
ಶ್ರೀ ಪ್ರಿಯಾಂಕ್ ಖರ್ಗೆ
ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್,
ಐ.ಟಿ. ಮತ್ತು ಬಿ.ಟಿ. ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷತೆ
ಡಾ. ಸಿ.ಎನ್. ಅಶ್ವತ್ಥ ನಾರಾಯಣ
ಮಾನ್ಯ ಶಾಸಕರು, ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರ

ದಿನಾಂಕ: 12-08-2024, ಸೋಮವಾರ
ಸಮಯ: ಸಂಜೆ 5:00 ಗಂಟೆ
ಸ್ಥಳ: ತ್ರಿಪುರವಾಸಿನಿ, ಗೇಟ್ ನಂ.2, ಅರಮನೆ ಮೈದಾನ, ಬೆಂಗಳೂರು

ಸರ್ವರಿಗೂ ಆದರದ ಸ್ವಾಗತ

"ಭಾರತೀಯ ಸಂವಿಧಾನವು ಕಾನೂನಿನ ಅಡಿಯಲ್ಲಿ ಎಲ್ಲರಿಗೂ ಸಮಾನತೆ ಮತ್ತು ಸಮಾನ ರಕ್ಷಣೆಯನ್ನು ಪ್ರತಿಪಾದಿಸುತ್ತದೆ."

ಪ್ರಕಟಣೆ: ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಸಮಾಚಾರ ಸಣ್ಣದಲ್ಲ

ಹಲ್ಲೆ; ರೌಡಿ ಕಾಲಿಗೆ ಗುಂಡೇಟು, ಬಂಧನ

ಮಂಡ್ಯ: ಸಮಂಡ್ಯದಲ್ಲಿ ಭಾನುವಾರ ಬೆಳ್ಳಂಬೆಳಗ್ಗೆ ಪೊಲೀಸರ ಪಿಸ್ತೂಲ್ ಸದ್ದು ಮಾಡಿದೆ. ಮಳವಳ್ಳಿ ತಾಲೂಕಿನ ಚಿಕ್ಕಮುಲಗೂಡು ಬಳಿ ನಟೋರಿಯಸ್ ರೌಡಿಶೀಟರ್ ಮುತ್ತುರಾಜ್ ಅಲಿಯಾಸ್ ಡಕ್ಕ ಎಂಬಾತನ ಮೇಲೆ ಹಲಗೂರು ವೃತ್ತದ ಸರ್ಕಲ್ ಇನ್ಸ್ಪೆಕ್ಟರ್ ಶ್ರೀಧರ್ ಗುಂಡುಹಾರಿಸಿ ಬಂಧಿಸಿದ್ದಾರೆ. ಕೊಲೆ, ಕೊಲೆ ಯತ್ನ ಹಾಗೂ ರೌಡಿ ಚಟುವಟಿಕೆ ಸೇರಿದಂತೆ 5ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿದ್ದ ಮುತ್ತುರಾಜ್ ಅಲಿಯಾಸ್ ಡಕ್ಕನನ್ನು ಬಂಧಿಸಲು ಹೋದಾಗ, ಸಿಬ್ಬಂದಿ ಸಿದ್ದರಾಜು ಮೇಲೆ ಮಾರಕಾಸ್ತ್ರಗಳಿಂದ ದಾಳಿ ಮಾಡಿದ್ದಾನೆ. ಮೊದಲು ಗಾಳಿಯಲ್ಲಿ ಒಂದು ಸುತ್ತು ಗುಂಡುಹಾರಿಸಿ ಶರಣಾಗುವಂತೆ ಎಚ್ಚರಿಕೆ ನೀಡಲಾಗಿದೆ. ಆದರೂ ಹಲ್ಲೆಗೆ ಮುಂದಾದಾಗ ಆತ್ಮರಕ್ಷಣೆಗಾಗಿ ಪೊಲೀಸರು ಗುಂಡು ಹಾರಿಸಿ ಬಂಧಿಸಿದ್ದಾರೆ. ಆರೋಪಿಯನ್ನು ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಹಲಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕರಡಿ ದಾಳಿ: ರೈತ ಸಾವು

ಹಾಸನ: ಕರಡಿ ದಾಳಿಯಿಂದ ಗಾಯಗೊಂಡಿದ್ದ ರೈತರೊಬ್ಬರು ಮೃತಪಟ್ಟಿದ್ದಾರೆ. ಮಹಾಲಿಂಗಪ್ಪ (75) ಮೃತ ದುರ್ದೈವಿ. ಹಾಸನ ಜಿಲ್ಲೆಯ ಅರಸೀಕೆರೆ ತಾಲೂಕಿನ ಬಾಣಾವರ ಹೋಬಳಿಯ ಜನ್ನಾವರ ಗ್ರಾಮದಲ್ಲಿ ಘಟನೆ ನಡೆದಿದೆ. ಜು.25ರಂದು ಬೆಳಗ್ಗೆ ಮಹಾಲಿಂಗಪ್ಪ ಅವರು ತೋಟದ ಮನೆಯ ಬಳಿ ನಿಂತಿದ್ದಾಗ ಹಿಂದಿನಿಂದ ಬಂದ ಕರಡಿ ಡೆಡ್ಲಿ ದಾಳಿಮಾಡಿ ತೀವ್ರವಾಗಿ ಗಾಯಗೊಳಿಸಿತ್ತು.. ವೃದ್ಧ ಮಹಾಲಿಂಗಪ್ಪ ಅವರ ತಲೆಯ ಚರ್ಮವನ್ನೇ ಕಿತ್ತು, ಮುಖವನ್ನು ಪರಚಿ ತೀವ್ರವಾಗಿ ಗಾಯಗೊಳಿಸಿತ್ತು. ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ಅರಸೀಕೆರೆ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಟ್ಟ ನಂತರ ಹಾಸನದ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಸಾವು -ಬದುಕಿನ ಮಧ್ಯೆ ಹೋರಾಡಿದ ಮಹಾಲಿಂಗಪ್ಪ ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ಮೃತಪಟ್ಟಿದ್ದಾರೆ.

20 ಎಕರೆ ಅಕ್ರಮ ಒತ್ತುವರಿ ತೆರವು

ಚಿಕ್ಕಮಗಳೂರು: ರಾಜ್ಯಾದ್ಯಂತ ಅರಣ್ಯ ಅಕ್ರಮ ಒತ್ತುವರಿ ಕಾರ್ಯಾಚರಣೆ ಬಿರುಸಿನಿಂದ ನಡೆದಿದೆ. ಚಿಕ್ಕಮಗಳೂರು ಸೇರಿದಂತೆ ವಿವಿಧೆಡೆ ಹತ್ತಾರು ಎಕರೆ ಒತ್ತುವರಿಯನ್ನು ಅರಣ್ಯಾಧಿಕಾರಿಗಳು ತೆರವುಗೊಳಿಸಿ ಭೂಮಿಯನ್ನು ಸರಕಾರದ ವಶಕ್ಕೆ ಪಡೆದಿದ್ದಾರೆ. ಚಿಕ್ಕಮಗಳೂರು ತಾಲ್ಲೂಕಿನ ಮತ್ತಾವರ ಮೀಸಲು ಅರಣ್ಯದಲ್ಲಿ ಒತ್ತುವರಿ ಮಾಡಿ ಕಾಫಿ ತೋಟ ಮಾಡಲಾಗಿದ್ದ 20 ಎಕರೆ ಪ್ರದೇಶವನ್ನು ಅಧಿಕಾರಿಗಳು ಶನಿವಾರ ತೆರವುಗೊಳಿಸಿದ್ದಾರೆ. ವಸ್ತಾರೆ ಗ್ರಾಮದಲ್ಲಿ ಕೆಲ ಖಾಸಗಿ ವ್ಯಕ್ತಿಗಳು ಒತ್ತುವರಿ ಮಾಡಿ ಕಾಫಿಗಿಡಗಳನ್ನು ನೆಟ್ಟಿದ್ದರು. ಈ ಒತ್ತುವರಿಯ ಗುರುತು ಮಾಡಿದ್ದ ಅಧಿಕಾರಿಗಳು ಪೊಲೀಸರ ನೆರವಿನೊಂದಿಗೆ ಶನಿವಾರ ತೆರವು ಮಾಡಿದರು.ಈ ಪ್ರದೇಶದಲ್ಲಿನ ಕಾಫಿಗಿಡಗಳನ್ನು ಕತ್ತರಿಸಿ ಅರಣ್ಯ ಭೂಮಿಯನ್ನು ವಾಪಸ್ ಪಡೆಯಲಾಗಿದೆ. ಅಲ್ಲದೆ, ಕೊಪ್ಪ ಅರಣ್ಯ ವ್ಯಾಪ್ತಿಯಲ್ಲಿ ಒತ್ತುವರಿ ಬಗ್ಗೆ ಗುರುತು ಮಾಡಲಾಗಿದ್ದು, ಭಾನುವಾರ ತೆರವು ಕಾರ್ಯಾಚರಣೆ ನಡೆಯಿತು.

ವಿಜಯೇಂದ್ರ ವಿರೋಧಿ ಪಡೆಯಲ್ಲಿ ಹೆಚ್ಚಿದ ಬಲ | ಯತ್ನಾಳ್, ಜಾರಕಿಹೊಳಿ ಜತೆ ಕಾಣಿಸಿಕೊಂಡ ಲಿಂಬಾವಳಿ

ಬಿಜೆಪಿಯಲ್ಲಿ ತಾರಕಕ್ಕೇರಿದ ಆಂತರಿಕ ದಂಗಲ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು/ಬೆಳಗಾವಿ

ಬೆಂಗಳೂರು-ಮೈಸೂರು ಪಾದಯಾತ್ರೆ ಮುಕ್ತಾಯದ ಜೋಶ್‌ನಲ್ಲಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಇದೀಗ, ಬಿಜೆಪಿ ಹಿರಿಯ ನಾಯಕರ ಮುನಿಸು ಇದೀಗ ನುಂಗಲಾರದ ತುತ್ತಾಗಿ ಪರಿಣಮಿಸಿದೆ.

ಬೆಳಗಾವಿಯ ಖಾಸಗಿ ರೆಸಾರ್ಟ್‌ನಲ್ಲಿ ಭಾನುವಾರ ಇಡೀ ದಿನ ನಡೆದ ಬಂಡಾಯ ನಾಯಕರ ಸಭೆಯಲ್ಲಿ, ಪಕ್ಷದ ವರಿಷ್ಠರಿಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ದೂರು ನೀಡುವ ಹಾಗೂ ಕೂಡಲಸಂಗಮದಿಂದ ಬಳ್ಳಾರಿವರೆಗೆ ಪಾದಯಾತ್ರೆ ಮಾಡುವುದಕ್ಕೆ ಪಕ್ಷದ ವರಿಷ್ಠ ಒಪ್ಪಿಗೆ ಪಡೆಯುವ ಬಗ್ಗೆ ಸುದೀರ್ಘ ಚರ್ಚೆ ನಡೆದಿದೆ.

ಮೇಲ್ನೋಟಕ್ಕೆ ಇದೊಂದು ಸಮಾನಮನಸ್ಕರ ಸಭೆಯೆಂದು ಹೇಳಲಾಗುತ್ತಿದ್ದು, ಸಭೆಯಲ್ಲಿದ್ದ ನಾಯಕರೂ 'ಪಕ್ಷದ ವಿರುದ್ಧ ನಡೆಸಿರುವ ಸಭೆಯಲ್ಲ, ಬದಲಿಗೆ ಪಕ್ಷವನ್ನು ಸರಿದಾರಿಗೆ ತರುವ ನಿಟ್ಟಿನಲ್ಲಿ ನಡೆದಿರುವ ಸಭೆ' ಎನ್ನುತ್ತಿದ್ದಾರೆ. ಆದರೆ ಮೂಲಗಳ ಪ್ರಕಾರ, ವಿಜಯೇಂದ್ರ ಹಾಗೂ ಯಡಿಯೂರಪ್ಪ ವಿರುದ್ಧ ಹೈಕಮಾಂಡ್‌ಗೆ ದೂರು ನೀಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಭಾನುವಾರ ಬೆಳಗಾವಿ ನಗರದ ಹೊರವಲಯದ ಖಾಸಗಿ ರೆಸಾರ್ಟ್‌ನಲ್ಲಿ ನಡೆದ ಸಭೆಯಲ್ಲಿ ಬಿಜೆಪಿ ಹಿರಿಯ ನಾಯಕರಾದ ಬಸನಗೌಡ ಪಾಟೀಲ್ ಯತ್ನಾಳ್, ರಮೇಶ್ ಜಾರಕಿಹೊಳಿ, ಅರವಿಂದ ಲಿಂಬಾವಳಿ ಸೇರಿದಂತೆ 12 ನಾಯಕರು ಭಾಗಿಯಾಗಿದ್ದರು

ವಾಲ್ಮೀಕಿ ಅಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದ ಭ್ರಷ್ಟಾಚಾರ ಹಾಗೂ ಎಸ್ಸಿ ಮತ್ತು ಎಸ್ಟಿ ಸಮುದಾಯಕ್ಕೆ ಮೀಸಲಿಟ್ಟ ಅನುದಾನದ ದುರ್ಬಳಕೆ ವಿರೋಧಿಸಿ ಕೂಡಲಸಂಗಮದಿಂದ ಬಳ್ಳಾರಿ ವರೆಗೆ ಪಾದಯಾತ್ರೆ ಹಮ್ಮಿಕೊಳ್ಳುವ ನಿಟ್ಟಿನಲ್ಲಿ ಪೂರ್ವಭಾವಿ ಸಭೆ ಆಯೋಜನೆ ಮಾಡಲಾಗಿತ್ತು.

ವಿಜಯೇಂದ್ರಗೆ ಠಕ್ಕರ್ ಕೊಡಲು ಪಾದಯಾತ್ರೆ

ಪಕ್ಷದ ಹಿರಿಯನ್ನು ವಿಶ್ವಾಸಕ್ಕೆ ಪಡೆಯದೇ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ನಡೆಸಿರುವ ಬೆಂಗಳೂರು-ಮೈಸೂರು ಪಾದಯಾತ್ರೆಗೆ ಠಕ್ಕರ್ ಕೊಡುವ ನಿಟ್ಟಿನಲ್ಲಿ ಕೂಡಲಸಂಗಮ-ಬಳ್ಳಾರಿ ಪಾದಯಾತ್ರೆ ಹಮ್ಮಿಕೊಳ್ಳಲು ಪಕ್ಷದ ಹಿರಿಯ ನಾಯಕರು ತೀರ್ಮಾನಿಸಿದ್ದಾರೆ. ಬಂಡಾಯ ನಾಯಕರ ಬಣ ಈ ಸಭೆಯ ಮೂಲಕ ವಿಜಯೇಂದ್ರ ವಿರೋಧಿಗಳ ಸಂಖ್ಯೆಯೂ ಬಹುದೊಡ್ಡ ಪ್ರಮಾಣದಲ್ಲಿದೆ ಎನ್ನುವ ಸ್ಪಷ್ಟ ಸಂದೇಶ ರವಾನಿಸುವ ಕಾರ್ಯವನ್ನು ಮಾಡಿದೆ. ಸಭೆಯಲ್ಲಿ ವಿಜಯೇಂದ್ರ ನಾಯಕತ್ವವನ್ನು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ ಎನ್ನುವ ಸ್ಪಷ್ಟ ಸಂದೇಶ ರವಾನಿಸಿದ್ದಾರೆ.

ಸಭೆಯಲ್ಲಿ ಭಾಗವಹಿಸಿದ್ದವರು: ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಗೋಕಾಕ್ ಶಾಸಕ ರಮೇಶ್ ಜಾರಕಿಹೊಳಿ, ಮಾಜಿ ಸಚಿವ ಅರವಿಂದ ಲಿಂಬಾವಳಿ, ಮಾಜಿ ಸಂಸದ ಜಿ.ಎಂ ಸಿದ್ದೇಶ್ವರ, ಅಣ್ಣಾಸಾಹೇಬ್ ಜೊಲ್ಲೆ, ಪ್ರತಾಪ್ ಸಿಂಹ, ಕುಮಾರ ಬಂಗಾರಪ್ಪ, ಎನ್.ಆರ್. ಸಂತೋಷ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಬೆಳಗಾವಿಯ ಖಾಸಗಿ ರೆಸಾರ್ಟ್‌ನಲ್ಲಿ ಭಾನುವಾರ ಬಂಡಾಯ ನಾಯಕರ ಸಭೆ ನಡೆಯಿತು.

ಬಿಜೆಪಿ ಬಲವರ್ಧನೆಗೆ ಸಭೆ: ಲಿಂಬಾವಳಿ ಸ್ಪಷ್ಟನೆ

ಬೆಳಗಾವಿ: ಸಭೆ ಕುರಿತು ಮಾತನಾಡಿದ ಮಾಜಿ ಸಚಿವ ಅರವಿಂದ ಲಿಂಬಾವಳಿ, ಅತೃಪ್ತ ಹಾಗೂ ಬಂಡಾಯ ಎಂದು ಮಾಧ್ಯಮಗಳಲ್ಲಿ ಹೇಳಲಾಗುತ್ತಿದೆ. ನಮ್ಮದು ಪಕ್ಷ ಬಲವರ್ಧನೆ ನಡೆಯುತ್ತಿರುವ ಸಭೆ. ವಿಧಾನಸಭೆ ಹಾಗೂ ಲೋಕಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಹಿನ್ನಡೆಯಾಗಿದೆ. ಬಿಜೆಪಿ ಪಕ್ಷವನ್ನು ಇನ್ನಷ್ಟು ಗಟ್ಟಿಗೊಳಿಸಲು ಸಭೆ ನಡೆಸಲಾಗುತ್ತಿದೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ಹಾಗೂ ಎಸ್ಸಿ, ಎಸ್ಟಿ ಸಮುದಾಯಕ್ಕೆ ಮೀಸಲಿಟ್ಟ ಹಣದ ದುರ್ಬಳಕೆ ವಿರೋಧಿಸಿ ಕೂಡಲಸಂಗಮದಿಂದ ಬಳ್ಳಾರಿವರೆಗೆ ಪಾದಯಾತ್ರೆ ಹಮ್ಮಿಕೊಳ್ಳುವ ಕುರಿತು ನಾಯಕರು ಸಮಾಲೋಚನೆ ಮಾಡುತಗತಿದ್ದು, 12 ನಾಯಕರು ಸಭೆಯಲ್ಲಿ ಭಾಗವಹಿಸಿದ್ದಾರೆ ಎಂದು ಹೇಳಿದರು.

ವಿಜಯೇಂದ್ರ ವಿರುದ್ಧದ ಆರೋಪವೇನು?

- ರಾಜ್ಯಾಧ್ಯಕ್ಷರಾಗಿ ಹಿರಿಯ ನಾಯಕರನ್ನು ವಿಶ್ವಾಸಕ್ಕೆ ಪಡೆಯುತ್ತಿಲ್ಲ
- ವಿಜಯೇಂದ್ರ ಹಾಗೂ ಅವರ ತಂಡಕ್ಕೆ ಸಂಘಟನೆ ಮಾಡಿದ ಅನುಭವ ಹಾಗೂ ಪ್ರಬುದ್ಧತೆಯಿಲ್ಲ
- ಆಡಳಿತ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಂಡರೆ ಪಕ್ಷ ಸಂಘಟನೆ ಅಸಾಧ್ಯ
- ಬೆಂಗಳೂರು-ಮೈಸೂರು ಪಾದಯಾತ್ರೆಯಲ್ಲಿ ಹಲವು ಪ್ರಮುಖ ವಿಷಯಗಳ ಪ್ರಸ್ತಾಪವೇ ಇಲ್ಲ
- ವಾಲ್ಮೀಕಿ ಅಭಿವೃದ್ಧಿ ಹಗರಣ, ಎಸ್‌ಸಿ-ಎಸ್‌ಟಿ ಹಗರಣ ಗ್ಯಾರಂಟಿ ಯೋಜನೆಗೆ ಬಳಸಿದ್ದರ ಬಗ್ಗೆ ಚರ್ಚೆಯೇ ಇಲ್ಲ
- ಪೊಸ್ಕೊ ಪ್ರಕರಣದ ಆರೋಪವಿರುವ ಯಡಿಯೂರಪ್ಪ ಅವರನ್ನು ಅಧಿಕೃತ ವೇದಿಕೆಯಲ್ಲಿ ಕೂರಿಸಿದ್ದರಿಂದ ಪಕ್ಷಕ್ಕೆ ಡ್ಯಾಮೇಜ್
- 82 ವರ್ಷವಾದರೂ ಯಡಿಯೂರಪ್ಪ ಅವರ ನಿವೃತ್ತಿಗೆ ಏಕೆ ಸೂಚನೆ ನೀಡಿಲ್ಲ?
- ಯಡಿಯೂರಪ್ಪ ಪುತ್ರ ಎನ್ನುವುದು ಹೊರತುಪಡಿಸಿ, ಇನ್ನ್ಯಾವುದೇ ಅರ್ಹತೆ ವಿಜಯೇಂದ್ರಗಿಲ್ಲ
- ಲೋಕಸಭಾ ಚುನಾವಣೆಯಲ್ಲಿನ ಹಿನ್ನಡೆಗೆ ವಿಜಯೇಂದ್ರ ನೇತೃತ್ವವೇ ಕಾರಣ
- ಕುಟುಂಬ ರಾಜಕಾರಣದ ಬಗ್ಗೆ ಮಾತನಾಡುವ ಪಕ್ಷದ ಮೇಲೆ, ಈ ರೀತಿ ತಂದೆ-ಮಕ್ಕಳ ಹಿಡಿತ ಸರಿಯಲ್ಲ

ಸಂಖ್ಯೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ

ಮೂಲಗಳ ಪ್ರಕಾರ ಬೆಳಗಾವಿಯ ರೆಸಾರ್ಟ್‌ನಲ್ಲಿ ನಡೆದಿರುವ ಈ ಸಭೆಯಲ್ಲಿ 12 ಪ್ರಮುಖ ನಾಯಕರು ಭಾಗವಹಿಸಿದ್ದಾರೆ. ಆದರೆ ಮುಂದಿನ ದಿನದಲ್ಲಿ ಈ ಸಂಖ್ಯೆ ದೊಡ್ಡ ಪ್ರಮಾಣದಲ್ಲಿ ಏರಿಕೆಯಾಗುವ ಸಾಧ್ಯತೆಯಿದೆ. ಶಾಸಕರು, ಮಾಜಿ ಶಾಸಕರು, ಮಾಜಿ ಸಚಿವರ ಸಂಖ್ಯೆಯೇ 100ರ ಗಡಿ ದಾಟುವ ಸಾಧ್ಯತೆಯಿದೆ. ಆದರೆ ಸೂಕ್ತ ಸಮಯದಲ್ಲಿ, ಈ ಎಲ್ಲ ನಾಯಕರು ಬಹಿರಂಗವಾಗಿ ಕಾಣಿಸಿಕೊಳ್ಳಿದಿದ್ದಾರೆ ಎನ್ನುವ ಮಾತುಗಳು ಕೇಳಿಬಂದಿದೆ.

ವರಿಷ್ಠರಿಗೆ ದೂರು

ಬಿಜೆಪಿ ಬಂಡಾಯ ನಾಯಕರ ಸಭೆ ವಾಲ್ಮೀಕಿ ಅಭಿವೃದ್ಧಿ ನಿಗಮದ ವಿರುದ್ಧ ಹೋರಾಟದ ವಿಷಯ ನೆಪಮಾತ್ರ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಅವರನ್ನು ಕೆಳಗಿಳಿಸುವಂತೆ ಹೈಕಮಾಂಡ್‌ಗೆ ಒತ್ತಡ ಹೇರುವ ನಿಟ್ಟಿನಲ್ಲಿ ಸಭೆಯಲ್ಲಿ ಚರ್ಚೆ ನಡೆದಿದೆ. ಮುಂಬರುವ ದಿನಗಳಲ್ಲಿ ಬಿಜೆಪಿ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಲಿರುವ ಅತೃಪ್ತ ನಾಯಕರು, ವಿಜಯೇಂದ್ರ ಅವರು ಡಿಸಿಎಂ ಡಿ.ಕೆ ಶಿವಕುಮಾರ್ ಜತೆಗೂಡಿ ಹೊಂದಾಣಿಕೆ ರಾಜಕಾರಣ ಮಾಡುತ್ತಿದ್ದಾರೆ ಎಂದು ಹೈಕಮಾಂಡ್‌ಗೆ ದೂರು ನೀಡುವ ಚರ್ಚೆ ನಡೆದಿದೆ ಎನ್ನಲಾಗಿದೆ.

ಚನ್ನಪಟ್ಟಣ ಉಪಚುನಾವಣೆ ಗರಿಗೆದರಿದ ಚಟುವಟಿಕೆ
ಸೈನಿಕನ ಮನವೊಲಿಕೆಗೆ ಬಿಜೆಪಿ ನಾಯಕರ ಯತ್ನ?

ಯೋಗೇಶ್ವರ್ ದೆಹಲಿಗೆ ದೌಡು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಚನ್ನಪಟ್ಟಣ ಉಪಚುನಾವಣೆ ಸಮೀಪಿಸುತ್ತಿದ್ದಂತೆ ಬಿಜೆಪಿಯಲ್ಲಿ ರಾಜಕೀಯ ಚಟುವಟಿಕೆ ಗರಿಗೆದರಿದ್ದು, ವಿಧಾನಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್ ದೆಹಲಿಗೆ ದೌಡಾಯಿಸಿರುವುದು ಭಾರಿ ಕುತೂಹಲ ಕೆರಳಿಸಿದೆ.

ಮೂಲಗಳ ಪ್ರಕಾರ ಸೋಮವಾರ ಬಿಜೆಪಿ ರಾಷ್ಟ್ರಿಯ ಅಧ್ಯಕ್ಷ ಜೆ.ಪಿ.ನಡ್ಡಾ ನೇತೃತ್ವದ ಸಭೆಯಲ್ಲಿ ಭಾಗವಹಿಸಲಿರುವ ಸಿ.ಪಿ. ಯೋಗೇಶ್ವರ್ ಚುನಾವಣೆ ಕುರಿತು ಮಹತ್ವದ ಮಾತುಕತೆ ನಡೆಸುವ ಸಾಧ್ಯತೆಯಿದೆ. ಪಕ್ಷದ ವರಿಷ್ಠರು ಯೋಗೇಶ್ವರ್‌ಗೆ ದೆಹಲಿಗೆ ಬರುವಂತೆ ಬುಲಾವ್ ನೀಡಿದ್ದು, ಚನ್ನಪಟ್ಟಣ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿಸಬೇಕೇ ಇಲ್ಲವೇ? ಜೆಡಿಎಸ್‌ಗೆ ಕ್ಷೇತ್ರ ಬಿಟ್ಟುಕೊಡಬೇಕೇ? ಎಂಬ ಚರ್ಚೆ ನಡೆಯಲಿದೆ ಎಂದು ತಿಳಿದುಬಂದಿದೆ.

ಒಂದು ವೇಳೆ ಬಿಜೆಪಿ ಟಿಕೆಟ್ ನೀಡಲು ನಿರಾಕರಿಸಿದರೆ ಸ್ವತಂತ್ರ ಅಭ್ಯರ್ಥಿಯಾಗಿ ಅಖಾಡದಲ್ಲಿ ಸ್ಪರ್ಧಿಸಲಿದ್ದಾರೆ ಎಂಬ ಸುದ್ದಿ ಹರಿದಾಡುತ್ತಿದ್ದು, ಇದನ್ನು ಗಂಭೀರವಾಗಿ ಪರಿಗಣಿಸಿರುವ ಹೈಕಮಾಂಡ್ ಯಾವುದೇ ರೀತಿಯ ಆತುರದ ನಿರ್ಧಾರ ತೆಗೆದುಕೊಳ್ಳದಂತೆ ಯೋಗೇಶ್ವರ್‌ಗೆ ಕಿವಿಮಾತು ಹೇಳಲಿದ್ದಾರೆ ಎಂದು ತಿಳಿದುಬಂದಿದೆ.

ಸ್ವತಂತ್ರ ಸ್ಪರ್ಧೆಗೆ ಚಿಂತನೆ: ಬಿಜೆಪಿ-ಜೆಡಿಎಸ್ ಪಾದಯಾತ್ರೆಯಿಂದ ದೂರ ಉಳಿದು ಬಂಡಾಯದ ಬಾವುಟ ಹಾರಿಸಿದ್ದ ಯೋಗೇಶ್ವರ್, ಸದ್ಯದಲ್ಲಿಯೇ ಎದುರಾಗುವ ಚನ್ನಪಟ್ಟಣ ಕ್ಷೇತ್ರದ ಉಪಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಲು ನಿರ್ಧರಿಸಿದ್ದರು. ಚನ್ನಪಟ್ಟಣ ಟಿಕೆಟ್ ತಮಗೇ ಸಿಗುತ್ತದೆ ಎಂಬ ವಿಶ್ವಾಸದಲ್ಲಿದ್ದ ಯೋಗೇಶ್ವರ್ ತಾವೇ ಮೈತ್ರಿ ಅಭ್ಯರ್ಥಿ ಎಂದು ಘೋಷಣೆ ಕೂಡ ಮಾಡಿಕೊಂಡಿದ್ದರು. ಆದರೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮಗ ನಿಖಿಲ್ ಕುಮಾರಸ್ವಾಮಿಗೆ ಚನ್ನಪಟ್ಟಣ ಉಪ ಚುನಾವಣೆಯಲ್ಲಿ ಟಿಕೆಟ್ ನೀಡಲು ಲಾಬಿ ನಡೆಸಿದ್ದು, ಯೋಗೇಶ್ವರ್ ಆಸೆಗೆ ತಣ್ಣೀರು ಎರಚಿದಂತಾಗಿದೆ.

ನಮ್ಮ ಶಾಸಕ ನಮ್ಮ ಹಕ್ಕು ಹೆಸರಿನಲ್ಲಿ ಸಮಾವೇಶ

ಇದಕ್ಕೆ ಪುಷ್ಟಿ ನೀಡುವಂತೆ ಯೋಗೇಶ್ವರ್ ಅಭಿಮಾನಿ ಬಳಗ ಮತ್ತು ಸಮಾನ ಮನಸ್ಕರ ವೇದಿಕೆ ನಗರದ ಬಾಲಕರ ಸರಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ನಮ್ಮ ಶಾಸಕ ನಮ್ಮ ಹಕ್ಕು ಹೆಸರಿನಲ್ಲಿ ಸಮಾವೇಶ ನಡೆಸಿ ಬಿಜೆಪಿಯಿಂದ ಟಿಕೆಟ್ ಸಿಗದಿದ್ದರೇ ಸ್ವತಂತ್ರವಾಗಿ ಸ್ಪರ್ಧಿಸುವ ಕುರಿತು ಅಭಿಪ್ರಾಯ ಸಂಗ್ರಹಿಸಲು ಮುಂದಾಗಿದ್ದರು. ತಮ್ಮ ರಾಜಕೀಯ ನಿರ್ಧಾರ ತೆಗೆದುಕೊಳ್ಳಲು ತರಾತುರಿಯಲ್ಲಿದ್ದ ಸಿಪಿ ಯೋಗೇಶ್ವರ್‌ಗೆ ವರಿಷ್ಠರ ಕರೆಯಿಂದ ಸಮಾವೇಶ ರದ್ದು ಪಡಿಸಿದ್ದು, ಈ ಕಾರ್ಯಕ್ರಮದ ಮೂಲಕ ವಿರೋಧಿಗಳಿಗೆ ಪಾಠ ಕಲಿಸಲು ಯತ್ನಿಸಿದ್ದ ಯೋಗೇಶ್ವರ್‌ಗೆ ನಿರಾಸೆಯಾಗಿದೆ.

ಪುಷ್ಪಪ್ರದರ್ಶನಕ್ಕೆ ಜನಸಾಗರ

← ಮೊದಲಪುಟದಿಂದ

ಈ ಬಾರಿಯ ಪ್ರದರ್ಶನಕ್ಕೆ ವಾತಾವರಣವೂ ಕೂಲ್ ಕೂಲ್ ಆಗಿದ್ದು, ಬಿಸಿಲು ಇಲ್ಲದಿರುವುದರಿಂದ ಜನರು ಮತ್ತಷ್ಟು ಸಂಖ್ಯೆಯಲ್ಲಿ ಬಂದಿದ್ದರು. ಹೂಗಳು ಕೂಡ ತಾಜಾತನದಿಂದ ಕೂಡಿದ್ದವು. ಭಾನುವಾರವಾಗಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಆಗಮಿಸಿದ್ದು, ಒಟ್ಟು 1,00,104 ಜನರು ಪುಷ್ಪಪ್ರದರ್ಶನಕ್ಕೆ ಆಗಮಿಸಿದ್ದು, ಒಟ್ಟು 42 ಲಕ್ಷ ಮೊತ್ತ ಸಂಗ್ರಹವಾಗಿದೆ.

ದಿನಾಂಕ	ವಯಸ್ಕರು	ಮಕ್ಕಳು	ಒಟ್ಟುಜನರು	ಸಂಗ್ರಹವಾದ ಮೊತ್ತ
ಆಗಸ್ಟ್ 8	12,550	8500	21,050	2,04,240 ರು.
ಆಗಸ್ಟ್ 9	22,000	23,600	45,600	5,75,160ರು.
ಆಗಸ್ಟ್ 10	38,500	16,500	55,000	21,39,930 ರು.
ಆಗಸ್ಟ್ 11	60,726	7,422	68,148	42,32,000

ಬಸ್ ಪಲ್ಟಿ; 13 ಮಂದಿಗೆ ಗಾಯ

ಬಾಗೇಪಲ್ಲಿ: ಬೆಂಗಳೂರು - ಹೈದ್ರಾಬಾದ್ ರಾ.ಹೆದ್ದಾರಿ 44 ರ ಚೆಂಡೂರು ಕ್ರಾಸ್ ಬಳಿ ಚಾಲಕನ ನಿಯಂತ್ರಣ ತಪ್ಪಿದ ಆಂಧ್ರಪ್ರದೇಶ ಸಾರಿಗೆ ಸಂಸ್ಥೆ ಬಸ್ ಪಲ್ಟಿಯಾಗಿ 13ಕ್ಕೂ ಹೆಚ್ಚು ಮಂದಿ ಗಾಯಗೊಂಡು,ಇಬ್ಬರು ಗಂಭೀರವಾಗಿರುವ ಘಟನೆ ಭಾನುವಾರ ಮಧ್ಯಾಹ್ನ 3 ಗಂಟೆ ಸಮಯದಲ್ಲಿ ನಡೆದಿದೆ. ಬೆಂಗಳೂರಿಂದ ಪುಟ್ಟಪರ್ತಿ ಕಡೆಗೆ ಪ್ರಯಾಣಿಸುತ್ತಿದ್ದ ಆಂಧ್ರಪ್ರದೇಶದ ಬಸ್ ಗುಡಿಬಂಡೆ ತಾಲೂಕಿನ ಚೆಂಡೂರು ಕ್ರಾಸ್ ಬಳಿ ಪಲ್ಟಿಯಾಗಿದೆ. ಬಸ್‌ನಲ್ಲಿ 30 ಮಂದಿಯಿದ್ದು ಚಾಲಕ ಮತ್ತು ನಿರ್ವಾಹಕ ಸೇರಿ 13 ಜನ ಗಾಯಗೊಂಡಿದ್ದಾರೆ. ಇಬ್ಬರ ಸ್ಥಿತಿ ಗಂಭೀರವಾಗಿದ್ದು ಚಿಕ್ಕಬಳ್ಳಾಪುರ ಜಿಲ್ಲೆ ಆಸತ್ರೆಗೆ, ಉಳಿದವರು ಬಾಗೇಪಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗುಡಿಬಂಡೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬೆಂಗಳೂರಲ್ಲಿ ಅ.26ರಂದು ಕಂಬಳ ಋತು ಆರಂಭ

ಮಂಗಳೂರು: ಬೆಂಗಳೂರಿನಲ್ಲಿ ಅ.26ರಂದು ಕಂಬಳ ನಡೆಯಲಿದ್ದು, ಆ ಮೂಲಕ ಈ ಬಾರಿಯ ಕಂಬಳ ಋತು ಆರಂಭವಾಗಲಿದೆ. ಇದೇ ಮೊದಲ ಬಾರಿ ಶಿವಮೊಗ್ಗದಲ್ಲೂ ಕಂಬಳ ಆಯೋಜಿಸಲು ದಕ್ಷಿಣ ಕನ್ನಡ ಜಿಲ್ಲಾ ಕಂಬಳ ಸಮಿತಿ ತೀರ್ಮಾನಿಸಿದೆ ಎಂದು ಜಿಲ್ಲಾ ಕಂಬಳ ಸಮಿತಿಯ ಅಧ್ಯಕ್ಷ ಬೆಳಪು ದೇವಿಪ್ರಸಾದ್ ಶೆಟ್ಟಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಬೆಂಗಳೂರಿನಲ್ಲಿ ಮೊದಲ ಕಂಬಳ ಅಕ್ಟೋಬರ್ 26ರಂದು ನಡೆಯಲಿದೆ. ಕೊನೆಯ ಕಂಬಳವನ್ನು 2025ರ ಏಪ್ರಿಲ್ 19ರಂದು ಶಿವಮೊಗ್ಗದಲ್ಲಿ ಆಯೋಜಿಸಲು ತೀರ್ಮಾನಿಸಲಾಗಿದೆ. ಈ ವರ್ಷ 26 ಕಂಬಳ ನಡೆಸಲು ನಿರ್ಧರಿಸಲಾಗಿದೆ. ಮಂಗಳೂರಿನ ಪಿಲಿಕುಳ ಕಂಬಳಕ್ಕೆ ಮತ್ತೆ ಚಾಲನೆ ನೀಡಲಾಗುವುದು ಎಂದು ಅವರು ಹೇಳಿದರು. ಕಂಬಳಗಳು ಈಚೆಗೆ ಶಿಸ್ತುಬದ್ಧವಾಗಿ ನಡೆಯುತ್ತಿದ್ದು, ಕರಾವಳಿಯ ಈ ಕ್ರೀಡೆಯನ್ನು ಹೆಚ್ಚು ಆಕರ್ಷಕವಾಗಿಸಲು ನಿಯಮಗಳನ್ನು ಬಿಗಿ ಮಾಡಲಾಗಿದೆ. ಆಯಾ ಕಂಬಳ ಸಮಿತಿಗಳು ಕಡ್ಡಾಯವಾಗಿ ಪಾಲಿಸಬೇಕಾಗಿರುವ ನಿಯಮಾವಳಿಯನ್ನು ಶೀಘ್ರದಲ್ಲೇ ಸಿದ್ಧಪಡಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಜಲಭವನ, ನಂ. 6, 1ನೇ ಘಟ್ಟ, 1ನೇ ಹಂತ, ಬಿಟಿಎಂ ಲೇಔಟ್, ಬನ್ನೇರುಘಟ್ಟ ಮುಖ್ಯ ರಸ್ತೆ, ಬೆಂಗಳೂರು - 560 029. ದೂ: 080-41106504 - 18
ಇ-ಮೇಲ್: cekwbbng@gmail.com ವೆಬ್‌ಸೈಟ್: https://kppp.karnataka.gov.in

ಅಲ್ಪಾವಧಿ ಟೆಂಡರ್ ಪ್ರಕಟಣೆ
(KPPP ಮೂಲಕ ಮಾತ್ರ)

1) ಸಂಖ್ಯೆ: KWB/TEC/CE(B)/CTD/AMRUT/432/2024-25 Dtd: 09.08.2024

1) ಕಾಮಗಾರಿಯ ಹೆಸರು ಮತ್ತು ವಿವರ: "ಅಮೃತ್-2 ಯೋಜನೆಯಡಿಯಲ್ಲಿ ಹೊಸದುರ್ಗ, ಹೊಳಲ್ಕೆರೆ ಮತ್ತು ಜಗಳೂರು ಸುಧಾರಿತ ನೀರು ಸರಬರಾಜು ಯೋಜನೆ ಕಾಮಗಾರಿಗಳು 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಒಳಗೊಂಡಂತೆ (ದೋಷದ ಹೊಣೆಗಾರಿಕೆ 1 ವರ್ಷ ಅವಧಿ ಸೇರಿದಂತೆ) ವಿನ್ಯಾಸ, ನಿರ್ಮಾಣ, ಕಾರ್ಯಾಚರಣೆ ಮತ್ತು ವರ್ಗಾವಣೆ (DBOT) ಮಾದರಿಯಲ್ಲಿ" ಯಾವುದೇ ವೇರಿಯೇಷನ್ ಇರುವುದಿಲ್ಲ.

ಇಂಡೆಂಟ್ ಸಂಖ್ಯೆ: KUWSDB/2024-25/WS/ WORK_INDENT235

2) ಸಂಖ್ಯೆ: KWB/TEC/CE(B)/SMG/AMRUT/433/2024-25 Dtd: 09.08.2024

ಕಾಮಗಾರಿಯ ಹೆಸರು : ಅಮೃತ್-2 ಯೋಜನೆಯ ಅಡಿಯಲ್ಲಿ ಹೊಸನಗರ, ತೀರ್ಥಹಳ್ಳಿ, ಶಿಕಾರಿಪುರ, ಕಾರ್ಗಲ್, ಹೊಳೆಹೊನ್ನೂರು ಮತ್ತು ಅನವಟ್ಟಿ ಪಟ್ಟಣಗಳಿಗೆ ನೀರು ಸರಬರಾಜು ಸೌಲಭ್ಯ ವ್ಯವಸ್ಥೆ ಒದಗಿಸುವ ಕಾಮಗಾರಿಗಳು 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಒಳಗೊಂಡಂತೆ (ದೋಷದ ಹೊಣೆಗಾರಿಕೆ 1 ವರ್ಷ ಅವಧಿ ಸೇರಿದಂತೆ) ವಿನ್ಯಾಸ, ನಿರ್ಮಾಣ, ಕಾರ್ಯಾಚರಣೆ ಮತ್ತು ವರ್ಗಾವಣೆ (DBOT) ಮಾದರಿಯಲ್ಲಿ.

ಇಂಡೆಂಟ್ ಸಂಖ್ಯೆ: KUWSDB/2024-25/WS/WORK_INDENT234

3) ಸಂಖ್ಯೆ: No.KWB/TEC/CE(B)/BNG/AMRUT-P-1/434/2024-25 Dt: 09.08.2024

ಕಾಮಗಾರಿಯ ಹೆಸರು : ಅಮೃತ 2.0 ಯೋಜನೆಯ ಅಡಿಯಲ್ಲಿ DBOT ಮಾದರಿಯ ಮೂಲಕ, ಜಿಗಣಿ, ಆನೇಕಲ್, ದೊಡ್ಡಬಳ್ಳಾಪುರ ಮತ್ತು ಹೊಸಕೋಟೆ ನಗರ/ ಪಟ್ಟಣಗಳಿಗೆ ಸುಧಾರಿತ ನೀರು ಸರಬರಾಜು ಯೋಜನೆ ಒದಗಿಸುವ ಕಾಮಗಾರಿ, 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (1 ವರ್ಷದ DLP) ಒಳಗೊಂಡಂತೆ.

ಇಂಡೆಂಟ್ ಸಂಖ್ಯೆ: KUWSDB/2024-25/WS/WORK_INDENT236

4) ಸಂಖ್ಯೆ: KWB/TEC/CE(B)/BNG/AMRUT-P-2/435/2024-25 Dt: 09.08.2024

ಕಾಮಗಾರಿಯ ಹೆಸರು : ಅಮೃತ 2.0 ಯೋಜನೆಯಡಿಯಲ್ಲಿ, DBOT ಮಾದರಿಯ ಮೂಲಕ, ಮಾಗಡಿ, ಚನ್ನಪಟ್ಟಣ, ಕನಕಪುರ ಮತ್ತು ಹಾರೋಹಳ್ಳಿ ನಗರ/ ಪಟ್ಟಣಗಳಿಗೆ ಸುಧಾರಿತ ನೀರು ಸರಬರಾಜು ಯೋಜನೆ ಒದಗಿಸುವ ಕಾಮಗಾರಿ, 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (1 ವರ್ಷದ DLP) ಒಳಗೊಂಡಂತೆ.

ಇಂಡೆಂಟ್ ಸಂಖ್ಯೆ: KUWSDB/2024-25/WS/WORK_INDENT237.

ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ನಲ್ಲಿ ಸಂಪರ್ಕಿಸಬಹುದು.

ಸಹಿ/- ಮುಖ್ಯ ಅಭಿಯಂತರರು (ಬೆಂ),
ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು
ವಾ.ಸಾ.ಸಂ.ಇ/1392/ಆಕಾರ್/2024-25

ದೇಶ ಹಾಗೂ ರಾಜ್ಯದಲ್ಲಿ ಅತಿ ಹಿಂದುಳಿದ ತಾಲೂಕನ್ನು ಗುರುತಿಸಿ, ಸಂಘಟನೆಯೊಂದಿಗೆ ಕಾರ್ಯ ಸಾಧನೆ ಮಾಡುತ್ತಿರುವ ಮಹಿಳೆಯರಿಗೆ ನರೇಂದ್ರ ಮೋದಿ ಆಹ್ವಾನ

ಸ್ವಾತಂತ್ರ್ಯದಿನ ಲಕಪತಿ ದೀದಿಗೆ ದಿಲ್ಲಿಗೆ ಬುಲಾವ್

ವಿನುತಾ ಹೆಗಡೆ ಶಿರಸಿ

ಅಯ್ಯೋ.. ಅಕ್ಕಾರ ನಾನು ಕನಸಲ್ಲೂ ಅನ್ಕಂಡಿರ್ಲಿಲ್ಲಾರಿ, ಮೋದಿ ಕರಿತಾರ ನಾ ಹೋಗ್ತೀನಿ ದೆಲ್ಲಿಗಂತ. ನನ್ನ ಕರದಾರು ನಾ ಹೋಗ್ತೇದಿನಿ ಡೆಲ್ಲಿಗ ಬಾ ಅಂತ ಮೋದಿ ಕರೆದಿರಾ ಅಂದ್ರೂ, ನಮ್ಮ ನೆಂಟ್ರಾರು ನಂಬಾಂಗೇ ಇಲ್ರಿ..ಆದ್ರೂ ನನಗಂತೂ ಬಾಳ ಅಂದ್ರ ಬಾಳ ಖುಷಿ ಆತ್ರಿ. ನನಗ ಇವೆಲ್ಲ ಹೊಸಾದ್ರಿ. ಜನ ತೊಟ್ಟಿಲ ಮೇಲ ಹೋದಾಂಗಕ್ಕೇತಂದ್ರಿ, ಇಮಾನ ಮ್ಯಾಗ ಹೋಗೋದು..ಯಪ್ಪಾ, ಮೇಡಂರ್‍ರಿ, ನಂಗೂ ಭಯ ಐತ್ರಿ. ಆದ್ರೂ ಖುಷಿ ತಡಿಯಾಕಾಗಾದಿಲ್ರಿ. ನಮ್ಮನೆಯವ್ರೂ, ಹೋಗು ಅಂದಾರ...ನಾಳೆನೆ ಹೊಕ್ಕೀವ್ರಿ. ಇದು ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ತಾಲೂಕಿನ ಹುನಗುಂದ ಮಹಿಳೆಯ ಮಾತು. ಈಕೆ ಮಹಿಳೆಯರ ಜತೆಗಿನ ಉತ್ತಮ ಒಡನಾಟ, ಎನ್‌ಎಲ್‌ಎಂಆರ್ ನ ಸ್ವಸ್ವಹಾಯ ಸಂಘದ ಅಧ್ಯಕ್ಷೆಯಾಗಿ ಕಾರ್ಯ ನಿರ್ವಹಿಸುತ್ತಿರುವ ಲಕ್ಷ್ಮೀ ಮುಳೆ.

ದೆಹಲಿಯ ಕೆಂಪುಕೋಟೆಯ ಮೇಲೆ ಧ್ವಜಾರೋಹಣ ಮಾಡುವ ದಿನಕ್ಕೆ ಇವರನ್ನು ಪ್ರಧಾನಿ ಮೋದಿಯವರು ವಿಶೇಷ ಅತಿಥಿಯಾಗಿ ಆಹ್ವಾನಿಸಿದ್ದಾರೆ. ನಿಜಕ್ಕೂ ಅವಳ ಮಾತು ಕೇಳಿ ನನಗೂ ಒಮ್ಮೆ ಅಸೂಯೆ ಮೂಡುವಷ್ಟು ಖುಷಿ ಆಕೆಯ ಮಾತಿನಲ್ಲಿತ್ತು.

ಕೋಟ್ಯಂತರ ಜನ ಭಾರತೀಯರು ಮೋದಿಯವರ ಹತ್ತಿರದಿಂದ ನೋಡಲು, ಅವರನ್ನು ಭೇಟಿ ಮಾಡಲು ಕಾಯುತ್ತಿರುತ್ತಾರೆ. ಆದರೆ ಅದು ಸಾಧ್ಯವಾಗದ ಮಾತು. ದೇಶದ ಪ್ರಧಾನಿಯವರು ಆ. 15 ರಂದು ನಡೆಯಲಿರುವ ಸ್ವಾತಂತ್ರ್ಯೋತ್ಸವದ ದಿನಾಚರಣೆಯನ್ನು ಆಚರಿಸಲು, ಕೆಂಪು ಕೋಟೆಯ ಆ ಸುಂದರ ಕ್ಷಣವನ್ನು ಕಣ್ಣುತುಂಬಿಕೊಳ್ಳಲು ನಮ್ಮ ಕರ್ನಾಟಕ ರಾಜ್ಯದ 65 ಜನರನ್ನು ಆಹ್ವಾನಿಸಿದ್ದು, ಉತ್ತರ ಕನ್ನಡ ಜಿಲ್ಲೆಯಿಂದ ಮೂವರನ್ನು ಕರೆದಿದ್ದಾರೆ. ರಾಜ್ಯ ಹಾಗೂ ದೇಶದಲ್ಲಿ ಅತೀ ಹಿಂದುಳಿದ ತಾಲೂಕನ್ನು ಗುರುತಿಸಿ ಅಲ್ಲಿ ಸಂಘಟನೆಯಲ್ಲಿ ಕಾರ್ಯ ನಿರ್ವಹಿಸುವ ಪ್ರಮುಖರಿಗೆ ಈ ಅವಕಾಶ ಕಲ್ಪಿಸಲಾಗಿದೆ.

ಇವರಲ್ಲಿ ಯಾರೊಬ್ಬರಿಗೂ ಇಂಗ್ಲಿಷ್ ಅಥವಾ ಹಿಂದಿ ಬರದು. ಕನ್ನಡ ಹಾಗೂ ತೀರಾ ಗ್ರಾಮೀಣ ಭಾಷೆಯನ್ನು ಬಲ್ಲವರಾಗಿದ್ದಾರೆ. ಆದರೆ ತಮ್ಮ ಕ್ಷೇತ್ರದಲ್ಲಿ ಮಾಡುವ ಕೆಲಸವನ್ನು ಗುರುತಿಸಿದ ಪ್ರಧಾನಿ ಮೋದೆಯವರಿಗೆ ನಿಜವಾಗಿಯೂ ಅಭಿನಂದನೆ ಸಲ್ಲಬೇಕು.

ಉತ್ತರ ಕನ್ನಡ ಜಿಲ್ಲೆ ಪಶ್ಚಿಮಘಟ್ಟ ಪ್ರದೇಶವಾಗಿದ್ದು, ಅದರಲ್ಲೂ ಯಲ್ಲಾಪುರ, ಮುಂಡಗೋಡು ಹಾಗೂ ಜೋಯಿಡಾ ಹಿಂದುಳಿದ ತಾಲೂಕೆಂದೇ ಗುರುತಿಸಿಕೊಂಡಿದೆ. ಅಂಥ ತಾಲೂಕಿನಂದಲೇ ಮೂವರು ವ್ಯಕ್ತಿಗಳನ್ನು ಆರಿಸಿಕೊಳ್ಳಲಾಗಿದೆ.

ಜಿಲ್ಲೆಯ ಯಲ್ಲಾಪುರ ತಾಲೂಕಿನ ಲಿಂಗದ ಬೈಲ್ ನಲ್ಲಿ ಕೇಂದ್ರ ಸರಕಾರದ ಮಹತ್ವಾಕಾಂಕ್ಷಿ ಯೋಜನೆಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ನಿರ್ಮಾಣ ಮಾಡಲಾದ ಡಮಾಮಿ ಸಿದ್ದಿ ಹೋಂ ಸ್ಟೇಯ ಸುಧಾ ಸಿದ್ದಿಯೂ ಲಕಪತಿ ದೀದಿ ಎಂದು ಆಯ್ಕೆ ಯಾಗಿದ್ದಾರೆ. ಇವರು ಸಿದ್ದಿ ಜನಾಂಗದ ಸಂಸ್ಕೃತಿ ಕಲೆ, ಸಂಪ್ರದಾಯವನ್ನು ಉಳಿಸಿಕೊಂಡು ಹೋಗುವ ನಿಟ್ಟಿನಲ್ಲಿ ಈ ಡಮಾಮಿ ಹೋಂ ಸ್ಟೇನಲ್ಲಿ ಕಾರ್ಯನಿರ್ವಹಿಸುತ್ತಾರೆ. ಇವರ ಜತೆಗೆ ಇವರ ಪತಿ ಗಣೇಶ ಸಿದ್ದಿ ಅವರನ್ನೂ ಸಹ ಮೋದಿಯವರು ಆಹ್ವಾನಿಸಿದ್ದಾರೆ. ಅಂತೆಯೇ ಜೋಯಿಡಾ ತಾಲೂಕಿನ ಇಂದಿರಾ ಕಾಮತ್ ಎನ್ನುವರನ್ನೂ ಲಕಪತಿ ದೀದಿ ಎಂದು ದೆಹಲಿಗೆ ಕರೆಯಲಾಗಿದೆ. ಇವರು ಕಾಳಿ ರೈತ ಉತ್ಪಾದನಾ ಕಂಪನಿ ಆರಂಭಿಸಿದ್ದು, ಇದೂ ಮಹಿಳೆಯರ ಒಗ್ಗೂಡುವಿಕೆಯ ಕಾರ್ಯ ದ್ದಾಗಿದೆ. ಇವರೂ ಸಹ ತಮ್ಮ ಮನೆಯವರನ್ನು ಕರೆದುಕೊಂಡು ಹೋಗುವ ಅವಕಾಶ ಕಲ್ಪಿಸಲಾಗಿದೆ.

ಎಲ್ಲ ಖರ್ಚನ್ನೂ ಕೇಂದ್ರವೇ ಭರಿಸಲಿದೆ

ಯಲ್ಲಾಪುರದ ಸುಧಾ ಸಿದ್ದಿ ಹಾಗೂ ಗಣೇಶ ಸಿದ್ದಿ ಯಲ್ಲಾಪುರದಿಂದ ಬಸ್ ಮೂಲಕ ಬೆಂಗಳೂರು ತಲುಪಿ ಅಲ್ಲಿಂದ ವಿಮಾನದಲ್ಲಿ ಪ್ರಯಾಣಿಸಲಿದ್ದಾರೆ. ಬಸ್ ಹಾಗೂ ವಿಮಾನದ ಟಿಕೆಟ್ ಈಗಾಗಲೇ ಇವರ ಹೆಸರಲ್ಲಿ ಕೇಂದ್ರದಿಂದ ಬುಕ್ ಮಾಡಲಾಗಿದೆ. ಇನ್ನು ಲಕ್ಷ್ಮೀ ಹಾಗೂ ಇಂದಿರಾ ಅವರಿಗೆ ಹುಬ್ಬಳ್ಳಿಯಿಂದ ವಿಮಾನದ ವ್ಯವಸ್ಥೆಯನ್ನು ಮಾಡಲಾಗಿದೆ. ಅಲ್ಲಿ ಯುಳಿಯುವ, ಊಟದ ವ್ಯವಸ್ಥೆಯನ್ನು ಅಲ್ಲಿ ಉಚಿತವಾಗಿ ಮಾಡಲಾಗಿದೆ.

ನನಗೆ ಇಂತದ್ದೊಂದು ಅವಕಾಶ ಬರುತ್ತದೆ ಎಂದು ಅಂದು ಕೊಂಡಿರಲಿಲ್ಲ. ನಮ್ಮ ಇಒ ಟಿ ವೈ ದಾಸನಕೊಪ್ಪ ಅವರು ನನ್ನ ಕೆಲಸ ಗಮನಿಸಿ ನನ್ನ ಹೆಸರು ಸೇರಿಸಿದ್ದಾರೆ. ಅದೂ ಆಯ್ಕೆಯೂ ಆಗಿದೆ. ನಮ್ಮಲ್ಲಿ ಹಲವಾರು ಸ್ವಸಹಾಯ ಸಂಗಗಳಿದ್ದು, ಉತ್ತಮವಾಗಿ ಕಾರ್ಯ ನಡೆಯುತ್ತಿದೆ. ಕೇಂದ್ರ ಸರಕಾರದ ಸಾಕಷ್ಟು ಯೋಜನೆಗಳನ್ನು ನಾವು ಬಳಸಿಕೊಂಡಿದ್ದೇವೆ. ಈ ಹ್ವಾನಕ್ಕಾಗಿ ನಾನು ಮೋಡಿಯವರಿಗೆ ಧನ್ಯವಾದ ಸಲ್ಲಿಸುತ್ತೇನೆ.

-ಲಕ್ಷ್ಮೀ ಮುಳೆ ಹುನಗುಂದ

ತುಂಗಭದ್ರಾ ಡ್ಯಾಂ ತೆರೆದ ಬಾಗಿಲು

← ಮೊದಲಪುಟದಿಂದ

ಖಾಲಿಯಾಗದೇ ಸರಿಪಡಿಸುವುದು ಕಷ್ಟ: ಬಳ್ಳಾರಿ, ವಿಜಯನಗರ, ಕೊಪ್ಪಳ ಮತ್ತು ರಾಯಚೂರು ಮಾತ್ರವಲ್ಲದೆ ಆಂಧ್ರಪ್ರದೇಶ ಮತ್ತು ತೆಲಂಗಾಣದ 12 ಲಕ್ಷ ಎಕರೆಗೂ ಹೆಚ್ಚು ಕೃಷಿ ಪ್ರದೇಶಕ್ಕೆ ನೀರು ಉಣಿಸುವ, ಸಾವಿರಾರು ಹಳ್ಳಿ, ಪಟ್ಟಣ ಮತ್ತು ನಗರಗಳ ಜನತೆಗೆ ಕುಡಿಯುವ ನೀರು ಹಾಗೂ ಅನೇಕ ಕೈಗಾರಿಕೆಗಳಿಗೂ ಬಳಕೆಯ ನೀರಿನ ಮೂಲವಾಗಿದೆ. ಆದರೀಗ ಗೇಟ್ ಹಾಳಾಗಿರುವುದರಿಂದ ಇಡೀ ಜಲಾಶಯವನ್ನು ಖಾಲಿ ಮಾಡದೇ ಅನ್ಯ ಮಾರ್ಗವಿಲ್ಲ. ಆದ್ದರಿಂದ ಜಲಾಶಯ ಭರ್ತಿಯಾಗಿದ್ದರೂ ಪ್ರಯೋಜನ ವಿಲ್ಲ ಎನ್ನುವ ಮಾತುಗಳು ಕೇಳಿಬರುತ್ತಿವೆ.

ದುರಸ್ತಿ ಮಾಡಲು ಈಗ ಡ್ಯಾಂನಲ್ಲಿ ಸಂಗ್ರಹವಾಗಿದ್ದ 105 ಟಿಎಂಸಿ ನೀರಿನಲ್ಲಿ 60ರಿಂದ 65 ಟಿಎಂಸಿ ಖಾಲಿಯಾಗುವ ಸಾಧ್ಯತೆಯಿದೆ. ಉಳಿಯುವುದು 40 ರಿಂದ 45 ಟಿಎಂಸಿ ಮಾತ್ರ. ಜಲಾಶಯದ ಜಲಾನಯನ ಪ್ರದೇಶದಲ್ಲಿ ಈಗ ಮಳೆ ನಿಂತಿದೆ. ಒಳಹರಿವೂ ಕಡಿಮೆಯಾಗಿದೆ. ಇನ್ನು ಗೇಟ್ ದುರಸ್ತಿಯಾಗಲು ಹಲವು ದಿನಗಳೇ ಬೇಕು. ನಂತರವೇ ನೀರಿನ ಸಂಗ್ರಹ ಮಾಡಬೇಕಿದೆ. ಈ ಎಲ್ಲ ಸಮಸ್ಯೆಗಳಿಂದ ತುಂಗಭದ್ರಾ ಭಾಗದ ರೈತ ಮತ್ತೆ ಸಂಕಷ್ಟದ ದಿನಗಳನ್ನು ಎದುರಿಸಬೇಕಾಗುತ್ತಾ ಎಂಬ ಪ್ರಶ್ನೆ ಉದ್ಭವವಾಗಿದೆ.

ಕೂಡಲೇ ಸರಿಪಡಿಸಲು ಆಗ್ರಹ: ಜಲಾಶಯ ಭರ್ತಿಯಾಗಿರುವುದರಿಂದ ಕ್ರಸ್ಟ್ ಗೇಟ್ ಕೊಚ್ಚಿ ಹೋಗಿರುವುದರಿಂದ ಭಾರಿ ಪ್ರಮಾಣದ ನೀರು ಹೊರಬರುತ್ತಿದೆ. ಕೇವಲ ಒಂದೇ ಗೇಟ್‌ನಿಂದ ಭಾರಿ ನೀರು ಹೊರ ಹೋದರೆ, ಇಡೀ ಜಲಾಶಯಕ್ಕೆ ಸಮಸ್ಯೆಯಾಗುವ ಸಾಧ್ಯತೆಯಿರುವುದರಿಂದ ಎಲ್ಲ ಗೇಟ್‌ಗಳಿಂದ ನೀರು ಬಿಡಲಾಗುತ್ತಿದೆ. ಸದ್ಯದ ಪರಿಸ್ಥಿತಿಯಲ್ಲಿ ಈ ಗೇಟ್‌ನ್ನು ಸರಿಪಡಿಸಲಾಗುವುದಿಲ್ಲ. ಆದರೆ ಜಲಾಶಯ ಭಾಗದ ರೈತರು, ಪ್ರತಿಪಕ್ಷ ನಾಯಕರು ಗೇಟ್ ಅನ್ನು ಕೂಡಲೇ ಸರಿಪಡಿಸಬೇಕು ಎಂದು ಆಗ್ರಹಿಸಿದ್ದಾರೆ. ಆದರೆ ಇನ್ನೊಂದು ವಾರಗಳ ಕಾಲ ಗೇಟ್ ಅಳವಡಿಕೆ ಅಸಾಧ್ಯ ಎನ್ನುವುದು ತಜ್ಞರ ಅಭಿಪ್ರಾಯವಾಗಿದೆ.

ವಿಜಯೇಂದ್ರ ವಿರುದ್ಧ ದೂರು ನೀಡಲು ಸಜ್ಜಾದ ಹಿರಿ ಪಡೆ

← ಮೊದಲಪುಟದಿಂದ

ಆದರೆ ಮೂಲಗಳ ಪ್ರಕಾರ, ಪಾದಯಾತ್ರೆ ನಡೆಸುವುದು, ಪಕ್ಷ ಸಂಘಟನೆ ಮಾಡುವುದರ ಬಗ್ಗೆ ಒಂದು ಹಂತದಲ್ಲಿ ಚರ್ಚೆ ನಡೆದಿದೆ. ಇದಕ್ಕಿಂತ ಮುಖ್ಯವಾಗಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ವಿರುದ್ಧ ಪಕ್ಷದ ವರಿಷ್ಠರಿಗೆ ದೂರು ನೀಡಲು ತೀರ್ಮಾನಿಸಲಾಗಿದೆ ಎಂದು ತಿಳಿದುಬಂದಿದೆ.

ಹೈಕಮಾಂಡ್ ಅನುಮತಿ ಬಳಿಕ ಪಾದಯಾತ್ರೆ: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಹಗರಣ, ಎಸ್‌ಸಿ-ಎಸ್‌ಟಿ ಮೀಸಲು ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಂಡಿರುವುದು ಸೇರಿದಂತೆ ಸರಕಾರದ ವಿರುದ್ಧ ಕೇಳಿಬಂದಿರುವ ಹಲವು ಆರೋಪಗಳ ಬಗ್ಗೆ ವಿಜಯೇಂದ್ರ- ಆರ್.ಅಶೋಕ ನೇತೃತ್ವದ ಪಾದಯಾತ್ರೆಯಲ್ಲಿ ಮಾತನಾಡಿಲ್ಲ. ಪರಿಶಿಷ್ಟರಿಗೆ ಅನ್ಯಾಯವಾಗಿರು ವುದನ್ನು ಮುಂದಿಟ್ಟುಕೊಂಡು, ಕೂಡಲಸಂಗಮ ದಿಂದ ಬಳ್ಳಾರಿಯವರೆಗೆ ಪಾದಯಾತ್ರೆ ನಡೆಸುವ ಬಗ್ಗೆ ಸಭೆಯಲ್ಲಿ ಗಂಭೀರವಾಗಿ ಚರ್ಚೆಯಾಗಿದೆ. ಪಕ್ಷದ ಹೈಕಮಾಂಡ್‌ನಿಂದ ಅನುಮತಿ ಪಡೆದು ಈ ಪಾದಯಾತ್ರೆ ಆರಂಭಿಸಲು ತೀರ್ಮಾನಿಸ ಲಾಗಿದೆ. ಗಣೇಶ ಚತುರ್ಥಿಯ ಬಳಿಕ ಪಾದಯಾತ್ರೆ ನಡೆಯುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಟ್ವೀಟೂ-ಖಾರಾ

ಅಮಿತ್ ವಿಲಾಸರಾವ್ ದೇಶಮುಖ್
ಕಾಂಗ್ರೆಸ್ ನಾಯಕ

ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಭಾರಿ ಬಹುಮತದಿಂದ ಇಂಡಿಯಾ ಒಕ್ಕೂಟ ಗೆಲ್ಲುವುದನ್ನು ಯಾವುದೇ ಶಕ್ತಿ ತಡೆಯಲಾಗದು. ಕಾಂಗ್ರೆಸ್ ಪಕ್ಷದ ಧ್ವಜ ಶೀಘ್ರವೇ ಮಹಾರಾಷ್ಟ್ರದಾದ್ಯಂತ ರಾರಾಜಿಸಲಿದೆ.

ಸಾಯಿರಾಮ್ ,
ಮುಂಬೈ

ಮಹಾರಾಷ್ಟ್ರದ ಜನತೆ ಕರ್ನಾಟಕ ಮತ್ತು ಕಾಂಗ್ರೆಸ್ ಸರಕಾರವನ್ನು ಎಚ್ಚರಿಕೆಯಿಂದ ಗಮನಿಸುತ್ತಿದ್ದಾರೆ. ಚುನಾವಣೆ ಗೆಲ್ಲುವುದು ಸುಲಭವಲ್ಲ. ಅಲ್ಲದೆ, ಬಾಂಗ್ಲಾದೇಶದ ಹಿಂದುಗಳ ದುಸ್ಥಿತಿಯ ಮೇಲಿನ ಭಾರತದ ಗಮನವನ್ನು ಬೇರೆಡೆಗೆ ಸೆಳೆಯಲು ಕಾಂಗ್ರೆಸ್ ಈಗ ಹಿಂಡನ್‌ಬರ್ಗ್ ವಿಷಯವನ್ನು ಬಹಿರಂಗಪಡಿಸಿದೆ.

ಸಮಾಚಾರ ಸಣ್ಣದಲ್ಲ

ಲಘು ಭೂಕಂಪನ: 2.6ರಷ್ಟು ತೀವ್ರತೆ

ಬೀದರ್: ಬೀದರ್ ಜಿಲ್ಲೆಯಲ್ಲಿ ಶನಿವಾರ ಸಂಜೆ ಭೂಕಂಪನವಾದ ಅನುಭವವಾಗಿದೆ. ಸಂಜೆ ಸುಮಾರು 4.26ರ ವೇಳೆಗೆ ಕೆಲವೇ ಸೆಕೆಂಡ್‌ಗಳು ಭೂಮಿ ಕಂಪಿಸಿದ್ದು, ಇದರಿಂದ ಜನತೆ ಬೆಚ್ಚಿಬಿದ್ದಿದ್ದಾರೆ. ಬೀದರ್ ಭೂಕಂಪ ರಹಿತ ವಲಯದಲ್ಲಿದ್ದು, ಈ ಪ್ರದೇಶದಲ್ಲಿ ಮೊದಲ ಬಾರಿಗೆ 2.6 ತೀವ್ರತೆಯ ಭೂಕಂಪ ದಾಖಲಾಗಿದೆ ಎಂದು ಭೂಕಂಪಶಾಸ್ತ್ರಜ್ಞರು ಹೇಳಿದ್ದಾರೆ. ಹುಮನಾಬಾದ್ ತಾಲೂಕಿನ ಸೀತಾಳಗೇರಾ ಜಿಪಿಯಿಂದ ನೈಋತ್ಯಕ್ಕೆ 3.5 ಕಿಲೋಮೀಟರ್ ದೂರದಲ್ಲಿ ಭೂಕಂಪನದ ಕೇಂದ್ರ ಬಿಂದುವಾಗಿದೆ. ಭೂಕಂಪನದ ವಲಯ-2 ರಲ್ಲಿ ಭೂಕಂಪನದ ಕೇಂದ್ರವು ಬೀಳುತ್ತದೆ, ಅಲ್ಲಿ ಭೂಕಂಪದಿಂದ ಹಾನಿಯಾಗುವ ಸಾಧ್ಯತೆಯು ತುಂಬಾ ಕಡಿಮೆಯಾಗಿದೆ. ಅಲ್ಲದೆ, ಟೆಕ್ಟೋನಿಕ್ ನಕ್ಷೆಯ ಪ್ರಕಾರ ಯಾವುದೇ ರಚನಾತ್ಮಕ ಸ್ಥಗಿತಗಳಿಂದ ಅಧಿಕೇಂದ್ರವು ಶೂನ್ಯವಾಗಿದೆ ಎಂದು ಬೆಂಗಳೂರಿನಲ್ಲಿರುವ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ನಿಗಾ ಕೇಂದ್ರ ಹೇಳಿದೆ.

ವಿದ್ಯುತ್ ತಂತಿ ಸ್ಪರ್ಶ ಚಿರತೆ ಸಾವು

ಕೆ.ಆರ್.ಪೇಟೆ: ತಾಲೂಕಿನ ಬಂಡಿಹೊಳೆ ಗ್ರಾಮದ ಹೊರವಲಯದಲ್ಲಿರುವ ದೇವರಸೇಗೌಡ ಎಂಬುವವರಿಗೆ ಸೇರಿದ ಜಮೀನಿನಲ್ಲಿ ವಿದ್ಯುತ್ ಸ್ಪರ್ಶದಿಂದ



ಚಿರತೆಯೊಂದು ಭಾನುವಾರ ಸಾವಿಗೀಡಾಗಿದೆ. ಮರ ಏರಲು ಚಿರತೆ ಯತ್ನಿಸಿದಾಗ ವಿದ್ಯುತ್ ಕಂಬದ ತಂತಿ ತಗುಲಿ ಮೃತಪಟ್ಟಿದೆ ಎಂದು ಶಂಕಿಸಲಾಗಿದೆ. ಅರಣ್ಯಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಬಸ್-ಆಟೋ ನಡುವೆ ಡಿಕ್ಕಿ; ಮೂವರ ಸಾವು

ಬೀದರ್: ಬಸ್ - ಆಟೋ ಡಿಕ್ಕಿಯಾಗಿ ಮೂವರು ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ಬೀದರ್ ತಾಲೂಕಿನ ಅತಿವಾಳ ಕ್ರಾಸ್ ಬಳಿ ಭಾನುವಾರ (ಆ.11ರಂದು)

ಮಧ್ಯಾಹ್ನ ನಡೆದಿದೆ. ಬೀದರ್- ಭಾಲ್ಕಿ ಮುಖ್ಯ ರಸ್ತೆಯ ಹೆದ್ದಾರಿ 50 ರಲ್ಲಿ ಅಪಘಾತ. ಮಹಾರಾಷ್ಟ್ರ ಬಸ್ ಮತ್ತು ಆಟೋ ಮಧ್ಯೆ ಅಪಘಾತ ಸಂಭವಿಸಿದ ಪರಿಣಾಮ ಅನಿತಾ ಬಾಯಿ(45) ಮತ್ತು ಆಕೆಯ ಇಬ್ಬರು ಮಕ್ಕಳು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಉಳಿದ ಮೂವರು ಮೂವರು ಗಂಭೀರವಾಗಿ ಗಾಯಗೊಂಡಿದ್ದು, ಅವರು ಹೊನ್ನಕೇರಿ ತಾಂಡದ ನಿವಾಸಿಗಳೆಂದು ಗುರುತಿಸಲಾಗಿದೆ. ಬಸ್ ಬೀದರ್‌ನಿಂದ ಮಹಾರಾಷ್ಟ್ರದ ಲಾತೂರ್‌ಗೆ ಹೋಗುತ್ತಿತ್ತು. ಈ ವೇಳೆ ಅಪಘಾತ ನಡೆದಿದೆ. ಘಟನಾ ಸ್ಥಳಕ್ಕೆ ಜನವಾಡ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಜನವಾಡಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

{ ಮಧು ಬಂಗಾರಪ್ಪ } ಶಿಕ್ಷಣ ಸಚಿವ

ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ನಷ್ಟದ ಉದ್ಯಮ ಸುಳಿಯಿಂದ ಹೊರತರುವಲ್ಲಿ ಸಂಸದ ರಾಘವೇಂದ್ರ ವಿಫಲರಾಗಿದ್ದಾರೆ. ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರನ್ನು ಭದ್ರಾವತಿಗೆ ಕರೆತಂದಿದ್ದು ಯಾವುದೇ ಪ್ರಯೋಜನವಾಗಿಲ್ಲ. ಕಾರ್ಖಾನೆ ಬಗ್ಗೆ ಅವರು ಸಾಕಷ್ಟು ಸುಳ್ಳು ಹೇಳಿದ್ದಾರೆ.



ತುಂಬಿದ ಡ್ಯಾಂ ಖಾಲಿ ಮಾಡಿ, ದುರಸ್ತಿ ಮಾಡುವ ಅನಿವಾರ್ಯತೆ | ಜಲಾಶಯಕ್ಕೆ ಡಿಸಿಎಂ ಡಿಕೆಶಿ, ಶಿವರಾಜ ತಂಗಡಗಿ ಭೇಟಿ

ಕಳಚಿದ ಟಿಬಿ ಡ್ಯಾಂ ಕ್ರಸ್ಟ್ ಗೇಟ್ ಕೊಂಡಿ

ಕೊಪ್ಪಳ: ರಾಜ್ಯದ ನಾಲ್ಕು ಜಿಲ್ಲೆ ಹಾಗೂ ಆಂಧ್ರ, ತೆಲಂಗಾಣ ರೈತರ ಜೀವನಾಡಿ ತುಂಗಭದ್ರಾ ಡ್ಯಾಂನ ಕ್ರಸ್ಟ್ ಗೇಟ್ ತುಂಡಾಗಿದ್ದು, ರಾಜ್ಯದ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಭರ್ತಿಯಾದ ಡ್ಯಾಂ ಅನಗತ್ಯವಾಗಿ ಖಾಲಿಮಾಡುವ ಅನಿವಾರ್ಯತೆ ಎದುರಾಗಿದೆ.

ತಾಲೂಕಿನ ಮುನಿರಾಬಾದ್ ಮತ್ತು ಹೊಸಪೇಟೆ ನಡುವೆ ಹರಿಯುವ ತುಂಗಭದ್ರಾ ನದಿಗೆ ಡ್ಯಾಂ ನಿರ್ಮಿಸಲಾಗಿದ್ದು, ಡ್ಯಾಂ ಒಟ್ಟು 133 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯ ಹೊಂದಿದೆ. ಜಲಾಶಯದಿಂದ ಹೆಚ್ಚುವರಿ ನೀರು ಬಿಡುಗಡೆಗೆ 33 ಕ್ರಸ್ಟ್ ಗೇಟ್ ಅಳವಡಿಸಲಾಗಿದೆ. ಈ ಪೈಕಿ 19ನೇ ಗೇಟ್ ನ ಚೈನ್ ಲಿಂಕ್ ಕತ್ತರಿಸಿ, ಇಡೀ ಗೇಟ್ ಕೊಚ್ಚಿ ಹೋಗಿದೆ.

60 ಅಡಿ ಅಗಲ ಮತ್ತು 20 ಅಡಿ ಎತ್ತರ ಒಂದು ಗೇಟ್ ಸಂಪೂರ್ಣ ಕಿತ್ತು, ಹೊರಗೆ ಬಿದ್ದಿದೆ. ತುಂಡಾದ ಗೇಟ್ ನಿಂದ 35 ಸಾವಿರದಿಂದ 40 ಸಾವಿರ ಕ್ಯುಸೆಕ್ ನೀರು ನದಿಗೆ ಹರಿಯುತ್ತಿದೆ. ಈ ಹಿನ್ನೆಲೆ ಡ್ಯಾಂನ 60 ಟಿಎಂಸಿಯಷ್ಟು ನೀರು ಖಾಲಿಮಾಡಿ, ಹೊಸ ಗೇಟ್ ಅಳವಡಿಸುವ ಅನಿವಾರ್ಯತೆ ಎದುರಾಗಿದೆ. ಈ ಹಿನ್ನೆಲೆ ಶನಿವಾರ ರಾತ್ರಿಯಿಂದಲೇ ಹಂತಹಂತವಾಗಿ ಭಾರಿ ಪ್ರಮಾಣದ ನೀರು ನದಿಗೆ ಹರಿಯಬಿಡಲಾಗುತ್ತಿದೆ. ಒಳಹರಿವು ತೀರಾ ಕಡಿಮೆ ಇದ್ದರೂ ಡ್ಯಾಂನಲ್ಲಿನ 60 ಟಿಎಂಸಿ ನೀರು ಹೊರಹೋಗಲು ಕನಿಷ್ಠ 6 ದಿನ ಬೇಕು ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ.

ಡಿಸಿಎಂ ಡಿಕೆಶಿ ದೌಡು: ಶನಿವಾರ ರಾತ್ರಿ ಗೇಟ್ ತುಂಡಾಗಿದ್ದು, ವಿಷಯ ತಿಳಿದು ಸಚಿವ ಶಿವರಾಜ ತಂಗಡಗಿ ಮತ್ತು ಶಾಸಕ ರಾಘವೇಂದ್ರ ಹಿಟ್ನಾಳ ರಾತ್ರಿಯೇ ಡ್ಯಾಂಗೆ ಆಗಮಿಸಿ, ಪರಿಶೀಲಿಸಿದರು. ಮಧ್ಯರಾತ್ರಿ ಶಾಸಕ ರಾಘವೇಂದ್ರ ಹಿಟ್ನಾಳ ಡ್ಯಾಂಗೆ ಆಗಮಿಸಿದರೆ, ಸಚಿವ ಶಿವರಾಜ ತಂಗಡಗಿ, ಬೆಂಗಳೂರಿನಿಂದ ರಾತ್ರಿಯೇ ನೇರವಾಗಿ ಜಲಾಶಯಕ್ಕೆ ಬಂದು ಅಧಿಕಾರಿಗಳೊಂದಿಗೆ ಪರಿಸ್ಥಿತಿಯನ್ನು ಪರಿಶೀಲಿಸಿದರು. ಬೃಹತ್ ನೀರಾವರಿ ಸಚಿವರೂ ಆಗಿರುವ ಡಿಸಿಎಂ ಡಿ.ಕೆ.ಶಿವಕುಮಾರ್, ಭಾನುವಾರ ಮಧ್ಯಾಹ್ನದ ವೇಳೆಗೆ ತುಂಗಭದ್ರಾ ಜಲಾಶಯಕ್ಕೆ ಆಗಮಿಸಿ, ಪರಿಶೀಲನೆ ನಡೆಸಿದರು. ಜಲಾಶಯ ಡಿಸೈನ್ ಮತ್ತು ಗೇಟ್‌ನ ಬಗ್ಗೆ ಮಾಹಿತಿ ಪಡೆದು, ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ಯಾರೂ ಏನೇ ಮಾಡಿದರೂ ಭರ್ತಿ ಆಗಿರುವ ಡ್ಯಾಂ ಖಾಲಿ ಮಾಡುವುದು ಮಾತ್ರ ಸದ್ಯದ ಅನಿವಾರ್ಯತೆ.

ತುಂಗಭದ್ರಾ ಜಲಾಶಯದಿಂದ ನಿರಂತರವಾಗಿ ನೀರು ಹೊರ ಹೋಗುತ್ತಿರುವ ದೃಶ್ಯ.

ಈಗಾಗಲೇ ಹೊಸ ಗೇಟ್ ತಯಾರಿ ಕಾರ್ಯ ಆರಂಭವಾಗಿದೆ. ಸದ್ಯ ಡ್ಯಾಂ ಭರ್ತಿಯಾಗಿದ್ದು, ಒಟ್ಟು 105 ಟಿಎಂಸಿ ನೀರಿದೆ. ಈ ಪೈಕಿ ಸುಮಾರು 60 ಟಿಎಂಸಿ ನೀರು ನದಿಗೆ ಬಿಟ್ಟು, ಹೊಸಗೇಟ್ ಅಳವಡಿಸಲಾಗುವುದು. ದುರಸ್ತಿಗೆ ಅಗತ್ಯವಿರುವ ನೀರು ಹೊರಗೆ ಹೋಗುವಷ್ಟರಲ್ಲಿ ಹೊಸ ಗೇಟ್ ಸಿದ್ಧವಾಗಲಿದೆ. ಆಕಸ್ಮಿಕವಾಗಿ ಆಗಿರುವ ಘಟನೆಗೆ ಯಾರನ್ನೂ ಹೊಣೆಮಾಡಲು ಆಗುವುದಿಲ್ಲ.

– ಡಿ.ಕೆ.ಶಿವಕುಮಾರ, ಡಿಸಿಎಂ

ವಿಷಯ ತಿಳಿಯುತ್ತಿದ್ದಂತೆಯೇ ಮಧ್ಯರಾತ್ರಿಯೇ ಬೆಂಗಳೂರಿನಿಂದ ನೇರವಾಗಿ ಜಲಾಶಯಕ್ಕೆ ಭೇಟಿ ನೀಡಿ, ಪರಿಶೀಲಿಸಿದ್ದೇನೆ. ಡ್ಯಾಂನ 19ನೇ ಗೇಟ್‌ನ ಚೈನ್ ಲಾಕರ್ ತುಂಡಾಗಿದ್ದರಿಂದ ಗೇಟ್ ಕೊಚ್ಚಿ ಹೋಗಿದೆ. ಒತ್ತಡ ಕಡಿಮೆ ಮಾಡಲು ಎಲ್ಲ ಗೇಟ್ ತೆರೆದು 1 ಲಕ್ಷ ಕ್ಯೂಸೆಕ್ ನೀರು ನದಿಗೆ ಬಿಡಲಾಗುತ್ತಿದೆ. ಹೈದರಾಬಾದ್ ನಿಂದ ಡ್ಯಾಂ ನಿರ್ಮಾಣದ ಬ್ಲೂ ಪ್ರಿಂಟ್ ಮತ್ತು ಕ್ರಸ್ಟ್ ಗೇಟ್ ಡಿಸೈನ್ ತರಿಸಿದ್ದೇವೆ. ಡ್ಯಾಂನ 20 ಅಡಿ ನೀರು ಖಾಲಿಯಾದ ನಂತರ ಹೊಸಗೇಟ್ ಅಳವಡಿಕೆ ಕಾರ್ಯ ನಡೆಯಲಿದೆ. ಒಂದು ಬೆಳೆಗೆ ನೀರಿನ ಸಮಸ್ಯೆ ಆಗುವುದಿಲ್ಲ.

– ಶಿವರಾಜ ತಂಗಡಗಿ, ಸಚಿವ

ರೈತರಲ್ಲಿ ಆತಂಕ

ನದಿಗೆ ನೀರು ಪೋಲಾಗುತ್ತಿರುವುದನ್ನು ಕಂಡ ಜನರು ಮರಗುತ್ತಿದ್ದಾರೆ. ಕುಡಿಯುವ ಹನಿ ನೀರಿಗೂ ಜನರು ಹೋರಾಟ ಮಾಡುವಂತಾ ಗಿದೆ. ಜಲಾಶಯ ಭರ್ತಿಯಾಗಿದೆ ಎಂಬ ಖುಷಿ ಕ್ಷಣಾರ್ಧದಲ್ಲೇ ಮಾಯವಾಗಿದೆ. ಡ್ಯಾಂ ನೀರು ವ್ಯರ್ಥವಾಗುತ್ತಿರುವುದರಿಂದ ವಿದ್ಯುತ್ ಉತ್ಪಾದನೆಗೂ ತೊಡಕಾಗಲಿದೆ. ನೀರು ನಿಯಂತ್ರಣವಿಲ್ಲದೆ ಹೊರಹೋಗುವುದರಿಂದ ನದಿ ತೀರದ ಪ್ರದೇಶಗಳಲ್ಲಿ ತೊಂದರೆ ಉಂಟಾಗಬಹುದು.

ಡ್ಯಾಂ ವೀಕ್ಷಣೆಗೆ ನಿರ್ಬಂಧ

ಕ್ರಸ್ಟ್ ಗೇಟ್ ಕೊಂಡಿ ಕಳಚಿದ್ದರಿಂದ ಡಿಸಿಎಂ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ದಿಢೀರ್ ಸಭೆ ನಡೆಯಿತು. ಸಂಸದ ಇ.ತುಕಾರಂ, ಶಾಸಕ ಗವಿಯ ಪ್ಪ ಸೇರಿದಂತೆ ಇತರರು ಭಾಗವಹಿಸಿದ್ದರು. ಗೇಟ್ ದುರಸ್ತಿಗೆ ಇನ್ನೂ ನಾಲ್ಕೈದು ದಿನ ಬೇಕಾಗಿದ್ದು, ಈ ಹಿನ್ನೆಲೆ ಡ್ಯಾಂ ವೀಕ್ಷಣೆಗೆ ಸದ್ಯ ಬ್ರೇಕ್ ಹಾಕ ಲಾಗಿದೆ. ಭಾನುವಾರ ಟಿಬಿ ಡ್ಯಾಂ ವೀಕ್ಷಿಸಲು ಬಂದ ಪ್ರವಾಸಿಗರಿಗೆ ಪೊಲೀಸರು ಮೇಲಧಿಕಾರಿ ಗಳ ಸೂಚನೆ ಮೇರೆಗೆ ಪ್ರವೇಶ ನಿರಾಕರಿಸಿ ಒಳಬಿಡದೆ ಕಳುಹಿಸುತ್ತಿದ್ದು ಕಂಡುಬಂತು.

- ಜಲಾಶಯದ 19ನೇ ಗೇಟ್ ನ ಚೈನ್ ಲಿಂಕ್ ತುಂಡು.
- ನದಿ ತೀರದ ಜನರಲ್ಲಿ ಆತಂಕ
- ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ಅಧಿಕಾರಿಗಳಿಂದ ಪರೀಶಿಲನೆ
- ಡ್ಯಾಂನ 60 ಟಿಎಂಸಿಯಷ್ಟು ನೀರು ಖಾಲಿಮಾಡಿ, ಹೊಸ ಗೇಟ್ ಅಳವಡಿಸಲು ಸಿದ್ಧತೆ.

ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ತುಂಗಭದ್ರಾ ಜಲಾಶಯಕ್ಕೆ ಭಾನುವಾರ ಭೇಟಿ ನೀಡಿ, ಪರಿಶೀಲಿಸಿದರು.

ಕಂಪ್ಲಿ ಸೇತುವೆ ಮೇಲೆ ಸಂಚಾರ ನಿಷೇಧ

ಕೊಪ್ಪಳ- ಬಳ್ಳಾರಿ ಜಿಲ್ಲೆಗಳ ಮಧ್ಯೆ ಸಂಪರ್ಕ ಕಲ್ಪಿಸುವ ಗಂಗಾವತಿ ತಾಲೂಕಿನ ಚಿಕ್ಕಜಂತಕಲ್ ಬಳಿ ಇರುವ ಕಂಪ್ಲಿ ಸೇತುವೆ ಮೇಲೆ ಸಂಚಾರವನ್ನು ನಿರ್ಬಂಧಿಸಲಾಗಿದೆ. ಕಂಪ್ಲಿ-ಗಂಗಾವತಿ ಮಧ್ಯೆ ಕೇವಲ 9 ಕಿ.ಮೀ ಅಂತರವಿದ್ದು, ಈ ಸೇತುವೆ ಪ್ರಮುಖ ಸಂಪರ್ಕ ಸಾಧನವಾಗಿದೆ. ಕಂಪ್ಲಿ ತಾಲೂಕಿನ ಬಹುತೇಕ ಜನರು ಮಾರುಕಟ್ಟೆ, ಆಸ್ಪತ್ರೆ ಸೇರಿದಂತೆ ನಾನಾ ಕಾರಣಕ್ಕೆ ನಿತ್ಯ ಗಂಗಾವತಿಗೆ ಬರುತ್ತಾರೆ. ಮುಖ್ಯವಾಗಿ ವಿವಿಧ ಇಲಾಖೆ, ಖಾಸಗಿ ವಲಯದ ಉದ್ಯೋಗಿಗಳು ದೊಡ್ಡ ಪ್ರಮಾಣದಲ್ಲಿ ಗಂಗಾವತಿಗೆ ಬರುತ್ತಾರೆ. ಅಲ್ಲದೇ ಕಂಪ್ಲಿ ಭಾಗದ ರೈತರ ಹೊಲಗಳು ಸೇತುವೆಯ ಮತ್ತೊಂದು ಭಾಗವಾಗಿರುವ ಹಿರೇಜಂತಕಲ್ ಪ್ರದೇಶದಲ್ಲಿದ್ದು, ಬ್ರಿಡ್ಜ್ ಸಂಪರ್ಕ ಕಡಿತವಾಗಿರುವುದರಿಂದ ಸಮಸ್ಯೆ ಎದುರಿಸುವಂತಾಗಿದೆ.

ಕಳೆದ 2019ರಲ್ಲೂ ಹೀಗೆ ಆಗಿತ್ತು!

ಕಳೆದ 2019ರಲ್ಲೂ ಇಂಥದ್ದೇ ಪ್ರಕರಣ ನಡೆದು, ಡ್ಯಾಂನ ಎಡದಂಡೆ ಮೇಲ್ಮಟ್ಟದ ಕಾಲುವೆಯ ಗೇಟ್ ಕಿತ್ತುಹೋಗಿತ್ತು. ಕಾಲುವೆಯ ಸಾಮರ್ಥ್ಯಕ್ಕೂ ಹೆಚ್ಚು ನೀರು ಹೊರಬಂದಿದ್ದರಿಂದ ಕಾಲುವೆ ಪಕ್ಕದ ಪಂಪಾವನ ಮತ್ತು ಮುನಿರಾಬಾದ್ ಗ್ರಾಮಕ್ಕೆ ನೀರು ನುಗ್ಗಿ, ಸಾಕಷ್ಟು ಹಾನಿ ಉಂಟಾಗಿತ್ತು. ಮುನ್ನೆಚ್ಚರಿಕೆ ಕ್ರಮವಾಗಿ ಕಾಲುವೆ ಪಕ್ಕದ ಮನೆಯ ನಿವಾಸಿಗಳನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಲಾಗಿತ್ತು. ಇದು ಕೇವಲ 40 ಕ್ಯೂಸೆಕ್ ನೀರು ಹರಿಯುವ ಕಾಲುವೆಯ ಗೇಟ್ ಆಗಿದ್ದರಿಂದ ಡ್ಯಾಂ ಸಂಪೂರ್ಣ ಖಾಲಿಮಾಡುವ ಬದಲಿಗೆ, ಬೃಹತ್ ಮರಳಿನ ಮೂಟೆ ತಯಾರಿಸಿ, ಮುರಿದ ಗೇಟ್ ನ ಜಾಗಕ್ಕೆ ಕ್ರೇನ್‌ಗಳ ಮೂಲಕ ಇಳಿಯಬಿಡಲಾಗಿತ್ತು. 6 ದಿನಗಳ ಕಾರ್ಯಾಚರಣೆ ನಂತರ ನೀರು ಸೋರಿಕೆ ನಿಲ್ಲಿಸಲಾಗಿತ್ತು. ಈ ಘಟನೆಯಿಂದ ತುಂಗಭದ್ರಾ ಬೋರ್ಡ್ ಎಚ್ಚೆತ್ತುಕೊಳ್ಳದ್ದರಿಂದ, ಈ ಬಾರಿ ಕ್ರಸ್ಟ್ ಗೇಟ್ ಗೆ ಕುತ್ತು ಬಂದಿದೆ.

ಹಂಪಿಯ ಹಲವು ಸ್ಮಾರಕಗಳು ಜಲಾವೃತ

ತುಂಗಭದ್ರಾ ಜಲಾಶಯದ 19ನೇ ಕ್ರಸ್ ಗೇಟ್ ಶನಿವಾರ ರಾತ್ರಿ ಕೊಂಡಿ ಕಳಚಿದ ಪರಿಣಾಮ ಜಲಾಶಯದಿಂದ ನಿರಂತರವಾಗಿ ನದಿಗೆ ನೀರು ಹರಿಸಲಾಗುತ್ತಿದ್ದು ಹಂಪಿಯ ಹಲವು ಸ್ಮಾರಕಗಳು ಜಲಾವೃತಗೊಂಡಿವೆ. ಭಾನುವಾರ ಸಂಜೆ ಹೊತ್ತಿಗೆ 30 ಗೇಟ್‌ಗಳ ಮೂಲು ಸರಿಸುಮಾರು ಒಂದು ಲಕ್ಷಕ್ಕೂ ಅಧಿಕ ಕ್ಯೂಸೆಕ್ ನೀರು ಬಿಡಲಾಗಿದೆ. ನದಿಗೆ ನೀರು ಬಿಡುಗಡೆಯಾದ ಹಿನ್ನೆಲೆ ಹೊಸಪೇಟೆ ತಾಲೂಕಿನ ಹೂಸೂರು, ವೆಂಕಟಾಪುರ, ಬುಕ್ಕಸಾಗರ, ರಾಮಸಾಗರ, ಕಂಪ್ಲಿ ಭಾಗದ ಹಲವು ಪ್ರದೇಶ, ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕಿನ ಕೆಂಚನಗುಡ್ಡ ಸೇರಿದಂತೆ ಇತರ ಪ್ರದೇಶಗಳಲ್ಲಿಯೂ ನೀರಿನ ಮಟ್ಟ ಹೆಚ್ಚಾಗುತ್ತಿದೆ. ಜಲಾಶಯದಿಂದ ನೀರು ಹೆಚ್ಚಾಗುತ್ತಿದ್ದು ಕೊಪ್ಪಳ ಜಿಲ್ಲೆಯ ಆನೆಗೊಂದಿ ಸೇರಿದಂತೆ ನದಿ ಪಾತ್ರ, ಸ್ಮಾರಕಗಳು ಮುಳುಗಡೆಯಾಗಿದೆ.

ನದಿಗೆ 60 ಟಿಎಂಸಿ ನೀರು ಬಿಡುಗಡೆ: ಡಿಕೆಶಿ

ತುಂಗಭದ್ರಾ ಜಲಾಶಯದ 19ನೇ ಗೇಟ್ ಮುರಿದಿರುವುದು ತುಂಬಾ ನೋವಿನ ಸಂಗತಿ. ಹೊಸ ಗೇಟ್ ಅಳವಡಿಸಲು ಜಲಾಶಯದ ನೀರು ಹೊರಗೆ ಬಿಡ ಬೇಕು. ಆದ್ದರಿಂದ 60 ಟಿಎಂಸಿ ನೀರು ನದಿಗೆ ಹರಿಬಿಡಲಾಗುವುದು ಎಂದು ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ಹೇಳಿದರು. ತುಂಗಭದ್ರಾ ಜಲಾಶಯದ 19 ನೇ ಗೇಟ್ ಮುರಿದಿರುವುದನ್ನು ಪರಿಶೀಲಿಸಿ, ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತುಂಗಭದ್ರಾ ಜಲಾಶಯ 12 ಲಕ್ಷ ಎಕರೆಗೆ ರೈತರಿಗೆ ನೀರು ಒದಗಿಸುತ್ತದೆ. ಈ ಜಲಾಶಯಕ್ಕೆ ದೊಡ್ಡ ಇತಿಹಾಸವಿದೆ. ಎಲ್ಲ ಕಾಲದಲ್ಲೂ ಈ ಜಲಾಶಯ ಉತ್ತಮವಾಗಿ ಕಾರ್ಯ ನಿರ್ವಹಿಸಿದೆ. ಹೊಸ ಗೇಟ್ ಅಳವಡಿಸಲು 60 ಟಿಎಂಸಿ ನೀರು ನದಿಗೆ ನೀರು ಬಿಡಬೇಕಾಗಿದೆ. ಸದ್ಯ ಎಲ್ಲ ಗೇಟ್ ಮೂಲಕ 98 ಸಾವಿರ ಕ್ಯೂಸೆಕ್ ನೀರು ನದಿಗೆ ಬಿಡಲಾಗುತ್ತಿದೆ. ಹಂತ- ಹಂತವಾಗಿ ನೀರಿನ ಪ್ರಮಾಣ ಹೆಚ್ಚಿಸಲಾಗು ವುದು. ಪ್ರಸ್ತುತ 19 ನೇ ಗೇಟ್ ವೊಂದರಲ್ಲಿ 38 ಸಾವಿರ ಕ್ಯೂಸೆಕ್ ನೀರು ಹೋಗುತ್ತಿದೆ. ರೈತರಿಗೆ ಒಂದು ಬೆಳೆಗೆ ನೀರು ಉಳಿಸಬೇಕೆಂದು ತೀರ್ಮಾನಿಸಲಾಗಿದೆ. ನೆರೆ ರಾಜ್ಯಗಳಿಗೆ ಅವರ ಪಾಲಿನ 25 ಟಿಎಂಸಿ ಅಡಿ ನೀರು ಕೊಡಲಾಗಿದೆ. ಇನ್ನು 90 ಟಿಎಂಸಿ ಕೊಡಬೇಕಿದೆ. ರೈತ ರು ಗಾಬರಿಪಡುವ ಅಗತ್ಯವಿಲ್ಲ.3 ಸರಕಾರ ಒಟ್ಟಾಗಿ ಸಮಸ್ಯೆ ನಿವಾರಿಸಲಾಗುವುದು. ರೈತರನ್ನು ಬದುಕಿಸಲು ಬೇಕಾದ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ಸಂತ್ರಸ್ತರಿಗೆ ಪರಿಹಾರ ನೀಡಲು ಸರಕಾರ ಬದ್ಧ

ಮುಧೋಳ: ಘಟಪ್ರಭಾ ಪ್ರವಾಹದಿಂದ ಉಂಟಾಗಿರುವ ಹಾನಿಗೆ ಸೂಕ್ತ ಪರಿಹಾರ ಒದಗಿಸಲು ನಾನೂ ಸಹ ನಿರಂತರವಾಗಿ ಶ್ರಮಿಸುತ್ತಿದ್ದು, ರೈತರು ಹಾಗೂ ಸಂತ್ರಸ್ತರು ಸರ್ಕಾರದೊಂದಿಗೆ ಸಹಕಾರ ನೀಡಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ಮನವಿ ಮಾಡಿಕೊಂಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಅಧಿಕಾರಿಗಳೊಂದಿಗೆ ಸಭೆ ನಡೆಸಲಾಗಿದೆ.ಸರಕಾರದ ಮಟ್ಟದಲ್ಲಿ ಸಂತ್ರಸ್ತರಿಗೆ ಹಾಗೂ ಬೆಳೆಹಾನಿಯಾದ ರೈತರಿಗೆ ಎನ್‌ಡಿಆರ್ ಎಫ್ ಹಾಗೂ ಎಸ್‌ಡಿಆರ್‌ಎಫ್ ಅನ್ವಯ ಪರಿಹಾರ ಒದಗಿಸಲು ಹಾಗೂ ಪರಿಹಾರ ಹೆಚ್ಚಿಸಲು ಕೇಂದ್ರ ಸರಕಾರಕ್ಕೆ ಒತ್ತಾಯಿಸುವುದು ಸೇರಿದಂತೆ ವಿವಿಧ ವಿಷಯಗಳ ಕುರಿತು ಚರ್ಚಿಸುವ ಸಲುವಾಗಿ ರೈತರ ಬೇಡಿಕೆ ಆಲಿಸಲು ಮುಖ್ಯಮಂತ್ರಿಗಳನ್ನು ಶೀಘ್ರವೇ ಮುಧೋಳ ನಗರಕ್ಕೆ ಕರೆತರಲು ನಾನು ನಿರತನಾಗಿದ್ದೇನೆ ಎಂದು ತಿಳಿಸಿದ್ದಾರೆ. ಘಟಪ್ರಭಾ ಪ್ರವಾಹ ದಲ್ಲಿ 14 ದಿನಗಳ ಕಾಲ ನೀರು ನಿಂತ ಪರಿಣಾಮ ಕಬ್ಬು ಬೆಳೆ ಹಾನಿಯಾಗಿದೆ. ರೈತರ ನಷ್ಟ ತಗ್ಗಿಸುವ ಸಲುವಾಗಿ ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಪರಿಹಾರ ವಿತರಣೆ ಕುರಿತು ನೀರಾವರಿ ಸಚಿವರೊಂದಿಗೆ ಚರ್ಚಿಸಲಾಗು ವುದು . ಘಟಪ್ರಭಾ ಪ್ರವಾಹದಿಂದ ಸಂತ್ರಸ್ತರಾದವರ ನೆರವಿಗೆ ನಮ್ಮ ಸರಕಾರ ಸದಾ ಸಿದ್ಧವಿದೆ. ರೈತರು ಹಾಗೂ ನೆರೆ ಸಂತ್ರಸ್ತರು ಸರಕಾರಕ್ಕೆ ಸಹಕಾರ ನೀಡಬೇಕು ಎಂದರು.

ಕಾರ್ಖಾನೆ ಸ್ಥಿತಿಗೆ ಬಿಎಸ್‌ವೈ, ರಾಘವೇಂದ್ರ ಕಾರಣ: ಸಚಿವ

ವಿಐಎಸ್‌ಎಲ್ ಕಾರ್ಖಾನೆ ಬಗ್ಗೆ ಬಿಜೆಪಿ ಸಂಸದರಿಂದ ಸುಳ್ಳು ಹೇಳಿಕೆ

ಶಿವಮೊಗ್ಗ: ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ(ವಿಐಎಸ್‌ಎಲ್)ಯನ್ನು ನಷ್ಟದ ಉದ್ಯಮದಿಂದ ಹೊರ ತರುವಲ್ಲಿ ಸಂಸದ ಬಿ.ವೈ.ರಾಘವೇಂದ್ರ ವಿಫಲರಾಗಿದ್ದಾರೆ. ಈಗ ಕೇಂದ್ರದ ಭಾರೀ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು ಕರೆತಂದಿದ್ದು, ಯಾವುದೇ ಪ್ರಯೋಜನ ವಾಗಿಲ್ಲ ಎಂದು ಸಚಿವ ಮಧು ಬಂಗಾರಪ್ಪ ಟೀಕಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭದ್ರಾವತಿಯ ವಿಐಎಸ್‌ಎಲ್ ಕಾರ್ಖಾನೆಯ ಬಗ್ಗೆ ಮೂರು ಬಾರಿ ಸಂಸದರಾದ ಬಿ.ವೈ. ರಾಘವೇಂದ್ರ ಅವರು ಸಾಕಷ್ಟು ಸುಳ್ಳು ಹೇಳಿದ್ದಾರೆ. ಇಲ್ಲಿ 15 ಸಾವಿರ ನೌಕರರು ಇದ್ದರು. ಈ ನೌಕರರನ್ನು ವರ್ಗಾವಣೆ ಮಾಡಿರುವ ಕೀರ್ತಿ ರಾಘವೇಂದ್ರ ಅವರಿಗೆ ಸಲ್ಲುತ್ತದೆ. ಕಾರ್ಖಾನೆಯ ಈಗಿನ ಸ್ಥಿತಿಗೆ ಮಾಜಿ ಸಿಎಂ ಬಿ.ಎಸ್ ಯಡಿಯೂರಪ್ಪ, ಸಂಸದ ಬಿ.ವೈ.ರಾಘವೇಂದ್ರ ಕಾರಣ ಎಂದು ದೂರಿದರು.

ರಾಘವೇಂದ್ರ ಅವರು ಕುಮಾರಸ್ವಾಮಿ ಅವರನ್ನು ಕಾರ್ಖಾನೆಗೆ ಕರೆ ತಂದಿದ್ದರು. ಈಗ ಅವರು ಬಂದು ಹೋಗಿ ಒಂದು ತಿಂಗಳು ಆಗಿದೆ. ಕಾರ್ಖಾನೆಯ ಕುರಿತು ರಾಘವೇಂದ್ರ ಅವರು ಲೋಕಸಭೆಯಲ್ಲಿ ಕೇಳಿದ ಪ್ರಶ್ನೆಗೆ ಕೇಂದ್ರ ಕಬ್ಬಿಣ ಹಾಗೂ ಉಕ್ಕು ಇಲಾಖೆಯ ರಾಜ್ಯ ಖಾತೆ ಸಚಿವ ಭೂಪತಿರಾಜು ಶ್ರೀನಿವಾಸ ವರ್ಮಾ, ಕಾರ್ಖಾನೆಯನ್ನು ನಷ್ಟದಿಂದ ಹೊರ ತರುವ ಕುರಿತು ಯಾವುದೇ ಉತ್ತರ ನೀಡಿಲ್ಲ ಎಂದು ಸಚಿವರು ವಾಗ್ದಾಳಿ ನಡೆಸಿದರು.

ಹಣ ಲೂಟಿಯಲ್ಲಿ ನಿಸ್ಸೀಮರು

ವಿಮಾನ ನಿಲ್ದಾಣದ ನೈಟ್ ಲ್ಯಾಂಡಿಂಗ್ ಸಂಬಂಧ ಇವರು ಯಾಕೆ ಕುಮಾರಸ್ವಾಮಿ ಅವರಿಗೆ ಮನವಿ ಕೊಟ್ರು ಎಂದು ಪ್ರಶ್ನಿಸಿದ ಮಧು ಬಂಗಾರಪ್ಪ, ಈ ಎಂಪಿ ಎಷ್ಟು ಪೆದ್ದ ಎಂದರೆ ಯಾರಿಗೆ ಅರ್ಜಿ ಕೊಡಬೇಕು ಎಂಬುದು ಸಹ ಗೊತ್ತಿಲ್ಲ. ಸಂಸದರು ಹಣ ಹೊಡೆಯುವು ದರಲ್ಲಿ ನಿಸ್ಸೀಮರು. ವಿಮಾನ ನಿಲ್ದಾಣದಲ್ಲಿ ಕಮಿಷನ್ ತೆಗೆದುಕೊಂಡಿದ್ದು ಯಾರು?. ನೈಟ್ ಲ್ಯಾಂಡಿಂಗ್ ಕಾಮಗಾರಿ ಯನ್ನು ಅಂದೇ ಮುಗಿಸಿ ಉದ್ಘಾಟನೆ ಮಾಡ ಬೇಕಿತ್ತು. ಈಗ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ. ಅದನ್ನು ನಾವು ಮುಗಿ ಸುತ್ತೇವೆ. ಏರ್‌ಪೋರ್ಟ್ ಉದ್ಘಾಟನೆಗೆ 21 ಕೋಟಿ ರು. ಖರ್ಚು ಮಾಡಿದ್ದೀರಿ. ನಿಮಗೆ ನೈಟ್ ಲ್ಯಾಂಡಿಂಗ್ ವ್ಯವಸ್ಥೆ ಮಾಡಿಸಲು ಆಗಲಿಲ್ಲವೇ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಿಜಯೇಂದ್ರ ಹಗರಣ: ಯತ್ನಾಳ ಪಾದಯಾತ್ರೆ ಮಾಡಲಿ

ರಾಜ್ಯ ಬಿಜೆಪಿಯಲ್ಲಿ ಬಣಗಳ ರಾಜಕೀಯ: ಪಾಟೀಲ್ ವ್ಯಂಗ್ಯ

ವಿಜಯಪುರ: ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ, ರಮೇಶ ಜಾರಕಿಹೊಳಿ ನೇತೃತ್ವದಲ್ಲಿ ಮತ್ತೊಂದು ಪಾದಯಾತ್ರೆ ನಡೆಸಲಿದ್ದಾರಂತೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿರುವ ಭ್ರಷ್ಟಾಚಾರದ ಪಟ್ಟಿ ಇರಿಸಿಕೊಂಡು ಯತ್ನಾಳ್ ಪಾದಯಾತ್ರೆ ನಡೆಸಲಿ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಕುಟುಕಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯಲ್ಲಿ ವಿಜಯೇಂದ್ರ, ಬಿಎಸ್‌ವೈ ಒಂದು ಬಣ, ಅಶೋಕ್ ಬಣ, ಅಶ್ವತ್ಥನಾರಾಯಣ ಬಣ, ರಮೇಶ ಜಾರಕಿಹೊಳಿ, ಯತ್ನಾಳ ಬಣ, ಬಿ.ಎಲ್. ಸಂತೋಷ ಬಣ ಅಂತೆಲ್ಲ ನನ್ನ ಪ್ರಕಾರ 15-20 ಬಣಗಳಿವೆ. ಎಲ್ಲ ಬಣಗಳೂ ಒಂದೊಂದು ಪಾದಯಾತ್ರೆ ನಡೆಸಲಿ ಎಂದು ಗೇಲಿಮಾಡಿದರು.

ವಾಲ್ಮೀಕಿ ಹಗರಣ ವಿಚಾರವಾಗಿ ಕೂಡಲಸಂಗಮದಿಂದ ಹೊಸಪೇಟೆವರೆಗೆ ವಿಜಯೇಂದ್ರ ವಿರೋಧಿ ಬಣದಿಂದ ಯೋಜಿಸುತ್ತಿದೆ ಎಂಬ ವಿಷಯವಾಗಿ ಮಾತನಾಡಿದ ಪಾಟೀಲ, ವಾಲ್ಮೀಕಿ ಹಗರಣ ಈಗಾಗಲೇ ಎಸ್‌ಐಟಿ ತನಿಖೆ ನಡೆಯುತ್ತಿದೆ. ಸಚಿವರ ಪಾತ್ರ ಇದೆಯೋ ಇಲ್ಲವೋ ಗೊತ್ತಿಲ್ಲ, ರಾಜೀನಾಮೆ ಕೊಟ್ಟಿದ್ದಾರೆ, ತನಿಖೆ ನಡೆಯುತ್ತಿದೆ ಎಂದರು. 89 ಕೋಟಿ ರು. ಹಣದಲ್ಲಿ ಈಗಾಗಲೇ 45 ಕೋಟಿ ರು. ವಶಕ್ಕೆ ಪಡೆಯಲಾಗಿದೆ. ಅಕ್ರಮ ಆಗಿಲ್ಲ ಅಂತೇನಿಲ್ಲ, ಆಗಿದೆ, ಕ್ರಮ ಕೈಗೊಂಡಿದ್ದೇವೆ. ಯತ್ನಾಳ್ ತಾವೇ ಹೇಳಿದಂತೆ ಕೋವಿಡ್ ನಲ್ಲಿ 2 ಸಾವಿರ ಕೋಟಿ ಹಗರಣ, ವಿಜಯೇಂದ್ರ ಮಾರಿಷಸ್ ನಲ್ಲಿ 10 ಸಾವಿರ ಕೋಟಿ ಇರಿಸಿದ್ದಾರೆ ಎಂದು ನಾನು ಹೇಳಲ್ಲ, ಈ ವಿಷಯ ಮುಂದಿಟ್ಟುಕೊಂಡು ಹೋರಾಡಲಿ ಎಂದರು.

ಭೋವಿ ನಿಗಮ, ತಾಂಡಾ ಅಭಿವೃದ್ಧಿ ನಿಗಮ, ದೇವರಾಜ ಅರಸು ನಿಗಮದಲ್ಲಿ ಅಕ್ರಮ ಆಗಿದೆ. ಈ ವಿಷಯ ಮುಂದಿಟ್ಟುಕೊಂಡು ಯತ್ನಾಳ ಪಾದಯಾತ್ರೆ ಮಾಡಲಿ . ವಾಲ್ಮೀಕಿ ಹಗರಣ ಒಂದು ಬಿಜೆಪಿ ಸರಕಾರದ ಅವಧಿಯಲ್ಲಿ 20 ಹಗರಣಗಳಿವೆ ಎಲ್ಲವೂ ಸ್ವಚ್ಛ ಮಾಡಬೇಕು ಎನ್ನುವ ಯತ್ನಾಳ ಈ ವಿಷಯಗಳ ನೇತೃತ್ವದಲ್ಲಿ ಹೋರಾಟ ಮಾಡಲಿ .

-ಎಂ.ಬಿ.ಪಾಟೀಲ. ಕೈಗಾರಿಕಾ ಸಚಿವ

ಡಿಕೆಶಿ ರಾಜೀನಾಮೆಗೆ ಕುರುಬೂರು ಆಗ್ರಹ

ಮೈಸೂರು: ತುಂಗಭದ್ರಾ ಜಲಾಶಯದ ಗೇಟ್‌ನ ಚೈನ್ ಲಿಂಕ್ ಕಡಿತ ಸಂಬಂಧ ಉನ್ನತ ಮಟ್ಟದ ತನಿಖೆಯಾಗಬೇಕು. ಹೀಗಾಗಿ ನೀರಾವರಿ ಸಚಿವ ಡಿ.ಕೆ. ಶಿವಕುಮಾರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಲಿ ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕುರುಬೂರು ಶಾಂತಕುಮಾರ ಆಗ್ರಹಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾ ಡಿದ ಅವರು, ಕಳೆದ ಒಂದು ತಿಂಗ ಳಿಂದ ನಿರಂತರ ಮಳೆ. ಪ್ರವಾಹ ಬರುತ್ತಿದ್ದರು ಜಲಾಶಯಗಳ ಸುರಕ್ಷತೆ, ಪ್ರವಾಹ ಹಾನಿ ಬಗ್ಗೆ ಗಂಭೀರ ಚಿಂತನೆ ನಡೆಸದೆ ನಿರ್ಲಕ್ಷಿಸಿದ ನೀರಾವರಿ ಸಚಿವ ಡಿ.ಕೆ. ಶಿವಕುಮಾರ್ ಬೇಜವಾಬ್ದಾರಿತನ ಉತ್ತರ ಕರ್ನಾಟಕದ ನಾಲ್ಕೈದು ಜಿಲ್ಲೆಗಳ 22 ಲಕ್ಷ ಹೆಕ್ಟೇರ್‌ನಲ್ಲಿ ಭತ್ತ ಬೆಳೆಯುತ್ತಿದ್ದ ರೈತರ ಬದುಕು ನಾಶವಾಗಲು ಕಾರಣವಾಗಿದೆ ಎಂದು ದೂರಿದರು. ಕಳೆದ ಎರಡು ವರ್ಷಗಳಿಂದ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ 70 ವರ್ಷಗಳ ಹಳೆಯ ಗೇಟ್‌ಗಳನ್ನು ಬದಲಾಯಿಸಬೇಕು, ಈ ಬಗ್ಗೆ ನಿಗಾ ವಹಿಸುವಂತೆ ಒತ್ತಾಯ ಮಾಡಿದ್ದರೂ ನಿರ್ಲಕ್ಷ್ಯ ಮಾಡಿದ ನೀರಾವರಿ ಇಲಾಖೆ ಈ ಘಟನೆಗೆ ಕಾರಣವಾಗಿದೆ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಕೇಂದ್ರದಿಂದ 250 ಕೋಟಿ ಬಿಡುಗಡೆ ಭರವಸೆ: ಲಕ್ಷ್ಮೀ

ಮಾಂಟೆಸ್ಸರಿಗೆ ಕೇಂದ್ರ ಸರಕಾರ ಮೆಚ್ಚುಗೆ

ಶಿವಮೊಗ್ಗ: ಅಂಗನವಾಡಿಯನ್ನು ಮಾಂಟೆಸ್ಸರಿಯಾಗಿಸಿರುವ ರಾಜ್ಯ ಸರಕಾರದ ಕ್ರಮಕ್ಕೆ ಕ್ಕೆ ಕೇಂದ್ರ ಸರಕಾರ ಮೆಚ್ಚುಗೆ ವ್ಯಕ್ತಪಡಿಸಿದೆ. ಜೊತೆಗೆ 250 ಕೋಟಿ ರು. ಬಿಡುಗಡೆ ಮಾಡಲಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಂಗನವಾಡಿಯನ್ನು ಮಾಂಟೆಸ್ಸರಿಯನ್ನಾಗಿ ಮಾಡಲಾಗಿದೆ. ರಾಜ್ಯದಲ್ಲಿ ಮಹಿಳಾ-ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಶಿಕ್ಷಣ ಇಲಾಖೆ ಸೇರಿ ಅಂಗನವಾಡಿಯಲ್ಲಿ ಮಕ್ಕಳಿಗೆ ಮೂಲಸೌಕರ್ಯ ಇರಬೇಕು ಹಾಗೂ ಇಲ್ಲಿನ ಶಿಕ್ಷಣ ಗುಣಮಟ್ಟದ್ದಾಗಿರಬೇಕು ಎಂದು ಇದಕ್ಕೆ ಒಪ್ಪಿಗೆ ನೀಡಲಾಗಿದೆ. 17,800 ಅಂಗನವಾಡಿಗಳನ್ನು ಗುರುತಿಸಲಾಗುತ್ತಿದೆ. ಪ್ರತಿ ಅಂಗನವಾಡಿಯಲ್ಲಿ ಎರಡು ಕೊಠಡಿ, ಅಡುಗೆ ಮನೆ ಇರಬೇಕು. ಕಾಂಪೌಂಡ್ ಇರಬೇಕು. ಪ್ರಾಯೋಗಿಕವಾಗಿ ಬೆಂಗಳೂರಿನಲ್ಲಿ 250 ಮಾಂಟೆಸ್ಸರಿಗಳಿಗೆ ಚಾಲನೆ ನೀಡಿದ್ದೇವೆ. ಉಳಿದ ಕಡೆ ಆರಂಭಿಸಲು ಹಣಕಾಸು ಇಲಾಖೆಗೆ ಪ್ರಸ್ತಾವನೆ ಕಳುಹಿಸಿದ್ದೇವೆ ಎಂದು ಮಾಹಿತಿ ನೀಡಿದರು.

ಸಕ್ಷಮ ಅಂಗನವಾಡಿ ಮಾನ್ಯತೆ: ಕೇಂದ್ರ ಸರಕಾರ 17,800 ಅಂಗನವಾಡಿಗಳನ್ನು ಸಕ್ಷಮ ಅಂಗನವಾಡಿ ಎಂದು ಗುರುತಿಸಿದೆ. ಇವುಗಳಿಗೆ ಹಣ ಬಿಡುಗಡೆ ಮಾಡಲಾಗುತ್ತಿದೆ. ಈ ಯೋಜನೆಯನ್ನು ಕೇಂದ್ರವು ಒಪ್ಪಿಕೊಂಡಿದ್ದು, ಸಚಿವೆ ಅನ್ನಪೂರ್ಣ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದು ಸಚಿವೆ ಹೆಬ್ಬಾಳ್ಕರ್ ತಿಳಿಸಿದರು.

ಅಧಿಕಾರಿಗಳು ಹೊಣೆಯಲ್ಲ

ಮೊದಲ ಬಾರಿ ಭದ್ರೆಗೆ ಬಾಗಿನ ಅರ್ಪಿಸಿದ್ದಕ್ಕೆ ತುಂಬಾ ಖುಷಿಯಾಗುತ್ತಿದೆ. ಪಶ್ಚಿಮಘಟ್ಟದಲ್ಲಿ ಹೆಚ್ಚಾಗಿ ಮಳೆಯಾಗಿದೆ. ಇದರಿಂದ ಕೆರೆ, ಹಳ್ಳ, ನದಿಗಳು ತುಂಬಿ ಹರಿಯುತ್ತಿವೆ. ತುಂಗಭದ್ರಾ ಅಣೆಕಟ್ಟೆಯ ಗೇಟ್ ಸಮಸ್ಯೆಯಿಂದ ನದಿಗೆ ನೀರು ಹರಿದುಹೋಗುತ್ತಿದೆ. ಉಪಮುಖ್ಯಮಂತ್ರಿ ಮತ್ತು ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ಅವರು ತುಂಗಭದ್ರಾ ಅಣೆಕಟ್ಟೆಗೆ ಭೇಟಿನೀಡಿ ಪರಿಶೀಲಿಸಿದ್ದಾರೆ. ನೀರು ತಡೆಯಲು ಎಲ್ಲ ಪ್ರಯತ್ನ ನಡೆಸಲಾಗುತ್ತದೆ. ಇದಕ್ಕೆ ಅಧಿಕಾರಿಗಳ ಕರ್ತವ್ಯಲೋಪ ಕಾರಣ ಎಂದು ಹೇಳಲಾಗುತ್ತಿದೆ. ಆದರೆ ಎಲ್ಲದಕ್ಕೂ ಅಧಿಕಾರಿಗಳನ್ನು ಹೊಣೆಯನ್ನಾಗಿ ಮಾಡುತ್ತಿರುವುದು ಸರಿಯಲ್ಲ ಎಂದು ಹೆಬ್ಬಾಳ್ಕರ್ ತಿಳಿಸಿದರು.

ಹಲ್ಲೆ ಯತ್ನ ಆರೋಪ: ದೂರು ದಾಖಲು

ಧಾರವಾಡ: ಅಂಜುಮನ್ ಸಂಸ್ಥೆಯ ಅಧ್ಯಕ್ಷ ಇಸ್ಮಾಯಿಲ್ ತಮಟಗಾರ ಮೇಲೆ ಹಲ್ಲೆಗೆ ಯತ್ನಿಸಿದ ಗಂಭೀರ ಆರೋಪ ಕೇಳಿಬಂದಿದೆ. ಈ ಬಗ್ಗೆ ಕುಟುಂಬಸ್ಥರು ಇಲ್ಲಿನ ಶಹರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಅಪರಿಚಿತರ ಗುಂಪು ಇಸ್ಮಾಯಿಲ್ ತಮಟಗಾರ ಮನೆಗೆ ನುಗ್ಗಿ ಹಲ್ಲೆಗೆ ಯತ್ನಿಸಲಾಗಿದೆ ಎಂದು ಸಂಬಂಧಿಕರು ಆರೋಪಿಸಿದ್ದಾರೆ. ಅಂಜುಮನ್ ಸಂಸ್ಥೆಯ ಕಚೇರಿಯಲ್ಲಿಯೇ 10ಕ್ಕೂ ಹೆಚ್ಚು ಯುವಕರ ಗುಂಪು ಇಸ್ಮಾಯಿಲ್ ಮೇಲೆ ಹಲ್ಲೆಗೆ ಮುಂದಾಗಿತ್ತು. ಆದರೆ ಅಲ್ಲಿ ಅವರಿಲ್ಲದ ಕಾರಣ, ಮನೆಗೆ ನುಗ್ಗಿದಾಗ ಅಲ್ಲೂ ಇಲ್ಲದ ಕಾರಣ ಮನೆಯವರೊಂದಿಗೆ ಅಸಭ್ಯವಾಗಿ ವರ್ತಿಸಿದ್ದಾರೆ. ಇಸ್ಮಾಯಿಲ್‌ನ್ನು ಕೊಲ್ಲಲು ಬಂದಿದ್ದೇವೆ ಎಂದು ದುಷ್ಕರ್ಮಿಗಳು ಹೇಳಿದ್ದಾಗಿ ಮನೆಯವರು ತಿಳಿಸಿದ್ದಾರೆ. ಶಹರ ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಈ ಬಗ್ಗೆ ಇಸ್ಮಾಯಿಲ್ ಸಹೋದರ ಇಕ್ಬಾರ್ ಮಾತನಾಡಿ, ಅಣ್ಣನ ವಿರುದ್ಧ ಷಡ್ಯಂತ್ರ ಮಾಡುತ್ತಿದ್ದಾರೆ. ಈ ಬಗ್ಗೆ ನಮಗೆ ಗೊತ್ತಿದೆ. ನಮ್ಮಣ್ಣ ನಮ್ಮೊಂದಿಗೆ ಈ ಬಗ್ಗೆ ಹೇಳಿದ್ದಾನೆ. ಅಲ್ಲದೇ ಪತ್ರ ಕೂಡ ಬರೆದಿದ್ದಾನೆ. ಆದರೆ ಯಾರೂ ಕೂಡ ಗಂಭೀರವಾಗಿ ತೆಗೆದುಕೊಂಡಿಲ್ಲ. ನಮ್ಮ ಅಣ್ಣನಿಗೆ ಏನಾದರೂ ಆದರೆ ಯಾರು ಹೊಣೆ. ಹೀಗಾಗಿ ಇದರ ಬಗ್ಗೆ ತನಿಖೆಯಾಗಬೇಕು ಎಂದು ಒತ್ತಾಯಿಸಿದರು.

ವಿಶ್ವವಾಣಿ

ಸಂಪಾದಕೀಯ

ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಿ

ಈ ವರ್ಷ ಮುಂಗಾರು ಮಳೆ ನಿರಂತರವಾಗಿ ಸುರಿದ ಕಾರಣ ಬಹುತೇಕ ಎಲ್ಲ ಜಲಾಶಯಗಳೂ ಭರ್ತಿಯಾಗಿವೆ. ರಾಜ್ಯದ ಅತಿ ದೊಡ್ಡ ಜಲಾಶಯ ಎಂಬ ಹಿರಿಮೆಯ ತುಂಗಭದ್ರಾ ಜಲಾಶಯವೂ ತುಂಬಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಬಾಗಿನ ಅರ್ಪಣೆಗೆ ದಿನಾಂಕ ನಿಗದಿಯಾಗಿತ್ತು. ಕರ್ನಾಟಕ, ತೆಲಂಗಾಣ ಹಾಗೂ ಆಂಧ್ರಪ್ರದೇಶದ 10ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಸಂಭ್ರಮ ಮನೆ ಮಾಡಿತ್ತು. ಬಳ್ಳಾರಿ, ರಾಯಚೂರು, ಗಂಗಾವತಿ, ಸಿರುಗುಪ್ಪ, ಸಿಂಧನೂರು ಅನಂತಪುರ, ಕರ್ನೂಲು, ಮೆಹಬೂಬ್‌ನಗರ ಮುಂತಾದ ಎರಡೂ ರಾಜ್ಯಗಳ ಸುಮಾರು 18 ಲಕ್ಷ ಎಕರೆ ಜಮೀನಿನಲ್ಲಿ ಭತ್ತ, ಕಬ್ಬು, ಬಾಳೆ ಬೆಳೆಯುತ್ತಿದ್ದ ಲಕ್ಷಾಂತರ ರೈತರು ಈ ಬಾರಿ ಮೂರು ಬೆಳೆಗಳಿಗೆ ನೀರು ಸಿಗುವ ಖುಷಿಯಲ್ಲಿದ್ದರು. ಆದರೆ ಇದೀಗ ತುಂಗಭದ್ರಾ ಅಣೆಕಟ್ಟೆಯ 19ನೇ ಗೇಟ್ ಲಿಂಕ್ ಮುರಿದ ಸುದ್ದಿಯಿಂದ ಈ ಭಾಗದ ಜನರಿಗೆ ಬರಸಿಡಿಲು ಅಪ್ಪಳಿಸಿದಂತಾಗಿದೆ. ಕೆಆರ್‌ಎಸ್‌ಗಿಂತ ಸುಮಾರು ಎರಡೂವರೆ ಪಟ್ಟು ದೊಡ್ಡದಾದ ತುಂಗಭದ್ರಾ ಅಣೆಕಟ್ಟೆಯ ಒಟ್ಟು ನೀರು ಸಂಗ್ರಹ ಸಾಮರ್ಥ್ಯ ಸುಮಾರು 132 ಟಿಎಂಸಿ ಅಡಿ. ಈಗ ಸರಿ ಸುಮಾರು 30 ಅಡಿಗಳಷ್ಟು ಹೂಳು ತುಂಬಿರುವುದರಿಂದ ಗರಿಷ್ಠ ಸಾಮರ್ಥ್ಯ 105 ಅಡಿಗಳೆಂದು ಅಂದಾಜಿಸಲಾಗಿದೆ. 65 ಟಿಎಂಸಿ ಅಡಿ ನೀರು ಖಾಲಿಮಾಡಿದರೆ ಕುಡಿಯುವ ನೀರಿಗೂ ತತ್ವಾರ ಎದುರಾಗಬಹುದು. ಕಳೆದ ವರ್ಷ ಬರದ ನೆರಳಿನಲ್ಲಿ ನರಳಿದ ಭತ್ತದ ಕಣಜಗಳು ತುಂಗಭದ್ರಾ ನೀರಾವರಿ ನಿಗಮದ ಅಧಿಕಾರಿಗಳ ಅಸಡ್ಡೆ, ನಿರ್ಲಕ್ಷ್ಯದ ಕಾರಣದಿಂದ ಈ ವರ್ಷವೂ ವರ್ಷಪೂರ್ತಿ ನರಳಬೇಕಾಗಿದೆ. ಬೇಸಿಗೆಯಲ್ಲಿ ಜಲಾಶಯದ ಗೇಟುಗಳನ್ನು ಪರೀಕ್ಷಿಸಿ ಸುಸ್ಥಿತಿಯನ್ನು ಖಾತರಿಪಡಿಸಿಕೊಳ್ಳುವುದು ಅಧಿಕಾರಿಗಳ ಕೆಲಸ. ಆದರೆ ರಾಜಕೀಯ ನಾಯಕರ ಆತಿಥ್ಯಕ್ಕೆ ಆತುರ ತೋರುವ ಅಧಿಕಾರಿಗಳಿಗೆ ಈ ಬಗ್ಗೆ ಗಮನಹರಿಸಲು ಸಮಯ, ವ್ಯವಧಾನ ಇರಲಿಲ್ಲವೇನೋ ? ಈ ಹಿಂದೆಯೂ ಸಹ ಡ್ಯಾಂ ಎಡದಂಡೆ ಮೇಲ್ಮಟ್ಟದ ಕಾಲುವೆಯ ಗೇಟ್ ಮುರಿದು ಅಪಾರ ಪ್ರಮಾಣದ ನೀರು ನದಿಪಾತ್ರಕ್ಕೆ ಹರಿದು ಹೋಗಿತ್ತು. ಆಗಲೂ ಸಹ ಗೇಟ್ ದುರಸ್ತಿಗೆ ನೀರಾವರಿ ತಜ್ಞರ ತಂಡ ಹರಸಾಹಸ ಮಾಡಿದ್ದರು. ಈಗ ಮುಖ್ಯ ಕ್ರಸ್ಟ್‌ಗೇಟ್ ಚೈನ್ ಕಟ್ ಆಗಿರುವುದು ಆತಂಕದ ವಿಚಾರ. ಕ್ರಿಮಿನಲ್ ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ವಿರುದ್ಧ ಸರಕಾರ ಕ್ರಮಕೈಗೊಳ್ಳಬೇಕು. ರಾಜ್ಯದ ಎಲ್ಲ ಜಲಾಶಯಗಳ 70ಕ್ಕೂ ಹೆಚ್ಚು ಹಳೆಯ ಗೇಟು ಬದಲಿಸಲು ಕ್ರಮ ಕೈಗೊಳ್ಳಬೇಕು.

ಸೊಂಪಾದಕೀಯ

ಕುಂತಲ್ಲಿ ಕೂರಂಗಿಲ್ಲ

ಬೆಂಗಳೂರಿನ ಹೋಟೆಲ್‌ಗಳಲ್ಲಿ ಇನ್ನು ಮುಂದೆ ಹೊಸ ನಿಯಮ ಜಾರಿಗೆ ಬರಲಿದೆಯಂತೆ. ಹೋಟೆಲಿಗೆ ಊಟ, ತಿಂಡಿ ಕಾಫಿಗೆ ಅಂತ ಬರೋ ಗ್ರಾಹಕರನ್ನು ಬೇಗನೇ ಬೀಳ್ಕೊಡುವುದು ಇದರ ಉದ್ದೇಶ. ಹೋಟೆಲ್ ಅನ್ನೋದೇ ಒಂದು ದೊಡ್ಡ ಬ್ಯುಸಿನೆಸ್ ಆಗಿರುವಾಗ ಇತ್ತೀಚೆಗೆ ನಗರದ ಹೋಟೆಲ್‌ಗಳಲ್ಲಿ ಬ್ಯುಸಿನೆಸ್ ಮಾಡೋರ ಸಂಖ್ಯೆ ಜಾಸ್ತಿ ಆಗಿದೆಯಂತೆ. ಅಂದರೆ ಬೈಟು ಕಾಫಿ ಹೇಳಿ 2 ಗಂಟೆ ಕೂತು ಮಾತುಕತೆ ಮಾಡೋರು, ಊಟ-ತಿಂಡಿ ಮಾಡೋರು ನಂತರ ಎದ್ದು ಹೋಗದೆ ಗಂಟೆಗಟ್ಟಲೆ ಅಲ್ಲೇ ಕುಳಿತು ಪಟ್ಟಾಂಗ ಹೊಡೆಯುವುದನ್ನು ತಪ್ಪಿಸಲು ಈಗ ಬೆಂಗಳೂರಿನ ಹೋಟೆಲ್‌ಗಳಲ್ಲಿ, 'ಕಾಲಹರಣ ಮಾಡಬೇಡಿ, ಬೇರೆ ಗ್ರಾಹಕರಿಗೆ ಜಾಗ ಬಿಟ್ಟುಕೊಡಿ' ಅಂತ ಹೇಳುವ ಅಭಿಯಾನ ಶುರು ಆಗಿದೆ. ಆದರೆ ಅದನ್ನು ಬಾಯಿ ಬಿಟ್ಟು ಗ್ರಾಹಕರಿಗೆ ಹೇಳೋದು ಕಷ್ಟ. ಹಾಗಾಗಿ 'ನಿಮ್ಮ ನಂತರ ಮುಂದಿನವರಿಗೆ ಜಾಗ ಬಿಟ್ಟುಕೊಡಿ' ಅಂತ ಬೋರ್ಡ್ ಹಾಕುವ ಮೂಲಕ ಗ್ರಾಹಕರಿಗೆ ಅರಿವು ಮೂಡಿಸಲಿದ್ದಾರೆ ಹೋಟೆಲ್ ಮಾಲೀಕರು. ಪಾಪ, ಅವರು ತಾನೆ ಏನು ಮಾಡಿಯಾರು? ಮನೆಗೆ ಬರೋ ನೆಂಟರೇನೋ ಊಟ, ತಿಂಡಿ, ಸಿಹಿ ಊಟ, ಬಾಡೂಟ ಎಲ್ಲಾ ಆದರೂ ವಾಪಸ್ ತಮ್ಮ ಊರಿಗೆ ಹೋಗದೇ ಅಲ್ಲೇ ಝುಂಡಾ ಊರೋದನ್ನು ನಾವು ಕೇಳಿದ್ದೇವೆ, ನೋಡಿದ್ದೇವೆ. ಆದರೆ ತೀರಾ ಹೋಟೆಲ್ ಗ್ರಾಹಕರೂ ತಿಂದ ಮೇಲೂ ಎದ್ದು ಹೋಗದೇ ಇದ್ದರೆ, ತಿಂದ ಅನ್ನ ಅವರಿಗೆ ಜೀರ್ಣ ಆಗೋದು ಹೇಗೆ ಅನ್ನೋದು ಮಾಲೀಕರ ಕಾಳಜಿ. ಈ ಎದ್ದು ಹೋಗದ ಗ್ರಾಹಕರ ಕಾರಣದಿಂದಾಗಿ ತಮ್ಮ ವ್ಯವಹಾರ ಬಿದ್ದು ಹೋಗುತ್ತಿದೆ ಎನ್ನುವ ಮಾಲೀಕರು ಈಗ ಮುಲಾಜಿಲ್ಲದೆ ಬೋರ್ಡ್ ಹಾಕುವ ಮೂಲಕ ಮೆಸೇಜ್ ಅನ್ನು ಗ್ರಾಹಕರಿಗೆ ತಲುಪಿಸುತ್ತಿದ್ದಾರೆ. ಕೆಲವರಿಗೆ ಇಲ್ಲಿ ತಿಂಡಿ, ಕಾಫಿ ನೆಪ ಮಾತ್ರ. ಬಹುತೇಕರು ಇಲ್ಲಿಯೇ ಕೂತು, ರಿಯಲ್ ಎಸ್ಟೇಟ್, ಮದುವೆ ಮಾತುಕತೆ, ಬ್ಯುಸಿನೆಸ್, ರಾಜಕೀಯ ಮಾತಾಡೋದಷ್ಟೇ ಅಲ್ಲದೆ, ಒಂದ್ ಕಾಫಿ ಹೇಳಿ ಉದ್ಯೋಗದ ಸಂದರ್ಶನವನ್ನೂ ಮಾಡ್ತಾರೆ ಅನ್ನೋದು ಮಾಲೀಕರ ಅಳಲು. ದರ್ಶಿನಿ ಮಾಲೀಕರೇನೋ ಕುಳಿತುಕೊಳ್ಳಲು ಕುರ್ಚಿಯನ್ನೇ ಹಾಕದೆ ಈ ಸಮಸ್ಯೆಯಿಂದ ಸುಲಭವಾಗಿ ಪಾರಾಗುತ್ತಾರೆ. ಆದರೆ ಕುರ್ಚಿ, ಟೇಬಲ್ ಹಾಕಿರುವ ರೆಗ್ಯುಲರ್ ಹೋಟೆಲ್‌ಗಳಿಗೆ ಮಾತ್ರ ಕೆಲವು ರೆಗ್ಯುಲರ್ ಕಸ್ಟಮರ್‌ಗಳಿಂದ ಈ ಕಷ್ಟ ಎದುರಾಗಿದೆ. ಹಾಗಾಗಿ ಇವರಿಗೆ ಟೇಬಲ್ ಮ್ಯಾನರ್ಸ್ ಕಲಿಸದೆ ಬೇರೆ ದಾರಿ ಇಲ್ಲ ಪಾಪ.

ಸಂಪಾದಕರ ಸದ್ಯಶೋಧನೆ

ಯಾರು ಬೇವರ್ಸಿ?

'ಕೋರಾ'ದಲ್ಲಿ ಯಾರು, ಯಾವ ಪ್ರಶ್ನೆಯನ್ನಾದರೂ ಕೇಳಬಹುದು. ಅದಕ್ಕೆ ಉತ್ತರ ಗೊತ್ತಿರುವವರು ಉತ್ತರಿಸಬಹುದು. ಹೀಗಾಗಿ ಒಂದು ಪ್ರಶ್ನೆಗೆ ಹತ್ತಾರು ಮಂದಿ ಉತ್ತರಿಸುವುದರಿಂದ, ಆಸಕ್ತಿದಾಯಕ ಅಂಶಗಳು ಹೊರಬರುತ್ತವೆ. ಇತ್ತೀಚೆಗೆ 'ಕೋರಾ'ದಲ್ಲಿ ಬೇವರ್ಸಿ ಪದದ ಮೂಲ ಅರ್ಥ ಮತ್ತು ವ್ಯುತ್ಪತ್ತಿ ಬಗ್ಗೆ ತಿಳಿಸಿ ಎಂದು ಕೇಳಿದ್ದರು. ಅದಕ್ಕೆ ಭೌತಶಾಸ್ತ್ರ ಉಪನ್ಯಾಸಕರಾದ ಗುರುಬಸವೇಶ್ವರಸ್ವಾಮಿ ಜಿ.ಎಂ. ಎನ್ನುವವರು ಹೀಗೆ ಹೇಳಿದ್ದರು- ಬೇವಾರ್ಸಿ/ಬೇವರ್ಸಿ/ಬೇವರಸಿ ಎಂಬ ಬೈಗುಳವು ಪರ್ಷಿಯನ್/ಉರ್ದುವಿನ ಬೇ-ವಾರಿಸ್ ಎಂಬ ಪದದ ಕನ್ನಡ ರೂಪ. ಮೊಘಲ್ ದೊರೆಗಳ/ಸುಲ್ತಾನರ ಅಥವಾ ಟಿಪ್ಪುಸುಲ್ತಾನನ ಕಾಲದಲ್ಲಿ ನಮಗೆ ಪರಿಚಿತವಾದ ಪದ. ಬೇ-ವಾರಿಸ್ ಎಂದರೆ ಉತ್ತರಾಧಿಕಾರಿ-ರಹಿತ, ವಾರಸುದಾರರಿಲ್ಲದ ವ್ಯಕ್ತಿ ಎಂದು ತಿಳಿದುಕೊಳ್ಳಬೇಕು. ಹಿಂದೆ-ಮುಂದೆ ಗತಿಯಿಲ್ಲದ, ದಿಕ್ಕುದೆಸೆಯಿಲ್ಲದ, ಅನಾಥ, ಹೇಳುವವರು ಕೇಳುವವರು ಇಲ್ಲದ, ವ್ಯರ್ಥಜೀವನ ಹೊಂದಿದ ಎಂಬರ್ಥವೂ ಇದೆ. ನಮ್ಮ ಸಂಸ್ಕೃತಿಯಲ್ಲಿ 'ಅಪುತ್ರಸ್ಯ ಗತಿರ್ನಾಸ್ತಿ' ಎಂಬ ನಂಬಿಕೆಯಿದೆ. ಯಾವುದೇ ಒಬ್ಬ ಗೃಹಸ್ಥನು ತನ್ನ ವೃದ್ಧಾಪ್ಯದಲ್ಲಿ/ಅಸಹಾಯಕ ಪರಿಸ್ಥಿತಿಯಲ್ಲಿ ತನ್ನನ್ನು ನೋಡಿಕೊಳ್ಳಬಲ್ಲ ಮಗನನ್ನು ಅಥವಾ ಉತ್ತರಾಧಿಕಾರಿಯನ್ನು ಹೊಂದಿರಬೇಕು. ಇಲ್ಲವಾದಲ್ಲಿ ಅವರ ಬದುಕು ಮೂರಾಬಟ್ಟೆಯಾಗುತ್ತದೆ. ಅವನು ಅಥವಾ ಅವನ ಪೂರ್ವಿಕರು ಮಾಡಿಟ್ಟ ಆಸ್ತಿ ಮುಂತಾದ ವಸ್ತುಭೋಗಗಳನ್ನು ಉಳಿಸಿಕೊಂಡು, ಮುಂದುವರಿಸಿಕೊಂಡು ಹೋಗುವವರು ಇಲ್ಲವಾಗುತ್ತಾರೆ. ಅವನ ಸಂಪತ್ತೆಲ್ಲವೂ ರಾಜನ ಅಥವಾ ಕಂಡವರ ಪಾಲಾಗುತ್ತದೆ (ಹಿಂದೆ ವಾರಸುದಾರರಿಲ್ಲದ ವ್ಯಕ್ತಿಯ ಆಸ್ತಿಯನ್ನು ರಾಜನೇ ಸ್ವಾಧೀನಕ್ಕೆ ತಂದುಕೊಳ್ಳುವ ಕಾನೂನುಗಳಿದ್ದವು. ಬ್ರಿಟಿಷರು ದತ್ತುಮಕ್ಕಳಿಗೆ ಹಕ್ಕಿಲ್ಲವೆಂಬ ಕಾನೂನು ತಂದದ್ದು ನೆನಪಿರಬಹುದು). ಅದೇ ಮನುಷ್ಯನು ಸತ್ತಾಗ, ಅವನ ಆತ್ಮಕ್ಕೆ ಸೂಕ್ತವಾದ ಶ್ರಾದ್ಧ, ತಿಥಿ ಮುಂತಾದ ಪ್ರೇತಸಂಸ್ಕಾರಗಳನ್ನು ಮಾಡಿ, ಪರಲೋಕದಲ್ಲಿ ಆತ್ಮವು ಸರಿಯಾದ ಗತಿಯನ್ನು ಹೊಂದಿ ಸಂಸಾರ ಚಕ್ರದಲ್ಲಿ ಅನುವರ್ತಿತವಾಗುವಂತೆ ಮಾಡುವುದು ಬಹಳ ಮುಖ್ಯವಾದ ವಿಷಯ. ಈ ಎಲ್ಲ ಕಾರ್ಯಗಳನ್ನು ನೆರವೇರಿಸುವವನು ನಿಧನ ಹೊಂದಿದ ವ್ಯಕ್ತಿಯ ವಾರಸುದಾರ. ಹೀಗಾಗಿ ಇಂಥ ವಾರಸು ಹೊಂದಿರದ ಆತ್ಮಗಳು ಎಲ್ಲಿಯೂ ಸಲ್ಲದೇ, ಅಂತರಪಿಶಾಚಿಗಳಾಗಿ ಅಲೆಯುತ್ತಾ ಇರಬೇಕಾಗುತ್ತದೆ. ಇದೊಂದು ಗೊತ್ತುಗುರಿಯಿಲ್ಲದ ಅವಸ್ಥೆ. ಒಬ್ಬ ವ್ಯಕ್ತಿಯ ಬಾಳುವೆಯು, ಅವನು ಹಾಕಿಕೊಟ್ಟ ಪರಂಪರೆಯು ಅವನ ತರುವಾಯವೂ ಸಹ ಮುಂದುವರಿಯಬೇಕಾದ್ದು, ಅವನ ಜೀವನವು ಒಂದು ಕ್ರಮಕ್ಕೊಳಪಟ್ಟು ನಡೆಯುವುದು ಅವಶ್ಯಕವಾಗಿದೆ. ಇಂಥ ಕನಿಷ್ಠ ಸಾರ್ಥಕತೆಯನ್ನೂ ಕೂಡ ಹೊಂದಿರದವನೇ ಬೇವಾರ್ಸಿ ಎಂಬುದರ ಮೂಲಾರ್ಥ. ಆದರೆ ಈ ಬೈಗುಳವು ತಂದೆ-ತಾಯಿಯರಿಲ್ಲದ, ಹೇಳುವವರು ಕೇಳುವವರು ಇಲ್ಲದ, ದಾದಿಕರಿಲ್ಲದ ಒಬ್ಬ ಬೇಜವಾಬ್ದಾರಿಯುತ ಅಯೋಗ್ಯ ವ್ಯಕ್ತಿಗೆ ಸಹಾ ಅನ್ವಯವಾಗುತ್ತದೆ. ಈಗೀಗ ಈ ಬೈಗುಳವು ಯಾರ ಜೀವನವು ವ್ಯರ್ಥ ಎನಿಸುವುದೋ, ಯಾರು ಭೂಮಿಗೆ ಭಾರ ಎನಿಸುವನೋ, ಯಾವ ಮನುಷ್ಯನಿಂದ ಯಾರಿಗೂ ನಯಾಪೈಸೆ ಉಪಯೋಗವಿಲ್ಲವೋ, ಯಾರ ಜೀವನವು ಹಾಳಾಗಿ ಹೋಗಲಿರುವುದೋ ಅವನನ್ನೇ ಉದ್ದೇಶಿಸಿ ಬಳಕೆಯಾಗುತ್ತಲಿದೆ. ಈಚೀಚೆಗಂತೂ ಸುಮ್ಮನೆ ಸಲುಗೆಗೆ, ಯಾವ ಉದ್ದೇಶವೂ ಇಲ್ಲದೆ, ಎಲ್ಲ ಸಂದರ್ಭದಲ್ಲಿಯೂ ಅಯ್ಯೋ ಬೇವರ್ಸಿ! ಎಂದು ಬೈಯುವುದುಂಟು. ಅನೇಕರು ಬೇವರ್ಸಿ ಪದದ ಸರಿಯಾದ ಅರ್ಥ ಗೊತ್ತಿಲ್ಲದೇ ಬೈಯುವುದನ್ನು ಕೇಳಿರಬಹುದು. ಏನೋ ಬೈಯಬೇಕು, ಅದರ ಸರಿಯಾದ ಅರ್ಥ ಗೊತ್ತಿರಲೇಬೇಕೆಂದಿಲ್ಲ ಎನ್ನುವವರು ಬೇವರ್ಸಿ ಪದವನ್ನು ಬಳಸುವುದುಂಟು. ಇತ್ತೀಚೆಗೆ ರಾಜಕಾರಣಿಯೊಬ್ಬರು, 'ರಾಜಕಾರಣದಲ್ಲಿ ಬೇವರ್ಸಿಗಳೇ ತುಂಬಿಹೋಗಿದ್ದಾರೆ' ಎಂದು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು. ಅವರಿಗೆ ಬೇವರ್ಸಿ ಪದದ ಸರಿಯಾದ ಅರ್ಥ ಗೊತ್ತಿಲ್ಲ ಎಂಬುದು ಸ್ಪಷ್ಟ.

ಸಿದ್ದು ಈಗ ಔಟ್ ಆಫ್ ಡೇಂಜರ್?

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಕಳೆದ ವಾರ ದಿಲ್ಲಿಗೆ ಹೋದ ರಾಜ್ಯ ಕಾಂಗ್ರೆಸ್‌ನ ಹಿರಿಯ ನಾಯಕರೊಬ್ಬರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ್ದಾರೆ. ಈ ಸಂದರ್ಭದಲ್ಲಿ ಕರ್ನಾಟಕದ ಬೆಳವಣಿಗೆಗಳ ಬಗ್ಗೆ ಅವರು ಆತಂಕ ವ್ಯಕ್ತಪಡಿಸಿದರಂತೆ. 'ಮುಡಾ ಹಗರಣದ ಹಿನ್ನೆಲೆಯಲ್ಲಿ ರಾಜ್ಯಪಾಲರು ಸಿಎಂ ಸಿದ್ದರಾಮಯ್ಯ ಅವರಿಗೆ ಷೋಕಾಸ್ ನೋಟಿಸ್ ಕೊಟ್ಟರಲ್ಲ? ಈ ಬೆಳವಣಿಗೆ ಇನ್ನಷ್ಟು ಮುಂದಕ್ಕೆ ಹೋಗಿ ಸಿದ್ದರಾಮಯ್ಯ ಅವರು ರಾಜೀನಾಮೆ ಕೊಡುವ ಸನ್ನಿವೇಶ ಸೃಷ್ಟಿಯಾದರೆ ಏನು ಗತಿ?' ಅಂತ ಅವರು ಕೇಳಿದಾಗ, 'ಇಲ್ಲ, ಹಾಗಾಗುತ್ತದೆ ಅನ್ನಿಸುವುದಿಲ್ಲ. ಸಿದ್ದರಾಮಯ್ಯ ಅವರು ರಾಜೀನಾಮೆ ಕೊಡುವ ಸನ್ನಿವೇಶ ಉದ್ಭವವಾಗುವುದಿಲ್ಲ' ಎಂದರಂತೆ ಮಲ್ಲಿಕಾರ್ಜುನ ಖರ್ಗೆ.

ಆದರೂ ಪಟ್ಟು ಬಿಡದ ಈ ನಾಯಕರು, 'ಸಿದ್ದರಾಮಯ್ಯ ಅವರು ರಾಜೀನಾಮೆ ಕೊಡುವ ಸನ್ನಿವೇಶ ಸೃಷ್ಟಿಯಾಗದಿದ್ದರೆ ಸರಿ, ಆದರೆ ನಮ್ಮ ಚಿಂತೆ ಎಂದರೆ ಸಿದ್ದರಾಮಯ್ಯ ರಾಜೀನಾಮೆ ಕೊಡುವುದು ಅನಿವಾರ್ಯವಾದರೆ ಮುಂದೇನು ಅನ್ನುವುದು. ಈಗಿರುವ ಮಾಹಿತಿಯ ಪ್ರಕಾರ, ಮುಖ್ಯಮಂತ್ರಿ ಹುದ್ದೆಯಿಂದ ಸಿದ್ದರಾಮಯ್ಯ ಕೆಳಗಿಳಿದರೆ ನಾವೇ ಸಿಎಂ ಆಗಬೇಕು ಅಂತ ಕರ್ನಾಟಕದ ನಾಲ್ಕೈದು ಮಂದಿ ನಾಯಕರು ಬಯಸುತ್ತಿದ್ದಾರೆ. ಆದರೆ ಪಕ್ಷದ ಬಹುತೇಕರು, ಅಂಥ ಪ್ರಸಂಗ ಉದ್ಭವಿಸಿದರೆ ನೀವೇ ಮುಖ್ಯಮಂತ್ರಿ ಪಟ್ಟಕ್ಕೆ ಬರಬೇಕು ಎಂದು ಬಯಸುತ್ತಿದ್ದಾರೆ. ಇದಕ್ಕೆ ಕಾರಣವೂ ಇದೆ. ಮೊದಲನೆಯದಾಗಿ ನೀವು ಅತ್ಯಂತ ಹಿರಿಯ ನಾಯಕರು. ಹೀಗಾಗಿ ನಿಮ್ಮ ನಾಯಕತ್ವವನ್ನು ಎಲ್ಲರೂ ಒಪ್ಪುತ್ತಾರೆ. ಎರಡನೆಯದಾಗಿ, ದಕ್ಷ ಆಡಳಿತಗಾರರು. ಇದೇ ರೀತಿ ನೀವು ಮುಖ್ಯಮಂತ್ರಿಯಾದರೆ ವಾಮಮಾರ್ಗದಿಂದ ನಿಮ್ಮನ್ನಿಳಿಸಲು ಬಿಜೆಪಿ ವರಿಷ್ಠರು ಬಯಸುವುದಿಲ್ಲ. ಹೀಗಾಗಿ ಸಿದ್ದರಾಮಯ್ಯನವರು ಇಳಿಯುವುದು ಅನಿವಾರ್ಯವಾದರೆ ನೀವು ಕರ್ನಾಟಕಕ್ಕೆ ಬರಲು ಸಜ್ಜಾಗಿ' ಅಂತ ಹೇಳಿದ್ದಾರೆ. ಆದರೆ ತಮ್ಮ ಮಾತಿಗೆ ಖರ್ಗೆಯವರು ಆಸಕ್ತಿ ತೋರದೆ ಹೋದಾಗ, 'ಸರ್, ಒಂದು ವೇಳೆ ಅಂಥ ಸನ್ನಿವೇಶ ಉದ್ಭವವಾದರೆ ನೀವು ಕರ್ನಾಟಕಕ್ಕೆ ಬನ್ನಿ. ಇಲ್ಲ ಅಂದರೆ ನನಗೆ ಒಂದು ಅವಕಾಶ ಕೊಡಿಸಲು ಯತ್ನಿಸಿ. ನಾನು ದಶಕಗಳ ಕಾಲದಿಂದ ರಾಜಕಾರಣ ಮಾಡಿದ್ದೇನೆ.ದೊಡ್ಡ ದೊಡ್ಡ ಜವಾಬ್ದಾರಿಗಳನ್ನು ನಿರ್ವಹಿಸಿದ್ದೇನೆ. ಇದು ಕೊನೆಯ ಅವಕಾಶ. ಹೀಗಾಗಿ ಹೈಕಮಾಂಡ್ ಮಟ್ಟದಲ್ಲಿ ನನ್ನ ಹೆಸರಿಗೆ ಬಲ ತುಂಬಿ' ಅಂತ ಈ ನಾಯಕರು ಹೇಳಿ ಬಂದರಂತೆ.

ಸಿದ್ದು ಅಪಾಯದಿಂದ ಪಾರಾದರಾ?

ಈ ಮಧ್ಯೆ ರಾಜ್ಯಪಾಲರ ಷೋಕಾಸ್ ನೋಟಿಸ್ ಪ್ರಕರಣದ ನಂತರ ಸಿಎಂ ಸಿದ್ದರಾಮಯ್ಯ ಸುತ್ತ ಆವರಿಸಿದ್ದ ಆತಂಕದ ಕಾರ್ಮೋಡ ಮೆಲ್ಲಗೆ ಕರಗುತ್ತಿದೆ. ಇದಕ್ಕೆ ರಾಜ್ಯಪಾಲರ ವೇಗ ತಗ್ಗಿದ್ದು ಒಂದು ಕಾರಣವಾದರೆ, ರಾಜ್ಯಪಾಲರ ಕ್ರಮದ ವಿರುದ್ಧ ಹೋರಾಡಲು ಸಿದ್ದರಾಮಯ್ಯ ಅವರಿಗೆ ಸಿಗುತ್ತಿರುವ ಅಸ್ತ್ರಗಳು ಮತ್ತೊಂದು ಕಾರಣ. ಅಂದ ಹಾಗೆ, ಈ ಹಿಂದೆ ಎಚ್.ಡಿ.ಕುಮಾರಸ್ವಾಮಿ, ನಿರಾಣಿ ಮತ್ತು ಜೊಲ್ಲೆ ವಿರುದ್ಧದ ವಿಚಾರಣೆಗೆ ಅನುಮತಿ ನೀಡಲು ಕೋರಿ ಸಲ್ಲಿಕೆಯಾಗಿದ್ದ ಮನವಿಗಳು ರಾಜಭವನದಲ್ಲಿ ಕೊಳೆಯುತ್ತಿವೆ. ಆದರೆ ಜೂನ್ 26ರಂದು ಮಂಡನೆಯಾದ ಟಿ.ಜೆ.ಅಬ್ರಹಾಂ ದೂರಿಗೆ ಪ್ರತಿಯಾಗಿ ಮರುದಿನವೇ ಸಿದ್ದರಾಮಯ್ಯ ಅವರಿಗೆ ಷೋಕಾಸ್ ನೋಟಿಸ್ ಜಾರಿಯಾಗುತ್ತದೆ. ಇದರರ್ಥ ಏನು?

ಒಂದು ವೇಳೆ ರಾಜ್ಯಪಾಲರು ವಿಚಾರಣೆಗೆ ಅನುಮತಿ ನೀಡಿದರೆ ಈ ಅಂಶವನ್ನೇ ಹಿಡಿದುಕೊಂಡು ನ್ಯಾಯಾಲಯದ ಮೆಟ್ಟಿಲೇರಬಹುದು ಮತ್ತು ಸಿಎಂ ವಿರುದ್ಧದ ವಿಚಾರಣೆಗೆ ಅನುಮತಿ ನೀಡಿದ ರಾಜ್ಯಪಾಲರ ಕ್ರಮಕ್ಕೆ ತಡೆಯಾಜ್ಞೆ ಪಡೆಯಬಹುದು ಎಂಬುದು ಸಿದ್ದರಾಮಯ್ಯ ಆಪ್ತರ ವಿಶ್ವಾಸ. ಇದೇ ರೀತಿ, ಇಂಥ ಪ್ರಕರಣಗಳಲ್ಲಿ ಪತಿ-ಪತ್ನಿಯನ್ನು ಪ್ರತ್ಯೇಕವಾಗಿ ಪರಿಗಣಿಸಬೇಕು ಅಂತ ನ್ಯಾಯಾಲಯ ದಶಕಗಳಷ್ಟು ಹಿಂದೆಯೇ ತೀರ್ಪು ನೀಡಿದೆ. ಮುಡಾ ಪ್ರಕರಣದಲ್ಲೂ ಅಷ್ಟೇ. ಇಲ್ಲಿ ಸಿದ್ದರಾಮಯ್ಯ ಅವರ ಪತ್ನಿಗೆ, ಅವರ ಸಹೋದರ ಕಾಣಿಕೆ ನೀಡಿದ ಭೂಮಿಯನ್ನು ಮುಡಾ ಸ್ವಾಧೀನಪಡಿಸಿಕೊಂಡಿದೆ ಮತ್ತು ಇದಕ್ಕೆ ಪ್ರತಿಯಾಗಿ ನಿವೇಶನಗಳನ್ನು ನೀಡಿದೆ. ಹೀಗೆ ಅವರಿಗೆ ನಿವೇಶನಗಳನ್ನು ನೀಡುವುದರಲ್ಲಿ ಸಿದ್ದರಾಮಯ್ಯ ಅವರ ಪಾತ್ರವೇನಿದೆ? ಅವರೇನಾದರೂ ಕಾನೂನುಬಾಹಿರವಾಗಿ ತಮ್ಮ ಪತ್ನಿಗೆ ನಿವೇಶನ ನೀಡಲು ಶಿಫಾರಸು ಮಾಡಿದ್ದಾರೆಯೇ? ಅಥವಾ ಅವರು ರಾಜ್ಯದ ಉಪಮುಖ್ಯಮಂತ್ರಿ, ಮುಖ್ಯಮಂತ್ರಿಯಾಗಿದ್ದಾಗ ಈ ನಿವೇಶನಗಳನ್ನು ಮುಡಾ ಮಂಜೂರು ಮಾಡಿದೆಯೇ? ಹೀಗಿದ್ದ ಮೇಲೆ ಈ ಪ್ರಕರಣಕ್ಕೂ ಸಿದ್ದರಾಮಯ್ಯ ಅವರಿಗೂ ಏನು ಸಂಬಂಧ ಅನ್ನುವಂಥ ಪ್ರಶ್ನೆಗಳನ್ನು ನ್ಯಾಯಾಲಯ ಕೇಳಿದರೆ ಉತ್ತರಿಸುವುದು ಕಷ್ಟ. ಇಲ್ಲ, ಇಲ್ಲ ಸಿದ್ದರಾಮಯ್ಯ ಪ್ರಭಾವಿಯಾಗಿದ್ದ ಕಾರಣಕ್ಕೇ ಅವರ ಪತ್ನಿಗೆ ನಿವೇಶನಗಳನ್ನು ನೀಡಲಾಗಿದೆ ಎಂದಾದರೆ ಸಿದ್ದರಾಮಯ್ಯ ಅವರು ಯಾರ ಮೇಲೆ, ಯಾವ ಸಂದರ್ಭದಲ್ಲಿ ಪ್ರಭಾವ ಬೀರಿದರು ಎಂಬುದನ್ನು ಸಾಬೀತು ಮಾಡಬೇಕಾಗುತ್ತದೆ.

ಆ ದೃಷ್ಟಿಯಿಂದ ರಾಜ್ಯಪಾಲರು ವಿಚಾರಣೆಗೆ ಅನುಮತಿ ನೀಡಿದರೂ ನ್ಯಾಯಾಲಯ ಅದನ್ನು ಒಪ್ಪುವುದು ಕಷ್ಟ. ಆದ್ದರಿಂದ ಸಿದ್ದರಾಮಯ್ಯ ಈಗ ಔಟ್ ಆಫ್ ಡೇಂಜರ್ ಎಂಬುದು ಅವರ ಆಪ್ತರ ಮಾತು. ಹೀಗಾಗಿಯೇ 15 ದಿನಗಳ ಹಿಂದೆ ವಿಪರೀತ ಆ್ಯಕ್ಟೀವ್ ಆಗಿದ್ದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಈಗ ಕೂಲ್ ಆಗಿದ್ದಾರೆ. ಅಷ್ಟೇ ಅಲ್ಲ, ವಿಚಾರಣೆಗೆ ಅನುಮತಿ ನೀಡಿದರೆ ಎದುರಾಗುವ ಸಾಧಕ-ಬಾಧಕಗಳ ಬಗ್ಗೆ ಎಚ್ಚರಿಕೆಯ ಹೆಜ್ಜೆ ಇಡುತ್ತಿದ್ದಾರೆ. ಸಿದ್ದು ಆಪ್ತರಿಗೆ ಬಂದಿರುವ ಮಾಹಿತಿಯ ಪ್ರಕಾರ, 15 ದಿನಗಳ ಹಿಂದೆ ಈ ವಿಷಯದಲ್ಲಿ ರಾಜ್ಯಪಾಲರ ಮೇಲಿದ್ದ ದಿಲ್ಲಿಯ ಒತ್ತಡ ಕಡಿಮೆಯಾಗಿದೆ.

ಸದ್ಯಕ್ಕಿಲ್ಲ ಸಂಪುಟ ಸರ್ಜರಿ

ಇನ್ನು ಸಿಎಂ ಸಿದ್ದರಾಮಯ್ಯ ಅವರ ಸಂಪುಟಕ್ಕೆ ಸಣ್ಣದೊಂದು ಸರ್ಜರಿ ಮಾಡಲು ಬಯಸಿದ್ದ ಕಾಂಗ್ರೆಸ್ ವರಿಷ್ಠರು ಈಗ ಆ ಪ್ರಪೋಸಲ್ಲಿನಿಂದ ಹಿಂದೆ ಸರಿದಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ವಿರೋಧ ವ್ಯಕ್ತಪಡಿಸಿದ್ದೇ ಇದಕ್ಕೆ ಮುಖ್ಯ ಕಾರಣ. ಅಂದ ಹಾಗೆ, ಮೊನ್ನೆ ಕರ್ನಾಟಕಕ್ಕೆ ಬಂದಿದ್ದ ಸುರ್ಜೇವಾಲ ಮತ್ತು ಕೆ.ಸಿ.ವೇಣುಗೋಪಾಲ್ ಅವರು ಸಿದ್ದರಾಮಯ್ಯ ಅವರ ಜತೆ ಮಾತನಾಡಿದ್ದಾರೆ. 'ಇತ್ತೀಚಿನ ದಿನಗಳಲ್ಲಿ ನಾಲ್ಕೈದು ಮಂದಿ ಸಚಿವರ ಮೇಲೆ ಪದೇ ಪದೆ ದೂರುಗಳು ಬರುತ್ತಿವೆ. ಹೀಗಾಗಿ ಇವರನ್ನು ಸಂಪುಟದಿಂದ ಕೈಬಿಟ್ಟು ಬೇರೆಯವರಿಗೆ ಅವಕಾಶ ಕೊಡೋಣ. ಹಾಗಾದಾಗ ಪಕ್ಷ ಭ್ರಷ್ಟರನ್ನು ಸಹಿಸಿಕೊಳ್ಳುವುದಿಲ್ಲ ಎಂಬ ಸಂದೇಶ ರವಾನೆಯಾಗುತ್ತದೆ ಮತ್ತು ಉಳಿದವರಿಗೂ ಇದು ಎಚ್ಚರಿಕೆಯಾಗುತ್ತದೆ' ಎಂಬುದು ಈ ನಾಯಕರ ಮಾತು. ಆದರೆ ಅವರಾಡಿದ ಮಾತುಗಳನ್ನು ಒಪ್ಪದ ಸಿದ್ದರಾಮಯ್ಯ 'ನೋ, ನೋ, ಅದೆಲ್ಲ ಸಾಧ್ಯವಿಲ್ಲ, ಭ್ರಷ್ಟಾಚಾರದ ಆರೋಪ ಬಂದಿದೆ ಅಂತ ಕೆಲ ಮಂತ್ರಿಗಳನ್ನು ಟಾರ್ಗೆಟ್ ಮಾಡಿದರೆ ಸಾಲದು. ಭ್ರಷ್ಟಾಚಾರದ ಆರೋಪ ಯಾರ್‍ಯಾರ ಮೇಲಿದೆ ಅನ್ನುವುದನ್ನು ಪರಿಶೀಲಿಸಿ ಮೇಲು ಹಂತದಲ್ಲಿರುವವರ ಮೇಲೆ ಮೊದಲು ಕ್ರಮ ತೆಗೆದುಕೊಳ್ಳಬೇಕು. ಅರ್ಥಾತ್, ಅವರನ್ನು ಸಂಪುಟದಿಂದ ಕೈಬಿಡಬೇಕು. ಹಾಗೆ ಮಾಡಲು ಸಾಧ್ಯವಾ ಅಂತ ಯೋಚಿಸಿ. ಎಸ್ ಅನ್ನುವುದಾದರೆ ಸಂಪುಟಕ್ಕೆ ಮೇಜರ್ ಸರ್ಜರಿಯನ್ನೇ ಮಾಡಬಹುದು' ಎಂದರು.

ಯಾವಾಗ ಸಿದ್ದರಾಮಯ್ಯ ಈ ಮಾತನಾಡಿದರೋ, ಆಗ ಪರಿಸ್ಥಿತಿ ಎಲ್ಲಿಗೆ ತಲುಪಬಹುದು? ಸಂಪುಟದಿಂದ ಗೇಟ್‌ಪಾಸ್ ಪಡೆಯುವ ಪ್ರಬಲ ಮಂತ್ರಿಗಳು ಯಾರು? ಅಂತ ಊಹಿಸಿದ ರಣದೀಪ್ ಸಿಂಗ್ ಸುರ್ಜೇವಾಲ ಮತ್ತು ಕೆ.ಸಿ.ವೇಣುಗೋಪಾಲ್ ಸುಮ್ಮನಾದರಂತೆ.

ಯಡಿಯೂರಪ್ಪ-ಜೋಷಿ ಫುಲ್ ಕ್ಲೋಸು

ಈ ಮಧ್ಯೆ, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಕೇಂದ್ರ ಸಚಿವ ಪ್ರಲ್ಹಾದ ಜೋಷಿ ನಡುವಣ ವೈಮನಸ್ಸು ಮಾಯವಾಗಿದೆ. ಇದಕ್ಕೆ ಕಾರಣವಾಗಿರುವುದು ಮೈಸೂರು ಚಲೋ ಪಾದಯಾತ್ರೆ. ವಾಲ್ಮೀಕಿ ಅಭಿವೃದ್ಧಿ ನಿಗಮ ಮತ್ತು ಮುಡಾದಲ್ಲಾದ ಹಗರಣಗಳ ಹಿನ್ನೆಲೆಯಲ್ಲಿ ಇಂಥದೊಂದು ಪಾದಯಾತ್ರೆ ಮಾಡಬೇಕು ಎಂಬ ಪ್ರಸ್ತಾಪ ಪಕ್ಷದ ವೇದಿಕೆಯಲ್ಲಿ ಮಂಡನೆಯಾಗಿದ್ದು ನಿಜವಾದರೂ, ಅಂತಿಮವಾಗಿ ಅದು ವಿಜಯೇಂದ್ರ ಅವರ ವರ್ಚಸ್ಸನ್ನು ವೈಭವೀಕರಿಸಲಿದೆ ಎಂಬ ಕಾರಣಕ್ಕಾಗಿ ಕೆಲ ನಾಯಕರು ವಿರೋಧ ವ್ಯಕ್ತಪಡಿಸಿದ್ದರು. ಅದರಲ್ಲೂ ಮಾಜಿ ಮುಖ್ಯಮಂತ್ರಿಯೊಬ್ಬರು, 'ಇಂಥ ಪಾದಯಾತ್ರೆಯಿಂದ ಯಾವ ಪ್ರಯೋಜನವೂ ಇಲ್ಲ. ಯಾಕೆಂದರೆ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಒಂದು ವರ್ಷ ಆಗಿದೆ ಅಷ್ಟೇ. ಇದೇ ರೀತಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಾದ ಹಗರಣವೇ ಇರಲಿ, ಮುಡಾ ಹಗರಣವೇ ಇರಲಿ. ಕೆದಕುತ್ತಾ ಹೋದರೆ ಮೂರೂ ಪಕ್ಷಗಳ ಅವಧಿಯಲ್ಲಿ ಲೋಪಗಳಾಗಿವೆ. ಹೀಗಾಗಿ ಈ ವಿಷಯಗಳನ್ನು ಕೆದಕುವುದರಲ್ಲಿ ಅರ್ಥವಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಇಂಥ ಹೋರಾಟದಿಂದ ರಾಜ್ಯದ ಅಹಿಂದ ವರ್ಗಗಳಿಗೆ ವ್ಯತಿರಿಕ್ತ ಸಂದೇಶ ರವಾನೆಯಾಗಬಹುದು. ಬಲಿಷ್ಠ ವರ್ಗಗಳು ಸೇರಿ ದುರ್ಬಲ ವರ್ಗಗಳ ನಾಯಕನನ್ನು ಇಳಿಸಲು ಹೊರಟಿವೆ ಎಂಬ ಸಂದೇಶ ರವಾನೆಯಾದರೆ ಅವು ಇನ್ನಷ್ಟು ಪರಿಣಾಮಕಾರಿಯಾಗಿ ಕಾಂಗ್ರೆಸ್ ಜತೆ ನಿಲ್ಲುತ್ತವೆ. ಹೀಗಾಗಿ ಇದಕ್ಕೆ ಅವಕಾಶ ಕೊಡುವ ಬದಲು ಇನ್ನಷ್ಟು ಕಾಲ ಕಾಯುವುದು ಒಳ್ಳೆಯದು' ಅಂತ ಜೆ.ಪಿ.ನಡ್ಡಾ ಅವರಿಗೇ ವಿವರಿಸಿದ್ದರಂತೆ.

ಈ ಮಧ್ಯೆ, ಪಾದಯಾತ್ರೆ ವಿಷಯದಲ್ಲಿ ಪ್ರೀತಂ ಗೌಡರಿಗೆ ಪ್ರಿಫರೆನ್ಸ್ ಕೊಟ್ಟಿದ್ದು ಸರಿಯಲ್ಲ ಅಂತ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ತಕರಾರು ಎತ್ತಿದರಲ್ಲ? ಈ ವಿಷಯವೂ ಸೇರಿ ಅಮಿತ್ ಶಾ ಅವರೇ ಮಧ್ಯೆ ಪ್ರವೇಶಿಸುವ ಸ್ಥಿತಿ ಬಂದಾಗ ಪಾದಯಾತ್ರೆಯ ಕಥೆ ಡೋಲಾಯಮಾನ ಸ್ಥಿತಿಯಲ್ಲಿತ್ತು. ಈ ಹಂತದಲ್ಲಿ ಮಧ್ಯೆ ಪ್ರವೇಶಿಸಿದ ಪ್ರಲ್ಹಾದ ಜೋಷಿ ಅವರು, ಯಾವ ಕಾರಣಕ್ಕಾಗಿ ಪಾದಯಾತ್ರೆ ನಡೆಯಬೇಕು ಅಂತ ವರಿಷ್ಠರಿಗೆ ವಿವರಿಸಿದ್ದಲ್ಲದೆ, 'ಈ ಪಾದಯಾತ್ರೆಯಿಂದ ವಿಜಯೇಂದ್ರ ಮಾತ್ರವಲ್ಲ, ನಿಮ್ಮ ಮಗ ನಿಖಿಲ್ ಅವರ ಲೀಡರ್‌ಷಿಪ್ಪಿಗೂ ಬಲ ಬರುತ್ತದೆ' ಅಂತ ಹೇಳಿ ಕುಮಾರಸ್ವಾಮಿ ಅವರ ಮನವೊಲಿಸಿದ್ದರು. ಯಾವಾಗ ಪ್ರಲ್ಹಾದ ಜೋಷಿಯವರ ತಂತ್ರಗಾರಿಕೆ ಕೆಲಸ ಮಾಡಿತೋ, ಮೈಸೂರು ಚಲೋ ಪಾದಯಾತ್ರೆ ಸಾಂಗವಾಗಿ ನಡೆದಿದೆ. ಅಷ್ಟೇ ಅಲ್ಲ, ಲೋಕಸಭಾ ಚುನಾವಣೆಯ ಹೊತ್ತಿನಲ್ಲಿ ಧಗಧಗ ಅಂತ ಹೊತ್ತಿ ಉರಿಯುತ್ತಿದ್ದ ಯಡಿಯೂರಪ್ಪ-ಜೋಷಿ ನಡುವಣ ಸಂಬಂಧ ವಿಶ್ವಾಸದ ಹಳಿಗೆ ಮರಳಿದೆ.

ಮೈಸೂರು ಚಲೋ ಯಾತ್ರೆಯ ಸಂದೇಶ

ಅಂದ ಹಾಗೆ, ಬಿಜೆಪಿ ಮಿತ್ರಕೂಟದ 'ಮೈಸೂರು ಚಲೋ' ಪಾದಯಾತ್ರೆಯ ಸಾಧನೆ ಏನು? ಅದು ರವಾನಿಸಿದ ಸಂದೇಶವೇನು?ಎಂಬ ಬಗ್ಗೆ ಕುತೂಹಲಕಾರಿ ಚರ್ಚೆಗಳು ಪ್ರಾರಂಭವಾಗಿವೆ. ಕೆಲ ನಾಯಕರ ಪ್ರಕಾರ, ಮೈಸೂರು ಚಲೋ ಪಾದಯಾತ್ರೆ ಪ್ರಾರಂಭವಾದಾಗ ಅದರ ಸಾಧನೆ ಯಾವ ಲೆವೆಲ್ಲಿಗೆ ಹೋಗಬಹುದು ಎಂಬ ಕುತೂಹಲವಿತ್ತು. ಅದರಲ್ಲೂ ಮುಖ್ಯವಾಗಿ ಪಾದಯಾತ್ರೆ ಗುರಿ ತಲುಪುವ ಹೊತ್ತಿಗೆ ರಾಜ್ಯಪಾಲರು ಸಿಎಂ ವಿರುದ್ಧದ ವಿಚಾರಣೆಗೆ ಅನುಮತಿ ಕೊಡುತ್ತಾರೆ ಎಂಬ ನಿರೀಕ್ಷೆ ಇತ್ತು. ಆದರೆ ಅಂಥದ್ದೇನೂ ಆಗಲಿಲ್ಲ. ಆದರೆ ಈ ಯಾತ್ರೆ ನಿಸ್ಸಂಶಯವಾಗಿ ರಾಜ್ಯದ ಜನತೆಗೆ ಎರಡು ಸಂದೇಶಗಳನ್ನು ರವಾನಿಸಿತು. ಮೊದಲನೆಯದಾಗಿ ಬಿಜೆಪಿ ಮಿತ್ರಕೂಟದ ನಾಯಕತ್ವಕ್ಕಾಗಿ ಕುಮಾರಸ್ವಾಮಿ-ವಿಜಯೇಂದ್ರ ಮಧ್ಯೆ ಫೈಟು ಶುರುವಾಗಿದೆ ಎಂಬುದು. ಎರಡನೆಯದಾಗಿ, ಒಕ್ಕಲಿಗ ಪಾಳೆಪಟ್ಟಿನ ನಾಯಕತ್ವಕ್ಕಾಗಿ ಕುಮಾರಸ್ವಾಮಿ -ಡಿಕೆಶಿ ಎಂಥ ರಣಭೀಕರ ಕದನಕ್ಕೂ ತಯಾರಾಗಿ ನಿಂತಿದ್ದಾರೆ ಎಂಬುದು. ಇನ್ನು ಇಂಥ ಸಂದೇಶಗಳ ಹೊರತಾಗಿ ಜನರಿಗೆ ಥ್ರಿಲ್ಲರ್ ತರಹ ಕಾಣುತ್ತಿರುವುದು ಕಾಂಗ್ರೆಸ್ ಮತ್ತು ಮಿತ್ರಕೂಟದ ನಾಯಕರ ಆರೋಪ-ಪ್ರತ್ಯಾರೋಪ. ಅವರ ಈ ಆರೋಪ-ಪ್ರತ್ಯಾರೋಪಗಳು ಯಾವ ಯಾವ ಹಗರಣಗಳಲ್ಲಿ ಯಾರ್‍ಯಾರು ಭಾಗಿಯಾಗಿದ್ದಾರೆ?ಎಷ್ಟೆಷ್ಟು ಕಾಸು ಒಟ್ಟಿದ್ದಾರೆ ಎಂಬುದನ್ನು ಧ್ವನಿಸುತ್ತಿರುವುದರಿಂದ ತುಂಬಾ ಜನ ಬೆಕ್ಕಸ ಬೆರಗಾಗಿರುವುದು ನಿಜ.

ನಳಂದಾ ವಿಧ್ವಂಸಕ ಭಕ್ತಿಯಾರ್ ಖಿಲ್ಜಿ ಏನಾದ?



ಇತಿಹಾಸ

ಶಶಿಕುಮಾರ್ ಕೆ.
vveditoped@gmail.com

ಪ್ರಧಾನಿ ನರೇಂದ್ರ ಮೋದಿಯವರು ಇತ್ತೀಚೆಗೆ ನಳಂದಾ ವಿಶ್ವವಿದ್ಯಾಲಯವನ್ನು ಪುನರಾರಂಭಿಸಿದರು. ಕ್ರೂರ ಹತ್ಯಾಕಾಂಡ ಮತ್ತು ವಿಧ್ವಂಸಕ ಕೃತ್ಯದ ಕಹಿನೆನಪು, ಅವಮಾನಗಳನ್ನು 800 ವರ್ಷಗಳ ಕಾಲ ತನ್ನ ಭುಜದ ಮೇಲೆ ಹೊತ್ತಿದ್ದ ನಳಂದಾ ವಿಶ್ವವಿದ್ಯಾಲಯದ ಭಗ್ನಾವಶೇಷಗಳು, ಮಣ್ಣಿನ ಗೋಡೆಗಳು ನಮ್ಮಲ್ಲಿ ವಿಷಾದ ಭಾವವನ್ನು ತುಂಬಿದ್ದುಂಟು. ಆ ಪ್ರಾಂತ್ಯದಲ್ಲಿ ಪುನಃ ಪ್ರಾಣವಾಯು ಹರಿಯುವಂತೆ ಮಾಡಿ, ಹೊಸದಾಗಿ ನಳಂದಾ ವಿಶ್ವವಿದ್ಯಾಲಯವನ್ನು ಆರಂಭಿಸಲಾಗಿದೆ. ಈ ವಿಶ್ವವಿದ್ಯಾಲಯವು ನಾಶಗೊಂಡಿದ್ದು ಭಾರತದ ಅತ್ಯಂತ ಕರಾಳ ಅಧ್ಯಾಯಗಳಲ್ಲೊಂದು. ಚರಿತ್ರೆಕಾರರ ಪ್ರಕಾರ, ಬರೋಬ್ಬರಿ 90 ಲಕ್ಷ ಪುಸ್ತಕಗಳು ಅಥವಾ ತಾಳಪತ್ರ ಗ್ರಂಥಗಳಿಗೆ ಭಕ್ತಿಯಾರ್ ಖಿಲ್ಜಿಯ ಸೈನ್ಯವು ಬೆಂಕಿಯಿಟ್ಟಾಗ, ಆ ಗ್ರಂಥಾಲಯವು ಮೂರು ತಿಂಗಳವರೆಗೆ ಹೊತ್ತಿ ಉರಿದಿತ್ತಂತೆ. ದುರದೃಷ್ಟಕರ ಸಂಗತಿಯೆಂದರೆ ನಮ್ಮ ದೇಶದಲ್ಲಿ ಕೆಲವರಿಗೆ ಗುಲಾಮಿ ಮನಸ್ಥಿತಿ ಇನ್ನೂ ಇದೆ, ನಳಂದಾದಿಂದ ಸ್ವಲ್ಪ ದೂರದಲ್ಲಿರುವ ರೈಲು ನಿಲ್ದಾಣಕ್ಕೆ 'ಭಕ್ತಿಯಾರ್ ಗಂಜ್' ಎಂಬ ಹೆಸರಿಟ್ಟಿರುವುದೇ ಈ ಮಾತಿಗೆ ಸಾಕ್ಷಿ!

ಚರಿತ್ರೆಯಲ್ಲಿ ನಮಗೆ ತಿಳಿಯದ ಕೆಲವು ವಿಚಾರಗಳಿವೆ. ಭಕ್ತಿಯಾರ್ ಖಿಲ್ಜಿಯು ನಳಂದಾ ವಿಶ್ವವಿದ್ಯಾಲಯವನ್ನು ನಾಶಗೊಳಿಸಿ ಅಲ್ಲಿ ಹತ್ಯಾಕಾಂಡ ನಡೆಸಿದ ನಂತರ 1204ರಲ್ಲಿ ನದಿಯಾ ಪ್ರದೇಶವನ್ನು ನಾಶಗೊಳಿಸಿದನು (ಇದು ನಂತರದ ಕಾಲದಲ್ಲಿ ಚೈತನ್ಯ ಮಹಾಪ್ರಭುಗಳಿಗೆ ಜನ್ಮನೀಡಿದ ಸ್ಥಳವಾಗಿದೆ). ನಂತರ ಅಲ್ಲಿನ ಮೇಚ್ ವಂಶಕ್ಕೆ ಸೇರಿದ ರಾಜನನ್ನು ಇಸ್ಲಾಂಗೆ ಮತಾಂತರಗೊಳಿಸಿ, ಆತನ ಹೆಸರನ್ನು 'ಅಲಿ' ಎಂದು ಬದಲಾಯಿಸಿದನು. ಈತನ ನೆರವಿನೊಂದಿಗೆ ಭಕ್ತಿಯಾರ್ ಖಿಲ್ಜಿ ಅಸ್ಸಾಂ ಅನ್ನು ಪ್ರವೇಶಿಸಿದನು. ಇವನು ಅಲಿಯ ಸೈನ್ಯವನ್ನು ಸೇರಿಸಿಕೊಂಡು ಅಸ್ಸಾಂಗೆ ಪ್ರವೇಶಿಸಿದ ನಂತರ ಅಲ್ಲಿ ಊಹಿಸದ ಪರಿಣಾಮ ಎದುರಾಯಿತು. ಅಸ್ಸಾಂನಲ್ಲಿ ಬೋಡೋ, ದಿಮಾಸ್, ಕೋಚ್, ರಾಜಭಂಕ್ಷಿ ಮೊದಲಾದ ಬುಡಕಟ್ಟು ಜನರು ಹಾಗೂ ಸ್ಥಳೀಯವಾಗಿ ಇದ್ದಂಥ ರಾಜರೆಲ್ಲರೂ ಸೇರಿ, ಮತ್ತೊಬ್ಬ ಪರಾಕ್ರಮಿ ರಾಜನ ನಾಯಕತ್ವದಲ್ಲಿ ಯುದ್ಧಕ್ಕೆ ಸನ್ನದ್ಧರಾದರು. ಅಲ್ಲದೆ, ರಾಣಾ ಪ್ರತಾಪ್ ಸಿಂಹನಿಗಿಂತಲೂ ಮುಂಚೆ ಈ ದೇಶದಲ್ಲಿ 'Scorched Earth Policy'-ಯನ್ನು ಪ್ರಯೋಗಿಸಿದರು (ಇದಕ್ಕೆ 'ಭೂದಹನದ ನೀತಿ/ತಂತ್ರ' ಎನ್ನಲಾಗುತ್ತದೆ. ಅಂದರೆ, ಆಕ್ರಮಣ ಮಾಡುತ್ತಿರುವ ಶತ್ರುಸೈನ್ಯಕ್ಕೆ ಯಾವ ಉಪಯುಕ್ತ ವಸ್ತುವೂ ಸಿಕ್ಕದಂತೆ ಎಲ್ಲವನ್ನೂ ಸುಟ್ಟುಬಿಟ್ಟುಹೋಗುವ ಯುದ್ಧನೀತಿ). ಅಂದರೆ, ಬುಡಕಟ್ಟು ಸೈನ್ಯವು ಭಕ್ತಿಯಾರ್ ಖಿಲ್ಜಿ ಬರುವ ಮಾರ್ಗದಲ್ಲಿ ಆತನ ಸೈನ್ಯಕ್ಕೆ ಕುಡಿಯಲು ನೀರು ಮತ್ತು ತಿನ್ನಲು ಆಹಾರ ಸಿಗದ ಹಾಗೆ ಗ್ರಾಮಗಳಿಗೆ ಬೆಂಕಿ ಹಚ್ಚುತ್ತಾ ಉತ್ತರ ಗುವಾಹಟಿಯವರೆಗೂ ಬಂತು. ಅಲ್ಲಿ ಬಹುದೊಡ್ಡ ಯುದ್ಧ ನಡೆದು ಬುಡಕಟ್ಟು ಸೈನಿಕರು ಭಕ್ತಿಯಾರ್ ಖಿಲ್ಜಿಯನ್ನು ಕೊಂದುಹಾಕಿದರು. ನಂತರ ಅವನ ಸೈನ್ಯದ ಒಬ್ಬ ಸೈನಿಕನನ್ನೂ ಉಳಿಸದೆ, ಅಲಿಯನ್ನೂ ಒಳಗೊಂಡಂತೆ ಎಲ್ಲರನ್ನೂ ಯಮಪುರಿಗೆ ಅಟ್ಟಿದರು. ಸೋತ ವಿಷಯವನ್ನು ಹೇಳಲು ಸಹ ಒಬ್ಬನೇ ಒಬ್ಬ ಸೈನಿಕನೂ ಭಕ್ತಿಯಾರ್ ಖಿಲ್ಜಿಯ ಸೈನ್ಯದಲ್ಲಿ ಉಳಿಯಲಿಲ್ಲ. ಅಂದರೆ, ನಳಂದಾ ವಿಶ್ವವಿದ್ಯಾಲಯವು ಧ್ವಂಸವಾದ 10 ವರ್ಷದ ಬಳಿಕ ಭಕ್ತಿಯಾರ್ ಖಿಲ್ಜಿಯ ಅಂತ್ಯವಾಯಿತು.

ಈ ಹೋರಾಟಕ್ಕೆ ಕಾರಣನಾದ ಪರಾಕ್ರಮಿ ರಾಜನ ಹೆಸರು ಮಹಾರಾಜ ಪೃಥು. ಈತನಿಗೆ 'ವಿಶ್ವಸುಂದರ ದೇವ' ಎಂಬ ಹೆಸರೂ ಇತ್ತು. ಇವನ ನಾಯಕತ್ವದಲ್ಲಿ ಮಿಕ್ಕ ರಾಜರು, ಸಾಮಂತರು, ಗಿರಿಜನರು ಎಲ್ಲರೂ ಸೇರಿ ಭಕ್ತಿಯಾರ್ ಖಿಲ್ಜಿಯ ಸೈನ್ಯವನ್ನು ಹೊಸಕಿಹಾಕಿದರು. ಈ ಮಹತ್ವದ ಘಟನಾವಳಿಯ ಕುರಿತಂತೆ ಚರಿತ್ರೆಯಲ್ಲಿ ಉಲ್ಲೇಖವಿರುವುದು ವಿರಳ. ಉತ್ತರ ಗುವಾಹಟಿಯಲ್ಲಿ ಲಭ್ಯವಿರುವ ಎರಡು ಸಾಲುಗಳ ಶಿಲಾಶಾಸನದಿಂದ ಮಾತ್ರ ಈ ವಿವರ ತಿಳಿಯುತ್ತದೆ. ಇದು ಸಂಸ್ಕೃತದಲ್ಲಿದ್ದು, 'ಕಾಮರೂಪ ದೇಶದೊಳಗೆ ಬಂದಂಥ ತುರುಷ್ಕ ಸೈನ್ಯವನ್ನು ಪೂರ್ತಿಯಾಗಿ ಸರ್ವನಾಶ ಮಾಡಲಾಯಿತು' ಎಂಬ ಅರ್ಥದ ಉಲ್ಲೇಖವನ್ನು ಅದು ಒಳಗೊಂಡಿದೆ. ಇಂಥ ಅದ್ಭುತವಾದ ಚರಿತ್ರೆ ಕೇವಲ ಎರಡು ಸಾಲುಗಳಿಗೆ ಸೀಮಿತಗೊಂಡಿರುವುದು ನಿಜಕ್ಕೂ ದುರದೃಷ್ಟಕರ.



ನಳಂದಾ ವಿಶ್ವವಿದ್ಯಾಲಯದ ಜ್ಞಾನಭಂಡಾರವು ದುರುಳರಿಂದ ನಾಶವಾಗಿದ್ದು ಎಲ್ಲರಿಗೂ ತಿಳಿದಿದೆ; ಆದರೆ ಅದಕ್ಕೆ ಕಾರಣನಾದ ದಾಳಿಕೋರ ಭಕ್ತಿಯಾರ್ ಖಿಲ್ಜಿಯನ್ನು ಕೊಂದುಹಾಕಿದ ನಮ್ಮ ವೀರಯೋಧರ ವಿಚಾರವು ದೇಶದ ಬಹುತೇಕರಿಗೆ ಗೊತ್ತಿಲ್ಲ ಎನ್ನಬೇಕು. ಅಸ್ಸಾಂನಲ್ಲಿ ಚರಿತ್ರೆ ಓದುವವರಿಗೆ ಸ್ವಲ್ಪ ಮಟ್ಟಿಗೆ ಈ ಕುರಿತು ಅರಿವಿರಬಹುದು. ಆದರೆ ಈ ಸಂಗತಿಯು ಮಿಕ್ಕೆಡೆಯ ಪಠ್ಯಪುಸ್ತಕಗಳಲ್ಲಿ ವ್ಯಾಪಕವಾಗಿ ಕಾಣಿಸಿಕೊಳ್ಳದಂತೆ, ಜನರಿಗೆ ತಿಳಿಯದಂತೆ ಹಾಗೂ ಭಕ್ತಿಯಾರ್ ಖಿಲ್ಜಿ ಏನಾದ ಎಂಬ ಪ್ರಶ್ನೆಯೇ ಬಾರದಂತೆ ಮಾಡಲಾಗಿದೆ. ಆದರೆ ಮನೋಷಿ ಸಿನ್ಹಾ ರಾವಲ್ ಎಂಬ ಯುವತಿಯು Saffron Swords ಎಂಬ ಸರಣಿ ಪುಸ್ತಕವನ್ನು ಬರೆದಿದ್ದು, ವಾಡಿಕೆಯ ಚರಿತ್ರೆಯ ಪುಸ್ತಕಗಳಲ್ಲಿ ಉಲ್ಲೇಖಿಸಲ್ಪಡದ, 'ಎಲೆಮರೆಯ ಕಾಯಿಯಂತೆ' ಸೆಣಸಿದ ವೀರಯೋಧರ ಮತ್ತು ಮಹಾವೀರರ ಗಾಥೆಗಳನ್ನು ಈ ಕೃತಿಯಲ್ಲಿ ಉಲ್ಲೇಖಿಸಲಾಗಿದೆ. ಇದರಲ್ಲಿನ ಎರಡನೆಯ ಗಾಥೆಯೇ ಮಹಾರಾಜ ಪೃಥುವಿಗೆ ಸಂಬಂಧಿಸಿದ್ದಾಗಿದೆ. ಇದೇ ರೀತಿಯಲ್ಲಿ, ರಕ್ತಿಮ್ ಪಾಥೋರ್ ಎಂಬ ಇತಿಹಾಸದ ಪ್ರಾಧ್ಯಾಪಕರೊಬ್ಬರು 'ಮಹಾರಾಜ ಪೃಥು' ಎಂಬ ಪುಸ್ತಕವನ್ನು ಬರೆದಿದ್ದಾರೆ. 2016ರಲ್ಲಿ, ಸರ್ಬಾನಂದ ಸೋನೋವಾಲ್ ಅವರು ಅಸ್ಸಾಂನ ಮುಖ್ಯಮಂತ್ರಿ ಆದ ನಂತರ, ಸರಕಾರದ ಆದೇಶದಂತೆ ಅವರು ಮಹಾರಾಜ ಪೃಥುವಿನ ಜೀವನಚರಿತ್ರೆಯನ್ನು ಹೀಗೆ ಪುಸ್ತಕ ರೂಪದಲ್ಲಿ ಹೊರತಂದಿದ್ದಾರೆ. ಈ ಎರಡು ಪುಸ್ತಕಗಳಲ್ಲಿ ಅಸ್ಸಾಂನ ವೀರಯೋಧರು ಭಕ್ತಿಯಾರ್ ಖಿಲ್ಜಿಯನ್ನು ಕೊಂದ ಘಟನೆ ಹಾಗೂ ಸೈನ್ಯದ ಘನವಿಜಯದ ಗಾಥೆಯನ್ನು ಯಥೋಚಿತವಾಗಿ ಉಲ್ಲೇಖಿಸಲಾಗಿದೆ ಎಂಬುದು ಗಮನಾರ್ಹ.

ಒಟ್ಟಾರೆ ಹೇಳುವುದಾದರೆ, ಭಕ್ತಿಯಾರ್ ಖಿಲ್ಜಿಯು ನಳಂದಾ ವಿಶ್ವವಿದ್ಯಾಲಯವನ್ನು ಧ್ವಂಸಗೊಳಿಸಿದ ಸಾಕಷ್ಟು ಕಾಲದ ನಂತರ, ಅಸ್ಸಾಂನ ಸೈನಿಕರು ಈ ದುರ್ಘಟನೆಗೆ ಪ್ರತೀಕಾರವನ್ನು ತೀರಿಸಿಕೊಂಡರು. ಈ ಘಟನೆಯನ್ನು ಎರಡೇ ಸಾಲಲ್ಲಿ ಅರುಹುವ ಶಿಲಾಶಾ ಸನವೊಂದಿದೆ ಎಂದು ಮೇಲೆ ಉಲ್ಲೇಖಿಸಿದೆಯಷ್ಟೇ. ಈ ಶಿಲಾಶಾಸನವನ್ನು ಕುರಿತು ಅಸ್ಸಾಂ ಜನರು ಬಹಳ ದಿನಗಳ ಕಾಲ 'ಕಾನಾಹಿ ಬರೋಹಿ ಭುವಾ ಶಿಲಾ ಲೇಕ್' ಎಂದು ಅಸ್ಸಾಮಿ ಭಾಷೆಯಲ್ಲಿ ಹೇಳುತ್ತಿದ್ದರು. ಅಂದರೆ ಶ್ರೀಕೃಷ್ಣನು ಆ ಬಂಡೆಯ ಮೇಲೆ ಕೂತು ಮೀನುಗಳನ್ನು ಹಿಡಿಯುತ್ತಿದ್ದನು ಎಂದು ಸ್ಥಳೀಯ ಜನರು ನಂಬುತ್ತಾರೆ. ಅಸ್ಸಾಂನಲ್ಲಿ ಊಟಕ್ಕೆ ಮೀನನ್ನು ಪ್ರಧಾನವಾಗಿ ಅಲ್ಲಿಯ ಜನರು ಬಳಸುವುದರಿಂದ, ಅಸ್ಸಾಮಿಗರು ಕೃಷ್ಣನ ಕೈಯಲ್ಲಿ ಮೀನು ಹಿಡಿಸಿದ್ದಾರೆ. ಈ ಶಿಲಾಶಾಸನವನ್ನು ಮುಂಬರುವ ಪೀಳಿಗೆಯು ಮರೆಯಬಾರದೆಂಬ ಉದ್ದೇಶದೊಂದಿಗೆ ಇಲ್ಲಿನ ಸ್ಥಳೀಯ ಜನರು ಅದನ್ನು ಕೃಷ್ಣನ ಕಥೆಯೊಂದಿಗೆ ಜೋಡಿಸಿ, ಕೃಷ್ಣನು ಇಲ್ಲಿ ಕೂತು ಮೀನು ಹಿಡಿದಿದ್ದರಿಂದ ಈ ಬಂಡೆ ಪೂಜನೀಯವಾದದ್ದು ಎಂದು ಹೇಳಿದರು. ಜಾಗರೂಕವಾಗಿ ಪರಿಶೀಲಿಸಿದಾಗ ಮಾತ್ರವೇ ಆ ಶಿಲಾಶಾಸನದಲ್ಲಿ ಈ ಸಾಲುಗಳು ಕಾಣಿಸುತ್ತವೆ. ನಳಂದಾ ವಿಶ್ವವಿದ್ಯಾಲಯವು ದುರುಳರಿಂದ ಧ್ವಂಸವಾಗಿದ್ದನ್ನು ನಾವು ನೆನಪಿಸಿಕೊಂಡಾಗಲೆಲ್ಲಾ, ಆ ದಾಳಿಗೆ ಪ್ರತೀಕಾರ ತೀರಿಸಿಕೊಂಡ ಮಹಾರಾಜ ಪೃಥುವನ್ನೂ ನಾವು ನೆನೆಯಬೇಕು.

(ಲೇಖಕರು ಹವ್ಯಾಸಿ ಬರಹಗಾರರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ತಿದ್ದುಪಡಿ ತರಬೇಕು

ಕಳೆದ 15 ದಿನಗಳಿಂದ ನಡೆಯುತ್ತಿರುವ ನಮ್ಮ ಜನಪ್ರತಿನಿಧಿಗಳ ಬೀದಿಕಾಳಗ, ಕೆಸರೆರಚಾಟ ಅತ್ಯಂತ ಹೇಯ ಮತ್ತು ವಿಷಾದನೀಯ. ತೆರಿಗೆದಾರರ/ಮತದಾರರ ಖರ್ಚಿನಲ್ಲಿ ಬೀದಿಯಲ್ಲಿ ಮೋಜು-ಮಸ್ತಿ, ಭಜನೆ, ಕುಣಿತ ಮಾಡುತ್ತಾ ರಸ್ತೆ ಪ್ರಯಾಣಿಕರಿಗೆ ಹಾಗೂ ಪರಿಸರಕ್ಕೆ ಉಪದ್ರವ ಒಡ್ಡಿದ ಇವರನ್ನು ಕೇಳುವವರಿಲ್ಲವೇ? ಸರಕಾರಿ ನೌಕರರು ಕೆಲಸಕ್ಕೆ ಅರ್ಧಗಂಟೆ ತಡವಾಗಿ ಬಂದರೂ ಆ ದಿನವನ್ನು ರಜವನ್ನಾಗಿ ಪರಿಗಣಿಸುವ ಅಥವಾ ಸಂಬಳ ಕಡಿತಗೊಳಿಸುವ ನಿಯಮ ರೂಪಿಸುವ ಇವರು, ಹೀಗೆ ವಾರಗಟ್ಟಲೆ ತಮ್ಮ ಕ್ಷೇತ್ರದಲ್ಲಾಗಲೀ ವಿಧಾನಸೌಧದಲ್ಲಾಗಲೀ ನಿಷ್ಠೆಯಿಂದ ಜನಸೇವೆ ಮಾಡದೆ, ಯಾವುದೇ ಕಡಿತವಿಲ್ಲದಂತೆ ಸಂಬಳ-ಸಾರಿಗೆ-ದೂರವಾಣಿ ಭತ್ಯೆಗಳನ್ನು ಪಡೆಯುವುದು ಸರಿಯೇ?

ಅದುಮಿಟ್ಟುಕೊಂಡಿದ್ದ ಒಬ್ಬರ ಜಾತಕವನ್ನು ಮತ್ತೊಬ್ಬರು ಜಾಲಾಡುತ್ತಾ ತಾವೆಲ್ಲರೂ ಅನಾಚಾರದಲ್ಲಿ ಒಂದೇ ದಾರಕ್ಕೆ ಪೋಣಿಸಿದ ಮಣಿಗಳೆಂಬುದನ್ನು ಖಾತ್ರಿಪಡಿಸಿದ್ದು ಬಿಟ್ಟರೆ, ಈ ಪಾದಯಾತ್ರೆಯಿಂದ ಬೇರೇನೂ ಸಾಧನೆ ಆಗಿಲ್ಲ. ಇವರೆಲ್ಲರಿಗೂ ಆತ್ಮಸಾಕ್ಷಿಯಿದ್ದಲ್ಲಿ, ಈ ಅವಧಿಯಲ್ಲಿನ ತಮ್ಮ ಸಂಭಾವನೆ ಮತ್ತು ವಿವಿಧ ಭತ್ಯೆಗಳನ್ನು ಯಾವುದೇ ಸಬೂಬು ನೀಡದೆ ಕಡಿತಗೊಳಿಸುವಂತೆ ಸೂಚಿಸಿ, ಸ್ವಲ್ಪ ಮಟ್ಟಿಗಾದರೂ ಘನತೆಯನ್ನು ಉಳಿಸಿಕೊಳ್ಳಲಿ. ಶಾಸಕರ ಯಾವುದೇ ಪ್ರತಿಭಟನೆ, ಚರ್ಚೆ ಸದನದ ಒಳಗಡೆ ನಡೆದರೆ ಮಾತ್ರವೇ ಅವರು ಭತ್ಯೆಗಳಿಗೆ ಅರ್ಹರೆಂಬ ತಿದ್ದುಪಡಿಯನ್ನು ತರುವುದು ಸೂಕ್ತವಲ್ಲವೇ?

- ಬೆಳ್ಳೆ ಚಂದ್ರಶೇಖರ ಶೆಟ್ಟಿ, ಬೆಂಗಳೂರು

ಬಿಟ್ಟಿ ಮನರಂಜನೆ

ಬಿಜೆಪಿ ಮತ್ತು ಜೆಡಿಎಸ್‌ನವರ 'ಮೈಸೂರು ಚಲೋ' ಪಾದಯಾತ್ರೆ, ಕಾಂಗ್ರೆಸ್‌ನವರ ಜನಾಂದೋಲನ ಯಾತ್ರೆ ಮುಗಿಯುತ್ತಿರುವಂತೆ ಮತ್ತು ಈ ವೇಳೆ ಹೊರಹೊಮ್ಮಿದ್ದ ಬೈಗುಳಗಳನ್ನು ಜನರು ಮರೆಯುತ್ತಿರುವಂತೆ, ಯತ್ನಾಳರ ಬೀದರ್-ಬಳ್ಳಾರಿ ಪಾದಯಾತ್ರೆ, ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ಸಿನವರ ನ್ಯಾಯಯಾತ್ರೆ ಮತ್ತು ಬಿಜೆಪಿಯವರ ತಿರಂಗಯಾತ್ರೆ ಇಷ್ಟರಲ್ಲೇ ರಸ್ತೆಗೆ ಇಳಿಯಲಿವೆ. ಈ ರಾಜಕೀಯ ನಾಯಕರು ಜನಸಾಮಾನ್ಯರ ಆಸೆ ಮತ್ತು ನಿರೀಕ್ಷೆಗಳಿಗೆ ಸ್ಪಂದಿಸದಿದ್ದರೂ, ಉಚಿತ ಮನರಂಜನೆಯನ್ನಂತೂ ನೀಡುತ್ತಿದ್ದಾರೆ. ಈ ಪಾದಯಾತ್ರೆಗಳ ಅಜೆಂಡಾವನ್ನು ಸೂಕ್ಷ್ಮವಾಗಿ ಗಮನಿಸಿದರೆ, ನಮ್ಮ ರಾಜಕೀಯ ಧುರೀಣರಿಗೆ ಸರಕಾರಗಳನ್ನು ಉರುಳಿಸುವುದು ಮತ್ತು ಉಳಿಸುವುದು ಮಾತ್ರವೇ ಆದ್ಯತೆಯ ವಿಷಯವಾಗಿದೆ ಎಂಬುದು ಇನ್ನೊಮ್ಮೆ ದೃಢಪಟ್ಟಿದೆ. ಹಣದುಬ್ಬರದ ಈ ದಿನಗಳಲ್ಲಿ ಜನರ ಬದುಕು ಹೈರಾಣಾಗಿರುವುದು ಇವರಿಗೆ ಕಾಣಿಸುತ್ತಿಲ್ಲ. ಈ ಪಾದಯಾತ್ರೆಯಲ್ಲಿ ಪಾಲ್ಗೊಂಡವರಲ್ಲಿ ಅದೆಷ್ಟು ಮಂದಿ ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಾದ ಅತಿವೃಷ್ಟಿ, ನೆರೆ ಮತ್ತು ಭೂಕುಸಿತದ ಸಂತ್ರಸ್ತರ ನೋವಿಗೆ ಸ್ಪಂದಿಸಿದ್ದಾರೆ?

- ರಮಾನಂದ ಎಸ್., ಬೆಂಗಳೂರು

ಮಾಹಿತಿಪೂರ್ಣ ಅಂಕಣ

ವಿಶ್ವವಾಣಿಯಲ್ಲಿ ಪ್ರಕಟವಾಗುತ್ತಿರುವ 'ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ' ಅಂಕಣವನ್ನು ನಿಯತವಾಗಿ ಓದುತ್ತಿರುವೆ. ಇದರಲ್ಲಿ ನಮ್ಮ ಸಾಂಪ್ರದಾಯಿಕ ಆಹಾರಗಳ ಬಗ್ಗೆ ಇರುವ ತಪ್ಪುಕಲ್ಪನೆಗಳನ್ನು ಹೋಗಲಾಡಿಸಿ ಸರಿಯಾದ ಮಾಹಿತಿ ನೀಡುತ್ತಿರುವುದು ನಿಜಕ್ಕೂ ಅಭಿನಂದನಾರ್ಹ. ಅಂತಾರಾಷ್ಟ್ರೀಯ ಕಂಪನಿಗಳು ತಮ್ಮ ಉತ್ಪನ್ನಗಳ ಮಾರಾಟವನ್ನು ಹೆಚ್ಚು ಮಾಡಲು, ಭಾರತದ ದೇಶೀಯ ಉತ್ಪನ್ನಗಳ ಬಗ್ಗೆ ಅಪಪ್ರಚಾರ ನಡೆಸಿದ್ದು ಮತ್ತು ಅದನ್ನು ಸಾಮಾನ್ಯ ಜನರೂ ನಂಬಿದ್ದು ಈಗ ಇತಿಹಾಸ. 'ತುಪ್ಪ ಹಾನಿಕರ, ಅದರ ಬದಲು ಡಾಲ್ಡಾ ಬಳಸಿ' ಎಂದು ಮಾಸಪತ್ರಿಕೆಯೊಂದರಲ್ಲಿ ಜಾಹೀರಾತು ಬರುತ್ತಿದ್ದುದನ್ನು ಕಂಡಿದ್ದೇವೆ! ಈಗ ಡಾಲ್ಡಾದಲ್ಲಿರುವ ಟ್ರಾನ್ಸ್‌ಫ್ಯಾಟ್ ಹಾನಿಕರವೆಂದು ಸಾಬೀತಾಗಿದೆಯಂತೆ. ಇನ್ನು ಅಂಕಣಕಾರ್ತಿಗೊಂದು ಪುಟ್ಟ ಸಲಹೆ. ಲೇಖನದ ಮಧ್ಯದಲ್ಲಿ ಬರುವ ಇಂಗ್ಲಿಷ್ ಪದ/ವಾಕ್ಯಗಳು ಓದುವ ಖುಷಿಯನ್ನು ಹಾಳುಮಾಡುತ್ತವೆ. ದಯವಿಟ್ಟು ಇಂಗ್ಲಿಷ್ ಬಳಕೆಯನ್ನು ಆದಷ್ಟು ಕಡಿಮೆ ಮಾಡಿ.

- ಶ್ರೀನಿವಾಸಮೂರ್ತಿ ಜಿ.ಆರ್., ಬೆಂಗಳೂರು

ಮುಚ್ಚಿಟ್ಟಿದ್ದು ಏಕೆ?

ಹಗರಣ ಎಂಬುದು ರಾಜಕೀಯದ ಮನೆಮಾತಾಗಿಬಿಟ್ಟಿದೆ. ಅಭಿವೃದ್ಧಿ ಕಾಮಗಾರಿ ಸಂಬಂಧಿತ ಅನುದಾನಿತ ಹಣದಲ್ಲಿ ರಾಜಕಾರಣಿಗಳು ಮತ್ತು ಅಧಿಕಾರಿಗಳ ಜೇಬಿಗೆ ಸಾಕಷ್ಟು ತುಂಬಿಸಬೇಕಾಗಿ ಬರುವುದರಿಂದ ಕಾಮಗಾರಿಗಳು ಕಳಪೆಯಾಗುತ್ತಿವೆ ಎಂದು ಜನಸಾಮಾನ್ಯರೇ ಮಾತಾಡಿಕೊಳ್ಳುವಂತಾಗಿದೆ. ವ್ಯವಸ್ಥೆಯಲ್ಲಿ ರಾರಾಜಿಸುತ್ತಿರುವ ಭ್ರಷ್ಟಾಚಾರದಿಂದಾಗಿ ರಸ್ತೆಗಳಲ್ಲಿ ಪ್ರಾಣಾಂತಿಕ ಗುಂಡಿಗಳು, ಪುಸ್ತಕಗಳ ದೀಪ ಬೆಳಗದೆ ಕಗ್ಗತ್ತಲಾಗಿರುವ ಗ್ರಂಥಾಲಯವೆಂಬ ಜ್ಞಾನದೇಗುಲಗಳು, ಮಕ್ಕಳ ತಲೆಮೇಲೆ ಸದಾ ಜಲಧಾರೆ ಹರಿಸುತ್ತಿರುವ ಮತ್ತು ಶೌಚಾಲಯವಿಲ್ಲದ ಶಾಲಾ ಕಟ್ಟಡಗಳು, ಆಸ್ಪತ್ರೆಯಲ್ಲಿ ಗಾಲಿಕುರ್ಚಿಯಿಲ್ಲದೆ ರೋಗಿಗಳನ್ನು ದರದರ ಎಳೆದುಕೊಂಡು ಹೋಗುತ್ತಿರುವ ಸಂಬಂಧಿಕರು ಇಂಥ ದೃಶ್ಯಗಳು ಮಾಮೂಲಿಯಾಗಿಬಿಟ್ಟಿವೆ. ಇದರ ಪರಮಾವಧಿ ಮಟ್ಟ ಎಂಬಂತೆ, ಪ್ರಾಮಾಣಿಕ ಅಧಿಕಾರಿಯೊಬ್ಬರ ಆತ್ಮಹತ್ಯೆಯು ವಾಲ್ಮೀಕಿ ನಿಗಮದ ಹಗರಣದ ನಗ್ನದರ್ಶನ ಮಾಡಿಸಿದೆ. ಅದೂ ಒಂದಲ್ಲ, ಎರಡಲ್ಲ, ನೂರಾ ಎಂಬತ್ತೇಳು ಕೋಟಿ ರುಪಾಯಿ! ಪರಿಶಿಷ್ಟ ಜನರ ಕಲ್ಯಾಣಕ್ಕಾಗಿ ಮೀಸಲಾಗಿಟ್ಟ ಸಾರ್ವಜನಿಕರ ತೆರಿಗೆ ಹಣವು ಕೆಲ ರಾಜಕಾರಣಿಗಳ ಮತ್ತು ಅವರ ಚೇಲಾಗಳ ಜೇಬು ಸೇರಿದ್ದು ಒಂದು ವಿಸ್ಮಯವೇ ಸರಿ!

ಜನಕಲ್ಯಾಣದ ಯೋಜನೆಗಳು ಮತ್ತು ಅಭಿವೃದ್ಧಿ ಕಾರ್ಯಗಳಿಗಾಗಿ ಮೀಸಲಿಟ್ಟ ಹಣ ಹೀಗೆ 'ಗುಳುಂ' ಆಗುವುದರಿಂದ ಜನರ ಬದುಕು ದುರ್ಭರವಾಗುತ್ತದೆ. ಯಾವುದೇ ಹಗರಣವು ತೆರಿಗೆ ಹಣವನ್ನು ದೋಚುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. ಇದನ್ನು ತಡೆಯುವಲ್ಲಿ ವಿರೋಧ ಪಕ್ಷವು ಮಹತ್ತರ ಪಾತ್ರವನ್ನು ವಹಿಸಬೇಕು; ಅದು ತಕ್ಷಣ ಕಾರ್ಯಪ್ರವೃತ್ತವಾಗಿದ್ದಿದ್ದರೆ ತೆರಿಗೆ ಹಣದ ದುರುಪಯೋಗವನ್ನು ತಡೆಯಬಹುದಿತ್ತಲ್ಲವೇ? ಹಗರಣವನ್ನು ಬಯಲುಮಾಡಲು ವಿರೋಧ ಪಕ್ಷವು ಸಿದ್ಧವಿರುವಾಗ, 'ನೀವು ಆಡಳಿತದಲ್ಲಿರುವಾಗ ಇದನ್ನೇ ಮಾಡಿದಿರಲ್ಲವೇ? ನೀವು ಮಾಡಿದ್ದನ್ನೇ ನಾವೂ ಮಾಡಿದ್ದೇವೆ, ತಪ್ಪೇನು?' ಎಂದು ಹೊಮ್ಮುವ ಆಳುಗರ ಸಮರ್ಥನೆಯನ್ನು ಸಾರ್ವಜನಿಕರು ಒಪ್ಪುವುದಿಲ್ಲ. ಇನ್ನು ಮುಂದಾದರೂ ರಾಜಕೀಯ ಪಕ್ಷಗಳು ತಮ್ಮ ಜವಾಬ್ದಾರಿ ಅರಿತು ನಡೆಯಲಿ, ಜನಹಿತದತ್ತ ಗಮನಕೊಡಲಿ.

- ಸತ್ಯಬೋಧ, ಬೆಂಗಳೂರು

ಜನರಿಗಾದ ಲಾಭವೇನು?

ಮೊನ್ನೆ ಶುಕ್ರವಾರ ಮತ್ತು ಶನಿವಾರ ಮೈಸೂರಿನಲ್ಲಿ ನಡೆದ ಬಿಜೆಪಿ-ಜೆಡಿಎಸ್ ಮತ್ತು ಕಾಂಗ್ರೆಸ್‌ನ ರಾಜಕೀಯ ಸಮಾವೇಶಗಳು ಇಬ್ಬರು ಎದುರಾಳಿ ನಾಯಕರ ವೈಯಕ್ತಿಕ ಆರೋಪ-ಪ್ರತ್ಯಾರೋಪಗಳಿಗೆ ವೇದಿಕೆಯಾದವು ಅಷ್ಟೇ. ಇದರಿಂದ ಸಾರ್ವಜನಿಕರಿಗೆ ಆದ ಲಾಭವೇನು ಎಂಬುದು ಯಕ್ಷಪ್ರಶ್ನೆ. ಮೈಸೂರಿನ ಹೃದಯ ಭಾಗದಲ್ಲಿರುವ ಮಹಾರಾಜ ಕಾಲೇಜಿನ ಮೈದಾನದಲ್ಲಿ ನಡೆದ ಈ ಸಮಾವೇಶಗಳಿಗೆ ಲಕ್ಷಾಂತರ ಜನ ಸೇರಿದ್ದರಿಂದ, ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಸರಕಾರಿ ನೌಕರರಿಗೆ ತೊಂದರೆ ಆದದ್ದೇ ಹೆಚ್ಚು. ರಾಜಕೀಯ ಪಕ್ಷಗಳು ತಂತಮ್ಮ ಪ್ರತಿಷ್ಠೆಯನ್ನು ಮೆರೆಯುವ ಭರದಲ್ಲಿ ಜನಹಿತವನ್ನು ಕಡೆಗಣಿಸಿದರೆ ಹೇಗೆ?

- ಬೂಕನಕೆರೆ ವಿಜೇಂದ್ರ, ಮೈಸೂರು

ಭಟ್ಟರ್ ಸ್ಕಾಚ್

● ರೋಹಿತ್ ಮಹಿಷಿ, ತಿಂಡಲು
ಭಟ್ರೇ, ಯೌವನದ ಪೀಕ್‌ನಲ್ಲಿರುವ ಹುಡುಗರಿಗೆ ತಲೆಕೂದಲು ಬೆಳ್ಳಗಾಗಲು ಶುರುವಾದರೆ ಏನರ್ಥ?
– ಮರದಲ್ಲಿ ಕಾಯಿಯಾಗುವ ಬದಲು ಹಣ್ಣಾದಂತೆ!

● ಜೇಜು ನಾಯಕ, (ಇಮೇಲ್ ಮೂಲಕ)
ಭಟ್ರೇ, ಎಲ್ಲ ಗಂಡಂದಿರೇಕೆ ಅವರವರ ಹೆಂಡತಿಗೆ ಹೆದರುತ್ತಾರೆ?
– ಬೇರೆಯವರ ಹೆಂಡತಿಗೆ ಹೆದರಿದರೆ ಏನಂತಾರೆ, ಯೋಚನೆ ಮಾಡು!

● ಎಲ್.ವಿ.ಸತೀಶ, ಮೈಸೂರು
ಭಟ್ರೇ, ನೀವೇಕೆ ಮೈಸೂರಿನಲ್ಲಿ ನಡೆದ ಸಿದ್ದು ಜನಾಂದೋಲನದಲ್ಲಿ ಕಾಣಿಸಲಿಲ್ಲ?
– ನಾನು ಇದ್ದಲ್ಲಿ ನೀನು ಬಂದು ನೋಡದಿದ್ದರೆ ನಾನೇನು ಮಾಡಲಿ?!

● ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ
ಭಟ್ರೇ, ಬದುಕಿನಲ್ಲಿ ಛಲ ಇದ್ದರೆ ಏನು ಬೇಕಾದರೂ ಸಾಧಿಸಬಹುದಂತೆ, ಹೌದಾ?
– ಹೌದು ಎನ್ನಲು ಛಲವಾದಿ ನಾರಾಯಣಸ್ವಾಮಿಯೇ ಆಗಬೇಕಿಲ್ಲ!

● ರವೀಂದ್ರ, ಕಾತೋಟಿ, ಧಾರವಾಡ
ಭಟ್ರೇ, ಪ್ರೀತಿಗೆ ಸೋಲದವರು ಯಾರಿದ್ದಾರೆ?
– ಸೋತರೂ ನಾನು ಸೋತಿಲ್ಲ ಎನ್ನಬೇಕೇ ಕುಮಾರಣ್ಣ!

● ವಿ.ಹೇಮಂತಕುಮಾರ, ಬೆಂಗಳೂರು
ಭಟ್ರೇ, ಬೇರೆಯವರ ವಿಷಯದಲ್ಲಿ ಮೂಗು ತೂರಿಸಬೇಡ ಅಂತಾರಲ್ಲ, ಹಾಗಂದ್ರೆ ಏನು?
– ಬೇರೇನನ್ನಾದರೂ ತೂರಿಸಿಬಿಟ್ಟಾರು ಎಂಬ ಆತಂಕವಿರಬಹುದು!

● ವೇಣುಗೋಪಾಲ ಕಂಚಿತೋಟ, ಕಡೂರು
ಭಟ್ರೇ, ವಿಶ್ವವಾಣಿಯಲ್ಲಿ ಇತ್ತೀಚೆಗೆ ಪ್ರತಿದಿನ ಸಿದ್ದರಾಮ ಸ್ತುತಿ ಇರುತ್ತದಲ್ಲ?
– ಕುಮಾರಚರಿತೆ, ಶಿವಕುಮಾರ ಪ್ರಸಂಗವೂ ಇರುತ್ತದಲ್ಲ?!

● ರಮೇಶ ಗೌಡ, ಮಳವಳ್ಳಿ
ಭಟ್ರೇ, ಈ ಸಲದ ಒಲಿಂಪಿಕ್ ಕ್ರೀಡಾಕೂಟದಲ್ಲಿ ಕುಸ್ತಿ ಪ್ರಶಸ್ತಿ ವಿಜೇತರ ಬಗ್ಗೆ ನಿಮ್ಮ ಅನಿಸಿಕೆ?
– ಆ ವಿಭಾಗದ ಪ್ರಶಸ್ತಿಯನ್ನು ಎಚ್ಡಿಕೆ–ಡಿಕೆಶಿ ಅವರಿಗೆ ಸಮ-ಸಮ ಕೊಡಬೇಕಿತ್ತು!

● ನವೀನ ಸಕ್ಕೂರು, ಜಯನಗರ
ಭಟ್ರೇ, ಕುಮಾರಸ್ವಾಮಿ ಕೆಣಕಬೇಡ ಅಂತ ನನ್ನ ಸ್ನೇಹಿತ ಹೇಳುತ್ತಾನಲ್ಲ?
– ಮಾತೆತ್ತಿದರೆ ನಿನ್ನದನ್ನು ಬಿಚ್ಚುತ್ತೇನೆ ಅಂತ ಅವರು ಹೇಳ್ತಾರಲ್ಲ?!

● ನಾಗಶ್ರೀ ಶಂಕರ, ಅರಸೀಕೆರೆ
ಭಟ್ರೇ, ಈ ಸಲ ನಿಮ್ಮ ಜತೆ ವಿದೇಶಕ್ಕೆ ಬರಬಹುದಾ?
– ನನ್ನ ಜತೆ ವಿಮಾನದಲ್ಲಿ ನೂರಾರು ಜನ ಬರ್ತಾರೆ, ಗಗನಸಖಿಯರು

ಕಾಫಿ ಕಿಂಗ್ ಬಗ್ಗೆ ಒಂದಿಷ್ಟು ಮಾತು

ಕಾಫಿ ಇಬ್ಬರ ನಡುವಿನ ಬಾಂಧವ್ಯದ ಬೆಸುಗೆಯನ್ನು ಇನ್ನಷ್ಟು ಬಿಗಿಗೊಳಿಸುವ ಪಾನೀಯ. ಬಿಗಡಾಯಿಸಿದ ಸಂಬಂಧವನ್ನು ಪುನಃ ಸ್ಥಾಪಿಸುವ, ಕಿತ್ತುಹೋದ ಸ್ನೇಹವನ್ನು ಒಂದುಗೂಡಿಸುವ ತಾಕತ್ತು ಈ ದ್ರವಕ್ಕಿದೆ. ಸಣ್ಣ–ದೊಡ್ಡ, ವ್ಯಾಪಾರ–ವ್ಯವಹಾರವನ್ನು ಕುದುರಿಸುವ ಸಾಮರ್ಥ್ಯ ಈ ಪೇಯಕ್ಕಿದೆ.

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಕರ್ನಾಟಕದ ಕಾಫಿ ಘಮವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೇರಿಸಿದ್ದ, ದಶಕಗಳ ಕಾಲ ಕಾಫಿ ಕ್ಷೇತ್ರವನ್ನು ಆಳಿದ್ದ ದಿ. ಸಿದ್ಧಾರ್ಥ ಅವರ ಒಡೆತನದ 'ಕಫೆ ಕಾಫಿ ಡೇ'ನ (ಸಿಸಿಡಿ) ಮೂಲಸಂಸ್ಥೆ ದಿವಾಳಿ ಅಂಚಿಗೆ ಬಂದಿದೆ ಎನ್ನುವ ಕೆಟ್ಟ ಸುದ್ದಿ ಕೇಳಿಬರುತ್ತಿದೆ. ಪ್ರೇಮಿಗಳ ಖಾಸಗಿ ಭೇಟಿಯಿಂದ ಹಿಡಿದು ಕೋಟ್ಯಂತರ ರುಪಾಯಿ ಬಿಸಿನೆಸ್ ಮೀಟಿಂಗ್‌ವರೆಗೆ 'ಸಿಸಿಡಿ'ಯಲ್ಲಿಯೇ ನಡೆಯುತ್ತಿದ್ದವು. ಅಂಥ ಬ್ರ್ಯಾಂಡ್ ಬಿಲ್ಡ್ ಮಾಡಿದ್ದ ಸಂಸ್ಥೆ ಇಂದು ದಿವಾಳಿ ಹಂತಕ್ಕೆ ಬಂದು ನಿಂತಿದೆ. ಸಿಸಿಡಿ ಈ ಹಂತಕ್ಕೆ ಕುಸಿದಿರುವ ಬಗ್ಗೆ ಯೋಚಿಸುತ್ತಿದ್ದಾಗ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಿಸಿಡಿಗೆ ಪ್ರತಿಸ್ಪರ್ಧಿಯಾಗಿ ಬೆಳೆದಿರುವ ಸ್ಟಾರ್‌ಬಕ್ಸ್ ಕಟ್ಟಿ ಬೆಳೆಸಿದ ಪರಿಯನ್ನು ಕಂಡು ವಿಸ್ಮಿತನಾದೆ. ಈ ಸಮಯದಲ್ಲಿ ಸ್ಟಾರ್‌ಬಕ್ಸ್‌ನ ಬಗ್ಗೆ ಹೇಳಬೇಕು ಅನಿಸಿತು.

ಕಾಫಿ ಆಯ್ತಾ?', 'ಸಾಯಂಕಾಲ ಕಾಫಿಗೆ ಸಿಗೋಣ್ವಾ?', 'ಎಷ್ಟು ದಿನ ಆಗೋಯ್ತು, ಬನ್ನಿ ಒಟ್ಟಿಗೆ ಕಾಫಿ ಕುಡಿಯೋಣ', 'ನೀವು ಅಲ್ಲಿಯ ಕಾಫಿ ಕುಡಿಯಲೇಬೇಕು', 'ಅಲ್ಲಿ ಕಾಫಿ ಚೆನ್ನಾಗಿರತ್ತೆ', 'ಅಲ್ಲಿ ಕಾಫಿ ಕುಡಿದಿಲ್ಲಾ ಅಂದ್ರೆ ಬದುಕಿದ್ದೇ ವೇಸ್ಟು', ಇಂಥ ಸಂಭಾಷಣೆಗಳೆಲ್ಲಾ ಅಂತಿಮವಾಗಿ ಕೊನೆಗೊಳ್ಳುವುದು, 'ಎರಡು ಕಾಫಿ ಕೊಡಿ' ಅಥವಾ 'ಬೈ ಟು ಕಾಫಿ ಪ್ಲೀಸ್' ಎಂಬಲ್ಲಿಗೆ.

ಕಾಫಿ ಇಬ್ಬರ ನಡುವಿನ ಬಾಂಧವ್ಯದ ಬೆಸುಗೆಯನ್ನು ಇನ್ನಷ್ಟು ಬಿಗಿಗೊಳಿಸುವ ಪಾನೀಯ. ಬಿಗಡಾಯಿಸಿದ ಸಂಬಂಧವನ್ನು ಪುನಃ ಸ್ಥಾಪಿಸುವ, ಕಿತ್ತುಹೋದ ಸ್ನೇಹವನ್ನು ಒಂದುಗೂಡಿಸುವ ತಾಕತ್ತು ಈ ದ್ರವಕ್ಕಿದೆ. ಸಣ್ಣ–ದೊಡ್ಡ, ವ್ಯಾಪಾರ–ವ್ಯವಹಾರವನ್ನು ಕುದುರಿಸುವ ಸಾಮರ್ಥ್ಯ ಈ ಪೇಯಕ್ಕಿದೆ. ಪರಿವಾರದ ಸದಸ್ಯರೊಂದಿಗೆ, ಸ್ನೇಹಿತರ ಮಧ್ಯೆ, ಪ್ರೇಮಿಗಳ ನಡುವೆ ಸಂಬಂಧದ ಸೇತು ಬೆಸೆಯಬಲ್ಲ ಅಸಾಮಾನ್ಯ ರಸ 'ಕಾಫಿ' ಎಂದರೆ ತಪ್ಪಾಗಲಾರದು. ಈ 'ಕಾಫಿ' ಕಲಿಯುಗದಲ್ಲಿ ಭೂಲೋಕದ ಅಮೃತ. ಹಾ, 'ಅತಿಂ ಸರ್ವತ್ರ ವರ್ಜಯೇತ್' ಎಂಬ ಮಾತಿದೆ, ಅದು ಇಲ್ಲೂ ಸಲ್ಲುವಂಥದ್ದೇ. ಅತಿಯಾದರೆ ಆರೋಗ್ಯಕ್ಕೆ ಹಾನಿಕಾರಕವಾಗಬಲ್ಲ ಕಾಫಿಯ ಬಳಕೆ ಮಿತಿಯಲ್ಲಿದ್ದರೆ ಒಳಿತು. ಆದರೂ ದಿನಕ್ಕೆ ನಾಲ್ಕು ಸಿಪ್‌ನ ಎರಡು ಸಣ್ಣ ಕಪ್ ಕಾಫಿಗೆ ದೊಡ್ಡ ಅಭ್ಯಂತರ ಇಲ್ಲ ಬಿಡಿ.

ಗುಡ್ ಮಾರ್ನಿಂಗ್ ಹೇಳುವಾಗ ಕೈಯಲ್ಲೊಂದು ಕಾಫಿ ಕಪ್ ಇರಬೇಕು. ದೇಹದ ಜಡ್ಡು ದೂರ ಓಡಬೇಕಾದರೆ, ಮನದ ಮಬ್ಬು ದೂರ ಹೋಗಬೇಕಾದರೆ ಕಾಫಿಯ ಘಮಲು ಮೂಗಿಗೆ ರಾಚಬೇಕು. ಚಳಿಗಾಲದಲ್ಲಿ, ಮೈ ಮನ ಬೆಚ್ಚಗಿಡುವ ಕಾಫಿಯೊಂದಿದ್ದರೆ, ಆಹಾ... ಅದೇ ಸ್ವರ್ಗ ಸುಖ. ಮಳೆಗಾಲದಲ್ಲಿ, ಹೊರಗೆ ಮಳೆ ಸುರಿಯುತ್ತಿರುವಾಗ ಕುರುಕಲು ತಿಂಡಿಯೊಂದಿಗೆ ನಾಲ್ಕು ಗುಟುಕು ಕಾಫಿಯೊಂದಿದ್ದರೆ, 'ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ...' ಸಕ್ಕರೆ ಹಾಕಿ, ಬಿಡಿ, ಇದು ಕೊಡುವ ಕಿಕ್ ಮಾತ್ರ ವಿಭಿನ್ನ, ವಿಶಿಷ್ಟ, ಆಹ್ಲಾದಕರ. ಇಂದು ಹತ್ತು ರುಪಾಯಿ ಕೊಟ್ಟು ರಸ್ತೆ ಬದಿಯಲ್ಲೂ ಕಾಫಿ ಕುಡಿಯಬಹುದು, ಸಾವಿರ ರುಪಾಯಿ ಕೊಟ್ಟು ಪಂಚತಾರಾ ಹೋಟೆಲ್‌ನಲ್ಲೂ ಕಾಫಿ ಕುಡಿಯಬಹುದು. ಇಂದು ಕಾಫಿಯನ್ನೇ ಬ್ರ್ಯಾಂಡ್ ಆಗಿ ಇಟ್ಟುಕೊಂಡು ವ್ಯಾಪಾರ ನಡೆಸುತ್ತಿರುವ ಅನೇಕ ಅಂಗಡಿಗಳಿವೆ, ಉಪಹಾರ ಗೃಹಗಳಿವೆ, ಕಾಫಿ ಹೌಸ್‌ಗಳಿವೆ. ಇವೆಲ್ಲದರ ನಡುವೆ ಎದ್ದು ಕಾಣುವುದು 'ಸ್ಟಾರ್‌ಬಕ್ಸ್'.

ಹಸಿರು ವೃತ್ತದಲ್ಲಿ ಕಿರೀಟ ತೊಟ್ಟ ಬಿಳಿಯ ರಾಣಿಯ ಲಾಂಛನ ಹೊಂದಿದ ಸ್ಟಾರ್‌ಬಕ್ಸ್ ಬೆಳೆದು ಬಂದ ರೀತಿಯೇ ವಿಭಿನ್ನವಾದದ್ದು, ರೋಚಕವಾದದ್ದು. 1971ರಲ್ಲಿ ಜೆರ‍್ರಿ ಬಾಲ್ಡ್ವಿನ್, ಜೆವ್ ಸೀಗಲ್ ಮತ್ತು ಗೋರ್ಡಾನ್ ಬೌಕರ್ ಸೇರಿ ಆರಂಭಿಸಿದ ಸಂಸ್ಥೆ ಅದು. ಆದರೆ ಶುಕ್ರದೆಸೆ ಆರಂಭವಾದದ್ದು ಮಾತ್ರ 1986ರ ನಂತರವೇ. ಅಲ್ಲಿಂದ ಸಂಸ್ಥೆ ನಡೆದು ಬಂದ ಹಾದಿ ಅಭೂತಪೂರ್ವ. ಇಂದು ಸ್ಟಾರ್‌ಬಕ್ಸ್ ವಿಶ್ವದಾದ್ಯಂತ ಎಂಬತ್ತೂರು ದೇಶಗಳಲ್ಲಿ, ಸುಮಾರು ಮೂವತ್ತೂರು ಸಾವಿರ ಮಳಿಗೆ ಹೊಂದಿದೆ. ಅದರಲ್ಲಿ ಹದಿನೇಳು ಸಾವಿರ ಕಂಪನಿ ಕಾರ್ಯ ನಿರ್ವಹಿಸುವ ಮಳಿಗೆಗಳಾದರೆ, ಹದಿನಾರು ಸಾವಿರ ಪರವಾನಗಿ ಪಡೆದ ಮಳಿಗೆಗಳಾಗಿವೆ. ಹತ್ತೊಂಬತ್ತು ಸಾವಿರ ಮಳಿಗೆಗಳು ಅಮೆರಿಕ, ಕೆನಡಾ ಮತ್ತು ಲ್ಯಾಟಿನ್ ಅಮೆರಿಕ ಪ್ರದೇಶದಲ್ಲಿವೆ. ಸಂಸ್ಥೆ ಈಗ ಹೋಲ್ ಬೀನ್ ಕಾಫಿ, ಚಹಾ, ತಂಪು, ಬಿಸಿ ಪಾನೀಯಗಳು, ಹಣ್ಣಿನ ರಸ, ಚಾಕೊಲೆಟ್, ಬಿಸ್ಕತ್ತು, ಸ್ಯಾಂಡ್ವಿಚ್, ಕೇಕ್ ಇತ್ಯಾದಿಗಳನ್ನೂ ಮಾರುತ್ತಿದೆ. ಸಂಸ್ಥೆ ಇಂದು ವಿಶ್ವದಾದ್ಯಂತ ಮೂರೂವರೆ ಲಕ್ಷ ಜನರಿಗೆ ಉದ್ಯೋಗ ಒದಗಿಸಿಕೊಟ್ಟಿದ್ದು, ವಾರ್ಷಿಕ ಇಪ್ಪತ್ತೇಳು ಬಿಲಿಯನ್ ಡಾಲರ್ ಆದಾಯ ಗಳಿಸುತ್ತಿದೆ. ಇಂದು ಸ್ಟಾರ್‌ಬಕ್ಸ್‌ನಲ್ಲಿ ಕಾಫಿ ಕುಡಿಯುವುದೇ ಒಂದು ಅಭಿಮಾನದ ಸಂಗತಿ. ಸಂಸ್ಥೆ ಇಂದು ಈ ಔನ್ನತ್ಯಕ್ಕೆ ಏರಿದೆ ಯೆಂದರೆ ಅದಕ್ಕೆ ಕಾರಣ, ಒನ್ ಆ್ಯಂಡ್ ಓನ್ಲಿ 'ಹಾವರ್ಡ್ ಶಲ್ಜ್'. ಸ್ಟಾರ್‌ಬಕ್ಸ್ ಕಥೆ ಎಷ್ಟು ರೋಚಕವೋ, ಹಾವರ್ಡ್ ಶಲ್ಜ್ ಕಥೆಯೂ ಅಷ್ಟೇ ರೋಚಕ.

ಸಾಮಾನ್ಯ ಕಥೆಗಳಂತೆ ಹಾವರ್ಡ್ ಶಲ್ಜ್ ಕಥೆ ಆರಂಭವಾಗುವುದೂ ಒಂದು ತೀರಾ ಬಡ ಕುಟುಂಬದಿಂದ. 1953ರಲ್ಲಿ, ನ್ಯೂಯಾರ್ಕ್‌ನ ಬ್ರೂಕ್ಲಿನ್‌ನಲ್ಲಿ ಜನಿಸಿದ ಶಲ್ಜ್‌ನ ತಂದೆ ಫ್ರೆಡ್, ತಾಯಿ ಎಲೆನ್. ಶಲ್ಜ್ ತಂದೆಯ ಮುತ್ತಜ್ಜ ಮ್ಯಾಕ್ಸ್ 1900ಕ್ಕೂ ಮೊದಲೇ ಪೂರ್ವ ಯುರೋಪ್‌ನಿಂದ ಅಮೆರಿಕಕ್ಕೆ ವಲಸೆ ಬಂದವರು. ಇಂಗ್ಲಿಷ್ ಮಾತನಾಡಲು ಬಾರದ, ಕಿಸೆಯಲ್ಲಿ ಕೇವಲ ಹತ್ತು ಡಾಲರ್ ಇಟ್ಟುಕೊಂಡು ಬಂದಿದ್ದ ಮ್ಯಾಕ್ಸ್ ದರ್ಜಿ ಕೆಲಸ ಮಾಡಿಕೊಂಡಿದ್ದರು. ಹಾವರ್ಡ್ ತಂದೆ ತಾಯಿ ಇಬ್ಬರೂ ಹೈಸ್ಕೂಲ್ ಕೂಡ ಮುಗಿಸಿದವರಲ್ಲ, ತಂದೆ ಎರಡನೆಯ ವಿಶ್ವ ಮಹಾಯುದ್ಧದಲ್ಲಿ ಸೈನಿಕನಾಗಿ ಪಾಲ್ಗೊಂಡಿದ್ದರು. ಯುದ್ಧ ಮುಗಿಸಿ ಹಿಂತಿರುಗಿದ ನಂತರ ಕಡಿಮೆ ಸಂಬಳದ, ಸಾಮಾನ್ಯ ಕಾರ್ಮಿಕ ಕೆಲಸಕ್ಕೆ ಸೇರಿಕೊಂಡಿದ್ದರು. ಅವರು ಬ್ರೂಕ್ಲಿನ್‌ನ ಸಾರ್ವಜನಿಕ ವಸತಿ ಯೋಜನೆಯ ಒಂದು ಸಣ್ಣ ಮನೆಯಲ್ಲಿ ವಾಸವಾಗಿದ್ದರು. ಒಂದು ರೂಮ್‌ನ ಮನೆಯಲ್ಲಿ ತಂದೆ, ತಾಯಿ ಮತ್ತು ಮೂರು ಮಕ್ಕಳು ದಿನ ಕಳೆಯುತ್ತಿದ್ದರು. ತಂದೆಯ ಜತೆ ಹೋಗಿ ಅಮೆರಿಕದ ಪ್ರಸಿದ್ಧ ಬೇಸ್‌ಬಾಲ್ ಆಟಗಾರ ಮಿಕ್ಕಿ ಮಾಂಟೆಲ್‌ನ ಆಟ ನೋಡುವುದು ಬಿಟ್ಟರೆ ಬೇರೆ ಯಾವ ಸಂತಸದ ಕ್ಷಣಗಳನ್ನೂ ಕಂಡವರಲ್ಲ, ಅವರ ತಂದೆ ಕೆಲಸದ ವೇಳೆಯಲ್ಲಿ ಮಂಜಿನ ಮೇಲೆ ಜಾರಿ ಬಿದ್ದು, ಸೊಂಟ ಮತ್ತು ಕಾಲು ಮುರಿದುಕೊಂಡಿದ್ದರು. ಅವರನ್ನು ಕೆಲಸದಿಂದ ವಜಾ ಮಾಡಲಾಯಿತು. ಅವರಿಗೆ ಕಾರ್ಮಿಕ ಪರಿಹಾರವೂ ಸಿಗಲಿಲ್ಲ, ಆರೋಗ್ಯ ವಿಮೆಯೂ ಇರಲಿಲ್ಲ, ಉಳಿತಾಯವಂತೂ ಮೊದಲೇ ಇರಲಿಲ್ಲ. ದುಡಿಯಬೇಕಾದ ಜೀವ ಅಸಹಾಯಕವಾಗಿ ಮಂಚದ ಮೇಲೆ ಮಲಗಿತ್ತು. ಆಗ ಮನೆಯ ಹಿರಿಯ ಮಗನಾದ ಹಾವರ್ಡ್‌ಗೆ ಕೇವಲ ಏಳು ವರ್ಷ ಪ್ರಾಯ. ತಾಯಿ ಸಣ್ಣ ಪುಟ್ಟ ಕೆಲಸ ಮಾಡಿ, ಹಾಗೂ ಹೀಗೂ ಮನೆಯ ಖರ್ಚು ನಿಭಾಯಿಸುತ್ತಿದ್ದರು. ಆದರೆ ಪ್ರತಿನಿತ್ಯ ಮಕ್ಕಳಲ್ಲಿ ಆತ್ಮವಿಶ್ವಾಸ ತುಂಬುತ್ತಿದ್ದರು. ಮೆಟ್ಟಿಲ ಮೇಲೆ ಕುಳಿತು ಮನೆಯ ಪರಿಸ್ಥಿತಿಯ ಕುರಿತು ಯೋಚಿಸುತ್ತಿದ್ದ ಹಾವರ್ಡ್‌ಗೆ ಆಗ ಆಶಾಕಿರಣವಾಗಿ ಕಾಣುತ್ತಿದ್ದುದು ಎರಡು ಸಂಗತಿಗಳು. ಒಂದು, ಭವಿಷ್ಯದಲ್ಲಿ ಉತ್ತಮ ಜೀವನ, ಇನ್ನೊಂದು, ಫುಟ್ಬಾಲ್ ಮತ್ತು ಬಾಸ್ಕೆಟ್‌ಬಾಲ್ ಮೈದಾನ.

ಹೈಸ್ಕೂಲ್‌ನಲ್ಲಿ ಹಾವರ್ಡ್ ಹೆಚ್ಚು ಫುಟ್ಬಾಲ್ ಆಡುತ್ತಿದ್ದರು. ಅದಕ್ಕೆ ಆಟದಲ್ಲಿರುವ ಆಸಕ್ತಿಗಿಂತಲೂ ವಿದ್ಯಾರ್ಥಿವೇತನ ಪಡೆಯಬಹುದು ಎಂಬ ಆಶಾಭಾವ ಕಾರಣವಾಗಿತ್ತು. ಆದರೆ ಆ ಕನಸು ಕನಸಾಗಿಯೇ ಉಳಿಯಿತೇ ವಿನಾ ಎಂದಿಗೂ ಸಫಲವಾಗಲಿಲ್ಲ. ವಿದ್ಯಾರ್ಥಿ ಸಾಲ ಮತ್ತು ಅರೆಕಾಲಿಕ ಉದ್ಯೋಗಗಳೊಂದಿಗೇ ಶಿಕ್ಷಣ ಮುಂದುವರಿಬೇಕಾಯಿತು. ತೀರಾ ಅಡಚಣೆ ಉಂಟಾದಾಗ ಹಣಕ್ಕಾಗಿ ರಕ್ತ ಮಾರುತ್ತಿದ್ದರು. ಅಂತೂ ಇಂತೂ ಕಾಲೇಜ್ ಶಿಕ್ಷಣ ಮುಗಿಸಿದರು. ಆದರೆ ಪರಿಸ್ಥಿತಿ ಹೇಗಿತ್ತೆಂದರೆ, ಮನೆತನದಲ್ಲಿಯೇ ಮೊದಲ ಪದವಿ ಪಡೆದ ಮಗನನ್ನು ಕಾಣಬಹುದಾಗಿದ್ದ ಸಮಾರಂಭಕ್ಕೆ ಮನೆಯವರು ಯಾರೂ ಬಂದಿರಲಿಲ್ಲ. ಕಾಲೇಜ್ ಮುಗಿಸಿ ಕೆಲಸಕ್ಕೆ ಸೇರಿಕೊಂಡ ಹಾವರ್ಡ್ ಪ್ರತಿ ತಿಂಗಳು ತಮ್ಮ ಸಂಬಳದ ಅರ್ಧವನ್ನು ಮನೆಯ ಖರ್ಚಿಗೆಂದು ಕೊಡುತ್ತಿದ್ದರು.

ಹಾವರ್ಡ್ ಮನೆ ಮನೆಗೆ ಕಚೇರಿ ಉಪಕರಣಗಳನ್ನು ತಲುಪಿಸುವ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿ ಕೊಂಡರು. ದಿನಕ್ಕೆ ಕಮ್ಮಿ ಎಂದರೂ ಐವತ್ತು ಜನರಿಗೆ ದೂರವಾಣಿ ಕರೆ ಮಾಡಿ ತಾವು ಮಾರುತ್ತಿದ್ದ ವಸ್ತುಗಳ ವಿಷಯ ತಿಳಿಸುತ್ತಿದ್ದರು. ಅವರ ಗ್ರಾಹಕರ ಪಟ್ಟಿಯಲ್ಲಿ ಸ್ಟಾರ್‌ಬಕ್ಸ್ ಕೂಡ ಒಂದಾಗಿತ್ತು. ಸ್ಟಾರ್‌ಬಕ್ಸ್ ಕಾಫಿ ಆಗಿನ್ನೂ ಸಣ್ಣ ಕಂಪನಿ. ಒಂದು ದಿನ ಆ ಕಂಪನಿಯ ಸಂಸ್ಥಾಪಕರನ್ನು ಭೇಟಿಯಾಗಿ ಅಲ್ಲಿಯೇ ಕೆಲಸಕ್ಕೆ ಸೇರಿಕೊಂಡರು. ಒಂದೇ ವರ್ಷದಲ್ಲಿ ಸಂಸ್ಥೆಯ ಮಾರ್ಕೆಟಿಂಗ್ ವಿಭಾಗದ ಪ್ರಮುಖರಾದರು. ಅದಾಗಿ ಒಂದು ವರ್ಷಕ್ಕೆ ಅವರಿಗೆ ಸಂಸ್ಥೆಯ ಪರವಾಗಿ ಕಾರ್ಯನಿಮಿತ್ತ ಇಟಲಿಗೆ ಹೋಗುವ ಅವಕಾಶ ಒದಗಿಬಂದಿತ್ತು. ಇಟಲಿಯಲ್ಲಿ ಮೊದಲ ಬಾರಿ ಎಸ್ಪ್ರೆಸ್ಸೊ ಕಾಫಿಯ ರುಚಿ ನೋಡಿ ಪ್ರಭಾವಿತರಾದ ಹಾವರ್ಡ್ ತಮ್ಮ ಸಂಸ್ಥೆಯೂ ಕಾಫಿ ಮಾಡಿ ಮಾರಬಹುದು, ಜನರಿಗೆ ಕುಳಿತು ಕಾಫಿ ಕುಡಿಯಲು ಸ್ಥಳಾವಕಾಶ ಮಾಡಿಕೊಡಬಹುದು ಎಂಬ ಸಲಹೆ ನೀಡಿದರು. ಅದುವರೆಗೂ ಬರೀ ಕಾಫಿ ಬೀಜಗಳನ್ನಷ್ಟೇ ಮಾರುತ್ತಿದ್ದ ಸ್ಟಾರ್‌ಬಕ್ಸ್‌ನ ಅಂದಿನ ವ್ಯವಸ್ಥಾಪಕರು ಹಾವರ್ಡ್ ಕೊಟ್ಟ ಸಲಹೆಯನ್ನು ತಿರಸ್ಕರಿಸಿದ್ದರು.

ಹಾವರ್ಡ್ ತಮ್ಮ ಕನಸಿನ ಎಸ್ಪ್ರೆಸ್ಸೊ ಬಾರ್ (ನಮ್ಮ ಭಾಷೆಯಲ್ಲಿ ಕಾಫಿ ಅಂಗಡಿ) ತೆರೆಯುವ ಉದ್ದೇಶದಿಂದ ಸ್ಟಾರ್‌ಬಕ್ಸ್‌ನ ನೌಕರಿಗೆ ರಾಜೀನಾಮೆ ನೀಡಿದರು. ಆದರೆ ಹೊಸ ಉದ್ಯಮ ಆರಂಭಿಸಲು ಅವರ ಬಳಿ ಹಣವಿರಲಿಲ್ಲ. ತಮ್ಮ ಯೋಜನೆಯಲ್ಲಿ ನಾಲ್ಕು ಲಕ್ಷ ಡಾಲರ್ ಹಣ ಹೂಡುವಂತೆ ಕೋರಿ ಅವರು ಸುಮಾರು ಇನ್ನೂರ ನಲವತ್ತೆರಡು ಜನರನ್ನು ಸಂಪರ್ಕಿಸಿದರು. ಆ ಪೈಕಿ ಇನ್ನೂರ ಹದಿನೇಳು ಜನರಿಗೆ ಹೋವರ್ಡ್ ಮೇಲೆ ಭರವಸೆ ಇರಲಿಲ್ಲ. ಒಂದು ವರ್ಷಕ್ಕೂ ಹೆಚ್ಚು ಹೂಡಿಕೆದಾರರಿಗಾಗಿ ಅಲೆದಾಡಿದ ಮೇಲೆ ಕೆಲವರು ಹಾವರ್ಡ್ ಯೋಜನೆಯಲ್ಲಿ ಹಣ ಹೂಡಲು ಮುಂದಾದರು. ಹಾವರ್ಡ್ 'ಇಲ್ ಜಿಯೋರ್ನಲ್' ಹೆಸರಿನಲ್ಲಿ ತಮ್ಮ ಕಾಫಿ ಅಂಗಡಿ ಆರಂಭಿಸಿದರು. ಮೂರು ವರ್ಷದ ಅವಧಿಯಲ್ಲಿ ಅವರ ಒಂದು ಅಂಗಡಿ ಮೂರು ಅಂಗಡಿಯಾಗಿ ವೃದ್ಧಿಸಿತು. ಈ ನಡುವೆ ಕೆಲಸವಿಲ್ಲದೆ ಅಲೆಯುತ್ತಿದ್ದ ಸಮಯದಲ್ಲಿ ತಮ್ಮ ಹೆಂಡತಿಯ ಸಂಬಳದಲ್ಲೇ ಜೀವನ ನಡೆಸಿದರು.

ಎರಡು ವರ್ಷದಲ್ಲಿ ಹಾವರ್ಡ್ ಎಷ್ಟು ಬೆಳೆದರೆಂದರೆ, ಸ್ವತಃ ಸ್ಟಾರ್‌ಬಕ್ಸ್ ತನ್ನ ರಿಟೇಲ್ ವ್ಯಾಪಾರದ ಹಕ್ಕನ್ನು ಹಾವರ್ಡ್‌ಗೆ ಮಾರಿತು. ಸುಮಾರು ನಾಲ್ಕು ಮಿಲಿಯನ್ ಡಾಲರ್‌ನಲ್ಲಿ ಆ ಹಕ್ಕನ್ನು ಖರೀದಿಸಿದ ಹಾವರ್ಡ್ ತಮ್ಮ ಸಂಸ್ಥೆಯನ್ನೂ ಅದರೊಂದಿಗೆ ಸೇರಿಸಿದರು. ಗ್ರಾಹಕರು ಕುಳಿತುಕೊಂಡು ಮಾತನಾಡಲು ಸೌಲಭ್ಯ ಕಲ್ಪಿಸಿಕೊಟ್ಟರು. ಪ್ರೇಮಿಗಳು ಹೃದಯದ ಮಾತು ಹಂಚಿಕೊಳ್ಳಲು, ಉದ್ಯಮಿಗಳು ವ್ಯವಹಾ ರದ ಮಾತನಾಡಲು, ಸ್ನೇಹಿತರು ಸುಖ–ದುಃಖ ತೋಡಿಕೊಳ್ಳಲು, ಸಮಯ ಕಳೆಯಲು ಸ್ಥಳ ಒದಗಿಸಿಕೊಟ್ಟರು. ಅವರು 1986ರಿಂದ 2000ದ ವರೆಗೆ, ಹದಿನಾಲ್ಕು ವರ್ಷಗಳವರೆಗೆ ಸಿಇಒ ಆಗಿ ಕಾರ್ಯ ನಿರ್ವಹಿಸಿದರು.

ಹಾವರ್ಡ್ ತಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುವವರಿಗೆ ವಿಮೆ ಒದಗಿಸಿಕೊಟ್ಟರು. ತನ್ನ ತಂದೆಗೆ, ತಮ್ಮ ಮನೆಗೆ ಬಂದ ಪರಿಸ್ಥಿತಿ ತನ್ನ ಸಂಸ್ಥೆಯಲ್ಲಿ ಕೆಲಸ ಮಾಡುವ ಯಾವ ನೌಕರನಿಗೂ ಬರಬಾರದು ಎಂಬುದು ಅವರ ಉದ್ದೇಶವಾಗಿತ್ತು. 2008ರಲ್ಲಿ ಸಂಸ್ಥೆ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾಗ ಮತ್ತೆ ಬಂದು, ಕುಸಿಯುತ್ತಿದ್ದ ಸಂಸ್ಥೆಯನ್ನು ಎತ್ತಿ ಹಿಡಿದರು. ಮುಂದಿನ ಹತ್ತು ವರ್ಷದಲ್ಲಿ ಸಂಸ್ಥೆಗೆ ನೂರು ಬಿಲಿಯನ್ ಡಾಲರ್ ಹೂಡಿಕೆ ತರುವಲ್ಲಿ ಯಶಸ್ವಿಯಾದರು. ಹಾವರ್ಡ್ 2017ರಲ್ಲಿ ಅಮೆರಿಕದ ಡೆಮಾಕ್ರಟಿಕ್ ಪಕ್ಷವನ್ನು ಸೇರಿಕೊಂಡರು. ನಂತರ ಅದರಿಂದಲೂ ಹೊರಬಂದು ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಹೇಳಿದರು. ಒಂದಂತೂ ಸತ್ಯ, ವ್ಯಾಪಾರದಲ್ಲಿ ಅವರ ಕೈ ಹಿಡಿದ ಅದೃಷ್ಟ ದೇವತೆ, ರಾಜಕೀಯ ಜೀವನದಲ್ಲಿ ಅವರ ಕೈ ಹಿಡಿಯಲಿಲ್ಲ, ಇನ್ನೊಂದು ವಿಷಯ ಗೊತ್ತಾ? ವ್ಯಾಪಾರ, ವ್ಯವಹಾರದ ವಿಷಯಕ್ಕೆ ಸಂಬಂಧಿಸಿದ ನಾಲ್ಕು ಪುಸ್ತಕಗಳನ್ನು ಅವರು ಬರೆದಿದ್ದಾರೆ. ಮನುಷ್ಯನ ಜೀವನದಲ್ಲಿ ಕಷ್ಟ ಶಾಶ್ವತವಲ್ಲ, ಸಾಧನೆಯ ಛಲ ಇದ್ದರೆ ಯಾವುದೂ ಅಸಾಧ್ಯವಲ್ಲ ಎಂಬುದಕ್ಕೆ ಉದಾಹರಣೆ ಹಾವರ್ಡ್ ಶಲ್ಜ್. ಕಾಫಿಯ ಪರಿಮಳಕ್ಕೆ ಉದ್ಯಮದ ರುಚಿ ತುಂಬಿದ ಕೆಲವರಲ್ಲಿ ಹಾವರ್ಡ್ ಶಲ್ಜ್ ಕೂಡ ಒಬ್ಬರು.

ಕಾಫಿ ಕಿಂಗ್ ಬಗ್ಗೆ ಇಷ್ಟು ತಿಳಿದಮೇಲೂ ಒಂದು ಕಪ್ ಕಾಫಿ ಕುಡಿಯದಿದ್ದರೆ ಹೇಗೆ? ಬನ್ನಿ ಹೋಗೋಣ, ಕಾಫಿ ಕುಡಿಯೋಣ!

ಅಭಿಮತ
ಶಂಕರನಾರಾಯಣ ಭಟ್

ಹೆಮ್ಮೆಪಡುವುದೋ ಶಪಿಸಿಕೊಳ್ಳುವುದೋ?

ಇಂದು ನಮ್ಮ ದೇಶ ಅಭಿವೃದ್ಧಿಯ ಕಡೆಗೆ ದಾಪುಗಾಲು ಹಾಕುತ್ತಿದೆ. ಹತ್ತನೇ ಕ್ರಮಾಂಕದಲ್ಲಿದ್ದ ದೇಶ ಐದನೇ ಸ್ಥಾನಕ್ಕೆ ತಲುಪಿದೆ. ಇನ್ನು ಕೆಲವೇ ವರ್ಷಗಳಲ್ಲಿ ಮೂರನೇ ಸ್ಥಾನ ಗಿಟ್ಟಿಸಿಕೊಳ್ಳಲಿದೆ. ನಮ್ಮದು ಐದು ಟ್ರಿಲಿಯನ್ ಆರ್ಥಿಕತೆ ಆಗಲಿದೆ ಎಂದೆಲ್ಲ ಬೊಬ್ಬೆ ಹೊಡೆಯುವವರು ಈಗ ನಡೆಯುತ್ತಿರುವ ಒಲಿಂಪಿಕ್ ಪಂದ್ಯದ ಫಲಕಗಳತ್ತ ಒಮ್ಮೆ ಕಣ್ಣು ಹಾಯಿಸಿದರೆ ನಾವು ಇಷ್ಟೊಂದು ಕೆಳಮಟ್ಟದಲ್ಲಿದ್ದೇವೆಯೇ ಅಂತ ಅನಿಸದೇ ಇರದು.

ಇಲ್ಲಿಯತನಕ ನಮ್ಮ ಪಾಲಿಗೆ ದೊರಕಿದ್ದು ಕೇವಲ ಒಂದು ಬೆಳ್ಳಿ ಮತ್ತು 5 ಕಂಚು! ಈಗ ಪಡೆದ ಪದಕಗಳಿಂದ ನಾವೆಲ್ಲ ಎಷ್ಟು ಬೀಗುತ್ತಿದ್ದೇವೆಂದರೆ, ಕಂಚಿನ ಪದಕ ಗೆದ್ದು ಮರಳಿದವರಿಗೆ ಕೋಟಿ ಕೋಟಿ ಹಣ ಕೊಡುವುದಾಗಿ ಗೆದ್ದ ವ್ಯಕ್ತಿಯ ರಾಜ್ಯದ ಮುಖ್ಯಮಂತ್ರಿಗಳು ಘೋಷಿಸಿದ್ದಾರೆ. ಇದರಲ್ಲಿ ಏನೂ ತಪ್ಪಿಲ್ಲ, ಆದರೆ ಇಷ್ಟಕ್ಕೇ ನಾವು ಸಂತೃಪ್ತರಾಗಿ ಉಳಿಯಬೇಕೇ? ನಮ್ಮಲ್ಲಿ ಇದಕ್ಕಿಂತ ಮುಂದೆ ಹೋಗುವ ಕ್ಷಮತೆಯೇ ಇಲ್ಲವೇ?

ಮೇಲ್ನೋಟಕ್ಕೆ ಕಾಣುವ ಕಾರಣವೆಂದರೆ, ನಮ್ಮ ದೇಶದ ಅಧಿಕಾರಸ್ಥರಿಗೆ ಕ್ರೀಡೆಯ ಮೇಲೆ ವಿಶೇಷ ಆಸಕ್ತಿ ಅಥವಾ ಒತ್ತು ಇಲ್ಲದಿರುವುದು. 140 ಕೋಟಿ ಜನಸಂಖ್ಯೆಯಲ್ಲಿ ಒಬ್ಬರೂ 'ಬಂಗಾರದ ಮನುಷ್ಯ'ರಿಲ್ಲ ಅಂದರೆ ನಮ್ಮನ್ನಾಳುವವರಲ್ಲಿ ಅದೇನೋ ಅಗಾಧವಾದ ಕೊರತೆ ಇದೆ ಅಂತಲೇ ಲೆಕ್ಕ. ಅಲ್ಲಿ ಇಲ್ಲಿ ಕಂಚು ಪಡೆದಾಗ ಸಂಭ್ರಮಿಸುವುದನ್ನು ಬಿಟ್ಟರೆ ನಾವು ಕ್ರೀಡೆಯನ್ನು ಎಂದೂ ಅಷ್ಟು ಗಂಭೀರವಾಗಿ ತೆಗೆದುಕೊಂಡೇ ಇಲ್ಲ. ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವ ಅರ್ಹತೆಯನ್ನೇ ನಾವು ಸಂಭ್ರಮಿಸುತ್ತೇವೆಯೇ ಹೊರತು, ಮುಂದೇನೆಂಬುದರ ಬಗ್ಗೆ ಅಲ್ಲವೇ ಅಲ್ಲ. ಇದು ಭಾರತದ ಭೌಗೋಳಿಕ ಅವಗುಣ ಎನ್ನಬಹುದೇ? ಹಾಗಿರಲೂ ಸಾಧ್ಯವಿಲ್ಲ. ಕೇವಲ ಹವಾಮಾನ ಒಂದನ್ನೇ ನೆಪವಾಗಿಟ್ಟುಕೊಂಡು ಹಾರಿಕೆಯ ಉತ್ತರ ಬಂದರೆ ಅದನ್ನು ಒಪ್ಪಿಕೊಳ್ಳಲಾದೀತೇ?

ನಮ್ಮ ದೇಶದಲ್ಲಿ ಕ್ರೀಡೆ ಅಂದರೆ ಕ್ರಿಕೆಟ್! ಅದನ್ನು ಹೊರತುಪಡಿಸಿ ಉಳಿದಾವ ಕ್ರೀಡೆಯೂ ಇಲ್ಲ ಎಂಬ ಧೋರಣೆ. ಕ್ರಿಕೆಟ್ಟಿಗೆ ಸಿಗುವ ಮಾನ, ಸಮ್ಮಾನ, ಬಹುಮಾನ ಇನ್ನಾ ಕ್ರೀಡೆಗೂ ಸಿಗುತ್ತಿಲ್ಲ. ಕ್ರಿಕೆಟ್‌ನಲ್ಲಿ ವಿಶ್ವಕಪ್ ಗೆದ್ದ ದೇಶಕ್ಕೆ ಒಲಿಂಪಿಕ್ಸ್‌ನಲ್ಲಿ ಒಂದು ಬಂಗಾರ ಗೆಲ್ಲುವುದೂ ಅಸಾಧ್ಯವಾಗುತ್ತಿದೆ ಅಂದರೆ ನಾವು ಉಳಿದ ಕ್ರೀಡೆಗಳ ಬಗ್ಗೆ ಎಷ್ಟೊಂದು ನಿರಾಸಕ್ತರಾಗಿದ್ದೇವೆ ಎಂಬುದು ಸ್ಪಷ್ಟವಾಗುತ್ತದೆ. ಪ್ರತಿಬಾರಿಯ ಬಜೆಟ್ಟಿನಲ್ಲೂ, ಕೆಂಪುಕೋಟೆ ಭಾಷಣದಲ್ಲೂ ನಾವು ಕ್ರೀಡೆಯ ಪ್ರಸ್ತಾಪ ಮಾಡೇಮಾಡುತ್ತೇವೆ. ಆದರೆ ಅವೆಲ್ಲ ಕೇವಲ ಕಾಗದಗಳಲ್ಲಿಯೇ ಉಳಿದುಕೊಳ್ಳುವ ಅಥವಾ ಭಾಷಣದಲ್ಲೇ ಪರಿಸಮಾಪ್ತಿಗೊಳ್ಳುವ ಬಾಬತ್ತಿನಂತೆ ಕಾಣುತ್ತಿವೆ. ಒಬ್ಬ ವ್ಯಕ್ತಿಯಿಂದ ಅಥವಾ ಒಂದು ಗುಂಪಿನಿಂದ ಈ ದಿಸೆಯಲ್ಲಿ ಬದಲಾವಣೆ ಅಸಾಧ್ಯ; ಬದಲಾವಣೆ ಆಗಬೇಕಿರುವುದು ನಮ್ಮ ಸರಕಾರದಿಂದ, ಅಭಿವೃದ್ಧಿಯ ಜಪ ಮಾಡುತ್ತಿರುವವರಿಂದ, ಜಗತ್ತಿನ ಭೂಪಟದಲ್ಲಿ ಭಾರತದ ಹೆಸರು ಎದ್ದು ಕಾಣಬೇಕೆಂದು ಬಯಸುವವರಿಂದ. ಕಂಚು ಗೆದ್ದು ಹೆಂಚು ಹಾರುವಂತೆ ಕೂಗುವುದರಿಂದ ಏನೂ ಲಾಭವಿಲ್ಲ. ಈಗ ನಮಗುಳಿದಿರುವ ಒಂದೇ ಮಾರ್ಗ ಅಂದರೆ, ನಮ್ಮವರಿಗೆ ಇಷ್ಟಾದರೂ ದಕ್ಕಿತಲ್ಲ ಎಂದು ಸಮಾಧಾನ ಪಟ್ಟುಕೊಳ್ಳುವುದು! ಇಷ್ಟೊಂದು ದೊಡ್ಡ ದೇಶಕ್ಕೆ ಇಷ್ಟು ಕಡಿಮೆ ಪದಕ ದೊರಕುತ್ತಿದೆ ಅಂದರೆ ಹೆಮ್ಮೆ ಪಡಬೇಕೋ ಅಥವಾ ನಮ್ಮನ್ನೇ ನಾವು ಶಪಿಸಿಕೊಳ್ಳಬೇಕೋ? ಪ್ರಾರಂಭದಲ್ಲಿ ಏನೇನೋ ಭರವಸೆ ಮೂಡಿಸಿ, ನಂತರ ಎಲ್ಲವೂ ಠುಸ್! ಒಂದಂತೂ ಒಪ್ಪಿಕೊಳ್ಳಲೇಬೇಕು. ನಮ್ಮ ದೇಶದಲ್ಲಿ ಕ್ರೀಡೆಯನ್ನು ಪ್ರೋತ್ಸಾಹಿಸುವ ಯಾವೊಂದು ವಾತಾವರಣ ಇನ್ನೂ ಸೃಷ್ಟಿಯಾಗಿಯೇ ಇಲ್ಲ, ಅದಕ್ಕೆ ಪೂರಕ ಪ್ರೋತ್ಸಾಹಗಳೂ ಸಿಗುತ್ತಿಲ್ಲ, ಇದ್ದುದರಲ್ಲೇ ಸಂತುಷ್ಟರಾಗಿ, ನಮ್ಮ ಬೆನ್ನನ್ನು ನಾವೇ ಚಪ್ಪರಿಸಿಕೊಳ್ಳುತ್ತ, ಪಡೆದ ಕಂಚಿನ ಹಾರವನ್ನೇ ಲೆಕ್ಕ ಮಾಡುತ್ತ, ಮುಂದಿನ ಕ್ರೀಡೆಗಾಗಿ 'ತಯಾರಿ' ನಡೆಸುವುದು!

(ಲೇಖಕರು ಹವ್ಯಾಸಿ ಬರಹಗಾರರು)

ಬಾಹ್ಯಾಕಾಶ ಯೋಜನೆ ಹರಿಕಾರ ಸಾರಾಭಾಯಿ

ಮೇರುಶಿಖರ
ಎಲ್.ಪಿ.ಕುಲಕರ್ಣಿ
vveditoped@gmail.com

ಗದ್ದಲದ ನಡುವೆಯೂ ಸಂಗೀತವನ್ನು ಲಕ್ಷ್ಯವಿಟ್ಟು ಆಲಿಸಬಲ್ಲವನು ವಿಶೇಷ ಸಾಧನೆ ಮಾಡಬಲ್ಲ'– ಹೀಗೆಂದವರು ವಿಕ್ರಮ್ ಸಾರಾಭಾಯಿ. 2023ರ ಜುಲೈ 14ರಂದು, ಚಂದ್ರಯಾನ–3 ಯೋಜನೆಯ ಭಾಗವಾಗಿ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ನಭಕ್ಕೆ ಚಿಮ್ಮಿದ ಉಪಗ್ರಹ ವಾಹಕದಲ್ಲಿ 'ವಿಕ್ರಮ್ ಲ್ಯಾಂಡರ್' ಮತ್ತು 'ಪ್ರಗ್ಯಾನ್ ರೋವರ್' ನೌಕೆಗಳಿದ್ದವು. ಆಗಸ್ಟ್ 23ರಂದು ಚಂದ್ರನ ದಕ್ಷಿಣ ಧ್ರುವದಲ್ಲಿ ವಿಕ್ರಮ್ ಲ್ಯಾಂಡರ್ ನೌಕೆಯು ಸುರಕ್ಷಿತವಾಗಿ ಇಳಿದಾಗ ಭಾರತೀಯರೆಲ್ಲರೂ ಹೆಮ್ಮೆಪಟ್ಟು ಸಂಭ್ರಮಿಸಿದ್ದು ನಿಜ. ಈ ಲ್ಯಾಂಡರ್ ನೌಕೆಗೆ ವಿಕ್ರಮ್ ಸಾರಾಭಾಯಿ ಅವರ ಹೆಸರಿಟ್ಟು ಗೌರವಿಸಿದ್ದೂ ನಿಮಗೆ ಗೊತ್ತಿರುವ ಸಂಗತಿಯೇ.

'ಭಾರತೀಯ ಬಾಹ್ಯಾಕಾಶ ಯೋಜನೆಗಳ ಜನಕ' ಎಂದು ಪ್ರಸಿದ್ಧರಾದ ವಿಕ್ರಮ್ ಸಾರಾಭಾಯಿ ಅವರು ಜನಿಸಿದ್ದು 1919ರ ಆಗಸ್ಟ್ 12ರಂದು. ಭಾರತದ ಪ್ರಪ್ರಥಮ ಉಪಗ್ರಹ 'ಆರ್ಯಭಟ'ದ ಉಡಾವಣೆಯ ಹಿಂದೆ ಇದ್ದ ಪ್ರಮುಖ ಶಕ್ತಿಯೂ ಅವರೇ. ಈ ಉಪಗ್ರಹ ಕಕ್ಷೆಗೆ ಸೇರಿದ್ದು 1975ರಲ್ಲಿ, ಆದರೆ ಸಾರಾಭಾಯಿ ಅವರು 1971ರಲ್ಲೇ ದೇಹತ್ಯಾಗ ಮಾಡಿದ್ದರು. ಅಷ್ಟು ಹೊತ್ತಿಗಾಗಲೇ ಅವರು ಮಾಡಿದ್ದ ಕೆಲಸಗಳು, ಬೆಳೆಸಿದ್ದ ಸಂಸ್ಥೆಗಳು, ಕಂಡಿದ್ದ ಕನಸುಗಳು ಅನೇಕ.

ಅಂಬಾಲಾಲ್ ಸಾರಾಭಾಯಿ ಮತ್ತು ಸರಳಾದೇವಿ ಅವರ ಎಂಟನೇ ಪುತ್ರ ವಿಕ್ರಮ್ ಸಾರಾಭಾಯಿ. ಇವರು ಜನಿಸಿದ ಸಮಯದಲ್ಲಿ ಸಾರಾಭಾಯಿ ಕುಟುಂಬವು ಗುಜರಾತಿನ ಪ್ರತಿಷ್ಠಿತ ವರ್ತಕ ಸಮುದಾಯದಲ್ಲಿ ಒಂದೆನಿಸಿಕೊಂಡಿತ್ತು. ತಂದೆ ಅಂಬಾಲಾಲರು ಗುಜರಾತಿನ ಅನೇಕ ಗಿರಣಿಗಳ ಸ್ವಾಮ್ಯವನ್ನು ಹೊಂದಿದ್ದರೆ, ತಾಯಿ ಸರಳಾದೇವಿ ಮಾಂಟೆಸ್ಸರಿ ಶಾಲೆಯನ್ನು ಸ್ಥಾಪಿಸಿದ್ದರು. ಸ್ವಾತಂತ್ರ್ಯ ಚಳವಳಿಯ ಕಟ್ಟಾ ಬೆಂಬಲಿಗರಾಗಿದ್ದ ಇವರ ಮನೆಗೆ ಮಹಾತ್ಮ ಗಾಂಧೀಜಿ, ಸರ್ದಾರ್ ವಲ್ಲಭಭಾಯಿ ಪಟೇಲರಂಥ ಮಹನೀಯರು ಭೇಟಿ ನೀಡುತ್ತಿದ್ದುದುಂಟು.

1947ರಲ್ಲಿ ಕೇಂಬ್ರಿಜ್‌ನಲ್ಲಿ ಕಾಲೇಜು ಶಿಕ್ಷಣ ಪಡೆದು ಭಾರತಕ್ಕೆ ಮರಳಿ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಕೇಂದ್ರದಲ್ಲಿ ಸಿ.ವಿ.ರಾಮನ್ ಅವರ ಬಳಿ ಸಂಶೋಧನಾ ವಿದ್ಯಾರ್ಥಿಯಾಗಿ ಸೇರಿದ ವಿಕ್ರಮ್, ಕಾಸ್ಮಿಕ್ ಕಿರಣಗಳ ಬಗೆಗೆ ಅಧ್ಯಯನ ಕೈಗೊಂಡರು. ಅಲ್ಲಿಯೇ ಸಂಶೋಧನಾನಿರತರಾಗಿದ್ದ ಹೋಮಿ ಜಹಾಂಗೀರ್ ಭಾಭಾ ಜತೆಗೆ ವಿಕ್ರಮ್‌ರಿಗೆ ಗೆಳೆತನವಾಗಿ ಅದು ಮುಂದೆ ಆತ್ಮೀಯತೆಯವರೆಗೆ ಬಂದು ನಿಂತುಬಿಟ್ಟಿತು. ಈ ಮಧ್ಯೆ, ವಿಕ್ರಮ್ ಸಾರಾಭಾಯಿ ಅವರಿಗೆ ಕೂಚಿಪುಡಿ ಮತ್ತು ಭರತನಾಟ್ಯ ಪ್ರವೀಣೆ ಮೃಣಾಲಿನಿಯವರ ಪರಿಚಯವಾಗಿ, ಆ ಸ್ನೇಹವು ಪ್ರೇಮಕ್ಕೆ ತಿರುಗಿ ಮದುವೆಯಾದರು. ನಂತರದಲ್ಲಿ ಮೃಣಾಲಿನಿ ಅವರು ಇತ್ತ ನಾಟ್ಯಕ್ಷೇತ್ರದಲ್ಲಿ ಹೆಸರುಮಾಡತೊಡಗಿದರೆ, ವಿಕ್ರಮ್ ಅವರು ಬಾಹ್ಯಾಕಾಶ ವಿಜ್ಞಾನ ಕ್ಷೇತ್ರದಲ್ಲಿ ಖ್ಯಾತರಾಗತೊಡಗಿದರು. 'ಫಿಸಿಕಲ್ ರಿಸರ್ಚ್ ಲ್ಯಾಬೊರೇಟರಿ' ಎಂಬ ಮೊಟ್ಟಮೊದಲ ಸಂಶೋಧನಾ ಸಂಸ್ಥೆ ಸೇರಿದಂತೆ ಅನೇಕ ವಿಜ್ಞಾನ ಸಂಸ್ಥೆಗಳನ್ನು ಸ್ಥಾಪಿಸಿ ಭಾರತದಾದ್ಯಂತ ವಿಜ್ಞಾನದ ಬೀಜವನ್ನು ಬಿತ್ತಿ ಮೊಳಕೆಯೊಡೆಯುವಂತೆ ಮಾಡಿದರು.

ಹೋಮಿ ಭಾಭಾ ಅವರ ಉತ್ತರಾಧಿಕಾರಿಯಾಗಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೋ) ಎರಡನೆಯ ಅಧ್ಯಕ್ಷರಾಗಿ ಅವರು ಕಾರ್ಯನಿರ್ವಹಿಸಿದ ಪರಿ ಬೆರಗುಮೂಡಿಸುವಂಥದ್ದು. ಹೋಮಿ ಭಾಭಾರ ಒತ್ತಾಸೆಯೊಂದಿಗೆ ಕೇರಳದ 'ಥುಂಬಾ' ಮತ್ತು ಆಂಧ್ರಪ್ರದೇಶದ 'ಶ್ರೀಹರಿಕೋಟಾ' ಪ್ರದೇಶಗಳಲ್ಲಿ ಮೊದಲ ಬಾರಿಗೆ ರಾಕೆಟ್ಟುಗಳ ಉಡಾವಣಾ ಕೇಂದ್ರವನ್ನು ನಿರ್ಮಿಸಿದುದು ದೇಶದ ಮಟ್ಟಿಗೆ ಒಂದು ಮೈಲುಗಲ್ಲು. ಇದು ಇಸ್ರೋದ ಈಗಿನ ಸಾಧನೆಗಳಿಗೆ ವಿಕ್ರಮ್ ಹಾಕಿದ ಭದ್ರ ಬುನಾದಿ ಎಂದರೆ ತಪ್ಪಾಗಲಾರದು. ವಿಜ್ಞಾನ ಕ್ಷೇತ್ರದಲ್ಲಿನ ಕಾರ್ಯದ ಜತೆಜತೆಗೆ ತಮ್ಮ ಕೌಟುಂಬಿಕ ಉದ್ಯಮವಾದ ಉಡುಪಿನ ತಂತ್ರಜ್ಞಾನವನ್ನೂ ವಿಕ್ರಮ್ ಸಾರಾಭಾಯಿ ಬೆಳೆಸುತ್ತಿದ್ದರು; ಅಹಮದಾಬಾದ್‌ನಲ್ಲಿ ಅವರು ಸ್ಥಾಪಿಸಿದ 'ಟೆಕ್ಸ್‌ಟೈಲ್ ಇಂಡಸ್ಟ್ರಿಯಲ್ ರಿಸರ್ಚ್ ಅಸೋಸಿಯೇಷನ್' ಜವಳಿ ಉದ್ಯಮಗಳ ಅಪಾರ ಬೆಳವಣಿಗೆಗೆ ನಾಂದಿಹಾಡಿತು.

ಸಾಂಸ್ಥಿಕ ನಿರ್ವಹಣೆಯ ವಿಷಯದಲ್ಲಿ ಹೆಚ್ಚಿನ ಶಿಕ್ಷಣ ನೀಡಲು ಅನುವಾಗುವಂತೆ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್' ಸಂಸ್ಥೆಯನ್ನು ತೆರೆದದ್ದು ವಿಕ್ರಮ್ ಅವರ ಮತ್ತೊಂದು ಬಹುದೊಡ್ಡ ಕೊಡುಗೆ. ಈ ಸಂಸ್ಥೆ ಈಗ ಜಗದ್ವಿಖ್ಯಾತವಾಗಿದೆ. ಮಕ್ಕಳಿಗೆ ವಿಜ್ಞಾನ ಶಿಕ್ಷಣ ನೀಡುವಲ್ಲಿ ತೀವ್ರಾಸಕ್ತಿ ಹೊಂದಿದ್ದ ಅವರು ಅದಕ್ಕಾಗಿ ಅಹಮದಾಬಾದ್‌ನಲ್ಲಿ ಆರಂಭಿಸಿದ 'ಕಮ್ಯೂನಿಟಿ ಸೈನ್ಸ್ ಸೆಂಟರ್' ಕೂಡ ಇಲ್ಲಿ ಉಲ್ಲೇಖನೀಯ.

ಪರಿಸರದ ಕುರಿತಾದ ಅಪಾರ ಕಾಳಜಿಯಿಂದಾಗಿ 'ಸೆಂಟರ್ ಫಾರ್ ಎನ್ವಿರಾನ್ಮೆಂಟಲ್ ಪ್ಲಾನಿಂಗ್ ಆ್ಯಂಡ್ ಟೆಕ್ನಾಲಜಿ' ಎಂದು ಕೇಂದ್ರವನ್ನೂ, ಅಂಧರ ಬದುಕಿನಲ್ಲಿ ಏಳಿಗೆಗಾಗಿ 'ಬ್ಲೈಂಡ್ ಮೆನ್ ಅಸೋಸಿಯೇಷನ್' ಅನ್ನೂ ಹುಟ್ಟುಹಾಕಿದ್ದು ವಿಕ್ರಮ್ ಅವರ ಹೆಗ್ಗಳಿಕೆ. ಕಲಾಪ್ರಕಾರಗಳಲ್ಲೂ ಅವರಿಗೆ ಶ್ರೇಷ್ಠ ಅಭಿರುಚಿಯಿತ್ತು ಮತ್ತು ಅವರು ಕಲೆ–ಸಂಸ್ಕೃತಿಯ ಪೋಷಕರಾಗಿದ್ದರು. ಪತ್ನಿ ಮೃಣಾಲಿನಿ ಅವರೊಂದಿಗೆ 'ದರ್ಪಣ ಅಕಾಡೆಮಿ ಆಫ್ ಪರ್‌ಫಾರ್ಮಿಂಗ್ ಆರ್ಟ್ಸ್' ಎಂಬ ಸಂಸ್ಥೆಯನ್ನು ಹುಟ್ಟುಹಾಕಿದ್ದು ಇದಕ್ಕೆ ದ್ಯೋತಕ.

ಬಡತನದ ಬೇಗೆಯಲ್ಲಿ ಬೇಯುತ್ತಿದ್ದ ಭಾರತದಂಥ ರಾಷ್ಟ್ರದಲ್ಲಿ ವೈಜ್ಞಾನಿಕ ಸಂಶೋಧನೆಗೆ ಒತ್ತುಕೊಡುವ ನಿಟ್ಟಿನಲ್ಲಿ ಅವರ ವೈಜ್ಞಾನಿಕ ಮನೋಭಾವ, ಕಾರ್ಯದಕ್ಷತೆ ಮತ್ತು ದೂರಾಲೋಚನೆಗಳು ನೀಡಿದ ಕೊಡುಗೆ ಅಪಾರ. ಇದರಿಂದಾಗಿ ದೇಶದ ಯುವಕರಲ್ಲಿ ಉತ್ಸಾಹ ಚಿಮ್ಮುವಂತಾಗಿ ವೈಜ್ಞಾನಿಕ ಕ್ಷೇತ್ರದಲ್ಲಿ ದೇಶಕ್ಕೆ ಖ್ಯಾತಿ ಬರುವಂತಾಯಿತು. ಅಣುಶಕ್ತಿಯ ಶಾಂತಿಯುತ ಬಳಕೆ ಕುರಿತು ಚರ್ಚಿಸಲು ಹಮ್ಮಿಕೊಳ್ಳಲಾಗಿದ್ದ ವಿಶ್ವಸಂಸ್ಥೆಯ ನಾಲ್ಕನೇ ಸಮ್ಮೇಳನದ ಉಪಾಧ್ಯಕ್ಷರಾಗುವ ಮೂಲಕ ವಿಕ್ರಮ್ ಅವರು ಭಾರತಕ್ಕೆ ಅಂತಾರಾಷ್ಟ್ರೀಯ ಮಟ್ಟದ ಕೀರ್ತಿಯನ್ನು ತಂದುಕೊಟ್ಟರು. ವಿಕ್ರಮ್ ಸಾರಾಭಾಯಿ ಅವರ 100ನೇ ಹುಟ್ಟುಹಬ್ಬವಾದ 2019ರ ಆಗಸ್ಟ್ 12ರಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೋ) ಅವರ ಗೌರವಾರ್ಥವಾಗಿ 'ವಿಕ್ರಮ್ ಸಾರಾಭಾಯಿ ಪತ್ರಿಕೋದ್ಯಮ ಪ್ರಶಸ್ತಿ'ಯನ್ನು ಘೋಷಿಸಿತು. ಬಾಹ್ಯಾಕಾಶ ವಿಜ್ಞಾನ, ತಂತ್ರಜ್ಞಾನ, ಅನ್ವಯಿಕೆಗಳು ಮತ್ತು ಸಂಶೋಧನೆಗಳಿಗೆ ಕೊಡುಗೆ ನೀಡಿದ ಪತ್ರಕರ್ತರಿಗೆ ಈ ಪುರಸ್ಕಾರವನ್ನು ನೀಡಲಾಗುತ್ತದೆ.

ಸ್ಪಷ್ಟತೆಯಿಂದ ಕೂಡಿದ ಸರಳ ಮಾತುಗಳು, ಅಪಾರ ಶ್ರದ್ಧೆ, ಕಾಳಜಿ, ಆತ್ಮವಿಶ್ವಾಸ, ದೇಶಭಕ್ತಿ ಇವೆಲ್ಲವೂ ಅವರ ವ್ಯಕ್ತಿತ್ವದ ಅವಿಭಾಜ್ಯ ಅಂಗಗಳಾಗಿದ್ದವು. ತಮ್ಮಿಡೀ ಬದುಕನ್ನು ಮಾತ್ರವಲ್ಲದೆ, ಜೀವಮಾನದ ಗಳಿಕೆಯಾದ ಹಣ, ಆಸ್ತಿ ಎಲ್ಲವನ್ನೂ ದೇಶದ ವಿಜ್ಞಾನ ಕ್ಷೇತ್ರದ ಬೆಳವಣಿಗೆಗಾಗಿ ಮುಡಿಪಾಗಿಟ್ಟ ಅನನ್ಯ ವ್ಯಕ್ತಿ ವಿಕ್ರಮ್ ಸಾರಾಭಾಯಿ. ಭಾರತ ಸರಕಾರದ ಶಾಂತಿ ಸ್ವರೂಪ್ ಭಟ್ನಾಗರ್ ಸ್ಮಾರಕ ಪಾರಿತೋಷಕ (1962), ಪದ್ಮಭೂಷಣ (1966) ಮತ್ತು ಮರಣೋತ್ತರವಾಗಿ ನೀಡಲಾದ ಪದ್ಮವಿಭೂಷಣ (1972) ಮೊದಲಾದ ಗೌರವಗಳು ಅವರನ್ನು ಹುಡುಕಿಕೊಂಡು ಬಂದವು. ಇಂಥ ಮಹಾನ್ ಸಾಧಕನ ಬದುಕು ನಮಗೆ ದಾರಿದೀಪವಾಗಬೇಕು. 1971ರ ಡಿಸೆಂಬರ್ 31ರಂದು ವಿಕ್ರಮ್ ಸಾರಾಭಾಯಿ ನಿಧನರಾದರು.

ವಿಕ್ರಮ್ ಸಾರಾಭಾಯಿ ಅವರು ಈಗೇನಾದರೂ ಬದುಕಿದ್ದಿದ್ದರೆ, ತಾವೇ ಕಟ್ಟಿ ಬೆಳೆಸಿದ ಇಸ್ರೋ ಸಂಸ್ಥೆಯ ಚಂದ್ರಯಾನ 1 ಮತ್ತು 2 ಯತ್ನಗಳು, ಯಶಸ್ವಿಯಾಗಿ ದಾಖಲೆ ನಿರ್ಮಿಸಿದ 'ಚಂದ್ರಯಾನ–3', 'ಎಕ್ಸ್‌ಪೋಸ್ಯಾಟ್' ಮೂಲಕದ ಬ್ರಹ್ಮಾಂಡದ ಕಾಸ್ಮಿಕ್ ವಿಕಿರಣಗಳ ಅಧ್ಯಯನ, ಸೂರ್ಯನ ಅಧ್ಯಯನಕ್ಕೆ ಕಳಿಸಿದ 'ಆದಿತ್ಯ ಎಲ್–1' ಯೋಜನೆ, ಮಂಗಳ ಗ್ರಹದ ಕುರಿತಾದ ಅಧ್ಯಯನ ಮಿಷನ್, ಶುಕ್ರಗ್ರಹದ ಅನ್ವೇಷಣಾ ಯೋಜನೆ, ಸೌರವ್ಯೂಹದಾಚೆಗಿನ ಆಕಾಶಕಾಯಗಳ ಅಧ್ಯಯನಕ್ಕ 2028ರಲ್ಲಿ ಹಮ್ಮಿಕೊಳ್ಳಲಾಗಿರುವ 'ಎಕ್ಸೋವರ್ಲ್ಡ್' ಯೋಜನೆ ಮುಂತಾದ ಉಪಕ್ರಮಗಳ ಬಗ್ಗೆ ಹೆಮ್ಮೆಪಡುತ್ತಿದ್ದರು.

(ಲೇಖಕರು ಶಿಕ್ಷಕರು)

ಈ ಪರಿಪಾಠ ದುರದೃಷ್ಟಕರವಲ್ಲವೇ?

ಒಡಲಾಳ
ಅನನ್ಯ ಭಾರ್ಗವ ಬೇದೂರು

ಕರ್ನಾಟಕ ಸಂಗೀತ–ನೃತ್ಯ ಅಕಾಡೆಮಿ ಪ್ರತಿ ವರ್ಷದಂತೆ ಈ ವರ್ಷವೂ ಶಿಷ್ಯವೇತನಕ್ಕೆ ಅರ್ಜಿ ಆಹ್ವಾನಿಸಿದೆ. ಇದರಲ್ಲೇನು ಹೊಸತು? ಎಂದು ಕೆಲವರಿಗೆ ಅನ್ನಿಸಬಹುದು. ಅಲ್ಲೇ ಇರುವುದು ವಿಶೇಷತೆ– ಪೆನ್‌ಡ್ರೈವ್ ಮೂಲಕ ಶಿಷ್ಯವೇತನಕ್ಕ ಆಹ್ವಾನ. ಹೌದು, ಇಷ್ಟು ವರ್ಷ ಅನೂಚಾನವಾಗಿ ನಡೆದುಕೊಂಡು ಬಂದ ಒಂದು ಪದ್ಧತಿಯು, ಆಧುನಿಕ ಜಗತ್ತಿಗೆ ಅಪ್‌ಡೇಟ್ ಎಂಬ ರೀತಿಯಲ್ಲಿ ಹೊಸರೀತಿಯ ಶಿಷ್ಯವೇತನ ಪದ್ಧತಿಯಾಗಿ ಬದಲಾಗಿದೆ. ಇದು ತುಂಬಾ ದುರದೃಷ್ಟಕರ.

ಹಿಂದೆ ಶಿಷ್ಯವೇತನ ಪಡೆಯಲು ಇದ್ದ ಮಾರ್ಗವೇ ಬೇರೆ. ಕರ್ನಾಟಕ ಸಂಗೀತ–ನೃತ್ಯ ಅಕಾಡೆಮಿಯು ರಾಜ್ಯದ ಸುಮಾರು ಏಳು ಜಿಲ್ಲೆಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸಿದೆ. ಸುತ್ತಮುತ್ತಲ ಪ್ರದೇಶ ಮತ್ತು ಗ್ರಾಮೀಣ ಭಾಗಗಳಲ್ಲಿರುವ, ಸಂಗೀತ ಮತ್ತು ನೃತ್ಯ ಕಲಿಯುತ್ತಿರುವ ವಿದ್ಯಾರ್ಥಿಗಳು ಈ ಕೇಂದ್ರಗಳಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡು, ಅಕಾಡೆಮಿಯು ನಿಗದಿಪಡಿಸಿರುವ ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ, ಸುಗಮ ಸಂಗೀತ, ಕಥಾಕೀರ್ತನ, ಗಮಕ, ನೃತ್ಯ ಮೊದಲಾದ ಕಲಾಪ್ರಕಾರಗಳಲ್ಲಿ ಶಿಷ್ಯವೇತನದ ಪಠ್ಯಕ್ರಮದಂತೆ ತಯಾರಿ ನಡೆಸಿ ಪರೀಕ್ಷೆಗೆ ಹಾಜರಾಗುತ್ತಿದ್ದರು. ಪ್ರತಿ ಕೇಂದ್ರಕ್ಕೆ ಕನಿಷ್ಠಪಕ್ಷ ಇಬ್ಬರು–ಮೂವರು ಪರಿಣತ ಸಂಗೀತ ಮತ್ತು ನೃತ್ಯ ಕಲಾವಿದರು ಅಲ್ಲಿ ಪರೀಕ್ಷಕರಾಗಿ ಪಾಲ್ಗೊಳ್ಳುತ್ತಿದ್ದರೆ. ಅಂದಾಜಿನ ಪ್ರಕಾರ, ಒಟ್ಟಾರೆಯಾಗಿ 30–35 ಇಂಥ ವಿದ್ವಾಂಸರು ಹಾಗೂ ಸಂಗೀತ–ನೃತ್ಯ ಅಕಾಡೆಮಿಯ ಸದಸ್ಯರ ಸಮ್ಮುಖದಲ್ಲಿ ಪರೀಕ್ಷೆ ನಡೆಯುತ್ತಿತ್ತು. ಬಂದಂಥ ವಿದ್ಯಾರ್ಥಿಗಳಿಗೆ ಪಕ್ಕವಾದ್ಯಗಾರರನ್ನು ಕೂಡ ಅಕಾಡೆಮಿಯೇ ನೇಮಿಸಿಕೊಡುತ್ತಿತ್ತು.

ಈ ರೀತಿ ಪ್ರತ್ಯಕ್ಷ (ಲೈವ್) ಸ್ವರೂಪದಲ್ಲಿ ನಡೆಯುವ ಪರೀಕ್ಷೆಗೆ ಅದರದೇ ಆದಂಥ ಮಹತ್ವ ಇರುತ್ತದೆ. ಪ್ರತಿ ವಿದ್ಯಾರ್ಥಿಗೂ ಇದೊಂದು ಪುಟ್ಟ ವೇದಿಕೆಯೇ ಆಗಿರುತ್ತದೆ. ಪರೀಕ್ಷಕರು ವಿದ್ಯಾರ್ಥಿಯ ರಾಗ–ಭಾವ–ತಾಳ, ನೃತ್ಯದ ಚಲನೆಯ ಗತಿ ಇವುಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಆತನ/ಆಕೆಯ ತಯಾರಿಯನ್ನು ಸೂಕ್ಷ್ಮವಾಗಿ ಅವಲೋಕಿಸಿ, ಅವರ ಪೈಕಿ ಅರ್ಹರಾದವರನ್ನು ಶಿಷ್ಯವೇತನಕ್ಕೆ ಆಯ್ಕೆಮಾಡುತ್ತಿದ್ದರು. ಹೀಗೆ ಉತ್ತಮ ಪ್ರತಿಭೆಗಳನ್ನು ಆಯ್ಕೆಮಾಡಿದ ಪರೀಕ್ಷಕರಿಗೆ ಮತ್ತು ಪಕ್ಕವಾದ್ಯಗಾರರಿಗೆ ಸೂಕ್ತವಾದಂಥ ಸಂಭಾವನೆ ಕೊಟ್ಟು ಗೌರವಿಸಲಾಗುತ್ತಿತ್ತು. ಆದರೆ ಈ ವರ್ಷ ಈ ಪರಿಪಾಠವನ್ನು ಗಾಳಿಗೆ ತೂರಲಾಗಿದೆ. ಶಿಷ್ಯವೇತನ ಬಯಸುವ ವಿದ್ಯಾರ್ಥಿಗಳು ನಿಗದಿತ ಪಠ್ಯಕ್ರಮದ ಅನುಸಾರ ತಮ್ಮ ಪ್ರದರ್ಶನವನ್ನು ಮೊಬೈಲ್‌ನಲ್ಲಿ ಅಥವಾ ಒಳ್ಳೆಯ ಸ್ಟುಡಿಯೋಗಳಲ್ಲಿ ವಿಡಿಯೋ ಮಾಡಿ, ಅದನ್ನು ಪೆನ್‌ಡ್ರೈವ್‌ಗೆ ವರ್ಗಾಯಿಸಿ ಅಕಾಡೆಮಿಗೆ ಕಳುಹಿಸಿಕೊಡಬೇಕಂತೆ. ಅಲ್ಲಿನವರು ಅದನ್ನು ವೀಕ್ಷಿಸಿ ಶಿಷ್ಯವೇತನಕ್ಕೆ ಯಾರು ಸೂಕ್ತರು/ಅರ್ಹರು ಎನ್ನುವುದನ್ನು ಅಲ್ಲಿಯೇ ಕುಳಿತು ನಿರ್ಧರಿಸುತ್ತಾರಂತೆ!

ಎಲ್ಲಿಗೆ ಬಂತು ಕಾಲ? ಒಂದು ಮಾಹಿತಿಯ ಪ್ರಕಾರ, ವಿದ್ಯಾರ್ಥಿಗಳು ತಮ್ಮ ಕಲಾಪ್ರದರ್ಶನದ 20 ನಿಮಿಷದ ವಿಡಿಯೋ ಮಾಡಿ ಕಳುಹಿಸಬೇಕಂತೆ. ಇಲ್ಲಿ ಗಮನಿಸಬೇಕಾದ್ದು ಆರ್ಥಿಕ ಸಬಲತೆಯನ್ನು ಹೊಂದಿರುವ ಪೋಷಕರು ಉತ್ತಮ ಸ್ಟುಡಿಯೋಗಳಲ್ಲಿ ರೆಕಾರ್ಡಿಂಗ್ ಮಾಡಿಸಬಲ್ಲವರಾಗಿರುತ್ತಾರೆ. ಸಾಲದೆಂಬಂತೆ, ಮಕ್ಕಳು ಎಷ್ಟೇ ತಪ್ಪಾಗಿ ಹಾಡಿದರು ಕೂಡ ಸುಧಾರಿತ ಆವೃತ್ತಿಯನ್ನು 'ಕಟ್ ಆ್ಯಂಡ್ ಪೇಸ್ಟ್' ಮಾಡಿ, ಸಾಮಾನ್ಯ ಹಾಡುಗಾರರನ್ನೂ ಅಸಾಮಾನ್ಯರಾಗಿ ಪರಿವರ್ತಿಸಬಲ್ಲ ಸಾಫ್ಟ್‌ವೇರ್‌ಗಳು ಅಭಿವೃದ್ಧಿಯಾಗಿವೆ. ಗ್ರಾಮೀಣ ಪ್ರದೇಶಗಳಲ್ಲಿರುವ ಮತ್ತು ಬಡ–ಮಧ್ಯಮ ವರ್ಗದ ಪ್ರತಿಭಾವಂತ ವಿದ್ಯಾರ್ಥಿಗಳು ಇದನ್ನೆಲ್ಲ ಮಾಡಲು ಸಾಧ್ಯವೇ? ತಮ್ಮ ಪ್ರತಿಭೆಯನ್ನು ಅವರು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡು, ಸಾವಿರಾರು ರುಪಾಯಿ ಕೊಟ್ಟು ಪೆನ್‌ಡ್ರೈವ್ ಖರೀದಿಸಿ (ಈಗ ಮೊದಲಿನಂತೆ 200–300 ರುಪಾಯಿಗೆ ಪೆನ್‌ಡ್ರೈವ್ ಸಿಗುವುದಿಲ್ಲ), ಅದಕ್ಕೆ ತಮ್ಮ ಧ್ವನಿಮುದ್ರಿತ ಕಲಾಪ್ರದರ್ಶನವನ್ನು ವರ್ಗಾಯಿಸಿ ಅಕಾಡೆಮಿಗೆ ಕಳುಹಿಸಿಕೊಡಲು ಸಾಧ್ಯವೇ? ಈಗ ಮಳೆಗಾಲವಾಗಿರುವುದರಿಂದ, ಸಾಕಷ್ಟು ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿ ಪೂರೈಕೆಯು ಸಮರ್ಪಕವಾಗಿರುವುದಿಲ್ಲ, ಕೆಲವೊಂದು ಪ್ರದೇಶಗಳಲ್ಲಿ 3–4 ದಿನಗಳವರೆಗೂ ವಿದ್ಯುತ್ತು ಅಲಭ್ಯವಾಗಿರುತ್ತದೆ. ಇಂಥ ಪರಿಸ್ಥಿತಿಯಲ್ಲಿ ಮಕ್ಕಳು ಹೇಗೆ ವಿಡಿಯೋ ಮಾಡಿ ಕಳುಹಿಸಿಕೊಡಲು ಸಾಧ್ಯ? ನಾಲ್ಕು ಗೋಡೆಗಳ ಮಧ್ಯೆ ಕುಳಿತು ಎದುರಿಗೆ ಮೊಬೈಲ್ ಇಟ್ಟು ಹಾಡಿಯೋ ಅಥವಾ ನರ್ತಿಸಿಯೋ ಧ್ವನಿಮುದ್ರಿಸಿಕೊಂಡು ನಂತರ ಪೆನ್‌ಡ್ರೈವ್‌ಗೆ ಹಾಕಿ ಕಳುಹಿಸಿಕೊಡುವುದು ಸೂಕ್ತವೇ ಅಥವಾ ಶಿಷ್ಯವೇತನ ಸಂಬಂಧಿತ ಸಂದರ್ಶನದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸುವುದು ಸೂಕ್ತವೇ?

ಸುಮಾರಾಗಿ ಪ್ರತಿ ಪೆನ್‌ಡ್ರೈವ್‌ನಲ್ಲಿ ಇಪ್ಪತ್ತೇ ನಿಮಿಷ ಎಂದು ಪರಿಗಣಿಸಿದರೂ, ಸಾವಿರಾರು ವಿದ್ಯಾರ್ಥಿಗಳು ಕಳುಹಿಸಿದ ಪೆನ್‌ಡ್ರೈವ್‌ಗಳಲ್ಲಿನ ಆ ಅವಧಿಯ ಕಲಾಪ್ರಸ್ತುತಿಯನ್ನು ವೀಕ್ಷಿಸಲು ಎಷ್ಟೊಂದು ಸಮಯ ಬೇಕಾಗುತ್ತದೆ (ಜತೆಗೆ ಸಂಗೀತ–ನೃತ್ಯ ಅಕಾಡೆಮಿಯು ಪೆನ್‌ಡ್ರೈವ್‌ನ ಕಾರ್ಖಾನೆಯಾಗಿಬಿಡುತ್ತದೆ!). ಹೀಗೆ ವೀಕ್ಷಿಸುವ ಮೂಲಕ ಶಿಷ್ಯವೇತನಕ್ಕೆ ಅರ್ಹರನ್ನು ಹೇಗೆ ಆಯ್ಕೆ ಮಾಡುತ್ತಾರೋ ದೇವರೇ ಬಲ್ಲ. ರಾಜ್ಯದ ಸಾಂಸ್ಕೃತಿಕ ಕಲಾಲೋಕದ ಪ್ರತಿಯೊಬ್ಬ ದಿಗ್ಗಜರು, ದೊಡ್ಡ ದೊಡ್ಡ ಸಂಗೀತಗಾರರು, ಕಲಾವಿದರು ಈ ಪರಿಪಾಠವನ್ನು ಪ್ರಶ್ನಿಸಬೇಕಿದೆ. ಇಲ್ಲವಾದರೆ, ಮುಂದೊಂದು ದಿನ 'ಆಧುನಿಕತೆಗೆ ಅಪ್‌ಡೇಟ್' ಎಂಬ ಭ್ರಮೆಗೆ ಬಿದ್ದು, ಅದರ ಮುಂದಿನ ಭಾಗವಾಗಿ ನಾಲ್ಕು ಗೋಡೆಗಳ ಮಧ್ಯೆ ಪ್ರೇಕ್ಷಕರೇ ಇಲ್ಲದೆ ಸಂಗೀತ–ನೃತ್ಯ ಕಲಾವಿದರು ತಮ್ಮ ಪ್ರಸ್ತುತಿಯನ್ನು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿ ಅಕಾಡೆಮಿಗೆ ಕಳಿಸಿ ಗೌರವ ಸಂಭಾವನೆಯನ್ನು ಪಡೆದುಕೊಳ್ಳುವ ದಿನ ಬಂದರೂ ಆಶ್ಚರ್ಯವಿಲ್ಲ. ಅಲ್ಲಿರುವ ಸದಸ್ಯರು ಕೂಡ ಈ ಪರಿಪಾಠಕ್ಕೆ ತಲೆದೂಗಿದರೆ ಹೇಗೆ ಎಂಬುದು ನನಗೆ ಅಚ್ಚರಿಯುಂಟುಮಾಡಿರುವ ಸಂಗತಿ. ಕಲಾಪ್ರೇಮಿಗಳಲ್ಲಿ, ಪ್ರಜ್ಞಾವಂತ ಕಲಾವಿದರಲ್ಲಿ ನನ್ನ ನಮ್ರ ವಿನಂತಿಯಿಷ್ಟೇ– ಇದನ್ನು ಅಧ್ಯಕ್ಷರ ಬಳಿಯಲ್ಲಿ ನೇರವಾಗಿ ಪ್ರಶ್ನಿಸೋಣ. ದಿನಾಂಕ ಮತ್ತು ಸಮಯವನ್ನು ನಿಗದಿಪಡಿಸಿದರೆ ನಾನಂತೂ ಇಂಥ ಹೋರಾಟಗಳಿಗೆ ಸದಾ ಸಿದ್ಧ. ಕಲಾವಿದರು ದಯವಿಟ್ಟು ಪ್ರತಿಕ್ರಿಯಿಸಿ, ದನಿಯೆತ್ತಿ.

(ಲೇಖಕರು ಸಂಗೀತ–ನೃತ್ಯ ಅಕಾಡೆಮಿಯ ಮಾಜಿ ಸದಸ್ಯರು)

ಅಚ್ಚುಕಟ್ಟು ಪ್ರದೇಶ
RNI no: 3918/59

VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed @ manipal media network limited Sy no7/2,plot no CA-3/1,28 (p)&29 (p),Kapnoor,2nd stage industrial area,kapnoor village, Gulbarga-585104

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 96

ಸಮಾಚಾರ ಸಣ್ಣದಲ್ಲ

ಮಾಜಿ ಸಚಿವ ನಟವರ್ ಸಿಂಗ್ ನಿಧನ



ದೆಹಲಿ: ಮಾಜಿ ವಿದೇಶಾಂಗ ಸಚಿವ ಕೆ.ನಟವರ್ ಸಿಂಗ್ (93) ವಯೋಸಹಜ ಅನಾರೋಗ್ಯದಿಂದಾಗಿ ಶನಿವಾರ ರಾತ್ರಿ ಗುರುಗ್ರಾಮ್‌ನ ಮೇದಾಂತ ಆಸ್ಪತ್ರೆಯಲ್ಲಿ ನಿಧನರಾದರು. ಎರಡು ವಾರ ಹಿಂದೆ ಆಸ್ಪತ್ರೆಗೆ ದಾಖಲಾಗಿದ್ದರು. ಅನುಭವಿ ರಾಜಕಾರಣಿ ಸಿಂಗ್ ಯುಪಿಎ ಸರಕಾರದ ಮೊದಲ ಅವಧಿಯಲ್ಲಿ ವಿದೇಶಾಂಗ ಸಚಿವರಾಗಿದ್ದರು. 1966–71ರವರೆಗೆ ಪಾಕಿಸ್ತಾನಕ್ಕೆ ರಾಯಭಾರಿಯಾಗಿದ್ದರು. 1931ರಲ್ಲಿ ರಾಜಸ್ಥಾನದ ಭರತ್‌ಪುರ ಜಿಲ್ಲೆಯಲ್ಲಿ ಜನಿಸಿದ ಸಿಂಗ್, ವೃತ್ತಿ ರಾಜತಾಂತ್ರಿಕರಾಗಿದ್ದರು. ವಿದೇಶಾಂಗ ವ್ಯವಹಾರಗಳ ಸೂಕ್ಷ್ಮ ವಿಷಯಗಳ ಬಗ್ಗೆ ಅವರು ಬರೆಯುತ್ತಿದ್ದ ಲೇಖನಗಳು ಜನಪ್ರಿಯವಾಗಿದ್ದವು. ವೃತ್ತಿಜೀವನದ ಅವಧಿಯಲ್ಲಿ ಅವರು ಪದ್ಮಭೂಷಣ ಪ್ರಶಸ್ತಿ(1984) ಸೇರಿದಂತೆ ಅನೇಕ ಗೌರವ-ಪ್ರಶಸ್ತಿಗಳಿಗೆ ಪಾತ್ರರಾಗಿದ್ದರು. ನಟವರ್ ಸಿಂಗ್ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ, ಕಾಂಗ್ರೆಸ್ ನಾಯಕ ರಣದೀಪ್ ಸುರ್ಜೆವಾಲಾ ಮತ್ತಿತರರು ಸಂತಾಪ ಸೂಚಿಸಿದ್ದಾರೆ.

ಮಣಿಪುರದಲ್ಲಿ ಗುಂಡಿನ ಚಕಮಕಿ-ನಾಲ್ವರ ಸಾವು

ಇಂಫಾಲ: ಮಣಿಪುರ ರಾಜ್ಯ ಸಹಜ ಸ್ಥಿತಿಗೆ ಮರಳುತ್ತಿದೆ ಎಂದುಕೊಳ್ಳುತ್ತಿರುವಾಗಲೇ ಮತ್ತೆ ಗುಂಡಿನ ಚಕಮಕಿಯ ಸದ್ದು ಕೇಳಿಬಂದಿದೆ. ತೆಂಗ್ನೌಪಾಲ್‌ನ ಮೊನ್ಸೊಮ್ ಪ್ರದೇಶದಲ್ಲಿ ಶುಕ್ರವಾರ ರಾತ್ರಿ ಕುಕಿ ಉಗ್ರರು ಹಾಗೂ ಗ್ರಾಮದ ಸ್ವಯಂಸೇವಕರ ನಡುವೆ ಗುಂಡಿನ ಚಕಮಕಿ ನಡೆದಿದ್ದು, ಒಬ್ಬ ಉಗ್ರ ಸೇರಿದಂತೆ ನಾಲ್ವರು ಸಾವಿಗೀಡಾಗಿದ್ದಾರೆ. ಯುನೈಟೆಡ್ ಕುಕಿ ಲಿಬರೇಶನ್ ಫ್ರಂಟ್(ಯುಕೆಎಲ್‌ಎಫ್) ಹಾಗೂ ಅದೇ ಸಮುದಾಯದ ಗ್ರಾಮದ ಸ್ವಯಂಸೇವಕರ ಮಧ್ಯೆ ಗುಂಡಿನ ಕಾಳಗ ನಡೆದಿದೆ. ಘಟನೆಯಲ್ಲಿ ಮೂವರು ಸ್ವಯಂಸೇವಕರು ಹಾಗೂ ಒಬ್ಬ ಕುಕಿ ಉಗ್ರ ಸಾವನ್ನಪ್ಪಿದ್ದಾನೆ. ಸ್ವಯಂಸೇವಕರ ಕೊಲೆಗೆ ಪ್ರತೀಕಾರವಾಗಿ ಯುಕೆಎಲ್‌ಎಫ್‌ನ ಸ್ವಯಂಘೋಷಿತ ಅಧ್ಯಕ್ಷ ಎಸ್.ಎಸ್.ಹಾವ್‌ಕಿಪ್ ಮನೆಗೆ ಗ್ರಾಮಸ್ಥರು ಬೆಂಕಿ ಹಚ್ಚಿದ್ದಾರೆ ಎಂದು ಪೊಲೀಸರು ಭಾನುವಾರ ಮಾಹಿತಿ ಹಂಚಿಕೊಂಡಿದ್ದಾರೆ. ಸುಂಕ ವಸೂಲಿ ವಿಚಾರಕ್ಕೆ ಗಲಾಟೆ ನಡೆದು ಗುಂಡಿನ ಚಕಮಕಿಗೆ ಕಾರಣವಾಗಿದೆ ಎಂಬ ಮಾತು ಕೇಳಿಬಂದಿವೆ. ಸ್ಥಳದಲ್ಲಿ ಭದ್ರತಾಪಡೆಗಳು ಶೋಧ ಕಾರ್ಯ ನಡೆಸಿದ್ದು ಸದ್ಯ ಯಾರನ್ನೂ ಬಂಧಿಸಿಲ್ಲ. ಪರಿಸ್ಥಿತಿ ನಿಯಂತ್ರಣದಲ್ಲಿದೆ.

ಗಡಿಯಲ್ಲಿ ಬಾಂಗ್ಲಾದ 11 ಪ್ರಜೆಗಳ ಬಂಧನ

ದೆಹಲಿ: ಭಾರತದೊಳಗೆ ನುಸುಳಲು ಯತ್ನಿಸುತ್ತಿದ್ದ ಬಾಂಗ್ಲಾದೇಶದ 11 ಪ್ರಜೆಗಳನ್ನು ಬಂಧಿಸಲಾಗಿದೆ. ಪಶ್ಚಿಮ ಬಂಗಾಳ, ತ್ರಿಪುರಾ ಮತ್ತು ಮೇಘಾಲಯದಲ್ಲಿ ಅಂತಾರಾಷ್ಟ್ರೀಯ ಗಡಿಯಲ್ಲಿ ದೇಶಕ್ಕೆ ನುಸುಳಲು ಯತ್ನಿಸಿದವರ ಬಂಧನವಾಗಿದೆ ಎಂದು ಗಡಿ ಭದ್ರತಾ ಪಡೆ(ಬಿಎಸ್‌ಎಫ್) ಭಾನುವಾರ ತಿಳಿಸಿದೆ. ಪಶ್ಚಿಮ ಬಂಗಾಳ, ತ್ರಿಪುರಾ ಗಡಿಯಲ್ಲಿ ತಲಾ ಇಬ್ಬರು, ಮೇಘಾಲಯ ಗಡಿಯಲ್ಲಿ 7 ಮಂದಿಯನ್ನು ಬಂಧಿಸಲಾಗಿದೆ. ವಿಚಾರಣೆ ನಡೆಸಿ ಬಳಿಕ ಕಾನೂನು ಕ್ರಮಕ್ಕಾಗಿ ರಾಜ್ಯ ಪೊಲೀಸರಿಗೆ ಹಸ್ತಾಂತರಿಸಲಾಗುವುದು ಎಂದು ಸೇನಾ ವಕ್ತಾರರು ತಿಳಿಸಿದ್ದಾರೆ. ಬಾಂಗ್ಲಾದಲ್ಲಿರುವ ಭಾರತೀಯ ಪ್ರಜೆಗಳು, ಅಲ್ಪಸಂಖ್ಯಾತ ಹಿಂದೂ ಸಮುದಾಯದವರ ಮೇಲಿನ ದೌರ್ಜನ್ಯ ತಡೆಗೆ ಬಾಂಗ್ಲಾದೇಶದ ಗಡಿ ಭದ್ರತಾ ಪಡೆ ಜತೆ ಬಿಎಸ್‌ಎಫ್ ನಿಯಮಿತವಾಗಿ ಮಾತುಕತೆ ನಡೆಸುತ್ತಿದೆ. ಸತತ ಸಂಪರ್ಕದಲ್ಲಿದೆ ಎಂದು ಸೇನಾ ವಕ್ತಾರರು ಹೇಳಿದ್ದಾರೆ.

ಖಾಸಗಿ ವಿಮಾನ ಪತನ; ಪೈಲಟ್‌ಗಳಿಗೆ ಗಾಯ

ಭೋಪಾಲ್: ಮಧ್ಯಪ್ರದೇಶದ ಗುಣಾ ಜಿಲ್ಲೆಯಲ್ಲಿ ಖಾಸಗಿ ವಿಮಾನಯಾನ ಸಂಸ್ಥೆಯ 2 ಆಸನಗಳ ತರಬೇತಿ ವಿಮಾನ ಭಾನುವಾರ ಪತನವಾಗಿದ್ದು, ಇಬ್ಬರು ಪೈಲಟ್‌ಗಳು ಗಾಯಗೊಂಡಿದ್ದಾರೆ. ಕೂಡಲೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಇಬ್ಬರನ್ನೂ ಆಸ್ಪತ್ರೆಗೆ ದಾಖಲಿಸಲಾಗಿದೆ. ಖಾಸಗಿ ವಿಮಾನಯಾನ ಅಕಾಡೆಮಿಯ ಸೆಸ್ನಾ 152 ಶ್ರೇಣಿಯ ತರಬೇತಿ ವಿಮಾನ ಭಾನುವಾರ ಮಧ್ಯಾಹ್ನ 1.30ರ ವೇಳೆ ಹಾರಾಟ ನಡೆಸಿದ್ದಾಗ ಏರ್‌ಸ್ಟ್ರಿಪ್‌ನಲ್ಲೇ ಪತನಗೊಂಡಿದೆ. ವಿಮಾನ ಜಖಂಗೊಂಡಿದ್ದು, ಯಂತ್ರಕ್ಕೂ ಭಾರಿ ಹಾನಿಯಾಗಿದೆ. ಪತನಗೊಳ್ಳುವ ದಕ್ಕೂ ಮುನ್ನ 40 ನಿಮಿಷಗಳ ಕಾಲ ವಿಮಾನ ಉತ್ತಮವಾಗಿಯೇ ಹಾರಾಟ ನಡೆಸಿತ್ತು ಎಂದು ಮೂಲಗಳು ತಿಳಿಸಿವೆ.



{ಘನಶ್ಯಾಮ್ ತಿವಾರಿ} ಸಮಾಜವಾದಿ ಪಕ್ಷ ವಕ್ತಾರ

ಅಮೆರಿಕದ ಹಿಂಡೆನ್‌ಬರ್ಗ್ ಸಂಶೋಧನಾ ಸಂಸ್ಥೆ ಭಾರತದ ಅದಾನಿ ಕಂಪನಿಗಳ ಸಮೂಹಕ್ಕೆ ಸಂಬಂಧಿಸಿ ಪ್ರಕಟಿಸಿದ ವರದಿಯಿಂದಾಗಿ ಭಾರತೀಯ ಷೇರುಪತ್ರ ಮತ್ತು ವಿನಿಮಯ ಮಂಡಳಿ(ಸೆಬಿ) ವಿಶ್ವಾಸಾರ್ಹತೆ ಪ್ರಶ್ನೆ ಎದುರಾಗಿದೆ. ಪ್ರಧಾನಿ ಮೋದಿ ಆಡಳಿತವನ್ನು 'ಅದಾನಿ ವಾದ್' ಕಾಲ ಎನ್ನಬಹುದಾಗಿದೆ. ಆ ಪ್ರಮಾಣದಲ್ಲಿ ಉದ್ಯಮಿ ಗೌತಮ್ ಅದಾನಿ ಸಮೂಹ ಸರಕಾರದಿಂದ ಪ್ರಯೋಜನ ಪಡೆದಿದೆ.

ಸರ್ವಋತು ಸ್ನೇಹಿ 109 ಹೊಸ ತಳಿ ಬಿತ್ತನೆ ಬೀಜ ಲೋಕಾರ್ಪಣೆ

ಹೊಸ ತಳಿಗಳಿಂದ ಉತ್ಪಾದನೆ ವೆಚ್ಚ ಇಳಿಕೆ, ಇಳುವರಿ ಅಧಿಕ | ಕೃಷಿಕರ ಜತೆ ಪ್ರಧಾನಿ ಸಂವಾದ

ದೆಹಲಿ: ಪರಿಸರ ಸ್ನೇಹಿಯಾದ, ಅಧಿಕ ಇಳುವರಿಯ, ವರ್ಷದ ಯಾವುದೇ ಋತುವಿನಲ್ಲಾದರೂ ಬೆಳೆಯಬಹುದಾದ 109 ಹೊಸ ತಳಿಗಳ ಬೀಜಗಳನ್ನು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಲೋಕಾರ್ಪಣೆಗೊಳಿಸಿದ್ದಾರೆ. ಆ ಬಳಿಕ ರೈತರು, ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ(ಐಎಆರ್‌ಐ) ವಿಜ್ಞಾನಿಗಳ ಜತೆ ಸಂವಾದ ನಡೆಸಿದ್ದಾರೆ.

ಹೊಸ ತಳಿಗಳಲ್ಲಿ ಸಿರಿಧಾನ್ಯ, ಎಣ್ಣೆಕಾಳು, ಹಣ್ಣಿನ ಬೀಜ, ತರಕಾರಿ, ರಾಗಿ, ದ್ವಿದಳ ಧಾನ್ಯಗಳು, ಕಬ್ಬು, ಹತ್ತಿ, ವಿವಿಧ ರೀತಿ ಏಕದಳ ಬೀಜಗಳು, 27 ಬಗೆಯ ತೋಟಗಾರಿಕಾ ಬೆಳೆಗಳು, ಗೆಡ್ಡೆಗಳು, ಮಸಾಲೆ ಪದಾರ್ಥಗಳ ಸಸ್ಯಗಳ ಬೀಜಗಳು, ಹೂವುಗಳು ಮತ್ತು ಔಷಧೀಯ ಸಸ್ಯಗಳ ಬೀಜಗಳಿವೆ.

ಕೃಷಿ ಕ್ಷೇತ್ರದ ಹೊಸ ಸಂಶೋಧನೆ-ಅನ್ವೇಷಣೆಗಳು ಹೇಗೆ ರೈತರಿಗೆ ಉತ್ಪಾದನಾ ವೆಚ್ಚ ತಗ್ಗಿಸಬಲ್ಲವು ಎಂಬ ಬಗ್ಗೆ ವಿಜ್ಞಾನಿಗಳು ಮತ್ತು ರೈತರ ಜತೆಗಿನ ಸಂವಾದದಲ್ಲಿ ಮೋದಿ ಚರ್ಚಿಸಿದ್ದಾರೆ. ಸಿರಿಧಾನ್ಯ ಉತ್ಪಾದನೆ, ಪೌಷ್ಟಿಕ ಆಹಾರದೆಡೆಗೆ ಬದಲಾಗಿರುವ ಆಸಕ್ತಿ, ಸಾವಯವ ಕೃಷಿ ಪದ್ಧತಿ ಮೇಲೆ ಹೆಚ್ಚುತ್ತಿರುವ ಭರವಸೆ ಬಗೆಗೂ ಪ್ರಧಾನಿ ಪ್ರಸ್ತಾಪಿಸಿದ್ದಾರೆ.

ಸಾವಯವ ಬೆಳೆಗಳಿಗೆ ಬೇಡಿಕೆ ಅಧಿಕವಾಗುತ್ತಿರುವುದು ಆರೋಗ್ಯಕರ ಹಾಗೂ ಸುಸ್ಥಿರ ಕೃಷಿ ಪದ್ಧತಿಯೆಡೆಗೆ ಜನರ ಒಲವು ಹೆಚ್ಚುತ್ತಿರುವುದನ್ನು ಸೂಚಿಸುತ್ತದೆ. ದೇಶದ ಎಲ್ಲೆಡೆಯ ರೈತರಿಗೂ ಈ ಹೊಸ ತಳಿಗಳ ಬಗ್ಗೆ ನಿಗದಿತ ರೀತಿ ಮಾಹಿತಿ ನೀಡುವಂತೆ ಪ್ರಧಾನಿ ಮೋದಿ ಕೃಷಿ ವಿಜ್ಞಾನ ಕೇಂದ್ರದ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಹೊಸ ತಳಿಗಳ ಸಂಶೋಧನೆ ನಡೆಸಿದ ವಿಜ್ಞಾನಿಗಳನ್ನು ಪ್ರಧಾನಿ ಮೋದಿ ಶ್ಲಾಘಿಸಿದ್ದಾರೆ. ಇಂಥ ಪ್ರಯತ್ನಗಳು ರೈತರಿಗೆ ಉತ್ತಮ ಆದಾಯ ಖಚಿತಪಡಿಸುವಲ್ಲಿ ನೆರವಾಗಲಿವೆ. ಉದ್ಯಮಶೀಲ ಅವಕಾಶಗಳನ್ನೂ ಹೆಚ್ಚಿಸಲಿವೆ ಎಂದಿದ್ದಾರೆ.

ಜೈವಿಕ ಬಲವರ್ಧಿತ

2024ರ ಕೇಂದ್ರ ಬಜೆಟ್‌ನಲ್ಲಿ ಪ್ರಸ್ತಾಪಿಸಿದಂತೆ ಪ್ರಧಾನಿ ಮೋದಿ ದೆಹಲಿಯ 'ಐಎಆರ್‌ಐ'ನಲ್ಲಿ ಎಲ್ಲಾ ಹವಾಮಾನಗಳಲ್ಲಿ ಉತ್ತಮ ಇಳುವರಿ ನೀಡುವ , ಜೈವಿಕ ಬಲವರ್ಧಿತ ಬೆಳೆಗಳ ಬೀಜಗಳನ್ನು ಬಿಡುಗಡೆ ಮಾಡಿದ್ದಾರೆ.

ಬಜೆಟ್ ಪ್ರಸ್ತಾವ

- ಅಗತ್ಯ ಆಧರಿಸಿ ಹೆಚ್ಚುವರಿ 10 ಸಾವಿರ ಜೈವಿಕ ಮಾಹಿತಿ ಕೇಂದ್ರಗಳ ಸ್ಥಾಪನೆ
- ಎಣ್ಣೆಕಾಳುಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಲು ಭಾರತ ಸಂಕಲ್ಪ
- ಸಾಸಿವೆ, ನೆಲಗಡಲೆ, ಎಳ್ಳು, ಸೋಯಾ, ಸೂರ್ಯಕಾಂತಿ ಬೆಳೆ ಹೆಚ್ಚಳ ಗುರಿ

ಮಧ್ಯಪ್ರದೇಶ ಹುಲಿಗಳು 3 ರಾಜ್ಯಗಳಿಗೆ ಸ್ಥಳಾಂತರ

ವ್ಯಾಘ್ರಗಳ ಸ್ಥಳಾಂತರಕ್ಕೆ ಎನ್‌ಟಿಸಿಎ ಒಪ್ಪಿಗೆ
ಮಧ್ಯಪ್ರದೇಶದಲ್ಲೀಗ 785 ವ್ಯಾಘ್ರಗಳು

ಭೋಪಾಲ್: ಮಧ್ಯಪ್ರದೇಶ ರಾಜ್ಯದ ಅರಣ್ಯಗಳಲ್ಲಿ ಹಾಗೂ ಹುಲಿ ಸಂರಕ್ಷಿತಾರಣ್ಯಗಳಲ್ಲಿ ನಿಗದಿಗಿಂತಲೂ ಹುಲಿಗಳ ಸಂಖ್ಯೆ ಹೆಚ್ಚಾಗಿದೆ. ಹಾಗಾಗಿ ಕೆಲವು ಹುಲಿಗಳನ್ನು ನೆರೆಯ ಮೂರು ರಾಜ್ಯಗಳಿಗೆ ಸ್ಥಳಾಂತರಿಸಲು ಯೋಜಿಸಲಾಗಿದ್ದು, ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್‌ಟಿಸಿಎ) ಕಡೆಗೂ ಒಪ್ಪಿಗೆ ಸೂಚಿಸಿದೆ.

ಮಧ್ಯಪ್ರದೇಶದಲ್ಲಿನ ಹೆಚ್ಚುವರಿ ವ್ಯಾಘ್ರಗಳು ನೆರೆಯ ಒಡಿಶಾ, ಛತ್ತೀಸಗಡ ಮತ್ತು ರಾಜಸ್ಥಾನದ ಸಂರಕ್ಷಿತಾರಣ್ಯಗಳಿಗೆ ಸ್ಥಳಾಂತರಗೊಳ್ಳಲಿವೆ ಎಂದು ಮಧ್ಯಪ್ರದೇಶ ಅರಣ್ಯ ಇಲಾಖೆ ತಿಳಿಸಿದೆ. ಈಗಿನ ಕ್ರಮದಿಂದ ಮೂರೂ ರಾಜ್ಯಗಳಲ್ಲಿಯೂ ವ್ಯಾಘ್ರ ಸಂತತಿ ಹರಡಲು ಸಹಾಯಕವಾಗಲಿದೆ. ಹುಲಿಗಳನ್ನು ಸ್ಥಳಾಂತರಿಸಲು ಎನ್‌ಟಿಸಿಎ ತಾಂತ್ರಿಕ ಸಮಿತಿ ಒಪ್ಪಿಗೆ ಸೂಚಿಸಿದೆ ಎಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸುಬ್ಬರಾಜನ್ ಸೇನ್ ಭಾನುವಾರ ತಿಳಿಸಿದ್ದಾರೆ.

ಮೂರೂ ರಾಜ್ಯಗಳಿಗೂ ತಲಾ 4 ಹುಲಿಗಳನ್ನು ನೀಡಲಾಗುತ್ತಿದೆ. ಪ್ರತಿರಾಜ್ಯಕ್ಕೂ 3 ಗಂಡು ಹುಲಿ, 1 ಹೆಣ್ಣು ಹುಲಿ ಕಳುಹಿಸಿಕೊಡಲಾಗುವುದು. ಆಯ್ಕೆ ಮಾಡಿದ ಸಂರಕ್ಷಿತಾರಣ್ಯದಲ್ಲಿ ಹುಲಿಗಳಿಗೆ ಅತಿಹೆಚ್ಚಿನ ಕಾಳಜಿಯನ್ನು ಆಯಾ ರಾಜ್ಯಗಳು ತೆಗೆದುಕೊಳ್ಳುವ ಭರವಸೆ ಇದೆ. ರಾಜ್ಯ ಸರಕಾರದ ಅನುಮೋದನೆ ನಂತರ ಸ್ಥಳಾಂತರ ಕಾರ್ಯ ಪ್ರಾರಂಭವಾಗಲಿದೆ ಎಂದು ಸುಬ್ಬರಾಜನ್ ವಿವರಿಸಿದ್ದಾರೆ.

ಕರ್ನಾಟಕದಲ್ಲಿ 563ಕ್ಕೂ ಹೆಚ್ಚು ಹುಲಿ

ಮಧ್ಯಪ್ರದೇಶ ಮುಖ್ಯಮಂತ್ರಿ ಮೋಹನ್ ಯಾದವ್, ಮೀಸಲು ಪ್ರದೇಶದಲ್ಲಿರುವ ಹೆಚ್ಚುವರಿ ಹುಲಿಗಳನ್ನು ರಾಜ್ಯದ ರಾಷ್ಟ್ರೀಯ ಉದ್ಯಾನವನಗಳು ಮತ್ತು ಅಭಯಾರಣ್ಯಗಳಿಗೆ ಸ್ಥಳಾಂತರಿಸಲಾಗುವುದು ಮತ್ತು ನೆರೆಯ ರಾಜ್ಯಗಳಿಗೂ ನೀಡಲಾಗುವುದು ಎಂದು ಅಂತಾರಾಷ್ಟ್ರೀಯ ಹುಲಿ ದಿನ ಕಾರ್ಯಕ್ರಮದಲ್ಲಿ ಹೇಳಿದ್ದರು. ಮಧ್ಯಪ್ರದೇಶ ರಾಜ್ಯದಲ್ಲಿ ಸದ್ಯ 785 ಹುಲಿಗಳಿವೆ. ಭಾರತದಲ್ಲೇ ಅತಿ ಹೆಚ್ಚು ವ್ಯಾಘ್ರಗಳನ್ನು ಮಧ್ಯಪ್ರದೇಶ ಹೊಂದಿದೆ. ನಂತರದ ಸ್ಥಾನದಲ್ಲಿ ಕರ್ನಾಟಕ ರಾಜ್ಯವಿದೆ. ಕರ್ನಾಟಕದಲ್ಲಿ 563 ಕ್ಕೂ ಹೆಚ್ಚು ಹುಲಿಗಳಿವೆ.

ಬಾಂಗ್ಲಾ ಸಿಜೆಐ ಸೈಯದ್ ರೆಫಾತ್

ಢಾಕಾ: ಬಾಂಗ್ಲಾದೇಶದ ಸುಪ್ರೀಂ ಕೋರ್ಟ್‌ನ ನೂತನ ಮುಖ್ಯ ನ್ಯಾಯಮೂರ್ತಿಯಾಗಿ ನ್ಯಾ.ಸೈಯದ್ ರೆಫಾತ್ ಅಹ್ಮದ್ ಭಾನುವಾರ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ನ್ಯಾ.ಸೈಯದ್ ಅವರು ಬಾಂಗ್ಲಾದ 25ನೇ ಮುಖ್ಯ ನ್ಯಾಯಮೂರ್ತಿಯಾಗಿದ್ದಾರೆ. ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್, ಮುಖ್ಯ ನ್ಯಾಯಾಧೀಶರಿಗೆ ಪ್ರಮಾಣ ವಚನ ಬೋಧಿಸಿದರು. ಶೇಕ್ ಹಸೀನಾ ಪದಚ್ಯುತಿ ನಂತರ ಮಧ್ಯಂತರ ಸರಕಾರದ ಮುಖ್ಯಸ್ಥರಾಗಿ ಗುರುವಾರ ಪ್ರಮಾಣ ವಚನ ಸ್ವೀಕರಿಸಿದ ಪ್ರೊ.ಮುಹಮ್ಮದ್ ಯೂನಸ್ ಕೂಡ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಂಪುಟ ಕಾರ್ಯದರ್ಶಿ ಮೆಹಬೂಬ್ ಹುಸೇನ್ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಸಿಕೊಟ್ಟರು.

ಇದಕ್ಕೂ ಮುನ್ನ ಬಾಂಗ್ಲಾ ಸಿಜೆಐ ಪೀಠದಲ್ಲಿದ್ದ ನ್ಯಾ.ಒಬೈದುಲ್ ಹಸನ್ 'ತಾರತಮ್ಯ ವಿರುದ್ಧ ವಿದ್ಯಾರ್ಥಿ ಆಂದೋಲನ'ದ ನಾಯಕರ ಬೆದರಿಕೆಗೆ ಮಣಿದು ಶನಿವಾರ ಸಂಜೆ ರಾಜೀನಾಮೆ ನೀಡಿದರು. ಇವರಷ್ಟೇ ಅಲ್ಲದೇ, ಢಾಕಾ ವಿವಿ ಕುಲಪತಿ ಪ್ರೊ.ಮಕ್ಸೂದ್ ಕಮಾಲ್, ಬಾಂಗ್ಲಾ ಅಕಾಡೆಮಿ ಮಹಾನಿರ್ದೇಶಕ ಪ್ರೊ. ಎಂ.ಡಿ.ಹರೂನ್-ಉರ್-ರಷೀದ್ ಅಸ್ಕಾರಿ ಸೇರಿದಂತೆ ಶೇಖ್ ಹಸೀನಾ ಅವರಿಂದ ನೇಮಕಗೊಂಡಿದ್ದ ಬಾಂಗ್ಲಾದ ಹಲವಾರು ಉನ್ನತ ಸ್ಥಾನದ ಅಧಿಕಾರಿಗಳು 'ತಾರತಮ್ಯ ವಿರೋಧಿ ವಿದ್ಯಾರ್ಥಿ ಆಂದೋಲನ'ದ ಒತ್ತಡಕ್ಕೆ ಮಣಿದು ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದಾರೆ.

ಭಾರತೀಯರ ನೇಮಕ ಸ್ಥಗಿತ: ರಷ್ಯಾ

ದೆಹಲಿ: ರಷ್ಯಾ ಸೇನೆಗೆ ಭಾರತೀಯರನ್ನು ಒತ್ತಾಯಪೂರ್ವಕ ಸೇರಿಸಿಕೊಂಡು ಉಕ್ರೇನ್ ವಿರುದ್ಧದ ಯುದ್ಧದಲ್ಲಿ ಬಳಸಿಕೊಳ್ಳುತ್ತಿದೆ ಎಂಬ ವಿಚಾರ ಭಾರತೀಯರ ಆತಂಕಕ್ಕೆ ಕಾರಣವಾಗಿತ್ತು. ಈ ಬಗ್ಗೆ ಪ್ರತಿಕ್ರಿಯಿಸಿರುವ ರಷ್ಯಾ, ಸೇನೆಗೆ ಭಾರತೀಯರ ನೇಮಕವನ್ನು ಏಪ್ರಿಲ್‌ನಲ್ಲೇ ಸ್ಥಗಿತಗೊಳಿಸಲಾಗಿದೆ ಎಂದು ಸ್ಪಷ್ಟಪಡಿಸಿದೆ. ದೆಹಲಿಯಲ್ಲಿನ ರಷ್ಯಾ ರಾಯಭಾರಿ ಕಚೇರಿ ಹೇಳಿಕೆ ನೀಡಿ, ಭಾರತ ಮತ್ತಿತರ ರಾಷ್ಟ್ರಗಳ ಜನರನ್ನು ರಷ್ಯಾ ಸೇನೆಗೆ ನೇಮಿಸುವುದನ್ನು ನಿಲ್ಲಿಸಲಾಗಿದೆ. ಸೇನೆ ಸೇರಿದ್ದ ಭಾರತೀಯರನ್ನು ಗುರುತಿಸಿ ಸೇವೆಯಿಂದ ಮುಕ್ತಗೊಳಿಸಲಾಗುತ್ತಿದೆ. ಎರಡೂ ರಾಷ್ಟ್ರಗಳು ಒಟ್ಟಾಗಿ ಕೆಲಸ ಮಾಡುತ್ತಿವೆ ಎಂದಿದೆ. ಭಾರತೀಯರೇ ಸ್ವಪ್ರೇರಣೆಯಿಂದ ರಷ್ಯಾ ಸೇನೆಗೆ ಕೆಲಸ ಮಾಡಲು ಒಪ್ಪಂದ ಮಾಡಿಕೊಂಡರು ಎಂದು ರಷ್ಯಾ ಹೇಳುತ್ತಿದೆ.

ಬಾಂಗ್ಲಾ: ದಾಳಿ ಖಂಡಿಸಿ ಹಿಂದೂಗಳ ಪ್ರತಿಭಟನೆ

ಢಾಕಾ, ಚಿತ್ತಗಾಂಗ್‌ನಲ್ಲಿ 7 ಲಕ್ಷಕ್ಕೂ ಹೆಚ್ಚು ಜನರು ಭಾಗಿ | ಅಮೆರಿಕ, ಬ್ರಿಟನ್‌ನಲ್ಲೂ ಪ್ರತಿಧ್ವನಿ

ಢಾಕಾ: ಸಮಯಕ್ಕಾಗಿ ಕಾದು ಕುಳಿತು ಹಿಂದೂ, ಸಿಖ್, ಬೌದ್ಧ, ಕ್ರೈಸ್ತ ಸಮುದಾಯದವರ ಮೇಲೆ ಗುರಿಯಿಟ್ಟು ದಾಳಿ ನಡೆಸುತ್ತಿರುವುದನ್ನು ಖಂಡಿಸಿ ಬಾಂಗ್ಲಾದೇಶದ ಅಲ್ಪಸಂಖ್ಯಾತ ಸಮುದಾಯಗಳ ಜನರು ರಾಜಧಾನಿ ಢಾಕಾದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ ವಿಶ್ವದ ಗಮನ ಸೆಳೆದಿದ್ದಾರೆ.

ಕಡೆಗೂ ಬಾಂಗ್ಲಾದಲ್ಲಿನ ಹಿಂದೂಗಳಲ್ಲಿ ಒಗ್ಗಟ್ಟು ಮೂಡಿದೆ. ಕೋಮುದ್ವೇಷದ ದಾಳಿ ಖಂಡಿಸಿ ಲಕ್ಷಾಂತರ ಹಿಂದೂಗಳು ಶನಿವಾರ ರಾಜಧಾನಿ ಢಾಕಾ ಮತ್ತು ಚಿತ್ತಗಾಂಗ್‌ನಲ್ಲಿ ಬೃಹತ್ ರ‍್ಯಾಲಿ ನಡೆಸಿದ್ದಾರೆ.

ಅಲ್ಪಸಂಖ್ಯಾತ ಸಮುದಾಯದವರ ಮೇಲೆ ಹಿಂಸಾಚಾರ ನಡೆಸುವವರ ವಿರುದ್ಧ ಪ್ರಕರಣ ದಾಖಲಿಸಬೇಕು, ವಿಚಾರಣೆ ತ್ವರಿತಗೊಳಿಸಲು ವಿಶೇಷ ನ್ಯಾಯಮಂಡಳಿ ರಚಿಸಬೇಕು, ಅಲ್ಪಸಂಖ್ಯಾತ ಸಮುದಾಯದವರಿಗೆ ಶೇ.10 ರಷ್ಟು ಸಂಸದೀಯ ಸ್ಥಾನ ನೀಡಬೇಕು, ಅಲ್ಪಸಂಖ್ಯಾತರ ರಕ್ಷಣೆಗಾಗಿ ಪ್ರತ್ಯೇಕ ಕಾನೂನು ಜಾರಿಗೊಳಿಸಬೇಕು ಎಂದು ಆಗ್ರಹಿಸಿ ಹಿಂದೂಗಳು ಬೃಹತ್ ಪ್ರತಿಭಟನೆ ನಡೆಸಿದರು. ವಿದ್ಯಾರ್ಥಿಗಳೂ ಅಲ್ಪಸಂಖ್ಯಾತರ ಪರ ಒಗ್ಗಟ್ಟು ವ್ಯಕ್ತಪಡಿಸಲು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.

ಚಿತ್ತಗಾಂಗ್‌ನಲ್ಲಿಯೂ ಅಲ್ಪಸಂಖ್ಯಾತ ಸಮುದಾಯದವರ ಬೃಹತ್ ಪ್ರತಿಭಟನೆ ಚೆರಗಿ ಪಹಾರ್ ಚೌಕದಲ್ಲಿ ಜರುಗಿತು. ಮಾಧ್ಯಮ ವರದಿಗಳ ಪ್ರಕಾರ ಚಿತ್ತಗಾಂಗ್‌ನಲ್ಲಿ 7 ಲಕ್ಷಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು.

ಅಮೆರಿಕ, ಬ್ರಿಟನ್‌ನಲ್ಲೂ ಭಾರತೀಯರ ಮೆರವಣಿಗೆ

ಬಾಂಗ್ಲಾದಲ್ಲಿ ಹಿಂದೂಗಳ ಮೇಲಿನ ದಾಳಿ ಖಂಡಿಸಿ ಅಮೆರಿಕ, ಗ್ರೇಟ್ ಬ್ರಿಟನ್‌ನಲ್ಲೂ ಪ್ರತಿಭಟನೆ ನಡೆದಿದೆ. ವಾಷಿಂಗ್ಟನ್ ಡಿಸಿಯಲ್ಲಿ, ಶ್ವೇತಭವನದ ಹೊರಗೆ ಹಾಗೂ ಲಂಡನ್‌ನಲ್ಲಿ ಬಿಬಿಸಿ ಪ್ರಧಾನ ಕಚೇರಿ ಎದುರು ಸಾವಿರಾರು ಭಾರತೀಯರು ನೆರೆದು ಘೋಷಣೆ ಕೂಗಿದರು. ಬಾಂಗ್ಲಾದೇಶದಲ್ಲಿನ ಹಿಂದೂಗಳ ಮೇಲಿನ ದಾಳಿಯನ್ನು ಖಂಡಿಸಿದರು.

ಕಡೆಗೂ ಪ್ರತಿಕ್ರಿಯಿಸಿದ ಮುಹಮ್ಮದ್ ಯೂನಸ್

ಶೇಖ್ ಹಸೀನಾ ಪ್ರಧಾನಿ ಹುದ್ದೆಗೆ ಆ.5ರಂದು ರಾಜೀನಾಮೆ ನೀಡಿ ದೇಶ ತೊರೆದ ನಂತರ ಬಾಂಗ್ಲಾದಲ್ಲಿ ಹಿಂದೂ ಸೇರಿದಂತೆ ಅಲ್ಪಸಂಖ್ಯಾತ ಸಮುದಾಯದವರ ಮೇಲೆ ಅಪ್ರಚೋದಿತ ದಾಳಿ ನಡೆಯಲಾರಂಭಿಸಿವೆ. ದೇಶದ 52 ಜಿಲ್ಲೆಗಳಲ್ಲಿ ಅಲ್ಪಸಂಖ್ಯಾತ ಸಮುದಾಯದ ಮೇಲೆ 205 ದಾಳಿ ನಡೆದಿವೆ. ಸಾವಿರಾರು ಹಿಂದೂಗಳು ಅಂಗಡಿ, ಮನೆಗಳಿಗೆ ಬೆಂಕಿ ಇಡಲಾಗಿದೆ. ಹಲವು ದೇವಾಲಯಗಳನ್ನು ಧ್ವಂಸಗೊಳಿಸಲಾಗಿದೆ. ನೂರಾರು ಹಿಂದೂಗಳು ಪ್ರಾಣ ಕಳೆದುಕೊಂಡಿದ್ದಾರೆ. ಮಹಿಳೆಯರ ಅಪಹರಣ, ಅತ್ಯಾಚಾರ, ಕೊಲೆ ನಡೆದಿವೆ. ಅವಾಮಿ ಲೀಗ್ ಪಕ್ಷದ ಹಿಂದೂ ಜನಪ್ರತಿನಿಧಿಗಳನ್ನು ಕೊಲ್ಲಲಾಗಿದೆ. ಜೀವ ಉಳಿಸಿಕೊಳ್ಳಲು ಸಾವಿರಾರು ಹಿಂದೂಗಳು ಭಾರತಕ್ಕೆ ಬರಲು ಯತ್ನಿಸಿ ಗಡಿಯಲ್ಲಿ ಬೀಡುಬಿಟ್ಟಿದ್ದಾರೆ. ಇಷ್ಟೆಲ್ಲಾ ನಡೆದ ಬಳಿಕ ಮಧ್ಯಂತರ ಸರಕಾರದ ಮುಖ್ಯಸ್ಥ ಮುಹಮ್ಮದ್ ಯೂನಸ್ ಕಡೆಗೂ ಪ್ರತಿಕ್ರಿಯಿಸಿದ್ದಾರೆ. ಅಲ್ಪಸಂಖ್ಯಾತ ಸಮುದಾಯಗಳ ಮೇಲಿನ ದಾಳಿ ಹೇಯ ಕೃತ್ಯ ಎಂದಿದ್ದಾರೆ. ದಾಳಿಕೋರರ ನಡೆಯನ್ನು ಖಂಡಿಸಿದ್ದಾರೆ.

ಜಂಟಿ ಸಂಸದೀಯ ಸಮಿತಿ ತನಿಖೆಗೆ ಕಾಂಗ್ರೆಸ್ ಆಗ್ರಹ

ಸೆಬಿ ಅಧ್ಯಕ್ಷೆ ವಿರುದ್ಧ ಆರೋಪ | ಅದಾನಿ ಸಮೂಹ ಕುರಿತು ಹಿಂಡನ್‌ಬರ್ಗ್ ಮತ್ತೊಂದು ವರದಿ



ದೆಹಲಿ: ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ(ಸೆಬಿ) ಅಧ್ಯಕ್ಷೆ ಮಾಧವಿ ಬುಚ್ ಹಾಗೂ ಅವರ ಪತಿ ಅದಾನಿ ಸಮೂಹ ಕಂಪನಿಗಳ ಷೇರು ಹೊಂದಿದ್ದರು ಎಂಬ ಮಾಹಿತಿ ಇರುವ ಹಿಂಡನ್‌ಬರ್ಗ್ ಸಂಶೋಧನಾ ಸಂಸ್ಥೆಯ ವರದಿ ಬಗ್ಗೆ ತನಿಖೆ ನಡೆಸಬೇಕಿದ್ದು, ಅದಕ್ಕೆ ಜಂಟಿ ಸಂಸದೀಯ ಸಮಿತಿ ರಚಿಸಬೇಕೆಂದು ಕಾಂಗ್ರೆಸ್ ಭಾನುವಾರ ಆಗ್ರಹಿಸಿದೆ.

ಇಂಥದೊಂದು ಗಂಭೀರ ಆರೋಪದ ಬಗ್ಗೆ ತನಿಖೆ ನಡೆಸಲು ಕೇಂದ್ರ ಸರಕಾರ ತಕ್ಷಣ ಕ್ರಮ ಕೈಗೊಳ್ಳಬೇಕು. ಸೆಬಿಯಂತಹ ಪ್ರತಿಷ್ಠಿತ ಸಂಸ್ಥೆಯೇ ಹಗರಣದಲ್ಲಿ ಭಾಗಿಯಾಗಿರುವುದರಿಂದ ಸಮಗ್ರ ತನಿಖೆಯಾಗಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ.

'ಹಿಂಡನ್‌ಬರ್ಗ್ ವರದಿಯಲ್ಲಿ ದಾಖಲಿಸಿರುವ ಆರೋಪದಲ್ಲಿ ಪ್ರಧಾನಿ ಮೋದಿ ಅವರ ಆಪ್ತ ಉದ್ಯಮಿ ಅದಾನಿ ಅವರಿಗೆ ಸುಪ್ರೀಂ ಕೋರ್ಟ್ ವಿಚಾರಣೆ ವೇಳೆ 'ಸೆಬಿ' ಕ್ಲೀನ್ ಚಿಟ್ ನೀಡಿತ್ತು. ಆದರೆ ಈಗ ಹಿಂಡನ್‌ಬರ್ಗ್ ಮಾಡಿರುವ ಆರೋಪದಲ್ಲಿ 'ಸೆಬಿ' ಮುಖ್ಯಸ್ಥರೇ ಅದಾನಿ ಸಮೂಹದ ಭಾಗವಾಗಿದ್ದಾರೆ. ಮಧ್ಯಮವರ್ಗದ ಜನ ಕಷ್ಟಪಟ್ಟು ದುಡಿದು ಉಳಿಸಿದ ಹಣವನ್ನು ಷೇರುಪೇಟೆಯಲ್ಲಿ ಹೂಡಿಕೆ ಮಾಡುತ್ತಾರೆ. ಇಂಥ ಹೂಡಿಕೆದಾರರ ಹಿತವನ್ನು 'ಸೆಬಿ' ರಕ್ಷಿಸಬೇಕಿದೆ. ಆದರೆ, ಅದರ ಅಧ್ಯಕ್ಷರೇ ದೊಡ್ಡ ಹಗರಣದ ಭಾಗವಾಗಿರುವುದರಿಂದ ತನಿಖೆಗೆ ಜಂಟಿ ಸಂಸದೀಯ ಸಮಿತಿಯನ್ನೇ ರಚಿಸಬೇಕಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ 'ಎಕ್ಸ್' ಸಂದೇಶದಲ್ಲಿ ಆಗ್ರಹಿಸಿದ್ದಾರೆ.

ಪ್ರಧಾನಿ ಮೋದಿ 7 ದಶಗಳಿಂದ ಕಾರ್ಯನಿರ್ವಹಿಸುತ್ತಿರುವ ಸೆಬಿ ಜತೆಗೆ ರಾಜಿ ಮಾಡಿಕೊಂಡಿರುವ ತಮ್ಮ ಆಪ್ತನನ್ನು ಸಂಸದೀಯ ಜಂಟಿ ಸಮಿತ ರಚನೆ ಆಗುವವರೆಗೂ ರಕ್ಷಿಸುತ್ತಾರೆ ಎಂದು ಖರ್ಗೆ ಆರೋಪಿಸಿದ್ದಾರೆ.

ಆರೋಪ ಕೇಳಿ ಬರುತ್ತಿದ್ದಂತೆಯೇ 'ಸೆಬಿ'ಯ ಅಧಿಕೃತ 'ಎಕ್ಸ್' ಖಾತೆ ಲಾಕ್ ಆಗಿದೆ. ಇದು ಅನುಮಾನಗಳಿಗೆ ಕಾರಣವಾಗಿದೆ.

ಆರೋಪ ತಳ್ಳಿಹಾಕಿದ ಬುಚ್ ದಂಪತಿ

ಹಿಂಡನ್‌ಬರ್ಗ್ ಸಂಶೋಧನಾ ವರದಿಯಲ್ಲಿನ ಆರೋಪವನ್ನು 'ಸೆಬಿ' ಅಧ್ಯಕ್ಷೆ ಮಾಧವಿ ಬುಚ್ ಮತ್ತು ಅವರ ಪತಿ ಧವಲ್ ಬುಚ್ ತಳ್ಳಿಹಾಕಿದ್ದಾರೆ. ನಮ್ಮ ಹಣಕಾಸು ವಹಿವಾಟು ತೆರೆದ ಪುಸ್ತಕವಿದ್ದಂತೆ. ಹಿಂಡನ್‌ಬರ್ಗ್ ಆರೋಪಗಳು ಆಧಾರ ರಹಿತ. 'ಸೆಬಿ'ಯಿಂದ ಶೋಕಾಸ್ ನೋಟಿಸ್ ಪಡೆದಿರುವ ಹಿಂಡನ್‌ಬರ್ಗ್ ಸಂಸ್ಥೆ ಈಗ ಚಾರಿತ್ರ್ಯಹರಣ ಯತ್ನ ನಡೆಸಿದೆ ಎಂದು ಮಾಧವಿ ಹಾಗೂ ಧವಲ್ ಬುಚ್ ಕಿಡಿಕಾರಿದ್ದಾರೆ.

ಅಧಿವೇಶನ ಸಮಯದಲ್ಲೇ…

ಹಿಂಡನ್‌ಬರ್ಗ್ ವರದಿ ಹಿಂದೆ ಕಾಂಗ್ರೆಸ್ ಕೈವಾಡವಿದೆ ಎಂದು ಬಿಜೆಪಿ ಸಂಸದ ಸುಧಾಂಶು ತ್ರಿವೇದಿ ಆರೋಪಿಸಿದ್ದಾರೆ. ಇಂಥ ಆರೋಪ ಅಧಿವೇಶನ ಸಮಯದಲ್ಲೇ ಏಕೆ ಬರುತ್ತವೆ? ಎಂದು ಪ್ರಶ್ನಿಸಿದ್ದಾರೆ. ಬಿಬಿಸಿ ಡಾಕ್ಯುಮೆಂಟರಿ, ಹಿಂಡನ್‌ಬರ್ಗ್ ವರದಿ ಅಧಿವೇಶನ ಸಮಯದಲ್ಲೆ ಪ್ರಕಟವಾಗಿವೆ. ಕೆಲ ಬಾರಿ ಧಾರ್ಮಿಕ ಸ್ವಾತಂತ್ರ್ಯದ ಪ್ರಶ್ನೆ, ಕೆಲ ಬಾರಿ ಗ್ರೇಟಾ ಥನ್‌ಬರ್ಗ್ ಹೇಳಿಕೆ, ರೈತರ ಬಗೆಗಿನ ವರದಿ ಬಂದಿವೆ. ಆಗೆಲ್ಲಾ ಸದನದಲ್ಲಿ ಪ್ರತಿಪಕ್ಷ ನಾಯಕರು ಗಲಾಟೆ ನಡೆಸುತ್ತಾರೆ. ಅಸ್ಥಿರತೆ, ಅರಾಜಕತೆ ಸೃಷ್ಟಿಸಲು ಪ್ರತಿಪಕ್ಷಗಳೂ ಕೈಜೋಡಿಸಿವೆ ಎಂಬ ಅನುಮಾನವಿದೆ ಎಂದಿದ್ದಾರೆ.

3 ರಾಜ್ಯಗಳಲ್ಲಿ ಕಮಲಾಗೆ ಮುನ್ನಡೆ

ಪೆನ್ಸಿಲ್ವೇನಿಯ, ಮಿಷಿಗನ್, ವಿಸ್ಕೋನ್ಸಿನ್: ಟ್ರಂಪ್‌ಗೆ ಹಿನ್ನಡೆ

ವಾಷಿಂಗ್ಟನ್: ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನವೆಂಬರ್‌ನಲ್ಲಿ ನಡೆಯಲಿದೆ. ಸದ್ಯ ನ್ಯೂಯಾರ್ಕ್ ಟೈಮ್ಸ್ ಮತ್ತು ಸಿಯೇನಾ ಕಾಲೇಜು ನಡೆಸಿದ ಜನಮತ ಗಣನೆಯಲ್ಲಿ 3 ರಾಜ್ಯಗಳಲ್ಲಿ ರಿಪಬ್ಲಿಕನ್ ಪಕ್ಷದ ಡೊನಾಲ್ಡ್ ಟ್ರಂಪ್‌ಗಿಂತ ಡೆಮಾಕ್ರೆಟಿಕ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿ ಕಮಲಾ ಹ್ಯಾರಿಸ್ ಜನಪ್ರಿಯತೆ ಹೆಚ್ಚಿರುವುದು ಕಂಡುಬಂದಿದೆ. ಪೆನ್ಸಿಲ್ವೇನಿಯ, ಮಿಷಿಗನ್ ಮತ್ತು ವಿಸ್ಕೋನ್ಸಿನ್ ರಾಜ್ಯಗಳಲ್ಲಿನ ಮತದಾರರು 4 ಅಂಶಗಳಲ್ಲಿ ಕಮಲಾ ಅವರಿಗೆ ಹೆಚ್ಚಿನ ಮತ ನೀಡಿದ್ದಾರೆ. ಈ ರಾಜ್ಯಗಳಲ್ಲಿ ಡೊನಾಲ್ಡ್ ಟ್ರಂಪ್‌ಗೆ ಹಿನ್ನಡೆ ಕಂಡಿದೆ. ಕಮಲಾ ಹ್ಯಾರಿಸ್ ಅವರ ಬಗ್ಗೆ ಶೇ.49 ಮತದಾರರು ಒಲವು ತೋರಿದ್ದರೆ, ಶೇ.46ರಷ್ಟು ಮತದಾರರು ಡೊನಾಲ್ಡ್ ಟ್ರಂಪ್ ಬಗ್ಗೆ ಆಸಕ್ತಿ ತೋರಿದ್ದಾರೆ. ಬಹಳಷ್ಟು ಮತದಾರರು ಕಮಲಾ ಹ್ಯಾರಿಸ್ ಪ್ರಾಮಾಣಿಕ ವ್ಯಕ್ತಿ, ಬುದ್ಧಿವಂತೆ, ಅಮೆರಿಕ ಅಧ್ಯಕ್ಷೆಯಾದರೆ ಅವರು ಖಂಡಿತಾ ದೊಡ್ಡ ಮಟ್ಟದ ಬದಲಾವಣೆ ತರಬಲ್ಲರು ಎಂದು ಅಭಿಪ್ರಾಯಪಟ್ಟಿದ್ದಾರೆ.

ಕೆಲವು ವಾರಗಳಿಂದ ಅಮೆರಿಕದ ಹೆಚ್ಚಿನ ಮಾಧ್ಯಮಗಳೂ ಕಮಲಾ ಹ್ಯಾರಿಸ್ ಬಗ್ಗೆ ಸಕಾರಾತ್ಮಕವಾದ ಅಭಿಪ್ರಾಯವನ್ನೇ ವ್ಯಕ್ತಪಡಿಸುತ್ತಿವೆ. ಪರಿಣಾಮವಾಗಿ ಮತದಾರರಿಂದ ಹೆಚ್ಚಿನ ವಿಶ್ವಾಸವೂ ವ್ಯಕ್ತವಾಗುತ್ತಿದೆ. ಜೋ ಬೈಡನ್ ಮತ್ತು ಡೊನಾಲ್ಡ್ ಟ್ರಂಪ್ ಇಬ್ಬರೂ ವಯಸ್ಸಿನಲ್ಲಿ ವೃದ್ಧರಾಗಿದ್ದಾರೆ. ಅವರಿಬ್ಬರಿಗೆ ಹೋಲಿಸಿದರೆ ಕಮಲಾ ಹ್ಯಾರಿಸ್ ಚಿಕ್ಕಪ್ರಾಯದವರಾಗಿದ್ದಾರೆ ಎಂಬುದೂ ಭಾರತೀಯ ಸಂಜಾತೆಯ ಜನಮೆಚ್ಚುಗೆಗೆ ಕಾರಣವಾಗಿದೆ.

ಪದಚ್ಯುತಿ ಹಿಂದೆ ಅಮೆರಿಕ ಕೈವಾಡ: ಹಸೀನಾ ಸಂದೇಶ

ಬಾಂಗ್ಲಾದಲ್ಲಿ ಹಿಂಸಾಚಾರ ಮೂಲಕ ಅಧಿಕಾರಕ್ಕೆ ಬರಲು ಯತ್ನ | ಹಸೀನಾ ಸಿದ್ಧ ಭಾಷಣ ಬಹಿರಂಗ

ದೆಹಲಿ: ವಿದ್ಯಾರ್ಥಿಗಳ ಮೀಸಲು ವಿರೋಧಿ ಪ್ರತಿಭಟನೆ, ಹಿಂಸಾಚಾರಕ್ಕೆ ಮಣಿದು ಬಾಂಗ್ಲಾದೇಶ ಪ್ರಧಾನಿ ಸ್ಥಾನಕ್ಕೆ ಆ.5ರಂದು ರಾಜೀನಾಮೆ ನೀಡಿದ ಶೇಖ್ ಹಸೀನಾ, ತಮ್ಮ ಪದಚ್ಯುತಿ ಹಿಂದೆ ಅಮೆರಿಕ ಕೈವಾಡ ಇರುವ ಬಗ್ಗೆ ಸುಳಿವು ನೀಡಿದ್ದಾರೆ.

ರಾಜೀನಾಮೆಗೂ ಮೊದಲು ದೇಶವನ್ನು ಉದ್ದೇಶಿಸಿ ಮಾತನಾಡಲು ಹಸೀನಾ ಭಾಷಣ ಸಿದ್ಧಪಡಿಸಿದ್ದರು. ಆದರೆ ಪ್ರತಿಭಟನಾಕಾರರು ಪ್ರಧಾನಿ ನಿವಾಸದ ಬಾಗಿಲ ಬಳಿಗೇ ಬಂದಾಗ ಜೀವ ರಕ್ಷಣೆ ದೃಷ್ಟಿಯಿಂದ ತರಾತುರಿಯಲ್ಲಿ ಅವರು ದೇಶ ತೊರೆಯಬೇಕಾಯಿತು. ಹಸೀನಾ ಅವರ ಸಿದ್ಧ ಭಾಷಣದ ಕೆಲ ಅಂಶಗಳನ್ನು ಆಪ್ತರು ಮಾಧ್ಯಮದ ಜತೆ ಹಂಚಿಕೊಂಡಿದ್ದಾರೆ.

ಪ್ರತಿಭಟನೆ ಹೆಸರಲ್ಲಿ ಇನ್ನಷ್ಟು ಸಾವು ನೋಡಲು ಸಿದ್ಧಳಿರಲಿಲ್ಲ. ಕೆಲವರು ವಿದ್ಯಾರ್ಥಿಗಳ ಶವಗಳ ಮೇಲೆ ಅಧಿಕಾರಕ್ಕೆ ಬರುವ ಪ್ರಯತ್ನದಲ್ಲಿದ್ದರು. ಅದಕ್ಕೆ ಅವಕಾಶ ಕೊಡದೇ ರಾಜೀನಾಮೆ ನೀಡಿದೆ. ನಾನು ದೇಶದಲ್ಲೇ ಇದ್ದಿದ್ದರೆ ಇನ್ನಷ್ಟು ಜೀವ ಬಲಿಯಾಗುತ್ತಿತ್ತು. ಹಾಗಾಗಿ ಸೋಲೊಪ್ಪಿಕೊಂಡೆ. ಯುವಜನತೆ ನನ್ನ ಶಕ್ತಿ. ಅವರಿಗೇ ನಾನು ಅಧಿಕಾರದಲ್ಲಿ ಇರುವುದು ಬೇಡವಾದರೆ ನಾನೇನು ಮಾಡಲು ಸಾಧ್ಯ? ದೇಶದಲ್ಲಿನ ಸಾವು- ನೋವುಗಳನ್ನು ಕಂಡಾಗ ಮನಸ್ಸಿಗೆ ನೋವಾಗುತ್ತಿದೆ ಎಂದು ಕಣ್ಣೀರಾಗಿದ್ದಾರೆ. ತಮ್ಮ ಪದಚ್ಯುತಿಗೆ ಅಮೆರಿಕ ಕಾರಣ ಎಂದೂ ಹಸೀನಾ ನೇರವಾಗಿ ದೂಷಿಸಿದ್ದಾರೆ.

ಅಮೆರಿಕ ಕೇಳಿದ್ದನ್ನು ಕೊಟ್ಟಿದ್ದರೆ!

'ಸೇಂಟ್ ಮಾರ್ಟಿನ್' ದ್ವೀಪ ವಿಚಾರ ಪ್ರಸ್ತಾಪಿಸಿದ ಹಸೀನಾ, ಆ ದ್ವೀಪದ ಸಾರ್ವಭೌಮತ್ವವನ್ನು ಅಮೆರಿಕಕ್ಕೆ ಬಿಟ್ಟುಕೊಟ್ಟಿದ್ದರೆ ಮತ್ತು ಬಂಗಾಳ ಕೊಲ್ಲಿ ಮೇಲೆ ಅಮೆರಿಕಕ್ಕೆ ಅಧಿಕಾರ ಚಲಾಯಿಸಲು ಅವಕಾಶ ನೀಡಿದ್ದರೆ ನಾನು ಅಧಿಕಾರದಲ್ಲಿ ಮುಂದುವರಿಯುತ್ತಿದ್ದೆ ಎಂದಿದ್ದಾರೆ. ಆ ಮೂಲಕ ಬಾಂಗ್ಲಾದಲ್ಲಿ ನಡೆದ ಹಿಂಸಾಚಾರ, ಪ್ರತಿಭಟನೆ ಹಿಂದೆ ಪಾಕಿಸ್ತಾನದ ಐಎಸ್ಐ ಜತೆ ಅಮೆರಿಕ ಸರಕಾರದ ಕೈವಾಡವೂ ಇದೆ ಎಂಬ ಶಂಕೆಯನ್ನು ಹಸೀನಾ ವ್ಯಕ್ತಪಡಿಸಿದ್ದಾರೆ. ಅವರ ಪುತ್ರ ಕೂಡಾ ಇದೇ ಮಾತು ಹೇಳಿದ್ದಾರೆ.

'ಯಾರೂ ಹತಾಶರಾಗಬೇಡಿ, ನಾನು ವಾಪಸ್ ಬರುತ್ತೇನೆ. ನಾನು ಈಗ ಸೋತಿದ್ದರೂ ಬಾಂಗ್ಲಾ ಜನ ಗೆದ್ದಿದ್ದಾರೆ. ಇದೇ ಜನರಿಗಾಗಿ ನನ್ನ ತಂದೆ, ಕುಟುಂಬದವರು ಜೀವತ್ಯಾಗ ಮಾಡಿದ್ದರು' ಎಂದು ಹಸೀನಾ ಭಾಷಣದಲ್ಲಿ ಉಲ್ಲೇಖಿಸಿದ್ದಾರೆ.

'ನಾನು ಎಂದಿಗೂ ಪ್ರತಿಭಟನಾಕಾರರನ್ನು ರಜಾಕಾರರು ಎಂದು ಕರೆದಿಲ್ಲ, ದಯವಿಟ್ಟು ಸಂಪೂರ್ಣ ಭಾಷಣವನ್ನು ಕೇಳಿ' ಎಂದು ಹಸೀನಾ ಮನವಿ ಮಾಡಿದ್ದಾರೆ.

ಅಮೆರಿಕ ಮುನಿಸು

ಬಾಂಗ್ಲಾದಲ್ಲಿ ಹಿಂಸಾಚಾರ ಆರಂಭಕ್ಕೂ ಕೆಲ ದಿನ ಮೊದಲು ಶೇಖ್ ಹಸೀನಾ, ಸರಕಾರ ಉರುಳಿಸಲು ಪಿತೂರಿ ನಡೆಯುತ್ತಿದೆ ಎಂದು ಹೇಳಿದ್ದರು. ಬಾಂಗ್ಲಾದೇಶ ಮತ್ತು ಮ್ಯಾನ್ಮಾರ್‌ನಿಂದ 'ಬಿಳಿಯರು' ಹೊಸ ಕ್ರಿಶ್ಚಿಯನ್ ದೇಶ ನಿರ್ಮಿಸುವ ಯತ್ನ ನಡೆಸುತ್ತಿದ್ದಾರೆ ಎಂದು ಆರೋಪಿಸಿದ್ದರು. ಕೆಲ ರಾಷ್ಟ್ರಗಳಿಗೆ ಬಾಂಗ್ಲಾದಲ್ಲಿ ಏರ್‌ಬೇಸ್ ನಿರ್ಮಾಣಕ್ಕೆ ಅವಕಾಶ ನೀಡಿದ್ದರೆ ನನಗೆ ಯಾವುದೇ ಸಮಸ್ಯೆ ಇರುತ್ತಿರಲಿಲ್ಲ ಎಂದೂ ಹೇಳಿದ್ದರು. ಈ ಅಭಿಪ್ರಾಯ ದೃಢೀಕರಿಸುವಂತೆ, 'ಜನವರಿಯಲ್ಲಿ ನಡೆದ ಬಾಂಗ್ಲಾ ಚುನಾವಣೆ ಪ್ರಕ್ರಿಯೆ ನ್ಯಾಯಸಮ್ಮತವಾಗಿರಲಿಲ್ಲ' ಎಂದು ಅಮೆರಿಕ ಟೀಕಿಸಿದ್ದನ್ನು ನೆನಪಿಸಿಕೊಳ್ಳಬಹುದು.

ಅಮೆರಿಕ ಅಧ್ಯಕ್ಷರಿಗೆ ಮರೆವಿನ ಸಮಸ್ಯೆ!

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಜೋ ಬೈಡನ್ ಮರೆವಿನ ಸಮಸ್ಯೆಯಿಂದ ಬಳಲುತ್ತಿರುವುದು ದೃಢಪಟ್ಟಿದೆ. ಬೈಡನ್ ನೆನಪಿನ ಶಕ್ತಿ ಕುಗ್ಗಿರುವ ಬಗ್ಗೆ ರಿಪಬ್ಲಿಕನ್ ಪಕ್ಷದವರೂ ಕಳವಳಗೊಂಡಿದ್ದಾರೆ. ಶ್ವೇತಭವನದಲ್ಲಿ ಶನಿವಾರ ನಡೆದ ಟೆಕ್ಸಾಸ್ ರೇಂಜರ್ಸ್ ವರ್ಲ್ಡ್ ಸೀರಿಸ್ ವಿಕ್ಟರಿ ಕಾರ್ಯಕ್ರಮದಲ್ಲಿ ಬೈಡನ್‌ಗೆ ರೇಂಜರ್ಸ್ ತಂಡ ಜೆರ್ಸಿ ಮತ್ತು ಕೌಬಾಯ್ ಬೂಟ್ ಉಡುಗೊರೆಯಾಗಿ ನೀಡಿತು. ಜೆರ್ಸಿ ಕೈಯಲ್ಲಿ ಹಿಡಿದ ಬೈಡನ್, ಈಗ ನಾನೇನು ಮಾಡಬೇಕು? ಎಂದು ಪ್ರಶ್ನಿಸಿದ್ದಾರೆ. ಈ ಮಾತು ಕೇಳಿ ಶ್ವೇತಭವನ ಸಿಬ್ಬಂದಿ ಕಕ್ಕಾಬಿಕ್ಕಿಯಾಗಿದ್ದಾರೆ. ಬಳಿಕ ಅಧ್ಯಕ್ಷರ ಕೈಲಿದ್ದ ಜೆರ್ಸಿಯನ್ನು ತೆಗೆದುಕೊಳ್ಳಲು ಸಿಬ್ಬಂದಿ ಮುಂದಾದಾಗ, 'ಜೆರ್ಸಿಯನ್ನೇಕೆ ಕಿತ್ತುಕೊಳ್ಳುತ್ತಿದ್ದೀರಿ?' ಎಂದು ಪ್ರಶ್ನಿಸಿದ್ದಾರೆ. ಬಳಿಕ ಸಮಾರಂಭದಿಂದ ನಿರ್ಗಮಿಸಲು ದಾರಿ ತಿಳಿಯದೇ ಬೈಡನ್ ಪರದಾಡಿದ್ದಾರೆ. ಇದೆಲ್ಲವೂ ಬೈಡನ್ ನೆನಪಿನ ಶಕ್ತಿ ಕುಗ್ಗಿರುವುದನ್ನು ತೋರಿಸುತ್ತಿದೆ ಎಂದೇ ವಿಶ್ಲೇಷಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ಚಿಂಚೋಳಿಗೆ ಹೈಕೋರ್ಟ್ ನ್ಯಾಯಮೂರ್ತಿ ಭೇಟಿ

ಚಿಂಚೋಳಿ: ಇಲ್ಲಿನ ಚಿಂಚೋಳಿ ನ್ಯಾಯಾಲಯಕ್ಕೆ ಕಲಬುರಗಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಕೆ.ನಟರಾಜನ್ ಅವರು ಭೇಟಿ ನೀಡಿ ಪರಿಶೀಲಿಸಿದರು. ನ್ಯಾಯಾಲಯದ ಪ್ರದಾನ ಸಿವಿಲ್ ನ್ಯಾಯಾಲಯ ಮತ್ತು ಹೆಚ್ಚುವರಿ ನ್ಯಾಯಾಲಯ ಕಟ್ಟಡಗಳು ನಿಜಾಮ್ ಕಾಲದ ಹಳೆಯ ಕಟ್ಟಡಗಳಾಗಿದ್ದು, ಸೊರುತ್ತಿರುವ ಕಟ್ಟಡಕ್ಕೆ ಮೇಲ್ಭಾಗದಿಂದ ತಾಡಪಾಲು ಬ್ಯಾನರ್ ಹಾಕಿರುವುದು ಕಂಡಿತು. ನ್ಯಾಯಾಲಯದ ಆವರಣದಲ್ಲಿ ಹೊಸದಾಗಿ ನ್ಯಾಯಾಲಯ ಕಟ್ಟಡ ನಿರ್ಮಿಸಲು ಉದ್ದೇಶಿಸಿದ ಹಿನ್ನಲೆ ಸ್ಥಳ ಮತ್ತು ಕಟ್ಟಡದ ಭದ್ರ ತಳಪಾಯಕ್ಕೆ ಭೂಮಿಯ ಯೋಗ್ಯ ಗುಣ್ಣಮಟ್ಟದ ಬಗ್ಗೆ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಎಂಜಿನಿಯರ್ ಡಿ.ಎಲ್.ಗಾಜರೆ, ಎಇಇ ಬಸವರಾಜ ಬೈನೂರ ಅವರಿಂದ ಮಾಹಿತಿ ಸಂಗ್ರಹಿಸಿ, ಕಟ್ಟಡ ನಿರ್ಮಾಣದ ವಿನ್ಯಾಸದ ನಕಾಶೆಯನ್ನು ವೀಕ್ಷಿಸಿದರು. ಹೈಕೋರ್ಟ್ ನ್ಯಾಯಮೂರ್ತಿಗಳ ಜತೆಗೆ ಕಲಬುರಗಿ ಜಿಲ್ಲಾ ಪ್ರದಾನ ಸೇಷನ್ ನ್ಯಾಯಾಲಯದ ನ್ಯಾಯಾಧೀಶೆ ನಾಗಶ್ರೀ, ಚಿಂಚೋಳಿ ಹಿರಿಯ ಶ್ರೇಣಿ ನ್ಯಾಯಾಲಯದ ನ್ಯಾಯಾಧೀಶೆ ಜ್ಯೋತಿ ಶಾಂತಪ್ಪ ಕಾಂಬಳೆ, ಪ್ರದಾನ ಸಿವಿಲ್ ನ್ಯಾಯಾಧೀಶ ದತ್ತುಕುಮಾರ ಜವಳಕರ್, ವಕೀಲರ ಸಂಘದ ಅಧ್ಯಕ್ಷ ಶ್ರೀಮಂತ ಕಟ್ಟಮನಿ, ಮಾಜಿ ಅಧ್ಯಕ್ಷ ಸುದರ್ಶನ ಬಿರಾದಾರ್, ತಹಸೀಲ್ದಾರ ಸುಬ್ಬಣ್ಣ ಜಮಖಂಡಿ, ಪ್ರಾದೇಶಿಕ ಅರಣ್ಯ ವಲಯ ಅಧಿಕಾರಿ ಶಾಂತರೆಡ್ಡಿ, ಸಿದ್ಧಾರೂಡ್ ಹೊಕ್ಕುಂಡಿ, ಗಿರಿರಾಜ ಸಜ್ಜನ್, ವಕೀಲರಾದ ಚಂದ್ರಶೆಟ್ಟಿ ಜಾಧವ್, ಶ್ರೀನಿವಾಸ್ ಬಂಡಿ, ಪ್ರವೀಣಕುಮಾರ ನಮಲಿಕರ್, ಸುರೇಶ ಗಾರಂಪಳ್ಳಿ, ಸಂಪತ್ ಹಾಗೂ ಉಮೇಶ್ ಪಾಟೀಲ್ ಇದ್ದರು

ರಾಜ್ಯಪಾಲರ ಪ್ರವಾಸ ಇಂದು

ಕಲಬುರಗಿ: ರಾಜ್ಯದ ರಾಜ್ಯಪಾಲ ಥಾವರ್ ಚಂದ ಗೆಹ್ಲೋಟ್ ಅವರು ಬೆಂಗಳೂರಿನಿಂದ ವಿಮಾನದ ಮೂಲಕ ಆಗಸ್ಟ್ 12 ರಂದು ಬೆಳಗ್ಗೆ 9.20 ಗಂಟೆಗೆ ಕಲಬುರಗಿ ವಿಮಾನ ನಿಲ್ದಾಣಕ್ಕೆ ಆಗಮಿಸಿ ನೇರವಾಗಿ ಗುಲಬರ್ಗಾ ವಿ.ವಿ. ಅತಿಥಿಗೃಹಕ್ಕೆ ತೆರಳುವರು. ವಿಶ್ವವಿದ್ಯಾಲಯದ ಕುಲಾಧಿಪತಿಗಳಾಗಿರುವ ರಾಜ್ಯಪಾಲರು ಬೆಳಗ್ಗೆ 10.45 ಗಂಟೆಗೆ ಗುಲಬರ್ಗಾ ವಿಶ್ವವಿದ್ಯಾಲಯದ ಡಾ.ಬಿ.ಆರ್.ಅಂಬೇಡ್ಕರ್ ಸಭಾಂಗಣದಲ್ಲಿ ನಡೆಯಲಿರುವ ವಿ.ವಿ.ಯ 42ನೇ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಮಧ್ಯಾಹ್ನ 3 ಗಂಟೆ ಕಲಬುರಗಿ ನಗರದ ವಿ.ಟಿ.ಯು. ಪ್ರಾದೇಶಿಕ ಕಚೇರಿಯಲ್ಲಿ ಆಯೋಜಿಸಿರುವ ಬೃಹತ್ ರಕ್ತದಾನ ಶಿಬಿರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಸಾಯಂಕಾಲ 7.45 ಗಂಟೆಗೆ ಕಲಬುರಗಿ ವಿನಾನ ನಿಲ್ದಾಣದಿಂದ ವಿಮಾನದ ಮೂಲಕ ಬೆಂಗಳೂರಿಗೆ ಪ್ರಯಾಣಿಸುವರು.

ಉನ್ನತ ಶಿಕ್ಷಣ ಸಚಿವರ ಜಿಲ್ಲಾ ಪ್ರವಾಸ ಇಂದು

ಕಲಬುರಗಿ: ರಾಜ್ಯದ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್ ಅವರು ಬೆಂಗಳೂರಿನಿಂದ ವಿಮಾನದ ಮೂಲಕ ಆಗಸ್ಟ್ 12 ರಂದು ಬೆಳಗ್ಗೆ 9.30 ಗಂಟೆಗೆ ಕಲಬುರಗಿ ವಿಮಾನ ನಿಲ್ದಾಣಕ್ಕೆ ಆಗಮಿಸುವರು. ಅಂದು ಬೆಳಗ್ಗೆ 10.45 ಗಂಟೆಗೆ ಗುಲಬರ್ಗಾ ವಿಶ್ವವಿದ್ಯಾಲಯದ ಜ್ಞಾನಗಂಗಾ ಆವರದಲ್ಲಿ ನಡೆಯಲಿರುವ ವಿ.ವಿ.ಯ 42ನೇ ವಾರ್ಷಿಕ ಘಟಿಕೋತ್ಸವದಲ್ಲಿ ಸಚಿವರು ಭಾಗಿಯಾಗುವರು. ಸಂಜೆ 4.30 ರಿಂದ 6.30 ಗಂಟೆ ವರೆಗೆ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಮುಖಂಡರು ಮತ್ತು ಕಾರ್ಯಕರ್ತರೊಂದಿಗೆ ಚರ್ಚೆ ನಡೆಸಿ ಸಾಯಂಕಾಲ 6.50 ಗಂಟೆಗೆ ವಿಮಾನದ ಮೂಲಕ ಮರಳಿ ಬೆಂಗಳೂರಿಗೆ ಪ್ರಯಾಣಿಸುವರು.

ಬಸವ ಪಂಚಮಿ ದಿನ ರೋಗಿಗಳಿಗೆ ಹಾಲು

ಚಿತ್ತಾಪುರ: ನಾಗರ ಪಂಚಮಿ ದಿನದಂದು ಕಲ್ಲಿಗೆ ಹಾಲೆರೆಯುವ ಬದಲು ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೊಗಿಗಳಿಗೆ ಹಾಲು ನೀಡುವದರ ಮೂಲಕ ಬಸವ ಪಂಚಮಿಯನ್ನಾಗಿ ಆಚರಿಸಲಾಗಿದೆ ಎಂದು ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನೆ ಪರಿಷತ್ತು ತಾಲೂಕು ಘಟಕದ ಅಧ್ಯಕ್ಷ ಶಾಂತಕುಮಾರ್ ಮಳಖೇಡ ಅಭಿಪ್ರಾಯಪಟ್ಟರು. ಪಟ್ಟಣದ ಸರಕಾರಿ ಆಸ್ಪತ್ರೆಯಲ್ಲಿ ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋದನಾ ಪರಿಷತ್ತು ತಾಲೂಕು ಘಟಕದ ವತಿಯಿಂದ ಶುಕ್ರವಾರ ಹಮ್ಮಿಕೊಂಡಿದ್ದ ನಾಗರ ಪಂಚಮಿ ಹಬ್ಬದ ನಿಮಿತ್ತ ಗುಣಮಟ್ಟದ ಹಾಲು ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾಗರ ಹುತ್ತಕ್ಕೆ, ಕಲ್ಲಿನ ಮೂರ್ತಿಗಳಿಗೆ ಹಾಲು ಸುರಿದು ಅವೈಜ್ಞಾನಿಕವಾಗಿ ಆಚರಣೆಗೆ ಜನರು ಮುಂದಾಗುತ್ತಾರೆ. ಇದರಿಂದ ಅಪಾರ ಪ್ರಮಾಣ ಹಾಲು ವ್ಯರ್ಥವಾಗುತ್ತಿದೆ. ಪ್ರಸ್ತುತ ಅಪೌಷ್ಠಿಕತೆಯಿಂದ ಸಾವಿರಾರು ಮಕ್ಕಳು ಸಾವಿಗೀಡಾಗುತ್ತಿದ್ದಾರೆ ಹಾಲನ್ನು ವ್ಯರ್ಥ ಮಾಡುವ ಬದಲಿಗೆ ಮಕ್ಕಳಿಗೆ ಮತ್ತು ಬಡವರಿಗೆ ಕೊಟ್ಟರೆ ಅದು ಅಮೃತವಾಗುತ್ತದೆ ಎಂದು ಹೇಳಿದರು. ಪರಿಷತ್ತಿನ ಗೌರವಾಧ್ಯಕ್ಷ ಕಾಶಿನಾಥ ಗುತ್ತೇದಾರ, ಸಹ ಕಾರ್ಯದರ್ಶಿ ವೀರುಪಾಕ್ಷರುದ್ರ ಬೆಣ್ಣಿ, ನಿರ್ದೇಶಕರಾದ ಸುರೇಶ ಬೆನಕನಳ್ಳಿ, ಮೋಯಿನ್ ಸಾತನೂರ, ರವಿಶಂಕರ ಬುರ್ಲಿ, ನರಸಪ್ಪ ಚಿನ್ನಾಕಟ್ಟಿ, ಜಗನಾಥ ಮುಡಬೂಳಕರ್, ಶಿವರಾಮ ಚವ್ಹಾಣ, ನರಸಿಂಹ ಅಲಮೇಲಕರ್, ಪರಶುರಾಮ ಕಂದಗಲ್ ಇತರರು ಇದ್ದರು.

{ ಮಧು ಬಂಗಾರಪ್ಪ } ಸಚಿವರು

ತುಂಗಭದ್ರಾ ಡ್ಯಾಂ ಗೇಟ್ ಹಾಳಾಗಿದೆ. ಅದು ಆಗಬಾರದಿತ್ತು ಆಗಿದೆ. ಜಲಾಶಯಕ್ಕೆ ಕೇಂದ್ರ ಸರ್ಕಾರ ಹಣಕಾಸು ನೆರವು ಕೊಡಬೇಕು. ಕಳಚಿದ ಗೇಟ್ ದುರಸ್ತಿಗೆ ಕೇಂದ್ರ ಹಣ ನೀಡಬೇಕು.

ದಯಾನಂದ ಸಾಗರ್ ಕಾಲೇಜಿಗೆ ಅತ್ಯುತ್ತಮ ಪ್ರಶಸ್ತಿ

ಕಲಬುರಗಿಯಲ್ಲಿ ರಾಜ್ಯ ವಿಜ್ಞಾನ-ತಂತ್ರಜ್ಞಾನ ಮಂಡಳಿಯಿಂದ ನಡೆದ ಸರಣಿ ವಿದ್ಯಾರ್ಥಿ ಯೋಜನೆ ಕಾರ್ಯಕ್ರಮಕ್ಕೆ ತೆರೆ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ನಗರದ ಶರಣಬಸವ ವಿಶ್ವವಿದ್ಯಾಲಯದ ದೊಡ್ಡಪ್ಪ ಅಪ್ಪಾ ಸಭಾಮಂಟಪದಲ್ಲಿ ಕಳೆದ ಎರಡು ದಿನಗಳಿಂದ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ (ಕೆಎಸ್‌ಸಿಎಸ್‌ಟಿ) ಆಯೋಜಿಸಿದ್ದ 47ನೇ ಸರಣಿ ವಿದ್ಯಾರ್ಥಿ ಯೋಜನೆ ಕಾರ್ಯಕ್ರಮಕ್ಕೆ ತೆರೆಬಿದ್ದಿತು.

ಎರಡು ದಿನಗಳ ವಸ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಬೆಂಗಳೂರಿನ ದಯಾನಂದ ಸಾಗರ್ ಕಾಲೇಜ್ ಆಫ್ ಎಂಜಿನಿಯರಿಂಗ್ ವಿದ್ಯಾರ್ಥಿಗಳು ವಾರ್ಷಿಕ ರಾಜ್ಯ ಮಟ್ಟದ ಪೋಸ್ಟರ್ ಪ್ರಸ್ತುತಿ ಮತ್ತು ಯೋಜನೆಗಳ ಪ್ರದರ್ಶನದಲ್ಲಿ ಪ್ರತಿಷ್ಠಿತ ಅತ್ಯುತ್ತಮ ಪ್ರದರ್ಶನ ಕಾಲೇಜು ಪ್ರಶಸ್ತಿಯನ್ನು ಪಡೆದುಕೊಂಡು ಪ್ರಥಮ ಸ್ಥಾನಗಳಿಸಿದರು.

ಭಾರತೀಯ ವಿಜ್ಞಾನ ಸಂಸ್ಥೆ, ರಾಷ್ಟ್ರೀಯ ವೈಮಾನಿಕ ಪ್ರಯೋಗಾಲಯ ಮತ್ತು ಇತರ ಉನ್ನತ ಶಿಕ್ಷಣ ಹಾಗೂ ಸಂಶೋಧನೆಯ ಪ್ರಮುಖ ಸಂಸ್ಥೆಗಳ ಹಿರಿಯ ವಿಜ್ಞಾನಿಗಳನ್ನು ಒಳಗೊಂಡಿರುವ ತೀರ್ಪುಗಾರರ ಸಮಿತಿಯು, ವಿವಿಧ ಕಾಲೇಜುಗಳು ಮತ್ತು ಉನ್ನತ ಅಧ್ಯಯನ ಸಂಸ್ಥೆಗಳು ಸಲ್ಲಿಸಿದ ಯೋಜನೆಗಳ ಸಂಖ್ಯೆ ಸೇರಿದಂತೆ ಹಲವಾರು ವಿಷಯಗಳನ್ನು ಪರಿಗಣನೆಗೆ ತೆಗೆದುಕೊಂಡಿತು. ಪ್ರತಿ ವರ್ಷ ರಾಜ್ಯದ ಒಂದು ಕಾಲೇಜಿಗೆ ನೀಡುವ ಅತ್ಯುತ್ತಮ ಪ್ರದರ್ಶನ ಕಾಲೇಜು ಪ್ರಶಸ್ತಿಯ ಆಯ್ಕೆಯನ್ನು ಅಂತಿಮಗೊಳಿಸುವ ಮೊದಲು ಯೋಜನೆಗಳ ಗುಣಮಟ್ಟ, ಪ್ರಸ್ತುತಿ ಮತ್ತು ಇತರ ಅಂಶಗಳನ್ನು ಪರಿಶೀಲಿಸಲಾಯಿತು.

ಬೆಂಗಳೂರಿನ ರಾಮಯ್ಯ ಇಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಹಾಗೂ ದಯಾನಂದ ಕಾಲೇಜ್ ಆಫ್ ಟೆಕ್ನಾಲಜಿ ಜೊತೆಗೂಡಿ ಅತ್ಯುತ್ತಮ ಪ್ರದರ್ಶನ ಕಾಲೇಜು ಪ್ರಶಸ್ತಿಯನ್ನು ಪಡೆದಿದ್ದು, ತಲಾ ಮೂರು ಅತ್ಯುತ್ತಮ ಪ್ರಾಜೆಕ್ಟ್ ಪ್ರಶಸ್ತಿಗಳನ್ನು ಪಡೆಯುವ ಮೂಲಕ ಅತ್ಯುತ್ತಮ ಯೋಜನೆಗಳಲ್ಲಿ ಗಮನ ಸೆಳೆದ ಶಿಕ್ಷಣ ಸಂಸ್ಥೆಗಳಲ್ಲಿ, ಶರಣಬಸವ ವಿಶ್ವವಿದ್ಯಾಲಯ ಕಲಬುರಗಿ ಸೇರಿವೆ. ಆರ್ ವಿ ಎಂಜಿನಿಯರಿಂಗ್ ಕಾಲೇಜು ಬೆಂಗಳೂರು, ಜಿ ಎಂ ಇನ್ಸಿಟ್ಯೂಟ್ ಟೆಕ್ನಾಲಜಿ, ದಾವಣಗೆರೆ, ಮಂಗಳೂರು ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮತ್ತು ಇಂಜಿನಿಯರಿಂಗ್ ಮೂಡುಬಿದಿರೆ, ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್, ಮಂಗಳೂರು ಮತ್ತು ಕಲಕಟ್ಟಿ ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ ವಿಜಯಪುರ ತಲಾ ಎರಡು ಅತ್ಯುತ್ತಮ ಪ್ರಾಜೆಕ್ಟ್ ಪ್ರಶಸ್ತಿಗಳನ್ನು ಪಡೆದುಕೊಂಡವು.

47ನೇ ಸರಣಿಯ ಎಸ್‌ಪಿಪಿ ವಾರ್ಷಿಕ ರಾಜ್ಯ ಮಟ್ಟದ ಪೋಸ್ಟರ್ ಪ್ರಸ್ತುತಿ ಮತ್ತು ಪ್ರಾಜೆಕ್ಟ್ ಎಕ್ಸಿಬಿಷನ್‌ಗೆ ಆಯ್ಕೆಯಾದ ಒಟ್ಟು 354 ಪ್ರಾಜೆಕ್ಟ್‌ಗಳಲ್ಲಿ 210 ಪ್ರಾಜೆಕ್ಟ್‌ಗಳನ್ನು ಕರ್ನಾಟಕದ ವಿವಿಧ ಭಾಗಗಳಿಂದ 142 ಕಾಲೇಜುಗಳಿಂದ ಪ್ರದರ್ಶನದಲ್ಲಿ ಪ್ರದರ್ಶಿಸಲಾಯಿತು. ಈ ಪ್ರಾಜೆಕ್ಟ್‌ಗಳನ್ನು ಸಿದ್ಧಪಡಿಸಿದ 350 ವಿದ್ಯಾರ್ಥಿಗಳು ತಮ್ಮ ಮಾರ್ಗದರ್ಶಕ-ಶಿಕ್ಷಕರೊಂದಿಗೆ ಪ್ರದರ್ಶಿಸಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕಲಬುರಗಿಯ ಪ್ರಾದೇಶಿಕ ನಿರ್ದೇಶಕ ಪ್ರೊ. ಬಸವರಾಜ ಗದಗೆ, ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಬಸವರಾಜ ದೇಶಮುಖ ಸೇರಿದಂತೆ ಇತರ ಗಣ್ಯರು, ಐಐಎಸ್‌ಸಿಯ ಹಿರಿಯ ಅಧ್ಯಾಪಕರು ಹಾಗೂ ಕೆಎಸ್‌ಸಿಎಸ್‌ಟಿ ಕಾರ್ಯದರ್ಶಿ ಪ್ರೊ. ಅಶೋಕ್ ಎಂ. ರಾಯಚೂರು, ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಯು. ಟಿ. ವಿಜಯ್ ಸೇರಿಕೊಂಡು, ದಯಾನಂದ ಸಾಗರ್ ಇಂಜಿನಿಯರಿಂಗ್ ಕಾಲೇಜಿಗೆ ಪ್ರತಿಷ್ಠಿತ ಪ್ರಶಸ್ತಿ ಲಭಿಸಿರುವುದಕ್ಕೆ ಶರಣಬಸವ ವಿಶ್ವವಿದ್ಯಾಲಯದ ಉಪಕುಲಪತಿ ಡಾ. ಅನಿಲಕುಮಾರ ಬಿಡವೆ, ಕುಲಸಚಿವ ಡಾ. ಎಸ್.ಜಿ. ಡೊಳ್ಳೇಗೌಡರ್ ಮತ್ತಿತರ ಗಣ್ಯರು ಕೈಜೋಡಿಸಿ ಅಭಿನಂದಿಸಿದರು.

ಈ ಎರಡು ದಿನಗಳ ರಾಜ್ಯ ಮಟ್ಟದ ವಸ್ತುಪ್ರದರ್ಶನದಲ್ಲಿ ಆತಿಥೇಯ ಶರಣಬಸವ ವಿಶ್ವವಿದ್ಯಾಲಯವು ಪ್ರದರ್ಶಿಸಿದ ಅತ್ಯುತ್ತಮ ಸೌಕರ್ಯಗಳು ಮತ್ತು ಆತಿಥ್ಯಕ್ಕಾಗಿ ಹಾಗೂ ಎರಡು ದಿನಗಳ ಅವಧಿಯಲ್ಲಿ ಭಾಗವಹಿಸುವವರು ಮತ್ತು ಅತಿಥಿಗಳ ಪ್ರತಿಯೊಂದು ಅಗತ್ಯವನ್ನು ಕಾಳಜಿ ವಹಿಸಿದ್ದಕ್ಕಾಗಿ ಪ್ರೊಫೆಸರ್ ಅಶೋಕ್ ಎಂ ರಾಯಚೂರು ಮತ್ತು ಡಾ ಯು ಟಿ ವಿಜಯ್ ಸೇರಿದಂತೆ ಕೆಎಸ್‌ಸಿಎಸ್‌ಟಿಯ ಅಧಿಕಾರಿಗಳು ಪ್ರಶಂಸಿಸಿದರು.

ಈ ಸಂದರ್ಭದಲ್ಲಿ ಶರಣಬಸವ ವಿಶ್ವವಿದ್ಯಾಲಯದ ಪ್ರೊ. ಅನಿಲ್‌ಕುಮಾರ್ ಬಿಡವೆ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು, ಪ್ರೊ. ನಾಗಬಸವಣ್ಣ ಗುರುಗೋಳ ವಂದಿಸಿದರು. ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಬಸವರಾಜ ದೇಶಮುಖ, ಶರಣಬಸವ ವಿಶ್ವವಿದ್ಯಾಲಯದ ಡೈರೆಕ್ಟರ್ ಡಾ. ವಿ. ಡಿ. ಮೈತ್ರಿ, ಕುಲಸಚಿವ ಪ್ರೊ. ಎಸ್. ಜಿ. ಡೊಳ್ಳೇಗೌಡರ್, ಡೀನ್ ಡಾ. ಲಕ್ಷ್ಮೀ ಪಾಟೀಲ್ ಮಾಕಾ, ಕುಲಸಚಿವ ಡಾ. ಎಸ್. ಎಚ್. ಹೊನ್ನಳ್ಳಿ, ಹಣಕಾಸು ಅಧಿಕಾರಿ ಪ್ರೊ. ಕಿರಣ್ ಮಾಕಾ ಸೇರಿದಂತೆ ಇತರ ಪ್ರಮುಖರು ವೇದಿಕೆ ಮೇಲಿದ್ದರು.

ವಾರ್ಷಿಕ ರಾಜ್ಯ ಮಟ್ಟದ ಪೋಸ್ಟರ್ ಪ್ರಸ್ತುತಿ ಮತ್ತು ಯೋಜನೆಗಳ ಪ್ರದರ್ಶನದಲ್ಲಿ ಪ್ರತಿಷ್ಠಿತ ಅತ್ಯುತ್ತಮ ಪ್ರದರ್ಶನ ಕಾಲೇಜು ಪ್ರಶಸ್ತಿ ನೀಡಲಾಯಿತು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಎರಡು ವರ್ಷಕ್ಕೊಮ್ಮೆಯಾದರೂ ಇಂತಹ ರಾಜ್ಯಮಟ್ಟದ ವಿಜ್ಞಾನ ವಸ್ತು ಪ್ರದರ್ಶನವನ್ನು ಆಯೋಜಿಸಿ ಈ ಭಾಗದ ವಿಜ್ಞಾನ ಮತ್ತು ಇಂಜಿನಿಯರಿಂಗ್ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಪ್ರೇರೇಪಿಸಬೇಕು.

- ಪ್ರೊ. ಬಸವರಾಜ ಗದಗೆ
ಪ್ರಾದೇಶಿಕ ನಿರ್ದೇಶಕ

ರಾಜ್ಯ ಮಟ್ಟದಲ್ಲಿ ಛಾಪು ಮೂಡಿಸಿದ ಶರಣಬಸವ ವಿವಿ

ಶರಣಬಸವ ವಿಶ್ವವಿದ್ಯಾಲಯದ ಪ್ರತಿಭಾವಂತ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ಆ. 09 ಮತ್ತು 10 ರಂದು ಕಲಬುರಗಿ ನಗರದ ಶರಣಬಸವ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ, ರಾಜ್ಯ ಮಟ್ಟದ 47ನೇ ಸರಣಿ ವಿದ್ಯಾರ್ಥಿ ಯೋಜನಾ ಕಾರ್ಯಕ್ರಮದಲ್ಲಿ (ಎಸ್‌ಪಿಪಿ) ದಾಖಲೆಯ ಎರಡು ಅತ್ಯುತ್ತಮ ಯೋಜನಾ ಪ್ರಶಸ್ತಿಗಳನ್ನು ಗೆಲ್ಲುವ ಮೂಲಕ ವಿಶ್ವವಿದ್ಯಾಲಯಕ್ಕೆ ಹಾಗೂ ಇಡೀ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಹೆಮ್ಮೆ ತಂದಿದ್ದಾರೆ. ಶರಣಬಸವೇಶ್ವರ ಸಂಸ್ಥಾನದ 8ನೇ ಮಹಾದಾಸೋಹ ಪೀಠಾಧಿಪತಿ ಪೂಜ್ಯ ಡಾ. ಶರಣಬಸವಪ್ಪ ಅಪ್ಪಾಜಿ, ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಚೇರಪರ್ಸನ್ ಪೂಜ್ಯ ಮಾತೋಶ್ರೀ ಡಾ. ದಾಕ್ಷಾಯಿಣಿ ಅವ್ವಾಜಿ, ಸಂಸ್ಥಾನದ 9ನೇ ಪೀಠಾಧಿಪತಿ ಚಿರಂಜೀವಿ ದೊಡ್ಡಪ್ಪಾ ಅಪ್ಪಾಜಿ, ಸಂಘದ ಕಾರ್ಯದರ್ಶಿಗಳಾದ ಶ್ರೀ ಬಸವರಾಜ ದೇಶಮುಖ, ಶರಣಬಸವ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ಅನಿಲ್‌ಕುಮಾರ್ ಬಿಡವೆ, ಕುಲಸಚಿವ ಪ್ರೊ. ಎಸ್. ಜಿ. ಡೊಳ್ಳೇಗೌಡರ್, ಡೀನ್ ಡಾ. ಲಕ್ಷ್ಮೀ ಪಾಟೀಲ್ ಮಾಕಾ ಮತ್ತು ಇತರ ಅಧಿಕಾರಿಗಳು ಈ ಗಮನಾರ್ಹ ಸಾಧನೆಗಾಗಿ ವಿದ್ಯಾರ್ಥಿಗಳಿಗೆ ಮತ್ತು ಅವರ ಮಾರ್ಗದರ್ಶಕ ಶಿಕ್ಷಕರಿಗೆ ಅಭಿನಂದಿಸಿದ್ದಾರೆ.

48 ಯೋಜನೆಗಳಿಗೆ ಪ್ರಶಸ್ತಿ ಪ್ರದಾನ

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ (ಕೆಎಸ್‌ಸಿಎಸ್‌ಟಿ) ಆಯೋಜಿಸಿದ್ದ 47ನೇ ಸರಣಿ ವಿದ್ಯಾರ್ಥಿ ಯೋಜನೆ ಹಾಗೂ ವಸ್ತು ಪ್ರದರ್ಶನದಲ್ಲಿ 25 ಅತ್ಯುತ್ತಮ ಪೋಸ್ಟರ್ ಪ್ರಸ್ತುತಿ ಯೋಜನೆಗಳು ಮತ್ತು 23 ಅತ್ಯುತ್ತಮ ಪ್ರದರ್ಶನ ಯೋಜನೆಗಳನ್ನು ಒಳಗೊಂಡಂತೆ ರಾಜ್ಯದ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಪ್ರಸ್ತುತಪಡಿಸಿದ ಒಟ್ಟು 48 ಅತ್ಯುತ್ತಮ ಯೋಜನೆಗಳನ್ನು ಅಂತಿಮಗೊಳಿಸಿ ವಿದ್ಯಾರ್ಥಿಗಳಿಗೆ ಪ್ರಶಸ್ತಿಗಳನ್ನು ನೀಡಿದರು.

ವಿ.ಜಿ.ಮಹಿಳಾ ಕಾಲೇಜಿನಿಂದ ಡೆಂಘೀ ಜಾಗೃತಿ

ಕಲಬುರಗಿ: ನಗರದ ಹೊರವಲಯದ ನಾಗನಹಳ್ಳಿ ಗ್ರಾಮದಲ್ಲಿ ಡೆಂಘೀ ಜ್ವರ ನಿಯಂತ್ರಣದ ಕುರಿತು ವ್ಹಿ ಜಿ ಮಹಿಳಾ ಪದವಿ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಘಟಕಗಳು ಹಾಗೂ ಆರೋಗ್ಯ ಇಲಾಖೆಯ, ಗ್ರಾಮ ಪಂಚಾಯಿತಿ ನಂದಿಕೂರ ಇವರ ಸಂಯುಕ್ತಾಶ್ರಯದಲ್ಲಿ ಜನ ಜಾಗೃತಿ ಜಾಥಾ ನಡೆಸಲಾಯಿತು.

ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಶಶೀಲ್ ನಮೋಶಿ ಜನ ಜಾಗೃತಿ ಜಾಥ ಅಭಿಯಾನಕ್ಕೆ ಚಾಲನೆ ನೀಡಿ, ಡೆಂಘೀ ಜ್ವರವು ಈಗ ರಾಜ್ಯದಾದ್ಯಂತ ಮಾರಕವಾಗಿ ಹರಡುತ್ತಿದ್ದು. ಈ ರೋಗದ ಕುರಿತು ಹಳ್ಳಿ ಹಳ್ಳಿಗಳಲ್ಲಿ ಜನ ಜಾಗೃತಿ ಮೂಡಿಸುವದು ಅತ್ಯಗತ್ಯವಾಗಿದೆ. ಈ ಮಳೆಗಾಲದಲ್ಲಿ ಮಳೆ ಬಂದು ಮನೆಯ ಸುತ್ತ ಮುತ್ತ ನೀರು ನಿಲ್ಲುವದು ಸಹಜ ಇಂತಹ ನಿಂತ ನೀರಿನಲ್ಲಿ ಹುಟ್ಟಿದ ಸೊಳ್ಳೆಗಳಿಂದ ರೋಗ ಹರಡುತ್ತದೆ. ಈ ರೀತಿ ಮನೆಯ ಸುತ್ತ ಮುತ್ತ ಒಳ್ಳೆಯ ವಾತಾವರಣ ನಿರ್ಮಿಸಿ ಸ್ವಚ್ಛತೆಗೆ ಆದ್ಯತೆ ನೀಡಿ ಪರಿಸರ ರಕ್ಷಣೆ ನಮ್ಮ ಹೊಣೆಯಾಗಿದೆ ಎಂದು ಹೇಳಿದರು.

ಇಂತಹ ವಿಷಯದ ಕುರಿತು ಹಳ್ಳಿ ಹಳ್ಳಿಗಳಲ್ಲಿ ಜನಜಾಗೃತಿ ಮೂಡಿಸುತ್ತಿರುವ ನಮ್ಮ ಸಂಸ್ಥೆಯ ವ್ಹಿ ಜಿ ಮಹಿಳಾ ಪದವಿ ಮಹಾವಿದ್ಯಾಲಯದ ಎನ್ ಎಸ್ ಎಸ್ ಘಟಕದ ವಿದ್ಯಾರ್ಥಿನಿಯರು, ಕಾರ್ಯಕ್ರಮ ಅಧಿಕಾರಿಗಳ ಕಾರ್ಯ ಶ್ಲಾಘನೀಯವಾಗಿದೆ ಎಂದು ಹೇಳಿದರು.

ಈ ಅಭಿಯಾನದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ ರಾಜೇಂದ್ರ ಕೊಂಡಾ, ಡಾ ಮೋಹನರಾಜ್ ಪತ್ತಾರ, ನಂದಿಕೂರು ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಲಕ್ಷ್ಮೀಬಾಯಿ ಕುಪೇಂದ್ರ ವರ್ಮಾ, ಸದಸ್ಯರಾದ ಭಾರತಿಬಾಯಿ ಶಿವಶರಪ್ಪ, ಭಿಮಾಶಂಕರ ನಂದಿಕೂರು, ಕಸ್ತೂರಿ ಬಾಯಿ ನಾಗೇಂದ್ರಪ್ಪ ಆರೋಗ್ಯ ಇಲಾಖೆಯ ಸಂತೋಷ್ ಮುಳುಜೆ, ಆಶಾ ಕಾರ್ಯಕರ್ತೆ ಲಕ್ಷ್ಮೀ ಬಾಯಿ, ಸಂಸ್ಥೆಯ ಮಾಧ್ಯಮ ಸಂಯೋಜಕ ಐ.ಕೆ ಪಾಟೀಲ್ ಕಾಲೇಜಿನ ಹಿಂದಿ ವಿಭಾಗದ ಮುಖ್ಯಸ್ಥ ಡಾ. ಪ್ರೇಮಚಂದ್ ಚವಾಣ್, ಸಂಗಮೇಶ ತುಪ್ಪದ ಭಾಗವಹಿಸಿದ್ದರು. ಈ ಅಭಿಯಾನದ ನೇತೃತ್ವ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ನೋಡಲ್ ಅಧಿಕಾರಿ ಡಾ ಮಹೇಶ್ ಕುಮಾರ್ ಗಂವ್ಹಾರ, ಡಾ ರೇಣುಕಾ ಎಚ್, ಸುಷ್ಮಾ ಕೆ ವಹಿಸಿದ್ದರು.

ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಶಶೀಲ್ ನಮೋಶಿ ಜನ ಜಾಗೃತಿ ಜಾಥ ಅಭಿಯಾನಕ್ಕೆ ಚಾಲನೆನೀಡಿದರು.

ಕರಾವಳಿಯಲ್ಲಿ ಯಕ್ಷಗಾನ ಪ್ರಸಿದ್ಧ ಕಲೆ

ಶರಣ ಬಸವೇಶ್ವರ ದೇವಸ್ಥಾನದಲ್ಲಿ ಕುಂದಾಪುರ ತಂಡದಿಂದ ಪ್ರದರ್ಶನ

ಕಲಬುರಗಿ: ಶರಣಬಸವೇಶ್ವರ ದೇವಸ್ಥಾನದಲ್ಲಿ ಶನಿವಾರ ಪ್ರಸಂಗ ಶಿವಶಕ್ತಿ ಗುಳಿಗ ಯಕ್ಷಗಾನ ಆಟವನ್ನು ಶರಣಬಸವೇಶ್ವರ ಸಂಸ್ಥಾನದ ಒಂಭತ್ತನೇಯ ಪೀಠಾಧಿಪತಿ ಪೂಜ್ಯ ಚಿರಂಜೀವಿ ದೊಡ್ಡಪ್ಪ ಅಪ್ಪ ಉದ್ಘಾಟಿಸಿದರು.

ಯಕ್ಷಗಾನ-ನೃತ್ಯ, ಹಾಡುಗಾರಿಕೆ, ಮಾತಗಾರಿಕೆ, ವೇಷ-ಭೂಷಣಗಳನ್ನೊಳಗೊಂಡ ಒಂದು ಸ್ವತಂತ್ರವಾದ ಶಾಸ್ತ್ರೀಯ ಕಲೆ. ಕರ್ನಾಟಕದ ಸಾಂಪ್ರದಾಯಿಕ ಕಲಾ ಪ್ರಕಾರಗಳಲ್ಲಿ ಯಕ್ಷಗಾನ ಅತ್ಯಂತ ಪ್ರಮುಖವಾದದ್ದು ಎಂದು ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಬಸವರಾಜ ದೇಶಮುಖ ಹೇಳಿದರು.

ಶರಣಬಸವೇಶ್ವರ ದೇವಸ್ಥಾನದಲ್ಲಿ ಪೂಜ್ಯ ಚಿರಂಜೀವಿ ದೊಡ್ಡಪ್ಪ ಅಪ್ಪ ಹವ್ಯಾಸಿ ಕಲಾ ಬಳಗ ಮತ್ತು ದಕ್ಷಿಣ ಕನ್ನಡ ಸಂಘ ಮತ್ತು ಕಲಬುರಗಿ ಹೋಟೆಲ್ ಲಾಡ್ಜ್ ಬೇಕರಿ ಅಸೋಸಿಯೇಷನ್ ಇವರ ನೇತೃತ್ವದಲ್ಲಿ ಕುಂದಾಪುರದ ಶ್ರೀ ಮಹಾಗಣಪತಿ ಪ್ರವಾಸಿ ಯಕ್ಷಗಾನ ಮಂಡಳಿಯವರು ಪ್ರಸಂಗ ಶಿವಶಕ್ತಿ ಗುಳಿಗ ಯಕ್ಷಗಾನ ಆಟದ ಮುಖ್ಯ ಅತಿಥಿಗಳಾಗಿ ಮಾತನಾಡಿ, ನಮ್ಮ ಭಾಗದಲ್ಲಿ ಡೊಳ್ಳು ಕುಣಿತ, ನಾಟಕ, ಕೋಲಾಟಗಳು ಹೇಗೋ ಹಾಗೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಕ್ಷಗಾನ ಬಹಳ ಪ್ರಸಿದ್ಧಿ ಪಡೆದಿದೆ ಎಂದರು.

ಪೂಜ್ಯ ಚಿರಂಜೀವಿ ದೊಡ್ಡಪ್ಪ ಅಪ್ಪ ಹವ್ಯಾಸಿ ಕಲಾ ಬಳಗ ಮತ್ತು ದಕ್ಷಿಣ ಕನ್ನಡ ಸಂಘ ಮತ್ತು ಕಲಬುರಗಿ ಹೋಟೆಲ್ ಲಾಡ್ಜ್ ಬೇಕರಿ ಅಸೋಸಿಯೇಷನ್ ಪದಾಧಿಕಾರಿಗಳು ಇದ್ದರು.

ಶರಣಬಸವೇಶ್ವರ ದೇವಸ್ಥಾನದಲ್ಲಿ ಪ್ರಸಂಗ ಶಿವಶಕ್ತಿ ಗುಳಿಗ ಯಕ್ಷಗಾನ ಪ್ರದರ್ಶಿಸಲಾಯಿತು.

ಡೆಂಘೀ ನಿಯಂತ್ರಣಕ್ಕೆ ಮುಂದಾಗಬೇಕು: ಜಿಲ್ಲಾಧಿಕಾರಿ

ಶಾಲಾ, ಅಂಗನವಾಡಿ, ವಸತಿ ನಿಲಯದಲ್ಲಿ 3 ದಿನ ಲಾರ್ವಾ ಸರ್ವೆಗೆ ಸೂಚನೆ

ಕಲಬುರಗಿ: ಡೆಂಘೀ ನಿಯಂತ್ರಣ ನಿಟ್ಟಿನಲ್ಲಿ ಮುಂದಿನ 3 ದಿನದಲ್ಲಿ ಜಿಲ್ಲೆಯ ಶಾಲಾ, ಅಂಗನವಾಡಿ ಹಾಗೂ ವಸತಿ ನಿಲಯದಲ್ಲಿ ಲಾರ್ವಾ ಸರ್ವೆ ಮಾಡಿಸಿ ಸೊಳ್ಳೆಗಳ ತಾಣ

ನಿರ್ಮೂಲನೆ ಮಾಡಬೇಕು ಎಂದು ಡಿ.ಸಿ. ಬಿ.ಫೌಜಿಯಾ ತರನ್ನುಮ್ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿಯ ಕೆಸ್ವಾನ್ ಸಭಾಂಗಣದಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರವಾಹ ಹಿನ್ನೆಲೆಯಲ್ಲಿ ಉದ್ಭವಿಸಬಹುದಾದ ಸಾಂಕ್ರಾಮಿಕ ರೋಗ ತಡೆಗಟ್ಟುವಲ್ಲಿ ಆರೋಗ್ಯ ಇಲಾಖೆ ಮುಂದಾಗಬೇಕು. ವಸತಿ ನಿಲಯದಲ್ಲಿ ನಿಲಾಯಾರ್ಥಿಗಳಿಗೆ ಪ್ರತಿ ತಿಂಗಳ ವೈದ್ಯಕೀಯ ಪರೀಕ್ಷೆ ಮಾಡಿಸಬೇಕು ಎಂದರು.

ಕಳೆದ ಜುಲೈ ಹಾಗೂ ಆಗಸ್ಟ್ ಮಾಹೆಯಲ್ಲಿ ಡೆಂಘೀ ಪ್ರಕರಣ ಹೆಚ್ಚು ಕಂಡುಬಂದ ಪ್ರದೇಶದಲ್ಲಿ ಸಿ.ಎಚ್.ಸಿ, ಪಿ.ಎಚ್.ಸಿ ವೈದ್ಯರು ಶಾಲೆ,ಅಂಗನವಾಡಿ, ವಸತಿ ನಿಲಯ ಹಾಗೂ ಗ್ರಾಮಗಳಿಗೆ ಹೋಗಿ ಸಾರ್ವಜನಿಕರಿಗೆ ಅರಿವು ಮೂಡಿಸಬೇಕು. ಸೊಳ್ಳೆಗಳ ಮೂಲ ತಾಣ ನಾಶಪಡಿಸುವುದಲ್ಲದೆ ನೀರು ನಿಂತು ಈಡೀಸ್ ಸೊಳ್ಳೆ ಉತ್ಪತ್ತಿಯಾಗದಂತೆ ಎಚ್ಚರ ವಹಿಸಿ. ಶಾಲಾ, ವಸತಿ ನಿಲಯದಲ್ಲಿನ ನೀರಿನ್ ಟ್ಯಾಂಕ್ ಸ್ವಚ್ಛಗೊಳಿಸಿ ಎಂದರು.

ಇತ್ತೀಚೆಗೆ ಸೇಡಂ ತಾಲೂಕಿನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧೀನದ ಕೋಡ್ಲಾ ಮೋರಾರ್ಜಿ ದೇಸಾಯಿ ವಸತಿ ಶಾಲೆಗೆ ಭೇಟಿ ನೀಡಿದಾಗ, ಅಲ್ಲಿ ವಿಪರೀತ ಸೊಳ್ಳೆಗಳಿರುವುದು ಕಂಡುಬಂದಿದೆ. ಕೂಡಲೆ ಅಲ್ಲಿ ಸರಿಪಡಿಸಿ ಎಂದು ಅಲ್ಪಸಂಖ್ಯಾತ ಅಧಿಕಾರಿಗಳಿಗೆ ಡಿ.ಸಿ. ಸೂಚಿಸಿದರು.

ಡಿ.ಎಚ್.ಓ, ಆರ್.ಸಿ.ಎಚ್.ಓ ಹಾಗೂ ಡಿ.ಎಲ್.ಓಗಳು ಪ್ರತಿಯೊಂದು ವಲಯದಲ್ಲಿ ಡೆಂಗ್ಯೂ ನಿಯಂತ್ರಣ ನಿಟ್ಟಿನಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಆಯೋಜಿಸಬೇಕು. ಇದಕ್ಕೆ ಪಾಲಿಕೆ ಪರಿಸರ ಅಭಿಯಂತರರು ಇತರೆ ನೆರವು ಪಡೆಯಿರಿ ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಸಿ.ಇ.ಓ ಭಂವರ್ ಸಿಂಗ್ ಮೀನಾ, ಕಲಬುರಗಿ ಮಹಾನಗರ ಪಾಲಿಕೆ ಆಯುಕ್ತ ಭುವನೇಶ ಪಾಟೀಲ ದೇವಿದಾಸ್, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಸಹಾಯಕ ಆಯುಕ್ತೆ ರೂಪಿಂದರ್ ಸಿಂಗ್ ಕೌರ್, ಪ್ರಭುರೆಡ್ಡಿ, ಡಿ.ಎಚ್.ಓ ಡಾ. ರತಿಕಾಂತ ಸ್ವಾಮಿ, ಆರ್.ಸಿ.ಎಚ್.ಓ ಡಾ.ಶರಣಬಸಪ್ಪ ಖ್ಯಾತನಾಳ ಸೇರಿದಂತೆ ತಾಲೂಕು ಆರೋಗ್ಯಾಧಿಕಾರಿಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.



ನಗರದಲ್ಲಿ ಸ್ವಚ್ಛತೆಗೆ ಆದ್ಯತೆ ಕೊಡಿ

ಕಲಬುರಗಿ ನಗರದಲ್ಲಿ ಪಾಲಿಕೆ ವಲಯ ಆಯುಕ್ತರು ಸ್ವಚ್ಛತೆಗೆ ಮುಂದಾಗಬೇಕು. ಕಚೇರಿಯಲ್ಲಿ ಕುಳಿತುಕೊಂಡು ಕೆಲಸ ಮಾಡುವುದನ್ನು ಬಿಟ್ಟು ನಗರ ಸುತ್ತಾಡಿ ಸಮಸ್ಯೆ ಬಗೆಹರಿಸಬೇಕು. ಬ್ಲ್ಯಾಕ್ ಸ್ಪಾಟ್ ಸ್ಥಳದಲ್ಲಿ ಸ್ವಚ್ಛಗೊಳಿಸಿ ಮುಂದೆ ಅಲ್ಲಿ ಕಸ ಹಾಕದಂತೆ ಸಾರ್ವಜನಿಕರಿಗೆ, ಮಾರುಕಟ್ಟೆಯಲ್ಲಿನ ವ್ಯಾಪಾರಿಗಳಿಗೆ ತಿಳಿಸಬೇಕು. ಸೂಚನೆ ನೀಡಿದರು ಮತ್ತೆ ಕಸ ಹಾಕಿ ನೈರ್ಮಲ್ಯ ಸಮಸ್ಯೆಗೆ ಕಾರಣರಾದರೆ ಕೂಡಲೆ ಅಂತಹವರಿಗೆ ಎಸ್.ಬಿ.ಎಂ. ಕಾಯ್ದೆಯಂತೆ ದಂಡ ಹಾಕಿ ಎಂದು ಡಿ.ಸಿ. ಪಾಲಿಕೆ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

ಯೋಗ ಶಿಕ್ಷಕರ ತರಬೇತಿ ಶಿಬಿರ

ಸುಮಾರು ಒಂದು ತಿಂಗಳ ಕಾಲ ನಡೆದ ಯೋಗ ತರಬೇತಿ ಶಿಬಿರದಲ್ಲಿ 150ಕ್ಕೂ ಹೆಚ್ಚು ಜನ ಯೋಗಾಭ್ಯಾಸ ಮಾಡಿದರು.

ಕಲಬುರಗಿ: ಓಂ.ಜಿ ಪತಂಜಲಿ ಯೋಗ ಸಮಿತಿ ಕಲಬುರಗಿ ವತಿಯಿಂದ ನಗರದ ಹೊರವಲಯದ ಆಳಂದ ರಸ್ತೆಯ ಬೀಜ ಸ್ಪೂರ ರೆಸಾರ್ಟ್ ನಲ್ಲಿ ಯೋಗಸಹ ಶಿಕ್ಷಕರ ತರಬೇತಿ ಶಿಬಿರದ ಸಮಾರೋಪ ಸಮಾರಂಭ ಅಂಗವಾಗಿ ಶಿಬಿರಾರ್ಥಿಗಳಿಗೆ ಪ್ರಶಸ್ತಿ ಪತ್ರ ವಿತರಣೆ ಮಾಡಲಾಯಿತು.

ಸುಮಾರು ಒಂದು ತಿಂಗಳ ಕಾಲ ನಡೆದ ಯೋಗ ತರಬೇತಿ ಶಿಬಿರದಲ್ಲಿ 150ಕ್ಕೂ ಹೆಚ್ಚು ಜನ ಯೋಗಾಭ್ಯಾಸ ಮಾಡಿದರು. ಯೋಗ ಗುರು, ರಾಜ್ಯ ಪ್ರಭಾರಿಗಳಾದ ಯೋಗಾಚಾರ್ಯ ಬವರ್ ಲಾಲ್ ಆರ್ಯ ಅವರು ಪ್ರಶಸ್ತಿ ಪತ್ರ ವಿತರಣೆ ನೆರವೇರಿಸಿದರು.

ಈ ವೇಳೆ ಭಾರತ್ವಾಭಿಮಾನದ ಜಿಲ್ಲಾಧ್ಯಕ್ಷ ಶಿವಾನಂದ ಸಾಲಿಮಠ, ಪತಂಜಲಿ ಯೋಗ ಸಮಿತಿಯ ಅಧ್ಯಕ್ಷ ಎಚ್. ಸುಭಾಷ್ ಚಂದ್ರ, ಉಷಾ ಭಗತ್, ಆರ್.ಪಿ.ಬೀಜಸ್ಪೂರ, ಬ್ರಹ್ಮಕುಮಾರ್ ಶರಣಬಸಪ್ಪ ಹೀರಾ, ಉದ್ಯಮಿ ಅಶೋಕ್ ಗುತ್ತೇದಾರ್ ,ಸಮಾಜದ ಸೇವಕರಾದ ಉಮೇಶ್ ಶೆಟ್ಟಿ, ಪ್ರಶಾಂತ್ ಬಿಜಾಸ್ಪೂರ್, ಮಂಜುಳಾ ತಡಿಬಿಡಿಮಠ, ಅಶೋಕ್ ಪಾಟೀಲ್, ಘನಶಾಮ್ ಗುತ್ತೇದಾರ್, ಕೆ ಮಸಿಂಗ್ ಪವಾರ್, ನಿಂಗಣ್ಣ ವಿಶ್ವಕರ್ಮ, ಶರಣು ಉದನೂರ, ಜಯಶ್ರೀ ಹರವಾಳ್ ,ಲಲಿತಾ ಬೂತ್ಪೂರ್, ಲಲಿತಾ ಜೀವಿಣಗಿ ಸೇರಿದಂತೆ ಅನೇಕರು ಇದ್ದರು.

ಪ್ರೋಪ್ಲಸ್ ಡಯಾಲಿಸಿಸ್ ಚಿಕಿತ್ಸಾಲಯ ಆರಂಭ

ಕಲಬುರಗಿ: ಏಷ್ಯಾದ ಪ್ರಮುಖ ಡಯಾಲಿಸಿಸ್ ಜಾಲವಾದ 'ನೆಫ್ರೋಪ್ಲಸ್' ಕಲಬುರಗಿಯ ಜೆಸ್ಕಾಂ ಪ್ರದಾನ ಕಚೇರಿಯ ಎದುರಿನ ಚಿರಾಯು ಆಸ್ಪತ್ರೆಯಲ್ಲಿ ದೊಡ್ಡ ಡಯಾಲಿಸಿಸ್ ಚಿಕಿತ್ಸಾಲಯವನ್ನು ಆರಂಭಿಸಿದೆ. ಈ ಚಿಕಿತ್ಸಾಲಯದ ಉದ್ಘಾಟನೆಯೊಂದಿಗೆ, ಕಲಬುರಗಿಯಲ್ಲಿ ನೆಫ್ರೋಪ್ಲಸ್ ತನ್ನ ನಿಯಮಾಧಾರಿತ ಡಯಾಲಿಸಿಸ್ ಕೊಡುಗೆಯನ್ನು ವೇಗವಾಗಿ ಬೆಳೆಯುತ್ತಿರುವ ಆರೋಗ್ಯ ಪರಿಸರ ವ್ಯವಸ್ಥೆಗೆ ತರುವ ಗುರಿ ಹೊಂದಿದೆ. 14 ಡಯಾಲಿಸಿಸ್ ಹಾಸಿಗೆಗಳನ್ನು ಹೊಂದಿರುವ ಚಿಕಿತ್ಸಾಲಯವನ್ನು ಮೂವರು ನೆಫ್ರಾಲಜಿಸ್ಟ್‌ಗಳಾದ ಡಾ. ಮಂಜುನಾಥ್ ದೋಶೆಟ್ಟಿ, ಡಾ. ಆನಂದ್ ಶಂಕರ್ ಮತ್ತು ಡಾ.ಪೂರ್ಣಿಮಾ ತಡಕಲ್ ಅವರ ತಂಡ ನಿರ್ವಸಲಿದೆ. ಅವರು ತಿಂಗಳಿಗೆ ಸುಮಾರು 1,000 ಡಯಾಲಿಸಿಸ್ ಸೆಷನ್‌ಗಳನ್ನು ಮತ್ತು 4ರಿಂದ 5 ಕಸಿಗಳನ್ನು ಮೇಲ್ವಿಚಾರಣೆ ಮಾಡುತ್ತಾರೆ. ಆಸ್ಪತ್ರೆಯಲ್ಲಿ 60 ಹಾಸಿಗೆಗಳಿವೆ. ಡಾ. ಮಂಜುನಾಥ್ ದೋಶೆಟ್ಟಿ ಮಾತನಾಡಿ, ಈ ಹೊಸ ಸೌಲಭ್ಯವು ಈ ಪ್ರದೇಶಕ್ಕೆ ಸುಧಾರಿತ ಡಯಾಲಿಸಿಸ್ ಆರೈಕೆ ಒದಗಿಸುವಲ್ಲಿ ಮಹತ್ವದ ಮೈಲಿಗಲ್ಲಾಗಿದೆ. ವೆಚ್ಚ ಹೆಚ್ಚಿಸದೆ ಅತ್ಯಾಧುನಿಕ ಗುಣಮಟ್ಟದ ಆರೈಕೆ ಒದಗಿಸುವುದು ನೆಫ್ರೋಪ್ಲಸ್‌ನ ಮೌಲ್ಯವಾಗಿದೆ. ನೆಫ್ರೋಪ್ಲಸ್‌ನೊಂದಿಗಿನ ಈ ಸಹಯೋಗವು ನೆಫ್ರಾಲಜಿಸ್ಟ್‌ಗಳಿಗೆ ಹೆಚ್ಚು ಕೇಂದ್ರೀಕೃತ ಚಿಕಿತ್ಸಾತ್ಮಕ ಸಮಯವನ್ನು ನೀಡುವುದಲ್ಲದೆ, ಉತ್ತಮ ಆರೋಗ್ಯದ ಪ್ರಯಾಣದಲ್ಲಿ ರೋಗಿಗಳನ್ನು ಸಶಕ್ತಗೊಳಿಸುತ್ತದೆ ಎಂದರು.

ಪಂಚ ಸೇನಾ ತಾಲೂಕು ಘಟಕಕ್ಕೆ ಆಯ್ಕೆ

ಸೇನಾ ತಾಲೂಕು ಘಟಕದ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು.

ಆಳಂದ: ಕೂಡಲ ಸಂಗಮ ಪೀಠದ ಪಂಚಮಸಾಲಿ ಪೂಜ್ಯ ಶ್ರೀ ಬಸವ ಜಯ ಮೃತ್ಯುಂಜಯ ಮಹಾಸ್ವಾಮಿಗಳ ಆಶಯದಂತೆ ರಾಷ್ಟ್ರೀಯ ಪಂಚ ಸೇನಾ ಅಧ್ಯಕ್ಷರಾದ ಬಸನಗೌಡ ಪಾಟೀಲ್ (ನಾಗರಾಳ ಹುಲಿ), ರಾಜ್ಯಾಧ್ಯಕ್ಷರಾದ ರುದ್ರಗೌಡ ಸೋಲಬಗೌಡರ ಹಾಗೂ ಪಂಚಮಸಾಲಿ ಘಟಕದ ಅಧ್ಯಕ್ಷ ಆನಂದ ದೇಶಮುಖ ನಿರಗುಡಿ ಅವರ ಒಪ್ಪಿಗೆಯೊಂದಿಗೆ ಹಾಗೂ ಹಿರಿಯ ಮುಖಂಡರ ಸಲಹೆಯಂತೆ ಆಳಂದ ತಾಲ್ಲೂಕು ಪಂಚ ಸೇನಾ ಘಟಕದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ಜಿಲ್ಲಾಧ್ಯಕ್ಷ ಸೋಮಶೇಖರ್ ಮುಲಗೆ ಆದೇಶ ಪತ್ರದಲ್ಲಿ ತಿಳಿಸಿದ್ದಾರೆ.

ಗುರುನಾಥ ಪಾಟೀಲ್ ಹೊದಲೂರ (ಗೌರವ ಅಧ್ಯಕ್ಷ), ಲಿಂಗರಾಜ ಪಾಟೀಲ್ ಖಾನಾಪೂರ (ಅಧ್ಯಕ್ಷರು), ಕಿರಣ ಬಂಗರಗಿ ಖಜೂರಿ, ಶಶಿಕಾಂತ ಕಾಬಡೆ ಇಕ್ಕಳಕಿ, ರಾಘವೇಂದ್ರ ಹತ್ತರಕಿ ಆಳಂದ, ಅಮೃತರಾವ ಪಾಟೀಲ್ ಕೆರೂರ (ಉಪಾಧ್ಯಕ್ಷ), ಸಿದ್ದು ವೇದಶಟ್ಟಿ ಮುನ್ನಹಳ್ಳಿ (ಸಾಮಾಜಿಕ ಜಾಲತಾಣದ ಅಧ್ಯಕ್ಷ), ಚಿದಾನಂದ ನಾಗಣಸೂರ ಸರಸಂಬಾ , ಸಿದ್ದರಾಮ ಕೋರೆ ಚಿತಲಿ, ರಾಮ ಪಾಟೀಲ ತೀರ್ಥ, ಯಶ್ವಂತ ಬುದ್ದಿವಂತ ಜವಳಿ (ಕಾರ್ಯದರ್ಶಿ), ಶಿವಕುಮಾರ್ ಮುಲಗೆ ಕಿಣ್ಣಿಸುಲ್ತಾನ (ಸಂಘಟನಾ ಕಾರ್ಯದರ್ಶಿ), ಶಂಕರಗೌಡ ಪಾಟೀಲ್ ಝುಳಕಿ ಕೆ (ಸಹ ಕಾರ್ಯದರ್ಶಿ), ನಟರಾಜ ಸರಸಂಬಿ (ಸಂಚಾಲಕರು), ಸುಭಾಷ ಲಾವಣಿ ಜಿಡಗಾ, ರವಿ ಖಜೂರಿ ಆಳಂದ, ಬಸವರಾಜ ನಂದಗಾಂವ ಸಾವಳೇಶ್ವರ, ಜಡೇಶ ಪಾಟೀಲ್ ಮಮದಾಪೂರ, ಆಕಾಶ್ ಮಾದಗುಂಡೆ ಕಡಗಂಚಿ, ಲಕ್ಷ್ಮೀಕಾಂತ್ ಸರಸಂಬಿ ಹಳ್ಳಿಸಲಗರ, ಚನ್ನು ರುದ್ರವಾಡಿ ತಡಕಲ(ಸದಸ್ಯರು) ಎಲ್ಲರೂ ಸೇರಿಕೊಂಡು ಸಂಘಟನಾ ಚತುರತೆಯ ಗುರುತಿಸಿ ಅತೀ ಹೆಚ್ಚು ಸಂಘಟಕರನ್ನು ಪಾಲ್ಗೊಳ್ಳಲು ಪ್ರೇರಣೆಯಾಗಿಸಿ ಜತೆಗೆ ಸಮಾಜದ ಸಂಘಟನೆಯನ್ನು ಮಾಡಬೇಕೆಂದು ಅವರು ಹೇಳಿದ್ದಾರೆ.

ಸಂಗೊಳ್ಳಿ ರಾಯಣ್ಣ ಜಯಂತಿ ಆಚರಣೆ

ಕಲಬುರಗಿ: ಆಳಂದ ಪಟ್ಟಣದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ 228ನೇ ಜಯಂತಿ ಆಚರಣೆಯ ಕುರಿತು ಕರ್ನಾಟಕ ಪ್ರದೇಶ ಕುರುಬರ ಸಂಘ ಆಯೋಜಿಸಿದ್ದ ಸಭೆಯಲ್ಲಿ

ಭಾಗವಹಿಸಿದ್ದ ಮುಖಂಡರು ಅದ್ದೂರಿಯಾಗಿ ಜಯಂತಿ ಆಚರಣೆಗೆ ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದರು. ಪಟ್ಟಣದಲ್ಲಿ ಈ ಕುರಿತು ಕರೆದ ಸಿದ್ದತಾ ಸಭೆಯ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಪ್ರದೇಶ ಕುರುಬರ ಸಂಘದ ತಾಲೂಕಾಧ್ಯಕ್ಷ ಸಿದ್ದು ಪೂಜಾರಿ ಅ.18ರಂದು ಜಯಂತಿ ಆಚರಣೆಯ ನಿರ್ಧಾರವನ್ನು ಪ್ರಸ್ತಾಪಿಸಿದ್ದರು. ಅಂದು ಪಟ್ಟಣದ ಗುರುಭವನದಲ್ಲಿ ಜಯಂತಿ ಆಚರಣೆಯ ವೇದಿಕೆಯ ಕಾರ್ಯಕ್ರಮ ಶಾಸಕರು ಮತ್ತು ಗಣ್ಯರು ಹಾಗೂ ಉಪನ್ಯಾಸಕರನ್ನು ಆಮಂತ್ರಿಸಲು ನಿರ್ಧರಿಸಲಾಯಿತು. ಈ ಸಂದರ್ಭದಲ್ಲಿ ಶಿವರಾಯ ಪೂಜಾರಿ, ದೊಡ್ಡಪ್ಪ ಹೆಬಳಿ, ಮಲ್ಲಿಕಾರ್ಜುನ ದೇವಂತಗಿ, ಸುರೇಶ ಪೂಜಾರಿ, ನಾಗರಾಜ ಘೋಡಕೆ, ಪ್ರಭಾಕರ್ ಮಂಟಗಿ, ಭೀಮಾ ನಾಗಲೇಗಾಂವ, ಕಲ್ಯಾಣಿ ದೇವಂತಗಿ, ಶಾಂತು ಮಾದನ ಹಿಪ್ಪರಗಾ, ಧೂಂಡಿಬಾ ಪೂಜಾರಿ, ಶಾಂತು ಚಿತಲಿ, ಹಣಮಂತ ಗೌಡೆ, ಬಾಲಾಜಿ ಘೋಡಕೆ, ಯಲ್ಲಾಲಿಂಗ ಶಿರೂರ, ಪಾರ್ವತಿ ಮಾದನ ಹಿಪ್ಪರಗಾ, ಅನಿಲ ಇದ್ದರು.

ಸಮಾಚಾರ ಸಣ್ಣದಲ್ಲ

ಕ್ರಸ್ಟ್ ಗೇಟ್ ವೀಕ್ಷಿಸಿದ ಶಾಸಕರು, ಸಚಿವರು

ಹೊಸಪೇಟೆ: ಡಿಸಿಎಂ ಡಿ.ಕೆ.ಶಿವಕುಮಾರ್ ತುಂಗಭದ್ರಾ ಜಲಾಶಯಕ್ಕೆ ಆಗಮಿಸಿದ ವೇಳೆ ಕಾಡಾ ಅಧ್ಯಕ್ಷ ಹಸನ್ ಸಾಬ ದೋಟಿಹಾಳ ಅವರನ್ನೇ ಒಳಬಿಡದೆ ತಡೆದು ನಿಲ್ಲಿಸಲಾಯಿತು. ತುಂಗಭದ್ರಾ ಜಲಾಶಯದ ಕ್ರಸ್ಟ್ ಗೇಟ್ 19 ಕಳಚಿದ ಹಿನ್ನೆಲೆಯಲ್ಲಿ ಜಲಸಂಪನ್ಮೂಲ ಸಚಿವ ಡಿ.ಕೆ ಶಿವಕುಮಾರ್, ಸಚಿವ ಶಿವರಾಜ್ ತಂಗಡಗಿ, ಎನ್.ಎಸ್.ಭೋಸರಾಜು, ನಾಲ್ಕು ಜಿಲ್ಲೆಯ ಶಾಸಕರು ಸೇರಿ ಇತರೆ ಮುಖಂಡರು ಆಗಮಿಸಿದ ವೇಳೆ ಕ್ರಸ್ಟ್ ಗೇಟ್ ವೀಕ್ಷಣೆಗೆ ತೆರಳಿದರು. ಈ ವೇಳೆ ದೋಟಿಹಾಳ ಹಿಂಬಾಲಕರು ಪೊಲೀಸರ ನಡುವೆ ಮಾತಿನಚಕಮಕಿ ನಡೆಯಿತು. ಕೊಪ್ಪಳ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರವಾಣಿ ಕರೆ ಮಾಡಿ ಅಧ್ಯಕ್ಷರನ್ನು ಒಳಬಿಡಲು ತಿಳಿಸಿದರು.

ರೈತರಿಂದ ಕೃಷಿ ಪ್ರಶಸ್ತಿಗೆ ಅರ್ಜಿ ಆಹ್ವಾನ

ಬಳ್ಳಾರಿ: ಕೃಷಿ ಇಲಾಖೆ ವತಿಯಿಂದ ಪ್ರಸ್ತಕ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮಿನ ಬೆಳೆ ಸ್ಪರ್ಧೆ ಕಾರ್ಯಕ್ರಮದಡಿ ಕೃಷಿ ಪ್ರಶಸ್ತಿಗೆ ಅರ್ಹ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕ ಡಾ.ಕೆ.ಸೋಮಸುಂದರ್ ತಿಳಿಸಿದ್ದಾರೆ. ಕೃಷಿ ಇಲಾಖೆಯ ಕೆ-ಕಿಸಾನ್ ಪೋರ್ಟಲ್‌ನಲ್ಲಿ ನೂತನವಾಗಿ ಕೃಷಿ ಪ್ರಶಸ್ತಿಗೆ ಅರ್ಜಿ ನಮೂನೆಯನ್ನು ಅಳವಡಿಸಲಾಗಿದ್ದು, ಸಿಟಿಜನ್ ಲಾಗಿನ್ ಅಥವಾ ಆರ್‌ಎಸ್‌ಕೆ ಲಾಗಿನ್ ಮೂಲಕ ಹತ್ತಿರದ ರೈತ ಸಂಪರ್ಕ ಕೇಂದ್ರ, ಸೇವಾ ಕೇಂದ್ರ ಅಥವಾ ಸ್ವತಃ ಕೆ-ಕಿಸಾನ್ ಪೋರ್ಟಲ್‌ನಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ತಮ್ಮ ಎಫ್‌ಐಡಿ ಬಳಸಿಕೊಂಡು ಅರ್ಜಿ ಸಲ್ಲಿಸಬೇಕು. ಅರ್ಜಿ ಶುಲ್ಕವಿರುವುದಿಲ್ಲ. ಮುಂಗಾರು ಹಂಗಾಮಿನ ಕೃಷಿ ಪ್ರಶಸ್ತಿಗೆ ಆ.31 ನೋಂದಾಯಿಸಲು ಕೊನೆಯ ದಿನ ಮತ್ತು ಹಿಂಗಾರು ಹಂಗಾಮಿನ ಕೃಷಿ ಪ್ರಶಸ್ತಿಗೆ ನ.30 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಜಂಟಿ ಕೃಷಿ ನಿರ್ದೇಶಕರ ಕಚೇರಿ ಅಥವಾ ದೂ.08392-276224ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಿನಿ ಉದ್ಯೋಗ ಮೇಳ ನಾಳೆ

ಬಳ್ಳಾರಿ: ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಆ.13 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆವರೆಗೆ ನಗರದ ಹಳೆ ತಾಲೂಕು ಕಚೇರಿ ಆವರಣದ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಮಿನಿ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿ ಪಿ.ಎಸ್.ಹಟ್ಟಪ್ಪ ತಿಳಿಸಿದ್ದಾರೆ. ಮೇಳದಲ್ಲಿ 4 ರಿಂದ 5 ಕಂಪನಿಗಳು ಭಾಗವಹಿಸುತ್ತಿದ್ದು, ಇವರು ತಮ್ಮಲ್ಲಿರುವ ಖಾಲಿ ಹುದ್ದೆಗಳಿಗೆ ನೇರ ಸಂದರ್ಶನ ಮೂಲಕ ನೇಮಕ ಮಾಡಿಕೊಳ್ಳುವರು. ಆಸಕ್ತ ಅಭ್ಯರ್ಥಿಗಳು ತಮ್ಮ ಆಧಾರ್‌ಕಾರ್ಡ್ ಪ್ರತಿ ಮತ್ತು ಸ್ವ ವಿವರಗಳೊಂದಿಗೆ ಅಂದು ನಡೆಯುವ ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಅಥವಾ ಮೊ. 9742718891, 8277000619, 9900827768, 6360408094 ಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

ಪತ್ರಿಕಾಲಯಗಳಲ್ಲಿ ತರಬೇತಿಗೆ ಅರ್ಜಿ

ಬಳ್ಳಾರಿ: ಕರ್ನಾಟಕ ಮಾಧ್ಯಮ ಅಕಾಡೆಮಿಯು ಪತ್ರಿಕೋದ್ಯಮ ವಿಷಯದಲ್ಲಿ ಸ್ನಾತಕೋತ್ತರ ಪದವಿ ಅಥವಾ ಪದವಿ ಪಡೆದಿರುವ ಮಹಿಳಾ ವಿದ್ಯಾರ್ಥಿಗಳಿಗೆ ಪತ್ರಿಕಾಲಯದಲ್ಲಿ ತರಬೇತಿ ಪಡೆಯಲು ಅರ್ಜಿ ಆಹ್ವಾನಿಸಿದೆ. 28 ವರ್ಷದೊಳಗಿನ ಮಹಿಳಾ ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅಕಾಡೆಮಿಯು ಅರ್ಹತಾ ಪರೀಕ್ಷೆ ನಡೆಸಲಿದೆ. ಈ ಪರೀಕ್ಷೆಯ ದಿನಾಂಕ, ಸ್ಥಳ ಮತ್ತು ಸಮಯವನ್ನು ಸಂದರ್ಶನದ ವೇಳೆ ತಿಳಿಸಲಾಗುವುದು ಎಂದು ಕರ್ನಾಟಕ ಮಾಧ್ಯಮ ಅಕಾಡೆಮಿಯ ಕಚೇರಿ ಪ್ರಕಟಣೆ ತಿಳಿಸಿದೆ.

ಮಾದಕ ವಸ್ತು ಮಾರಾಟ: ಕಾನೂನು ಕ್ರಮ

ಬಳ್ಳಾರಿ: ತಾಲೂಕು ವ್ಯಾಪ್ತಿಯಲ್ಲಿ ಮಾದಕ ವಸ್ತು, ದ್ರವ್ಯ, ಹೊರರಾಜ್ಯಗಳಿಂದ ಸಾಗಾಣಿಕೆಯಾಗುವ ಸೇಂದಿ ಸೇರಿದಂತೆ ಸಾಗಾಣಿಕೆ, ಮಾರಾಟ ಮಾಡುವವರ ವಿರುದ್ಧ ನಿಯಮಾನುಸಾರ ಕಾನೂನು ಅಡಿಯಲ್ಲಿ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಬಳ್ಳಾರಿ ತಾಲೂಕು ತಹಸೀಲ್ದಾರ ಗುರುರಾಜ ತಿಳಿಸಿದ್ದಾರೆ. ಸಾರ್ವಜನಿಕರ ಹಿತದೃಷ್ಟಿಯಿಂದ ಇತ್ತೀಚೆಗೆ ನಡೆದ ಸ್ಥಾಯಿ ಸಮಿತಿ ಸಭೆಯಲ್ಲಿ ಈ ಕುರಿತು ತೀರ್ಮಾನಿಸಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

{ಮಧು ಬಂಗಾರಪ್ಪ } ಪ್ರಾಥಮಿಕ ಶಾಲಾ ಶಿಕ್ಷಣ ಸಚಿವ

ಮೂಡ ಹಗರಣ ಖಂಡಿಸಿ ಪಾದಯಾತ್ರೆ ನಡೆಸಿದ ಬಿಜೆಪಿ ರಾಜ್ಯಾಧ್ಯಕ್ಷರಿಂದ ಆಗಿರುವುದು ಶೂನ್ಯ ಸಾಧನೆ. ನಾವು ಕೆಪಿಎಸ್ ಶಾಲೆ ಯೋಜನೆಗಳನ್ನ ಸಂಪೂರ್ಣ ಮಾಡಿದ್ದೇವೆ. ಶಾಲೆಗಳಿಗೆ ಶಿಕ್ಷಕಿಯರನ್ನ ನೇಮಿಸಿಕೊಂಡಿದ್ದೇವೆ. ನಿಮ್ಮ ಸಾಧನೆ ಏನು ಹೇಳಿ?

ಸಾದರ ಲಿಂಗಾಯತ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ನಿವೃತ್ತ ನೌಕರರಿಗೆ ಗೌರವ ಸಮರ್ಪಣೆ

ಪುರಸ್ಕಾರದಿಂದ ಮಕ್ಕಳ ಸಾಧನಗೆ ಪ್ರೇರಣೆ, ಸ್ಫೂರ್ತಿ

ಹರಪನಹಳ್ಳಿ: ಪ್ರತಿಭಾ ಪುರಸ್ಕಾರ ಮಕ್ಕಳಿಗೆ ಪ್ರೇರಣೆ, ಸ್ಫೂರ್ತಿಯಾಗುವ ಕಾರ್ಯಕ್ರಮ ಎಂದು ಸಿರಿಗೇರಿ ತರಳ ಬಾಳು ಮಠದ ವಿಶೇಷಾಧಿಕಾರಿ ವೀರಣ್ಣ ಎಸ್.ಜತ್ತಿ ಹೇಳಿದರು.

ಪಟ್ಟಣದ ತರಳಬಾಳು ಕಲ್ಯಾಣ ಮಂಟಪದಲ್ಲಿ ಸಾದರ ಲಿಂಗಾಯತ ನೌಕರರ ಬಳಗದ ವತಿಯಿಂದ ಸಾದರ ಲಿಂಗಾಯತ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸಮಾಜದ ನಿವೃತ್ತ ನೌಕರರಿಗೆ ಗೌರವ ಸಮರ್ಪಣೆ, ಹಳೆಯ ನೌಕರರ ಸಂಘದ ಪದಾಧಿಕಾರಿಗಳಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಭಾನುವಾರ ಮಾತನಾಡಿದರು.

ಯಾವಾಗಲು ವಿಫಲಗಳಾದಾಗ ಯಶಸ್ಸುಗಳಿಸಲು ಸಾಧ್ಯ.ಎಂದ ಅವರು ಮಕ್ಕಳ ಮೇಲೆ ಒತ್ತಡ ಹೇರಬೇಡಿ ಎಂದು ಪೋಷಕರಿಗೆ ಸಲಹೆ ನೀಡಿದರು.

ನಿವೃತ್ತ ನೌಕರರು ಸಮಯ ವ್ಯರ್ಥ ಮಾಡದೆ ಶಾಲೆಗಳಿಗೆ ತೆರಳಿ ತಮ್ಮ ಅನುಭವ ಹಾಗೂ ಜ್ಞಾನವನ್ನು ಮಕ್ಕಳಿಗೆ ಧಾರೆ ಎರೆಯಿರಿ ಆರೋಗ್ಯ ಚೆನ್ನಾಗಿ ಇರುತ್ತದೆ ಎಂದು ತಿಳಿಸಿದರು.

ಹಳೆಯ ನೌಕರರ ಸಂಘದ ಪದಾಧಿಕಾರಿಗಳಿಗೆ ಸನ್ಮಾನ ಕಾರ್ಯಕ್ರಮದಲ್ಲಿ ವೀರಣ್ಣ ಎಸ್.ಜತ್ತಿ ಪಾಲ್ಗೊಂಡು ಮಾತನಾಡಿದರು.

ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ ಮಾತನಾಡಿ, ಶಿಕ್ಷಣಕ್ಕೆ ಇದ್ದಷ್ಟು ಬೆಲೆ ಯಾವುದಕ್ಕೂ ಇಲ್ಲ, ಉನ್ನತ ಹುದ್ದೆ ಅಲಂಕರಿಸಿದರೆ ಸಮಾಜ ನಿಮ್ಮನ್ನು ಗುರುತಿಸುತ್ತದೆ, ಉತ್ತಮ ಶಿಕ್ಷಣ ಪಡೆಯಿರಿ ಎಂದು ನುಡಿದರು.

ಸಾಧು ವೀರಶೈವ ಸಮಾಜದ ಮುಖಂಡ ಮೈದೂರು ಎಚ್.ದೇವೇಂದ್ರಗೌಡ ಮಾತನಾಡಿ, ಸಾದರ ಲಿಂಗಾಯತ ನೌಕರರ ಬಳಗದಿಂದ ಸಾದರ ಲಿಂಗಾಯತ ಸಮಾಜದ ವಿದ್ಯಾರ್ಥಿಗಳ ಜತೆಗೆ ಮುಂದಿನ ದಿನಗಳಲ್ಲಿ ಅನ್ಯ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳುತ್ತೇವೆ ಎಂದು ಘೋಷಿಸಿದರು.

ಸಾಧು ವೀರಶೈವ ಸಮಾಜದ ತಾಲೂಕು ಅಧ್ಯಕ್ಷ ಬಂದೋಳ ಮಂಜುನಾಥ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಗುರುಗಳ ಋಣ ತೀರಿಸಲು ಸಾಧ್ಯವಿಲ್ಲ, ಗೌರವ ಕೊಡಿ. ತಂದೆ ತಾಯಿಗಳನ್ನು ಚೆನ್ನಾಗಿ ನೋಡಿಕೊಳ್ಳಿ ಎಂದು ಮಕ್ಕಳಿಗೆ ತಿಳಿಸಿದರು.

ಕಾಂಗ್ರೆಸ್ ಮುಖಂಡರಾದ ಕಂಬತ್ತಹಳ್ಳಿ ಮಂಜುನಾಥ, ಯಶವಂತಗೌಡ, ಕೆಂಚನಗೌಡ, ನಿವೃತ್ತ ಶಿಕ್ಷಕ ಕೆ.ಬಸವರಾಜಪ್ಪ, ಶೇಖರಗೌಡ ಪಾಟೀಲ್, ಶಿವಕುಮಾರಗೌಡ, ಸರಕಾರಿ ನೌಕರರ ಸಂಘದ ಅಧ್ಯಕ್ಷ ಎಸ್.ರಾಮಪ್ಪ ಮಾತನಾಡಿದರು. ಸಾದರ ಲಿಂಗಾಯತ ನೌಕರರ ಬಳಗದ ತಾಲೂಕು ಅಧ್ಯಕ್ಷ ಡಾ.ಚೇತನಬಣಕಾರ ಅಧ್ಯಕ್ಷತೆ ವಹಿಸಿದ್ದರು.

ಮುಖಂಡರಾದ ಉಚ್ಚಂಗಿ ದುರ್ಗದ ಅಂಜಿನಪ್ಪ, ಉದಯಶಂಕರ, ಕೆ.ಬಸವರಾಜ, ಶಿಕ್ಷಕರ ಸಂಘದ ಅಧ್ಯಕ್ಷ ಬಿ.ರಾಜಶೇಖರ, ಸರಕಾರಿ ನೌಕರರ ಸಂಘದ ಅಧ್ಯಕ್ಷ ಎಸ್.ರಾಮಪ್ಪ, ಶಿಕ್ಷಕರ ಪತ್ತಿನ ಸಂಘದ ಅಧ್ಯಕ್ಷ ಬಿ.ಚಂದ್ರಮೌಳಿ, ಹರಿಯಮ್ಮನಹಳ್ಳಿ ಅಂಜಿನಪ್ಪ, ಸಿದ್ದಲಿಂಗನಗೌಡ, ಜಿ.ಆರ್. ಉಷಾರಾಣಿ, ಕೆ.ಚಂದ್ರಪ್ಪ, ಸಿದ್ದಪ್ಪ ಹರಿಂದ್ರಾಳು, ಬಿಇಓ ಕಚೇರಿ ಅಧೀಕ್ಷಕ ಕರಿಬಸವನಗೌಡ,ತಿಪ್ಪನಾಯನಕನಹಳ್ಳಿ ಅಂಜಿನಪ್ಪ, ಎಚ್.ಕೆಂಚಪ್ಪ, ಆರ್. ಎಸ್.ಸವಿತಾ, ಪಿ.ಮಲ್ಲಿಕಾರ್ಜುನ, ವಿ.ಮಲ್ಲಿಕಾರ್ಜುನ, ಎಂ.ಮಂಜಪ್ಪ, ಎಸ್.ಸಂತೋಷ, ಸಿದ್ದಪ್ಪ ಮಾರೇರ್, ಕೆ.ಜಿ.ಶಿವಕುಮಾರ, ವಿಜಯ ಬಣಕಾರ, ಮುನಿಯಪ್ಪ, ಉಸ್ಮಾನ್, ಜಯಣ್ಣ ಇತರರು ಇದ್ದರು.

> ಪ್ರತಿ ವರ್ಷ ನಿವೃತ್ತ ನೌಕರರಿಗೆ ಸನ್ಮಾನಿಸುವ ವೆಚ್ಚವನ್ನು ನಾನು ಭರಿಸುತ್ತೇನೆ ಎಂದು ವಾಗ್ದಾನ ಮಾಡಿದ ಅವರು ಇಂತಹ ಕಾರ್ಯಕ್ರಮವನ್ನು ನಿಲ್ಲಿಸಬೇಡಿ ಮುಂದುವರೆಸಿಕೊಂಡು ಹೋಗಿ. ನಮ್ಮಲ್ಲಿರುವ ಮನಸ್ಸುಗಳಿಗೆ ತರಬೇತಿ ಕೊಡುವ ಕಾರ್ಯಕ್ರಮ ಇದಾಗಿದೆ ಎಂದು ಶ್ಲಾಘಿಸಿದರು.
> -ವೀರಣ್ಣ ಎಸ್.ಜತ್ತಿ, ಸಿರಿಗೇರಿ ತರಳ ಬಾಳು ಮಠದ ವಿಶೇಷಾಧಿಕಾರಿ

ಮನಸ್ಸಿನ ಶಕ್ತಿ ಗಟ್ಟಿಗೊಳಿಸುವ ಧ್ಯಾನ

ಹೂವಿನಹಡಗಲಿ: ಧ್ಯಾನವು ಮನುಷ್ಯನ ಒಳಗಿನ ಶಕ್ತಿಯನ್ನು ಗಟ್ಟಿಗೊಳಿಸುತ್ತದೆ ಮಾನಸಿಕ ಶಕ್ತಿಯನ್ನು ಹೆಚ್ಚಿಸಿ ಸಂಕಷ್ಟಗಳನ್ನು ಎದುರಿಸಲು ಸಿದ್ದಗೊಳಿಸುತ್ತದೆ ಎಂದು ಹಿರೇಮಲ್ಲನಕೆರಿ ಮಠದ ಅಭಿನವ ಚೆನ್ನಬಸವ ಸಾಮೀಜಿ ಹೇಳಿದರು.

ಪಟ್ಟಣದ ಶಿವಶಾಂತವೀರ ಸಮುದಾಯ ಭವನದಲ್ಲಿ ಮಲ್ಲಿಗೆ ನಾಡಿನ ಪಿರಮಿಡ್ ಧ್ಯಾನ ಟ್ರಸ್ಟ್‌ನವರು ಭಾನುವಾರ ಹಮ್ಮಿಕೊಂಡಿದ್ದ ಧ್ಯಾನ ಮತ್ತು ಸತ್ಸಂಗ, ಮಹಾಕರುಣ ಸಸ್ಯಹಾರಿ ಜನಜಾಗೃತಿ ಜಾಥಾ ಕಾರ್ಯಕ್ರಮದ ಸಾನಿಧ್ಯವಹಿಸಿ ಅವರು ಮಾತನಾಡಿದರು.

ಮನುಷ್ಯ ಅಂತರ್ಮುಖಿಯಾದಾಗ ತನ್ನೊಳಗಿನ ಶಕ್ತಿಯ ಅರಿವಾಗುತ್ತದೆ ಎಂದರು. ಪ್ರಾಚೀನ ಕಾಲದಿಂದಲೂ ಯೋಗ-ಧ್ಯಾನಕ್ಕೆ ದೊಡ್ಡಸ್ಥಾನವಿದೆ ಎಂದರು. ಮಾಂಸಹಾರ ಸೇವನೆ ಮನುಷ್ಯನ ಆಲೋಚನೆಗಳನ್ನು ಬದಲಿಸಿ ಮೃದುತ್ವವನ್ನು ಕಳೆಯುತ್ತದೆ ಎಂದು ನಮ್ಮ ಹಿರಿಯರು ಹೇಳಿದ್ದಾರೆ. ನಾವು ಮಾಂಸಹಾರವನ್ನು ತ್ಯಜಿಸಿ ಸಸ್ಯಹಾರದ ಮೂಲಕ ಸನ್ಮಾರ್ಗದಲ್ಲಿ ನಡೆಯಬೇಕು ಎಂದರು.

ಗವಿಮಠದ ಡಾ.ಹಿರಿಶಾಂತವೀರ ಸ್ವಾಮೀಜಿ ಮಾತನಾಡಿ ಬಾಹ್ಯ ಜಗತ್ತಿನಲ್ಲಿ ನಮ್ಮನ್ನು ಇದ್ದು ಇಲ್ಲದಂತೆ ಮಾಡುವುದು ಧ್ಯಾನ, ಚಂಚಲ ಮನಸ್ಸನ್ನು ಅಚಲ ಮಾಡುತ್ತದೆ ಎಂದರು.

ಶಿವಶಾಂತವೀರ ಸಮುದಾಯ ಭವನದಲ್ಲಿ ಭಾನುವಾರ ನಡೆದ ಮಹಾಕರುಣ ಸಸ್ಯಾಹಾರ ಜನಜಾಗೃತಿ ಕಾರ್ಯಕ್ರಮದಲ್ಲಿ ಹಿರೇಮಲ್ಲನಕೆರಿ ಮಠದ ಚನ್ನಬಸವ ಸಾಮೀಜಿ ಮಾತನಾಡಿದರು.

ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಗಮನ ನೀಡಲು ಧ್ಯಾನ ಅಭ್ಯಾಸ ಮಾಡುವುದು ಉತ್ತಮ ಎಂದರು. ಬ್ರಹ್ಮರ್ಷಿ ಪ್ರೇಮನಾಥ, ನಂದಿಪುರದ ಡಾ.ಮಹೇಶ್ವರ ಸ್ವಾಮೀಜಿ ಮಾತನಾಡಿದರು.

ಶಿಲ್ಪಿ ಜಿ.ಬಿ.ಹಂಸಾನಂದಾಚಾರ್ಯ ಅಧ್ಯಕ್ಷತೆವಹಿಸಿದ್ದರು. ಡಾ.ಸುಮಂಗಳ ಸಾಲಿಮಠ, ಡಾ.ಜೀವಂಧರ ಕೆತ್ತಪ್ಪನವರ, ಉಪನ್ಯಾಸಕ ಮೌನೇಶ್, ಮಲ್ಲಿಗೆ ನಾಡಿನ ಪಿರಮಿಡ್ ಟ್ರಸ್ಟ್ ಅಧ್ಯಕ್ಷ ಪರಮೇಶ್ವರಪ್ಪ ಉಪಸ್ಥಿತರಿದ್ದರು.

ವಿಶ್ವ ಮಾನವ ಹಕ್ಕು ಸಂಸ್ಥೆಯ ಪಾತ್ರದೊಡ್ಡದ್ದು

ರಾಯಚೂರು: ಸಮಾಜ ಅಂಕುಡೊಂಕು ತಿದ್ದುವಲ್ಲಿ ವಿಶ್ವ ಮಾನವ ಹಕ್ಕು ಸಂಸ್ಥೆಯ ಪಾತ್ರ ದೊಡ್ಡದು ಎಂದ ಓಂ ಸಾಯಿ ಧ್ಯಾನ ಮಂದಿರದ ಧರ್ಮಾಧಿಕಾರಿ ಸಾಯಿ ಕಿರಣ ಆದೋನಿ ಹೇಳಿದರು.

ನಗರದ ಮಾಣಿಕಪ್ರಭು ಅಂಧ ಮಕ್ಕಳ ಶಾಲೆಯಲ್ಲಿ ಆಯೋಜಿಸಿದ್ದ ವಿಶ್ವ ಮಾನವ ಹಕ್ಕು ಸಂಸ್ಥೆಯ 2ನೇ ವಾರ್ಷಿಕೋತ್ಸವ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿದರು. ದಿನದಿಂದ ದಿನಕ್ಕೆ ಜ್ವಾಲೆಯಂತೆ ಪಸರಿಸುತ್ತಿರುವ ಸಮಾಜ ವಿರೋಧಿ ಮತ್ತು ಕಾನೂನು ಬಾಹಿರ ಚಟುವಟಿಕೆಗಳನ್ನು ನಿಯಂತ್ರಿಸುವಲ್ಲಿ ವಿಶ್ವ ಮಾನವ ಹಕ್ಕು ಸಂಸ್ಥೆಯು ಬೀದಿಗಿಳಿದು ಹೋರಾಟ ಮಾಡಬೇಕಿದೆ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶಬರಿಮಲೆ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಅರ್ಚಕ ಸುರೇಶ ಗುರುಸ್ವಾಮಿ, ನಿರ್ಭಯ ಎನ್ನುವ ಮಹಿಳೆ ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ನಂತರ ಅದರ ವಿರುದ್ಧ ತಾವು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಸೈಕಲ್ ಯಾತ್ರೆ ಕೈಗೊಂಡಿದ್ದನ್ನು ಸ್ಮರಿಸಿಕೊಂಡರು. ವೇದಿಕೆ ಮೇಲೆ ಸಂಸ್ಥೆಯ ರಾಜ್ಯಾಧ್ಯಕ್ಷ ಚಲುವರಾಜು ಮತ್ತು ರಾಜ್ಯ ಪದಾಧಿಕಾರಿಗಳಾದ ಮಂಜುನಾಥ ಸಿ. ರಮೇಶ ಪರಕೋಟೆ ಕೃಷ್ಣ, ಹರ್ಷಾ.ಸಿ.ಗೌಡ, ಅಶೋಕ.ಆರ್ ಉಪಸ್ಥಿತರಿದ್ದರು. ಜಿಲ್ಲಾಧ್ಯಕ್ಷನರಸಪ್ಪ ದೇವಸೂಗೂರು ಜಿಲ್ಲಾ ಗೌರಾವಾಧ್ಯಕ್ಷ ಮರಿಲಿಂಗಪ್ಪ, ಜಿಲ್ಲಾ ಉಪಾಧ್ಯಕ್ಷ ಹುಲಿಗೆಪ್ಪ ದೇವಸೂಗೂರು ಮತ್ತು ಪ್ರತಾಪರೆಡ್ಡಿ, ಪಿಆರ್‌ಓ ದೇವಪ್ಪ, ಜಿಲ್ಲಾ ಪ್ರಧಾನ ಸಂಘಟನಕಾರರಾದ ಜಿ. ಚಂದ್ರಶೇಖರ್ ಜಂಟಿ ಸಂಘಟನಾಕಾರರಾದ ಶಂಕರಲಿಂಗಪ್ಪ ಬೇವಿನಬೆಂಚಿ ಮತ್ತು ರಮೇಶ ಗಾಣದಾಳ, ದೇವದುರ್ಗ ತಾಲೂಕ ಅಧ್ಯಕ್ಷ ರಂಗನಾಥ ಯಾದವ್, ರಾಯಚೂರು ತಾಲೂಕ ಅಧ್ಯಕ್ಷ ಶರಣಬಸವ, ಹಿರಿಯ ಸದಸ್ಯೆಯರಾದ ಅಕ್ಕಮ್ಮ ಮತ್ತು ಅಂಬಮ್ಮ ಉಪಸ್ಥಿತರಿದ್ದರು.

ಸಂಸ್ಥೆಗೆ ಹೊಸದಾಗಿ ಸದಸ್ಯತ್ವ ಪಡೆದವರಿಗೆ ಗುರುತಿನ ಚೀಟಿ ಹಂಚಲಾಯಿತು. ಮಾಣಿಕ್ ಪ್ರಭು ಶಾಲಾ ಮಕ್ಕಳಿಂದ ಪ್ರಾರ್ಥನೆ ಜರುಗಿತು. ಈ ಸಂದರ್ಭದಲ್ಲಿ ರಾಜ್ಯಾಧ್ಯಕ್ಷ ಚಲುವರಾಜು ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಮಾಣಿಕಪ್ರಭು ಅಂಧ ಮಕ್ಕಳ ಶಾಲೆಯಲ್ಲಿ ಆಯೋಜಿಸಿದ್ದ ವಿಶ್ವ ಮಾನವ ಹಕ್ಕು ಸಂಸ್ಥೆಯ 2ನೇ ವಾರ್ಷಿಕೋತ್ಸವ ಸಮಾರಂಭ ನಡೆಯಿತು.

ಪಿಎಸ್‌ಐ ಪ್ರಕರಣ ಸಿಬಿಐಗೆ ವಹಿಸಲು ಒತ್ತಾಯ

ಲಿಂಗಸೂಗೂರು: ಯಾದಗಿರಿ ಪಿ.ಎಸ್.ಐ. ಪರಶುರಾಮ ಅವರ ಸಾವಿನ ಕುರಿತು ತನಿಖೆಗೆ ಸಿ.ಬಿ.ಐ.ಗೆ ವಹಿಸಿ ನೊಂದಿರುವ ಕುಟುಂಬಕ್ಕೆ, 2.00ಕೋಟಿ ರು. ಪರಿಹಾರ ಮಂಜೂರಿ ಮಾಡಿ ಮತ್ತು ನೊಂದಿರುವ ಕುಟುಂಬದವರಿಗೆ ಸರಕಾರಿ ಉದ್ಯೋಗ ನೀಡಬೇಕು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮವಾದ) ತಾಲೂಕ ಸಮಿತಿ ಲಿಂಗಸಗೂರು ವತಿಯಿಂದ ಸಹಾಯಕ ಆಯುಕ್ತರು ಇವರ ಮುಖಾಂತರ ಮುಖ್ಯಮಂತ್ರಿಗಳಿಗೆ ಹಾಗೂ ಗೃಹ ಸಚಿವರಿಗೆ ಮನವಿ ಸಲ್ಲಿಸಿದರು.

ಹತ್ತು ಹಲವು ಕನಸುಗಳನ್ನು ಕಟ್ಟಿಕೊಂಡು ಬಾಳಬೇಕಾದ ಒಬ್ಬ ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿ ಸಾವು ಕಂಡಿರುವುದು ವಿಪರ್ಯಾಸದ ಸಂಗತಿಯಾಗಿದೆ. ಇದು ಒಬ್ಬ ಪಿಎಸ್‌ಐ ಸಂಗತಿಯಲ್ಲ. ಬಹುತೇಕವಾಗಿ ಇಂತಹ ಉದ್ಯೋಗ ಮಾಡುವ ದಕ್ಷ ಅಧಿಕಾರಿಗಳಿಗೆ ಕಿರುಕುಳ ತಪ್ಪಿದ್ದಲ್ಲ ಶಾಸಕ ಮತ್ತು ಅವರ ಮಗನ ಹಣದ ದಾಹದಿಂದ ಯುವ ಅಧಿಕಾರಿ ಸಾವನ್ನಪ್ಪಿರುವದು ಯುವ ಪೀಳಿಗೆ ತಲೆತಗ್ಗಿಸುವಂತಾಗಿದೆ.

ತಕ್ಷಣವೇ 2.00 ಕೋಟಿ ಮೊತ್ತವನ್ನು ಪರಿಹಾರವಾಗಿ ಮಂಜೂರು ಮಾಡಿ, ಮೃತರ ಪತ್ನಿಗೆ ಸರಕಾರಿ ಹುದ್ದೆ ನೀಡಬೇಕು, ಈ ಪ್ರಕರಣವನ್ನು ಕೂಡಲೇ ಸಿಬಿಐಗೆ ವಹಿಸಬೇಕು ಇಲ್ಲವಾದಲ್ಲಿ ರಾಜ್ಯಮಟ್ಟದ ಹೋರಾಟಕ್ಕೂ ನಾವುಗಳು ಸಿದ್ಧರಾಗಿದ್ದೇವೆ ಎಂದು ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಸಂಚಾಲಕ ಯಂಕಪ್ಪ ಚಿತ್ತಾಪೂರ, ತಾಲೂಕ ಸಂಚಾಲಕರಾದ ಯಮನಪ್ಪ ಛಲವಾದಿ,ಮೌನೇಶ ಗುಡದನಾಳ ಶಿವುಕುಮಾರ ಸಂತೆಕೆಲ್ಲೂರು ನಾಗರಾಜ ಹಾಲಭಾವಿ ದುರಗಪ್ಪ ಸಂತೆಕೆಲ್ಲೂರು ಇತರರು ಇದ್ದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮವಾದ) ತಾಲೂಕ ಸಮಿತಿ ಲಿಂಗಸಗೂರು ವತಿಯಿಂದ ಸಹಾಯಕ ಆಯುಕ್ತರು ಮುಖಾಂತರ ಮುಖ್ಯಮಂತ್ರಿಗಳಿಗೆ ಹಾಗೂ ಗೃಹ ಸಚಿವರಿಗೆ ಮನವಿ ಸಲ್ಲಿಸಿದರು.

ಗಡಿ ಗ್ರಾಮಗಳ ಅಭಿವೃದ್ಧಿಗೆ ಒತ್ತು : ಶಾಸಕ

ಕುಷ್ಟಗಿ: ತಾಲೂಕಿನಲ್ಲಿ ಅಭಿವೃದ್ಧಿಯಿಂದ ವಂಚಿತವಾಗಿರುವ ಗಡಿ ಗ್ರಾಮಗಳ ಅಭಿವೃದ್ಧಿಗೆ ಒತ್ತು ನೀಡಲಾಗುವುದು ಎಂದು ವಿಧಾನಸಭಾ ವಿಪಕ್ಷ ಮುಖ್ಯ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಎಚ್. ಪಾಟೀಲ್ ಹೇಳಿದರು.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2021-22 ಮತ್ತು 22-23ನೇ ಸಾಲಿನ ಅನುದಾನದ ಅಡಿ ನಿರ್ಮಿಸಿದ ತಾಲೂಕಿನ ಅಂಟರಠಾಣ ಭಾರತ ನಿರ್ಮಾಣ ಸೇವಾ ಕೇಂದ್ರ, ಗ್ರಾಮ ಪಂಚಾಯತ ನೂತನ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದ ಅವರು,

ತಾಲೂಕಿನ ಪುರ್ತಗೇರಿ, ಹುಲಗೇರಾ ತಾಂಡಾದಲ್ಲಿ ಒಟ್ಟುಈಅನುದಾನದಲ್ಲಿ ಸಿ.ಸಿ. ರಸ್ತೆ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಗಿದೆ. ಹುಚನೂರು, ಕಡೂರು, ಕಲ್ಲಗೋನಾಳ ಗ್ರಾಮಗಳಿಗೆ ಭೇಟಿ ನೀಡುತ್ತೇನೆ ಎಂದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮಾಸಮ್ಮ ಮುತ್ತಣ್ಣ ವಾಲೀಕಾರ, ಹನುಮಗೌಡ ಪೊಲೀಸ್ ಪಾಟಿಲ, ರತ್ನಮ್ಮ ಹುಳ್ಳಣ್ಣನವರ, ಗುರಪ್ಪ ವಜ್ಜಲ ಮತ್ತು ಗ್ರಾಮ ಪಂಚಾಯಿತಿ ಸರ್ವ ಸದಸ್ಯರು ಸೇರಿದಂತೆ ಮುಖಂಡರಾದ ಬಸವರಾಜ ಹಳ್ಳೂರು, ಮಲ್ಲಣ್ಣ ಪಲ್ಲೇದ, ಭೂದಾನಿ ಶಿವಶಂಕರಗೌಡ ಪೊಲೀಸ್ ಪಾಟೀಲ್ ಹಾಗೂ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ತಾಲೂಕಿನ ಅಂಟರಠಾಣ ಗ್ರಾಮ ಪಂಚಾಯತ್ ನೂತನ ಕಟ್ಟಡ ಉದ್ಘಾಟನಾ ಸಮಾರಂಭಕ್ಕೆ ವಿಧಾನಸಭಾ ವಿಪಕ್ಷ ಮುಖ್ಯ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಎಚ್. ಪಾಟೀಲ್ ಚಾಲನೆ ನೀಡಿದರು.

> ಅಂಟರಠಾಣ ಗ್ರಾಮದ ಹದಗೆಟ್ಟಿರುವ ರಸ್ತೆ ಅಭಿವೃದ್ಧಿಪಡಿಸುವೆ. ಯರಿಗೋನಾಳ ಗ್ರಾಮದ ಶಾಲಾ ಕಟ್ಟಡಕ್ಕೆ ಅನುದಾನ ಕಲ್ಪಿಸುತ್ತೇನೆ. ಅಭಿವೃದ್ಧಿಯಿಂದ ವಂಚಿತವಾಗಿರುವ ಗಡಿ ಗ್ರಾಮಗಳನ್ನು ಕೆ.ಕೆ.ಆರ್.ಡಿ.ಬಿ. ಅನುದಾನದಡಿ ಸಮಗ್ರ ಅಭಿವೃದ್ಧಿಗೆ ಒತ್ತು ನೀಡಲಾಗುವುದು ಎಂದು ಭರವಸೆ ನೀಡಿದರು.
> -ದೊಡ್ಡನಗೌಡ ಎಚ್. ಪಾಟೀಲ್,ಶಾಸಕ

ಹೊಸಪೇಟೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಡಿಸಿ ಎಂ.ಎಸ್. ದಿವಾಕರ್ ಅಧ್ಯಕ್ಷತೆಯಲ್ಲಿ ಗೈರು ವಿಲೇ ಸಮಿತಿ ಸಭೆ ನಡೆಯಿತು.

ಹೊಸಪೇಟೆ ಜಿಲ್ಲಾಧಿಕಾರಿ .ಎಂ.ಎಸ್.ದಿವಾಕರ್ ಪೌರಕಾರ್ಮಿಕ ಹುದ್ದೆಗೆ ಅನುಕಂಪ ಆಧಾರದ ಮೇರೆಗೆ ನೇಮಕಾತಿ ಆದೇಶ ನೀಡಿದರು.

ಜ್ಞಾನ ಇತರರಿಗೆ ಹಂಚಿದಾಗ ಮಾತ್ರ ಕಲಿತದ್ದು ಸಾರ್ಥಕ

ಬಳ್ಳಾರಿ: ನಿಮ್ಮಲ್ಲಿರುವ ಜ್ಞಾನವನ್ನು ಇತರರಿಗೆ ಹಂಚಿದಾಗ ಮಾತ್ರ ಕಲಿತದ್ದು ಸಾರ್ಥಕವಾಗುತ್ತಿದೆ ಎಂದು ಡಾ.ಸುರೇಶ್ ತಿಳಿಸಿದರು.

ನಗರದ ರಾವ್ ಬಹದ್ದೂರ್ ವೈ ಮಹಾಬಲೇಶ್ವರಪ್ಪ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ ವಿಭಾಗ ವತಿಯಿಂದ ''ಏಐ ಫ್ಯೂಷನ್: ಎಕ್ಸ್ ಪ್ಲೋರಿಂಗ್ ಜನರೇಟಿವ್ ಏಐ'' ಕುರಿತು ತರಬೇತಿ ಮತ್ತು ಕಲಿಕೆ ಅಕಾಡೆಮಿಯ ಅಡಿಯಲ್ಲಿ 6 ದಿನದ ಫ್ಯಾಕಲ್ಟಿ ಡೆವೆಲಪ್‌ಮೆಂಟ್ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಯುವ ಉದಯೋನ್ಮುಖ ಎಂಜಿನಿಯರ್‌ಗಳಿಗೆ ತಮ್ಮ ಸಂಶೋಧನಾ ಆಲೋಚನೆಗಳು, ಫಲಿತಾಂಶಗಳು ಮತ್ತು ಸಂಭಾವ್ಯ ಅಪ್ಲಿಕೇಶನ್‌ಗಳನ್ನು ಪ್ರಸ್ತುತಪಡಿಸಲು ಮತ್ತು ಚರ್ಚಿಸಲು ಇಂತಹ ವೇದಿಕೆ ಅವಶ್ಯವಾಗಿದೆ ಎಂದರು.

ಜ್ಞಾನ ಮತ್ತು ಮಾಹಿತಿಯ ಯುಗ, ನೀವು ಅಭಿವೃದ್ಧಿಯ ಮಾಹಿತಿಯನ್ನು ಪಡೆದುಕೊಳ್ಳದಿದ್ದರೆ, ನೀವು ಅವಕಾಶಗಳ ಓಟದಿಂದ ಹೊರಗುಳಿಯುತ್ತೀರಿ, ಈ ರೀತಿಯ ಶಿಕ್ಷಕರ ಅಭಿವೃದ್ಧಿ ಕಾರ್ಯಕ್ರಮಗಳು, ವೃತ್ತಿಪರ ಅಭಿವೃದ್ಧಿ ಕಾರ್ಯಕ್ರಮಗಳು, ಯೂ ಟ್ಯೂಬ್ ಇಂಟರ್ನೆಟ್, ಇತ್ಯಾದಿ ಸಾಕಷ್ಟು ಸಂಪನ್ಮೂಲಗಳಿವೆ ಅವುಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಿ ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ.ಟಿ.ಹನುಮಂತ ರೆಡ್ಡಿ, ಸಂಯೋಜಕರು ಡಾ.ಸಾಯಿ ಮಾಧವಿ, ಡಾ.ಬಸವರಾಜ ಕುಸಮ್ಮನವರ್, ಪ್ರಾಧ್ಯಾಪಕರಾದ ಗಂಗಾಧರ್.ಜಿ.ಹೆಚ್, ಸುಮನ.ಸಿ.ಎಮ್, ಅಮರೀಶ, ಕಾಲೇಜಿನ ಸಿಬ್ಬಂದಿ ಮಂಜುಳಾ ಪಾಟೀಲ್, ಸೌಮ್ಯ.ಏ, ಡಾ. ಪ್ರಭಾವತಿ, ಡಾ.ಚಿನ್ನಾವಿಗೌಡರ್, ಡಾ. ರಾಘವೇಂದ್ರಪ್ರಸಾದ್, ಶೀಲಾ, ಉಮಾದೇವಿ ಇತರರಿದ್ದರು.

''ಏಐ ಫ್ಯೂಷನ್: ಎಕ್ಸ್ ಪ್ಲೋರಿಂಗ್ ಜನರೇಟಿವ್ ಏಐ'' ಕುರಿತು ತರಬೇತಿ ಮತ್ತು ಕಲಿಕೆ ಅಕಾಡೆಮಿಯ ಅಡಿಯಲ್ಲಿ 6 ದಿನದ ಫ್ಯಾಕಲ್ಟಿ ಡೆವೆಲಪ್‌ಮೆಂಟ್ ಕಾರ್ಯಕ್ರಮದ ಸಮಾರೋಪ ಸಮಾರಂಭ.

ತುಂಗಭದ್ರಾ ಅಣೆಕಟ್ಟೆ ಕ್ರಸ್ಟ್‌ಗೇಟ್ ಕುಸಿತ

ಹೊಸಪೇಟೆ: ತುಂಗಭದ್ರಾ ಅಣೆಕಟ್ಟೆಯ 19ನೇ ಸಂಖ್ಯೆಯ ಕ್ರಸ್ಟ್‌ಗೇಟ್‌ನ ಚೈನ್‌ಲಿಂಕ್ ಬೆಸುಗೆ (ವೆಲ್ಡಿಂಗ್) ಬಿಟ್ಟಿದ್ದೇ ಗೇಟ್ ಸಂಪೂರ್ಣ ಕುಸಿಯಲು ಕಾರಣ, ಅಣೆಕಟ್ಟೆಯ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಇಂತಹ ದುರಂತ ಸಂಭವಿಸಿದೆ' ಎಂದು ತುಂಗಭದ್ರಾ ಮಂಡಳಿಯ ಕಾರ್ಯದರ್ಶಿ ಒ.ಆರ್.ಕೆ.ರೆಡ್ಡಿ ಹೇಳಿದರು. ಟಿ.ಬಿ.ಡ್ಯಾಂ ಅತಿಥಿಗೃಹ ವೈಕುಂಠದಲ್ಲಿ ಭಾನುವಾರ ಬೆಳಿಗ್ಗೆ ಹಿರಿಯ ಅಧಿಕಾರಿಗಳು, ಎಂಜಿನಿಯರ್‌ಗಳ ಜತೆಗೆ ಸಮಾಲೋಚನೆ ನಡೆಸಿ ಮಾತನಾಡಿದ ಅವರು, ಬದಲಿ ಗೇಟ್ ಅಳವಡಿಸಲು ತಕ್ಷಣದಿಂದಲೇ ಸಿದ್ಧತೆ ನಡೆದಿದೆ. ಮಳೆ ಕಡಿಮೆಯಾಗಿರುವ ಕಾರಣ ಮೂರ್ನಾಲ್ಕು ದಿನಗಳಲ್ಲಿ ನೀರು ಖಾಲಿಯಾಗುವ ನಿರೀಕ್ಷೆ ಇಟ್ಟುಕೊಳ್ಳಲಾಗಿದೆ ಎಂದರು. 'ಪ್ರತಿ ವರ್ಷವೂ ಗೇಟ್ ಸುರಕ್ಷತೆಯ ಬಗ್ಗೆ ಪರಿಶೀಲನೆ ನಡೆಸುತ್ತಲೇ ಇರುತ್ತೇವೆ. ಆದರೆ 19ನೇ ಗೇಟ್‌ನಲ್ಲಿ ವೆಲ್ಡಿಂಗ್ ಬಿಟ್ಟ ಕಾರಣ ಚೈನ್ ಲಿಂಕ್ ತುಂಡಾಯಿತು. 70 ವರ್ಷಗಳ ಹಿಂದೆ ಅಳವಡಿಸಿದ ಚೈನ್ ಲಿಂಕ್ ಇದು. ಈ ವೆಲ್ಡಿಂಗ್ ಬಿಡಲು ಕಾರಣ ಏನು ಎಂಬುದರ ಬಗ್ಗೆ ಕೂಲಂಕುಷ ತನಿಖೆ ನಡೆಯುತ್ತಿದೆ' ಎಂದು ತಿಳಿಸಿದರು. 60 ಅಡಿ ಎತ್ತರ ಮತ್ತು 20 ಅಡಿ ಅಗಲದ ಗೇಟ್ ಇದಾಗಿರುತ್ತದೆ. ತಲಾ 12 ಅಡಿ ಅಗಲದ 5 ಬೃಹತ್ ಕಬ್ಬಿಣದ ಹಲಗೆ ಜೋಡಿಸಿ ಈ ಗೇಟ್ ಸಿದ್ಧಪಡಿಸಲಾಗುತ್ತದೆ. ಸ್ಥಳೀಯವಾಗಿಯೇ ಅದನ್ನು ನಿರ್ಮಿಸುಲಾಗುತ್ತಿದೆ. ನೀರು 20 ಅಡಿಯಷ್ಟು ಇಳಿಕೆಯಾದ ತಕ್ಷಣ ಗೇಟ್ ಅಳವಡಿಸಲಾಗುವುದು' ಎಂದು ರೆಡ್ಡಿ ಮಾಹಿತಿ ನೀಡಿದರು.

ಚನ್ನಬಸವ ಶಾಸ್ತ್ರಿಗಳ ಕೃತಿ ಲೋಕಾರ್ಪಣೆ

ರಾಯಚೂರು: ಹಿರೇಮಠದ ಚನ್ನಬಸವ ಶಾಸ್ತ್ರಿಗಳ ಐವತ್ತು ವರ್ಷಗಳ ಹಿಂದೆ ಜಿಲ್ಲೆ ಯಲ್ಲಿ ಕನ್ನಡದ ಕಂಪು ಪಸರಿಸಿದ ಅಪ್ಪಟ ಕನ್ನಡ ಮುತ್ಸದ್ದಿ ಸಾಹಿತಿಗಳಾಗಿದ್ದರು ಎಂದು ಬೃಹನ್ ಮಠದ ಶ್ರೀಶಾಂತಮಲ್ಲ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು. ನಗರದ ಕನ್ನಡ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮತ್ತು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಚಾಗಿ ಹಿರೇಮಠ ಚನ್ನಬಸವ ಶಾಸ್ತ್ರಿಗಳ ಕೃತಿ ಲೋಕಾರ್ಪಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಅಮರವಾಣಿ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಪಾಕ್ಷಿಕ ಪತ್ರಿಕೆಯ ಮೂಲಕ ಹಾಗೂ ಕನ್ನಡ ಸಾಹಿತ್ಯ ಕೃಷಿಯ ಮೂಲಕ ಚಾಗಿ ಹಿರೇಮಠ ಚನ್ನಬಸವ ಶಾಸ್ತ್ರಿಗಳು ಜಿಲ್ಲೆಯಲ್ಲಿ ಕನ್ನಡದ ಜಾಗೃತಿ ಮೂಡಿಸಿದರು. ಕನ್ನಡದ ಜಾಗೃತಿಯೊಂದಿಗೆ ಸಾಮಾಜಿಕ ಸೇವಾ ಕಾರ್ಯದಲ್ಲೂ ತೊಡಗಿಸಿಕೊಂಡ ಅವರು ನಮ್ಮೆಲ್ಲರಿಗೆ ಮಾದರಿಯಾಗಿದ್ದಾರೆ. ಚಾಗಿ ಹಿರೇಮಠ ಚನ್ನಬಸವ ಶಾಸ್ತ್ರಿಗಳ ಕೃತಿ ಲೋಕಾರ್ಪಣೆ ಮಾಡಿದ ಸಾಹಿತಿ ಅಯ್ಯಪ್ಪಯ್ಯ ಹುಡಾ ಅವರು ಮಾತನಾಡಿ, ಚಾಗಿ ಚನ್ನಬಸವ ಶಾಸ್ತ್ರಿಗಳು ಈ ಭಾಗದಲ್ಲಿ ಕನ್ನಡಕ್ಕಾಗಿ ಬಹುದೊಡ್ಡ ಕೊಡುಗೆ ನೀಡಿದ್ದಾರೆ. ಈ ಕಾರ್ಯಕ್ರಮದಲ್ಲಿ ಕೃತಿಕಾರರಾದ ಸಾಹಿತಿ ಲಕ್ಷ್ಮೀ ದೇವಿ ಶಾಸ್ತ್ರಿ ಅವರು ಮಾತನಾಡಿದರು. ವೇದಿಕೆಯಲ್ಲಿ ಜೆ. ಸುರೇಶ, ವಿಶ್ವನಾಥ ಶಾಸ್ತ್ರಿ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ವೆಂಕಟೇಶ್, ರಾವುತರಾವ್ ಬರೂರ, ರೇಖಾ ಬಡಿಗೇರ ಉಪಸ್ಥಿತರಿದ್ದರು.

ಮದಲಗಟ್ಟಿ ಆಂಜನೇಯಗೆ ಶ್ರಾವಣ ಮಾಸದ ಪೂಜೆ

ಹೂವಿನಹಡಗಲಿ: ತಾಲೂಕಿನ ಪ್ರಸಿದ್ಧ ಸುಕ್ಷೇತ್ರ ಮದಲಗಟ್ಟಿ ಆಂಜನೇಯ ಸ್ವಾಮಿಗೆ ಶ್ರಾವಣ ಶನಿವಾರ ಪ್ರಯುಕ್ತ ಭಕ್ತರು ವಿಶೇಷ ಪೂಜೆ ನೆರವೇರಿಸಿದರು. ಬೆಳಿಗ್ಗೆಯಿಂದಲೇ ಭಕ್ತರ ದಂಡು ಸುಕ್ಷೇತ್ರಕ್ಕೆ ಹರಿದು ಬಂತು. ಆಂಜನೇಯ ಸ್ವಾಮಿಗೆ ಅಭಿಷೇಕ, ಕುಂಕುಮ ಪೂಜೆ, ಎಲೆಪೂಜೆಯೊಂದಿಗೆ ವಿಶೇಷ ಅರ್ಚನೆಗಳನ್ನು ನೆರವೇರಿಸಲಾಯಿತು. ಹೂವಿನಹಡಗಲಿ, ಮುಂಡರಗಿ ತಾಲೂಕಿನ ಅಪಾರ ಭಕ್ತರು ಸುಕ್ಷೇತ್ರಕ್ಕೆ ಆಗಮಿಸಿ ಸ್ವಾಮಿಯ ದರ್ಶನ ಪಡೆದರು. ಬೆಳಿಗ್ಗೆಯಿಂದಲೇ ಭಕ್ತರು ಸರದಿ ಸಾಲಿನಲ್ಲಿ ತೆರಳಿ ಸ್ವಾಮಿಗೆ ಹಣ್ಣು, ಕಾಯಿ ಅರ್ಪಿಸಿದರು. ಹೂವಿನಹಡಗಲಿಯ ಪಾದಯಾತ್ರೆ ಸಮಿತಿಯವರು ಪಟ್ಟಣದ ಸಿದ್ದಿವಿನಾಯಕ ದೇವಸ್ಥಾನದಿಂದ ಮದಲಗಟ್ಟಿ ಸುಕ್ಷೇತ್ರವರೆಗೆ ಪಾದಯಾತ್ರೆಯಲ್ಲಿ ತೆರಳಿ ಸ್ವಾಮಿಗೆ ಪೂಜೆ ಸಲ್ಲಿಸಿದರು. ದೇವಸ್ಥಾನ ಸಿಬ್ಬಂದಿ ಹಾಲೇಶ್ ಇತರರು ಇದ್ದರು.

ಸರಕಾರದ ಯೋಜನೆ ರೈತರಿಗೆ ತಲುಪಲಿ

ಬಳ್ಳಾರಿ: ರೈತರ ಜೀವನ ಸುಗಮಗೊಳ್ಳಲು ಸರಕಾರದ ವಿವಿಧ ಕೃಷಿ ಯೋಜನೆಗಳನ್ನು ಅಳವಡಿಸಿಕೊಂಡು ಕೃಷಿ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದಬೇಕು ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಡಾ.ಸೋಮಸುಂದರ್ ಕೆ.ಎಂ ತಿಳಿಸಿದರು. ಕೃಷಿ ಇಲಾಖೆ ವತಿಯಿಂದ ರಾಷ್ಟ್ರೀಯ ಆಹಾರ ಭದ್ರತೆ ಯೋಜನೆಯಡಿ ಬಳ್ಳಾರಿ ತಾಲೂಕಿನ ಹಲಕುಂದಿ, ಸಂಜೀವರಾಯನಕೋಟೆ, ಕುರುಗೋಡು ತಾಲೂಕಿನ ಸಿಂಧಿಗೇರಿ ಗ್ರಾಮಗಳಲ್ಲಿ ಎಫ್‌ಎನ್‌ಎಸ್ ಯೋಜನೆಯ ತೊಗರಿ ಸಜ್ಜೆ ಕ್ಷೇತ್ರಗಳ ಸಮಗ್ರ ಬೆಳೆ ನಿರ್ವಹಣೆ ಗುಚ್ಛ ಪ್ರಾತ್ಯಕ್ಷಿಕೆ ತೋರ್ಪಡಿಸಿ ಮಾತನಾಡಿದರು. ರೈತರು ಸರಕಾರದಿಂದ ಸಿಗುವ ಸೌಲಭ್ಯಗಳಿಗೆ ವಂಚಿತರಾಗದೇ, ಪ್ರತಿಯೊಬ್ಬ ಅರ್ಹ ರೈತರು ಯೋಜನೆಗಳ ಸಂಪೂರ್ಣ ಮಾಹಿತಿ ಪಡೆದುಕೊಂಡು, ರೈತರಿಗೆ ಸಲಹೆ ನೀಡಿದರು. ರಾಷ್ಟ್ರೀಯ ಆಹಾರ ಭದ್ರತೆಯ ಸಂಯೋಜಕರಾದ ಡಾ.ಪಿ.ಕೆ ಸಾಹಾ ಮಾತನಾಡಿ, ತೊಗರಿಯ ಹೆಚ್ಚಿನ ಇಳುವರಿ ಪಡೆಯಲು ಆಧುನಿಕ ತಂತ್ರಜ್ಞಾನ ಮತ್ತು ಮಿಶ್ರ ಬೆಳೆ ಪದ್ಧತಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಕೃಷಿ ಇಲಾಖೆಯ ಉಪ ಕೃಷಿ ನಿರ್ದೇಶಕ ಎನ್.ಕೆಂಗೇಗೌಡ, ಸಹಾಯಕ ಕೃಷಿ ನಿರ್ದೇಶಕ ದಯಾನಂದ್.ಎಂ., ಬಳ್ಳಾರಿಯ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಬಸವರಾಜ್ ಸಿಂಧಿಗೇರಿ, ಕೋಳೂರಿನ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಯೇಸು ಬಾಬು.ಕೆ., ಸೇರಿದಂತೆ ಸಿಬ್ಬಂದಿ ವಾಣಿ, ರೇಣುಕಾರಾಧ್ಯ ಉಪಸ್ಥಿತರಿದ್ದರು.

ನಮ್ಮ ಎಲ್ಲ ಕ್ರೀಡಾಪಟುಗಳು ಉನ್ನತ ಮಟ್ಟದಲ್ಲಿ ಪ್ರದರ್ಶನ ನೀಡಿದ್ದಾರೆ. ನಮ್ಮ ಪಟ್ಟಿಯಲ್ಲಿ ನಾವು 6 ಪದಕ ಗೆದ್ದಿರಬಹುದು. ಆದರೆ ನಮ್ಮ ಕ್ರೀಡಾಪಟುಗಳು ಎಲ್ಲ ವಿಭಾಗಗಳಲ್ಲಿ ತುಂಬಾ ಸ್ಪರ್ಧೆಯೊಡಿದ್ದರು.
-ಅಭಿನವ್ ಬಿಂದ್ರಾ, ಮಾಜಿ ಶೂಟರ್

ಪದಕ ಪಟ್ಟಿ

	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಭಾರತ	0	1	5	6
ಅಮೆರಿಕ	40	44	42	126
ಚೀನಾ	40	27	24	91
ಜಪಾನ್	20	12	13	45
ಆಸ್ಟ್ರೇಲಿಯಾ	18	19	16	53
ಫ್ರಾನ್ಸ್	16	26	22	64
ನೆದರ್ಲೆಂಡ್ಸ್	15	7	12	34
ಗ್ರೇಟ್ ಬ್ರಿಟನ್	14	22	29	65
ದಕ್ಷಿಣ ಕೊರಿಯಾ	13	9	10	32
ಇಟಲಿ	12	13	15	40

ಮೈಕ್ರೋ ಮಾಹಿತಿ

ಭಾರತ ಗೆದ್ದ ಪದಕಗಳ ನೋಟ

6 ಪದಕದೊಂದಿಗೆ ಈ ಬಾರಿ ಭಾರತ ಅಭಿಯಾನ ಮುಗಿಸಿದೆ.

1928 ಭಾರತ ಮೊದಲ ಚಿನ್ನ ಗೆದ್ದಿತ್ತು.

2 ಭಾರತ ಭಾಗವಹಿಸಿದ್ದ ಮೊದಲ ಒಲಿಂಪಿಕ್ಸ್‌ನಲ್ಲಿ ಭಾರತ 2 ಪದಕ ಗೆದ್ದಿತ್ತು.

2012 ಲಂಡನ್ ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ 6 ಪದಕ



7 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತ ಒಂದೇ ಒಲಿಂಪಿಕ್ಸ್‌ನಲ್ಲಿ ಅತಿ ಹೆಚ್ಚು ಪದಕ ಗೆದ್ದಿತ್ತು.

41 ಭಾರತ ಈ ಬಾರಿ 6 ಪದಕ ಗೆದ್ದಿದ್ದು, ಒಟ್ಟು ಪದಕಗಳ ಸಂಖ್ಯೆ 41ಕ್ಕೆ ಏರಿದೆ.

71ನೇ ಸ್ಥಾನಕ್ಕೆ ಕುಸಿದ ಭಾರತ

ವಿಶ್ವದ ಅತೀ ದೊಡ್ಡ ಕ್ರೀಡಾಕೂಟ ಒಲಿಂಪಿಕ್ಸ್‌ಗೆ ತೆರೆ ಬಿದ್ದಿದೆ. ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿ ಸುಮಾರು 17 ದಿನ ನಡೆದ ಈ ಕ್ರೀಡಾ ಉತ್ಸವ ಮುಕ್ತಾಯಗೊಂಡಿದೆ. 10,500 ಆಟಗಾರರು ಭಾಗವಹಿಸಿ ಅಭಿಯಾನ ಮುಗಿಸಿದ್ದಾರೆ. ಕಳೆದ ಒಲಿಂಪಿಕ್ಸ್‌ನಲ್ಲಿ 47ನೇ ಸ್ಥಾನದಲ್ಲಿ ಇದ್ದ ಭಾರತ ಈ ಬಾರಿ 71ನೇ ಸ್ಥಾನಕ್ಕೆ ಕುಸಿದಿದೆ.

ಅಭಿಯಾನ ಮುಗಿಸಿದ ಭಾರತ

ಬಹು ನಿರೀಕ್ಷಿತ ಒಲಿಂಪಿಕ್ಸ್‌ನಲ್ಲಿ ಭಾರತ ಭಾನುವಾರವೇ ಅಂತ್ಯಗೊಂಡಿದೆ. 33ನೇ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾರತದ 117 ಕ್ರೀಡಾಪಟುಗಳು ಭಾಗವಹಿಸಿದ್ದರು. ಇವರಲ್ಲಿ ಪದಕಗಳನ್ನು ಗೆದ್ದಿರುವುದು ಕೇವಲ 3 ಜನ ಹಾಗೂ 2 ತಂಡಗಳು. ಅದರಲ್ಲೂ ಕಳೆದ ಬಾರಿ 7 ಪದಕ ಗೆದ್ದಿದ್ದ ಭಾರತೀಯರು ಈ ಬಾರಿ 6 ಪದಕಗಳೊಂದಿಗೆ ಪ್ಯಾರಿಸ್ ಒಲಿಂಪಿಕ್ಸ್ ಅಭಿಯಾನವನ್ನು ಅಂತ್ಯಗೊಳಿಸಿದ್ದಾರೆ.

ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಒಂದು ಚಿನ್ನ, 2 ಬೆಳ್ಳಿ ಮತ್ತು 4 ಕಂಚಿನ ಪದಕಗಳೊಂದಿಗೆ ಒಟ್ಟು 7 ಮೆಡಲ್ ಗೆದ್ದಿದ್ದ ಭಾರತ ಕಳೆದ ಬಾರಿಗೆ ಹೋಲಿಸಿದರೆ, ಈ ಬಾರಿ ನೀರಸ ಪ್ರದರ್ಶನ ನೀಡಿದೆ.

2 ತಂಡ, 3 ಆಟಗಾರರು

ಮೂರು ಆಟಗಾರರು ಹಾಗೂ ಒಂದು ತಂಡ ಈ ಬಾರಿ ಒಲಿಂಪಿಕ್ಸ್‌ನಲ್ಲಿ 6 ಪದಕ ಗೆದ್ದಿದೆ. ಕಳೆದ ಬಾರಿಯ ಒಲಿಂಪಿಕ್ಸ್‌ನಲ್ಲಿ 6 ಆಟಗಾರರು ಹಾಗೂ ಒಂದು ತಂಡ ಒಲಿಂಪಿಕ್ಸ್ ಪದಕ ಗೆದ್ದಿತ್ತು. ಆದರೆ ಈ ಬಾರಿ 6 ಪದಕ ಗೆದ್ದರೂ ಅದರಲ್ಲಿ ಕೇವಲ ಮೂರು ಆಟಗಾರರು ಹಾಗೂ ಎರಡು ತಂಡ ಸೇರಿವೆ. ಮೂರು ವೈಯಕ್ತಿಕ ಆಟಗಾರರ ಪೈಕಿ ಮನು ಭಾಕರ್, ನೀರಜ್ ಚೋಪ್ರಾ, ಹಾಗೂ ಅಮನ್ ಸೆಹ್ರಾವತ್ ಸೇರಿದ್ದಾರೆ. ಎರಡು ತಂಡ ಅಂದರೆ ಹಾಕಿ ಹಾಗೂ ಮಿಶ್ರ ಶೂಟಿಂಗ್ ತಂಡ.

ಮನು ಭಾಕರ್

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಮೊದಲ ಪದಕ ಗೆದ್ದುಕೊಟ್ಟಿದ್ದು ಶೂಟರ್ ಮನು ಭಾಕರ್. ಮಹಿಳಾ 10 ಮೀಟರ್ ಏರ್ ಪಿಸ್ತೂಲ್ ಶೂಟಿಂಗ್‌ನಲ್ಲಿ ಕಂಚಿನ ಪದಕಕ್ಕೆ ಕೊರೊಳೊಡ್ಡುವ ಮೂಲಕ ಮನು ಭಾರತದ ಪದಕದ ಖಾತೆ ತೆರೆದಿದ್ದರು. ಮೊದಲು ನಡೆದಿದ್ದ ಅರ್ಹತಾ ಸುತ್ತಿನಲ್ಲಿ ಅವರು ಭರ್ಜರಿ ಪ್ರದರ್ಶನ ತೋರುವ ಮೂಲಕ 8 ಜನರ ಜತೆಗೆ ಫೈನಲ್‌ಗೇರಿದ್ದರು. ಫೈನಲ್‌ನಲ್ಲೂ ತನ್ನ ದಿಟ್ಟ ಹೋರಾಟ ಮುಂದುವರಿಸಿದ್ದ ಅವರು, ಪ್ರಶಸ್ತಿ ಸುತ್ತಿನ ಮೊದಲ ಹಂತದಲ್ಲಿ ಬೆಳ್ಳಿ ಅಥವಾ ಚಿನ್ನ ಗೆಲ್ಲುವ ನಿರೀಕ್ಷೆಯಲ್ಲಿದ್ದರು. ಆದರೆ ಕೊನೆಯಲ್ಲಿ ಕಂಚಿಗೆ ತೃಪ್ತಿಪಟ್ಟರು.

ಭಾಕರ್, ಸರಬ್ಜೋತ್ ಸಿಂಗ್

ಭಾರತದ ಖಾತೆ ತೆರೆದಿದ್ದ ಮನು ಶೂಟಿಂಗ್ ವಿಭಾಗದಲ್ಲಿ ಮತ್ತೊಂದು ಪದಕ ಗೆದ್ದುಕೊಟ್ಟರು. ಮೊದಲಿಗೆ ಮಹಿಳಾ ವಿಭಾಗದ 10 ಮೀ. ಏರ್ ಪಿಸ್ತೂಲ್‌ನಲ್ಲಿ ಗೆದ್ದಿದ್ದ ಅವರು, ತನ್ನ ಸಹ ಆಟಗಾರ ಸರಬ್ಜೋತ್ ಸಿಂಗ್ ಅವರೊಂದಿಗೆ ಸೇರಿ 10 ಮೀಟರ್ ಏರ್ ಪಿಸ್ತೂಲ್ ಮಿಶ್ರ ಸ್ಪರ್ಧೆದಲ್ಲಿ ಭಾರತಕ್ಕೆ 2ನೇ ಕಂಚಿನ ಪದಕ ತಂದುಕೊಟ್ಟರು. ಈ ಮೂಲಕ ಒಂದೇ ಒಲಿಂಪಿಕ್ ಆವೃತ್ತಿಯಲ್ಲಿ ಎರಡು ಪದಕ ಗೆದ್ದ ಭಾರತದ ಮೊದಲ ಕ್ರೀಡಾಪಟು ಎನಿಸಿಕೊಂಡರು.

ಎರಡು ಪದಕ ಗೆದ್ದ ಭಾಕರ್

ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಶೂಟಿಂಗ್ ತಂಡ ಗಮನಾರ್ಹ ಪ್ರದರ್ಶನ ತೋರಿದೆ. ಪ್ರಮುಖವಾಗಿ 22 ವಯಸ್ಸಿನ ಶೂಟರ್ ಮನು ಭಾಕರ್ ಅವರು 2 ಪದಕಗಳನ್ನು ಗೆದ್ದಿದ್ದರು. 22 ವಯಸ್ಸಿನ ಮನು ಭಾಕರ್ ಅವರು 10 ಮೀಟರ್ ಪಿಸ್ತೂಲ್ ಶೂಟಿಂಗ್ ನಲ್ಲಿ ಕಂಚಿನ ಪದಕ ಗೆದ್ದು ಸಂಭ್ರಮಿಸಿದ್ದರು. ಅದಲ್ಲದೇ ತನ್ನ ಆಟ ಮುಂದುವರಿಸಿದ ಅವರು, 10 ಮೀ. ಪಿಸ್ತೂಲ್ ವಿಭಾಗದಲ್ಲೇ ಸರಬ್ಜೋತ್ ಸಿಂಗ್ ಅವರೊಂದಿಗೆ ಸೇರಿ ಮತ್ತೊಂದು ಕಂಚು ಗೆದ್ದಿದ್ದರು. ಆ ಮೂಲಕ ಅವರು ಒಂದೆ ಒಲಿಂಪಿಕ್ಸ್‌ನಲ್ಲಿ ಎರಡು ಪದಕ ಗೆದ್ದ ಎರಡನೇ ಭಾರತೀಯ ಹಾಗೂ ಮೊದಲ ಮಹಿಳೆ ಎನ್ನಿಸಿದ್ದರು.

ಸ್ವಪ್ನಿಲ್ ಕುಸಾಲೆ



ಭಾರತಕ್ಕೆ ಮೂರನೇ ಪದಕ ಒಲಿದು ಬಂದಿದ್ದು ಕೂಡ ಶೂಟಿಂಗ್‌ನಲ್ಲೇ ಎಂಬುದು ವಿಶೇಷ. 50 ಮೀ ರೈಫಲ್ ಶೂಟಿಂಗ್ ನಲ್ಲಿ 3ನೇ ಸ್ಥಾನ ಪಡೆಯುವ ಮೂಲಕ ಸ್ವಪ್ನಿಲ್ ಕುಸಾಲೆ ಕಂಚಿನ ಪದಕವನ್ನು ತಮ್ಮದಾಗಿಸಿಕೊಂಡರು. ಭಾರತ ಭಾಗವಹಿಸಿದ್ದ ಸ್ಪರ್ಧೆಗಳಲ್ಲಿ ಶೂಟಿಂಗ್ ತಂಡ ಮೊದಲು ಭಾಗವಹಿಸಿತ್ತು. ಏಕೆಂದರೆ, ಒಲಿಂಪಿಕ್ಸ್‌ನ ವೇಳಾಪಟ್ಟಿಯ ಪ್ರಕಾರ ಶಟಿಂಗ್ ಮೊದಲಿಗೆ ಆಡಿಸಲಾಗಿತ್ತು. 50 50 ಮೀ ರೈಫಲ್ ಶೂಟಿಂಗ್‌ನ ಅರ್ಹತಾ ಸುತ್ತಿನಲ್ಲಿ ಭರ್ಜರಿ ಪ್ರದರ್ಶನ ತೋರುವ ಮೂಲಕ ಫೈನಲ್‌ಗೆ ಪ್ರವೇಶಿಸಿದ್ದ ಸ್ವಪ್ನಿಲ್ ಕುಸಾಲೆ ಅವರು ಕಣದಲ್ಲಿ ಹೋರಾಡಿ ಕಂಚನ್ನು ಗೆದ್ದಿದ್ದರು.

ಬೆಳ್ಳಿ ಗೆದ್ದ ನೀರಜ್ ಚೋಪ್ರಾ

ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದ ಜಾವೆಲಿನ್ ಎಸೆತಗಾರ ನೀರಜ್ ಚೋಪ್ರಾ ಈ ಬಾರಿ 2ನೇ ಸ್ಥಾನ ಪಡೆಯುವ ಮೂಲಕ ಬೆಳ್ಳಿ ಪದಕಕ್ಕೆ ತೃಪ್ತಿಪಟ್ಟುಕೊಂಡರು. ಈ ಮೂಲಕ ಸತತ ಎರಡು ಆವೃತ್ತಿಗಳಲ್ಲಿ ಪದಕ ಗೆದ್ದ ವಿಶೇಷ ಸಾಧನೆ ಮಾಡಿದರು. ಕೂಟದ ಕೊನೆಯ ಹಂತದಲ್ಲಿ ನಡೆದಿದ್ದ ಜಾವೆಲಿನ್ ಸ್ಪರ್ಧೆಯ ಅರ್ಹತಾ ಸುತ್ತಿನಲ್ಲಿ ಅವರು ಮೊದಲ ಫೈನಲಿಸ್ಟ್ ಆಗಿ ಹೊರಹೊಮ್ಮಿದ್ದರು. ಅದರಂತೆ ಫೈನಲ್‌ನಲ್ಲಿ ಭರ್ಜರಿ ಪ್ರದರ್ಶನ ತೋರಿದರು. ಪೌಲ್‌ಗಳಲ್ಲಿ ಎಡವಿದ ಅವರು, ಒಂದೇ ಥ್ರೋ ಮೂಲಕ ಬೆಳ್ಳಿ ಗೆದ್ದರು. ಪಾಕಿಸ್ತಾನದ ನದೀಮ್ ಚಿನ್ನ ಗೆಲ್ಲುವಲ್ಲಿ ಯಶಸ್ವಿಯಾದರು.

ಅಮನ್ ಸೆಹ್ರಾವತ್

ಕ್ರೀಡಾಕೂಟದ ಕೊನೆಯಲ್ಲಿ ನಡೆದ ಕುಸ್ತಿಯಲ್ಲಿ ಭಾರತದ ಕಿರಿಯ ಆಟಗಾರ ಅಮನ್ ಸೆಹ್ರಾವತ್ ಅವರು ಕಂಚು ಗೆಲ್ಲುವ ಮೂಲಕ ಭಾರೀ ಗಮನ ಸೆಳೆದಿದ್ದಾರೆ. 57 ಕೆ.ಜಿ ವಿಭಾಗದ ಕುಸ್ತಿಯಲ್ಲಿ ಭರ್ಜರಿ ಪ್ರದರ್ಶನ ತೋರಿದ್ದ ಅವರು ಸೆಮಿಸ್‌ಗೆ ಪ್ರವೇಶ ಮಾಡಿದ್ದರು. ಆದರೆ ಸೆಮಿಸ್‌ನಲ್ಲಿ ಅವರು ಸೋಲನುಭವಿಸಿ ಕಂಚು ಸುತ್ತಿಗೆ ಅರ್ಹರಾಗಿದ್ದರು. ಶುಕ್ರವಾರ ನಡೆ ಕಂಚು ಸುತ್ತಿನ ಪಂದ್ಯದಲ್ಲಿ ಅವರು ಭರ್ಜರಿ ಗೆಲುವು ಸಾಧಿಸಿ, ಕಂಚು ಗೆದ್ದರು. ಅಲ್ಲದೆ, ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ಅತ್ಯಂತ ಕಿರೀಯ ಭಾರತೀಯ ಎನ್ನಿಸಿದರು.

ಹಾಕಿ ತಂಡ

ನಾಲ್ಕನೇ ಪದಕ ಮೂಡಿಬಂದಿರುವುದು ಪುರುಷರ ಹಾಕಿ ಆಟದಿಂದ. ಈ ಬಾರಿಯ ಒಲಿಂಪಿಕ್ಸ್‌ನ ಲೀಗ್ ಹಂತದ ಪಂದ್ಯಗಳಲ್ಲಿ ಭರ್ಜರಿ ಪ್ರದರ್ಶನ ತೋರುವುದರೊಂದಿಗೆ ಅಜೇಯ ಓಟ ಮುಂದುವರಿಸಿದ್ದ ಭಾರತ, ಮೊದಲಿಗೆ ನ್ಯೂಜಿಲೆಂಡ್ ವಿರುದ್ಧ ಭರ್ಜರಿ ಗೆಲುವು ಸಾಧಿಸ್ತಿತು. ಆದರೆ ಎರಡನೇ ಪಂದ್ಯದಲ್ಲಿ ಅರ್ಜೆಂಟಿನಾ ವಿರುದ್ಧ ಡ್ರಾ ಸಾಧಿಸಿತ್ತು. ಮೂರನೇ ಪಂದ್ಯದಲ್ಲಿ ಐಲೆಂಡ್ ಹಾಗೂ ನಾಲ್ಕನೇ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ ಭರ್ಜರಿ ಗೆಲುವು ಸಾಧಿಸುವ ಮೂಲಕ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಇಟ್ಟಿತ್ತು. ಕ್ವಾರ್ಟರ್‌ಫೈನಲ್‌ನಲ್ಲೂ ಗೆಲುವು ಸಾಧಿಸುವ ಮೂಲಕ ಭಾರತ ಸೆಮಿಸ್‌ಗೆ ಲಗ್ಗೆ ಇಟ್ಟಿತ್ತು. ಆದರೆ, ಸೆಮಿಸ್‌ನಲ್ಲಿ ಭಾರತ ಜರ್ಮನಿ ವಿರುದ್ಧ ಸೋಲನುಭವಿಸಿ ನಿರಾಸೆ ಮೂಡಿಸಿತ್ತು. ಆದರೆ 3ನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಸ್ಪೇನ್ ತಂಡವನ್ನು 2-1 ಅಂತರದಿಂದ ಮಣಿಸುವ ಮೂಲಕ ಭಾರತೀಯ ಹಾಕಿ ತಂಡ ಕಂಚಿನ ಪದಕವನ್ನು ತಮ್ಮದಾಗಿಸಿ ಕೊಂಡರು.

ವಿನೇಶ್ ಫೋಗಾಟ್

ಇನ್ನು ವಿನೇಶ್ ಫೋಗಾಟ್ ಅವರು 50 ಕೆ.ಜಿ ಮಹಿಳಾ ಕುಸ್ತಿ ಸ್ಪರ್ಧೆಯಲ್ಲಿ ಫೈನಲ್‌ಗೆ ಪ್ರವೇಶಿಸಿದರೂ ಅಂತಿಮ ಸುತ್ತಿನ ವೇಳೆ ಹೆಚ್ಚುವರಿ ತೂಕದ ಕಾರಣ ಅನರ್ಹಗೊಂಡಿದ್ದಾರೆ. ಇದಾಗ್ಯೂ ಸೆಮಿಫೈನಲ್‌ವರೆಗೂ ಅರ್ಹತೆಯೊಂದಿಗೆ ಸ್ಪರ್ಧಿಸಿರುವ ಕಾರಣ ಬೆಳ್ಳಿ ಪದಕ ನೀಡಬೇಕೆಂದು

ವಿನೇಶ್ ಫೋಗಾಟ್ ಕ್ರೀಡಾ ಮಧ್ಯಸ್ಥಿಕೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಈ ತೀರ್ಪು ಮಂಗಳವಾರ ಬರುವ ಸಾಧ್ಯತೆ ಇದೆ ಎನ್ನಲಾಗಿದೆ. ಒಂದು ವೇಳೆ ವಿನೇಶ್ ಪರವಾಗಿ ತೀರ್ಪು ಬಂದರೆ ಅವರಿಗೆ ಬೆಳ್ಳಿ ಪದಕ ದೊರೆಯಲಿದೆ. ಮತ್ತು ಭಾರತದ ಪದಕ ಸಂಖ್ಯೆ ಏಳಕ್ಕೆ ಏರಲಿದೆ.

ವಿನೇಶ್ ಫೋಗಾಟ್‌ಗೆ ಬೆಳ್ಳಿ ನೀಡಿ: ಗಂಗೂಲಿ

ಪ್ಯಾರಿಸ್: ಮಹಿಳೆಯರ 50 ಕೆ.ಜಿ ಕುಸ್ತಿಯ ಫೈನಲ್ ಸ್ಪರ್ಧೆಯಿಂದ ವಿನೇಶ್ ಫೋಗಾಟ್ ಅವರಿಗೆ ಅವರಿಗೆ ಬೆಳ್ಳಿ ಪದಕ ನೀಡಬೇಕು ಎಂದು ಮಾಜಿ ನಾಯಕ ಸೌರವ್ ಗಂಗೂಲಿ ಆಗ್ರಹಿಸಿದ್ದಾರೆ. ಒಲಿಂಪಿಕ್ಸ್ ಫೈನಲ್‌ನಿಂದ ಅನರ್ಹಗೊಂಡ ನಂತರ ಫೋಗಾಟ್ ಕುಸ್ತಿ ಯಿಂದ ನಿವೃತ್ತಿ ಘೋಷಿಸಿ ದರು. ಕಳೆದ ಮಂಗಳ ವಾರ ರಾತ್ರಿ ನಡೆದ ಸೆಮಿ ಫೈನಲ್‌ನಲ್ಲಿ ಕ್ಯೂಬಾದ ಯುಸ್ನೆಲಿಸ್ ಗುಜ್ಮನ್ ಲೋಪೆಜ್ ಅವರನ್ನು 5-0 ಅಂತರದಿಂದ ಸೋಲಿ ಸುವ ಮೂಲಕ ಫೋಗಾಟ್ ಚಿನ್ನದ ಪದಕದ ಹೋರಾಟಕ್ಕೆ ಪ್ರವೇಶಿಸಿದ್ದರು. ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಸೌರವ್ ಗಂಗೂಲಿ, ತನಗೆ ಸರಿಯಾಗಿ ಕುಸ್ತಿಯ ನಿಯಮಗಳು ತಿಳಿದಿಲ್ಲ ಆದರೆ ಅವರು ಬೆಳ್ಳಿ ಪದಕಕ್ಕೆ ಅರ್ಹರು ಎಂದು ಹೇಳಿದ್ದಾರೆ. ನಿಖರವಾದ ನಿಯಮ ಏನು ಎಂದು ನನಗೆ ತಿಳಿದಿಲ್ಲ, ಆದರೆ ವಿನೇಶ್ ಫೈನಲ್‌ಗೆ ಹೋಗುವ ತನಕ ಸರಿಯಾಗಿ ಅರ್ಹತೆ ಪಡೆದಿದ್ದಾರೆ ಎಂದು ನನಗೆ ಖಾತ್ರಿಯಿದೆ. ಆದ್ದರಿಂದ ಫೈನಲ್‌ಗೆ ಹೋದ ಮೇಲೆ ಬೆಳ್ಳಿ ಅಥವಾ ಚಿನ್ನದ ಪದಕಕ್ಕೆ ಅರ್ಹರು. ಅವರು ಕನಿಷ್ಠ ಬೆಳ್ಳಿಗೆ ಅರ್ಹರು, ಎಂದು ಗಂಗೂಲಿ ಹೇಳಿದ್ದಾರೆ.

ರೂಲ್ಸ್ ಆರ್ ರೂಲ್ಸ್

ದೆಹಲಿ: ವಿಶ್ವ ಕುಸ್ತಿ ಆಡಳಿತ ನಿರ್ವಹಿಸುವ ಯುನೈಟೆಡ್ ರೆಸ್ಲಿಂಗ್ ಫೆಡರೇಷನ್ ಅಧ್ಯಕ್ಷ ನೆನಾದ್ ಲಾಲೊವಿಕ್ ಅವರು ವಿನೇಶ್ ದೇಹ ತೂಕ ವಿವಾದಕ್ಕೆ ಸಂಬಂಧಿಸಿ ಮಾತನಾಡಿದ್ದು, ವಿನೇಶ್ ಬಗ್ಗೆ ಅನುಕಂಪವನ್ನೂ ವ್ಯಕ್ತಪಡಿಸಿದ್ದಾರೆ. ಆದರೆ ಫಲಿತಾಂಶ ಬದಲಾಗುವ ಸಾಧ್ಯತೆ ಕಡಿಮೆ. ಏನು ನಿಯಮಗಳಿವೆಯೊ ಅದನ್ನಷ್ಟೇ ಯುಡಬ್ಲ್ಯುಡಬ್ಲ್ಯು ಪಾಲಿಸುತ್ತದೆ ಎಂದಿದ್ದಾರೆ. ನಡೆದು ಹೋಗಿರುವ ಪ್ರಕರಣದ ಬಗ್ಗೆ ನನಗೆ ವಿಷಾದವಿದೆ. ಇಲ್ಲಿ ದೇಶದ ಗಾತ್ರ ಲೆಕ್ಕಕ್ಕೆ ಬರುವುದಿಲ್ಲ. ಕ್ರೀಡಾಪಟುಗಳು ಕ್ರೀಡಾಪಟುಗಳಷ್ಟೇ. ತೂಕ ನೋಡುವುದು ಬಹಿರಂಗವಾಗಿ. ಏನಾಗಿದೆ ಎಂಬುದನ್ನು ಎಲ್ಲರೂ ನೋಡಿದ್ದಾರೆ. ಏನಾಗಿದೆ ಎಂಬುದು ಎಲ್ಲರಿಗೂ ಗೊತ್ತಾದ ಮೇಲೆ ಅಂಥವರಿಗೆ ನಾವು ಸ್ಪರ್ಧೆಗೆ ಅವಕಾಶ ನೀಡುವುದಾದರೂ ಹೇಗೆ? ನಮ್ಮ ಮುಂದೆ ನಿಯಮ ಪಾಲಿಸದೇ ಬೇರೇನೂ ಪರ್ಯಾಯಗಳು ಇರಲಿಲ್ಲ' ಎಂದು ಲಾಲೊವಿಕ್ ಎನ್ಡಿಟಿವಿಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ. ಅಥ್ಲೀಟುಗಳ ಆರೋಗ್ಯದ ಮೇಲಿನ ಕಾಳಜಿಯಿಟ್ಟುಕೊಂಡು ನಾವು ನಿಯಮ ರೂಪಿಸಿದ್ದೆವು. ಸ್ಪರ್ಧಿಸಬೇಕಾದರೆ ಅಥ್ಲೀಟುಗಳು ತೂಕನಿಯಮಕ್ಕೆ ಬದ್ಧರಾಗಬೇಕಾಗುತ್ತದೆ. ನಿಯಮದಲ್ಲಿ ಸಣ್ಣಪುಟ್ಟ ಮಾರ್ಪಾಡು ಮಾಡಬಹುದೇನೊ. ಆದರೆ ನಿಯಮ ತೆಗೆದುಹಾಕಲು ಆಗುವುದಿಲ್ಲ' ಎಂದರು. 50 ಕೆ.ಜಿ. ವಿಭಾಗದಲ್ಲಿ ಮೂರು ದಿನಗಳ ಹಿಂದೆಯೇ ಚಿನ್ನ, ಬೆಳ್ಳಿ, ಕಂಚಿನ ಪದಕಗಳ ಪ್ರದಾನವಾಗಿದೆ. ಕುಸ್ತಿಯಲ್ಲಿ ಎರಡನೇ ಬೆಳ್ಳಿ ಪದಕ ನೀಡಲು ಅವಕಾಶವಿಲ್ಲ. ಆದರೆ ವಿನೇಶ್ ಮತ್ತು ಅವರ ಪರ ಹೋರಾಟ ಮಾಡುವವರು ಇನ್ನೂ ವಿಶ್ವಾಸ ಹೊಂದಿದ್ದಾರೆ.

ಪ್ಯಾರಸ್ ಒಲಿಂಪಿಕ್ಸ್‌ನಲ್ಲಿ 5 ಕ್ಕೂ ಹೆಚ್ಚು ಕ್ರೀಡಾಪಟುಗಳಿಗೆ ಆರನೇ ಸ್ಥಾನ | ಭಾರೀ ನಿರಾಸೆ

ಗಾಯಕ್ಕೆ ಉಪ್ಪು ಸವರಿದ 4ನೇ ಸ್ಥಾನ

ಪ್ಯಾರಿಸ್: ಈ ಬಾರಿಯ ಒಲಿಂಪಿಕ್ ಮುಕ್ತಾಯಗೊಂಡಿದೆ. ನಿರೀಕ್ಷೆಗಳನ್ನು ಹೊತ್ತೊಯ್ದಿದ್ದ ಭಾರತಕ್ಕೆ ಸಮಾಧಾನಕರ ಬಹುಮಾನ ದೊರೆತಿದೆ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತ ಒಟ್ಟು 7 ಪದಕಗಳನ್ನು ಗೆದ್ದಿತ್ತು, ಆದರೆ ಈ ಬಾರಿ ಭಾರತವು ಕೇವಲ 6 ಪದಕಗಳನ್ನು ಗೆದ್ದಿದೆ. ಆದರೆ, ಈ ಒಲಿಂಪಿಕ್ಸ್‌ನಲ್ಲಿ ಭಾರತ ಇನ್ನೂ 6 ಪದಕಗಳನ್ನು ಪಡೆಯಬಹುದಿತ್ತು. ಆದರೆ ಈ ಪದಕಗಳು ಕೂದಲೆಳೆ ಅಂತರದಲ್ಲಿ ಕೈತಪ್ಪಿದವು. ಭಾನುವಾರ ಪ್ಯಾರಿಸ್ ಒಲಿಂಪಿಕ್ಸ್‌ನ ಕೊನೆಯ ದಿನವಾಗಿತ್ತು. ಆದರೆ ಶನಿವಾರವೇ ಭಾರತದ ಪಯಣ ಅಂತ್ಯವಾಗಿದ್ದು, ಭಾನುವಾರ ಯಾವುದೇ ಕ್ರೀಡೆಯಲ್ಲಿ ಭಾಗವಹಿಸುತ್ತಿಲ್ಲ. ಈ ಬಾರಿ ಭಾರತ ಅತ್ಯುತ್ತಮ ಪ್ರದರ್ಶನ ನೀಡಲಿದೆ ಎಂದು ನಿರೀಕ್ಷಿಸಲಾಗಿತ್ತು, ಆದರೆ ಕ್ರೀಡಾಪಟುಗಳು ಅದನ್ನು ಮಾಡಲು ವಿಫಲರಾದರು.

ಆದರೆ ವಿವಿಧ ವಿಭಾಗದಲ್ಲಿ ಭರ್ಜರಿ ಪ್ರದರ್ಶನ ತೋರಿ ಫೈನಲ್‌ಗೇರಿದ್ದ ಹಲವು ಕ್ರೀಡಾಪಟುಗಳು ಈ ಬಾರಿ 4ನೇ ಸ್ಥಾನ ಪಡೆಯುವ ಮೂಲಕ ನಿರಾಸೆಗೆ ಬರೆ ಎಳೆದಿದ್ದಾರೆ. ಮನು ಭಾಕರ್ ಈ ಒಲಿಂಪಿಕ್ಸ್‌ನಲ್ಲಿ ಅದ್ಭುತ ಪ್ರದರ್ಶನ ನೀಡಿ 2 ಕಂಚಿನ ಪದಕಗಳನ್ನು ಗೆದ್ದಿದ್ದಾರೆ. ಆದರೆ, ಮನು ಭಾಕರ್‌ಗೆ ಇನ್ನೂ ಒಂದು ಪದಕ ಗೆಲ್ಲುವ ಅವಕಾಶವಿತ್ತು. 25 ಮೀಟರ್ ಏರ್ ರೈಫಲ್ ಶೂಟಿಂಗ್ ಸ್ಪರ್ಧೆಯಲ್ಲಿ ಅವರು ಪದಕ ಗೆಲ್ಲಬಹುದಿತ್ತು. ಆದರೆ ಕೂದಲೆಳೆ ಅಂತರದಲ್ಲಿ ಪದಕ ಗೆಲ್ಲುವುದನ್ನು ತಪ್ಪಿಸಿಕೊಂಡರು. ಮೊದಲೇ ಭಾರತಕ್ಕೆ ಪದಕದ ಆಭಾವವಿತ್ತು. ಅದರಮೇಲೆ ಪದಕಕ್ಕೆ ತೀರ ಸನಿಹಕ್ಕೆ ಹೋಗಿ ವಾಪಸ್ಸಾಗಿದ್ದು, ಭಾರತೀಯರಿಗೆ ಆದ ಗಾಯದ ಮೇಲೆ ಬರೆ ಎಲೆದಂತಾಗಿದೆ.



ಬಬುಟಾ

ಭಾರತದ ಶೂಟರ್ ಅರ್ಜುನ್ ಬಾಬುತಾ ಅವರಿಗೂ ಅವರು 10 ಮೀಟರ್ ಏರ್ ರೈಫಲ್ ಶೂಟಿಂಗ್‌ನಲ್ಲಿ ಕಂಚಿನ ಪದಕದ ಪಂದ್ಯವನ್ನು ಆಡಿದ್ದರು. ಆದರೆ ಅರ್ಜುನ್, ಕ್ರೊಯೇಷಿಯಾದ ಮಾರಿಸಿಕ್ ಮಿರಾನ್ ಅವರ ವಿರುದ್ಧ ಸೋತರು.

ಸೇನ್

ಷಟ್ಲರ್ ಲಕ್ಷ್ಯ ಸೇನ್ ಬ್ಯಾಡ್ಮಿಂಟನ್ ಕ್ರೀಡಾಕೂಟದಲ್ಲಿ ಸೆಮಿಫೈನಲ್ ತಲುಪಿದ್ದರು. ಆದೆ ಸೆಮಿಫೈನಲ್ ಪಂದ್ಯದಲ್ಲಿ ಅವರು ಸೋಲನುಭವಿಸಬೇಕಾಯಿತು. ಇದಾದ ಬಳಿಕ ಕಂಚಿನ ಪದಕದ ಪಂದ್ಯದಲ್ಲಿ ಆರಂಭದಲ್ಲಿ ಮುನ್ನಡೆ ಸಾಧಿಸಿದ ಅವರು, ಆ ಬಳಿಕ ತಮ್ಮ ಮಲೇಷ್ಯಾದ ಲೀ ಜಿ ಜಿಯಾ ಅವರ ವಿರುದ್ಧ 13-21, 21-16, 21-11 ಅಂತರದಿಂದ ಸೋಲೊಪ್ಪಿಕೊಂಡರು.

ಮಹೇಶ್ವರಿ, ಅನಂತ್

ಶೂಟಿಂಗ್ ಸ್ಪರ್ಧೆಯಲ್ಲಿ ಮಹೇಶ್ವರಿ ಚೌಹಾಣ್ ಮತ್ತು ಅನಂತ್ ಜೋಡಿಗೆ ಪದಕ ಗೆಲ್ಲುವ ಅವಕಾಶ ಸಿಕ್ಕಿತ್ತು. ಎರಡೂ ಜೋಡಿಗಳು ಕಂಚಿನ ಪದಕದ ಪಂದ್ಯದಲ್ಲಿ ಚೀನಾದ ಜಿಯಾಂಗ್ ಯುಟಿಂಗ್ ಮತ್ತು ಲಿಯು ಜಿಯಾಲಿನ್ ಜೋಡಿಯನ್ನು ಎದುರಿಸಿದ್ದರು. ಆದರೆ ಕೇವಲ 1 ಅಂಕದಿಂದ ಸೋಲುವ ಮೂಲಕ ಭಾರತದ ಪದಕದ ಆಸೆ ಭಗ್ನಗೊಂಡಿತು.

ಧೀರಜ್, ಅಂಕಿತಾ

ಮಿಶ್ರ ಆರ್ಚರಿ ತಂಡದಲ್ಲಿ ಧೀರಜ್ ಬೊಮ್ಮದೇವರ ಮತ್ತು ಅಂಕಿತಾ ಭಕತ್ ಜೋಡಿ ಕಂಚಿನ ಪದಕದ ಪಂದ್ಯವನ್ನೂ ಆಡಿತ್ತು. ಈ ಕೂಟದಲ್ಲಿ ಭಾರತಕ್ಕೆ ಮತ್ತೊಂದು ಪದಕ ಸಿಗಲಿದೆ ಎಂದು ನಂಬಲಾಗಿತ್ತು. ಆದರೆ ಅಮೆರಿಕದ ಕೇಸಿ ಕೌಫೊಲ್ಡ್ ಮತ್ತು ಬ್ರಾಡಿ ಎಲಿಸನ್ ಜೋಡಿ ಧೀರಜ್ ಬೊಮ್ಮದೇವರ ಮತ್ತು ಅಂಕಿತಾ ಭಕತ್ ಜೋಡಿಯನ್ನು 2-6 ಅಂತರದಿಂದ ಸೋಲಿಸಿತು.

ಉಳಿದಂತೆ ಮೀರಾಬಾಯಿ ಚಾನು ಅವರು ಕೇವಲ ಒಂದು ಕೆ.ಜಿಯಿಂದ ಕಂಚು ಕಳೆದುಕೊಂಡಿದ್ದಾರೆ. ಅವರಲ್ಲದೆ, ದೀಪಿಕಾ ಕುಮಾರಿ ಸೇರಿ ಅನೇಕರು ಪದಕದ ಸನಿಹ ಬಂದು ಸೋಲನುಭವಿಸಿದ್ದಾರೆ.

ಸಿಫಾನ್‌ಗೆ ಮಹಿಳಾ ಮ್ಯಾರಥಾನ್ ಪಟ್ಟ

ಪ್ಯಾರಿಸ್: ಮಹಿಳೆಯರ ಮ್ಯಾರಥಾನ್ ಓಟದಲ್ಲಿ ಹಾಲೆಂಡ್‌ನ ಓಟಗಾರ್ತಿ ಸಿಫಾನ್ ಅವರು ಚಿನ್ನದ ಪದಕ ಗೆದ್ದುಕೊಂಡರು. ಇಥಿಯೋಪಿಯಾ ಸಂಜಾತೆಯಾದ ಡಚ್ ಓಟಗಾರ್ತಿ ಸಿಫಾನ್ ಹಾಲಿ ಒಲಿಂಪಿಕ್ಸ್‌ನಲ್ಲಿ 5,000 ಮತ್ತು 10,000 ಮೀಟರ್ ಓಟದಲ್ಲಿ ಕಂಚಿನ ಪದಕಗಳನ್ನು ಗೆದ್ದುಕೊಂಡಿದ್ದು, ಮೂರನೇ ಪದಕದ ನಿರೀಕ್ಷೆಯಲ್ಲಿ ಮ್ಯಾರಥಾನ್ ಓಟ ಓಡಿದ್ದರು.

ಈ ರೇಸ್ ಸುಲಭವಾಗಿರಲಿಲ್ಲ. 5,000 ಮತ್ತು 10,000 ಮೀ. ಓಟದಲ್ಲಿ ಓಡಿದ್ದಕ್ಕೆ ವಿಷಾದವೆನಿಸುತ್ತು. ಈಗ ಇಲ್ಲಿ ಚಿನ್ನ ಗೆದ್ದಿದ್ದರಿಂದ ನಿರಾಳವಾಗಿದೆ' ನಾನು ಈಗ ಎದುರಿಸಿದಷ್ಟು ಪೈಪೋಟಿಯನ್ನು ಹಿಂದೆಂದೂ ಎದುರಿಸಿರಲಿಲ್ಲ.
ಸಿಫಾನ್ ಹಸನ್, ಗೆದ್ದ ಆಟಗಾರ್ತಿ

ಈ ಪ್ರಯತ್ನಕ್ಕೆ ಸಿಫಾನ್ ಅಡ್ಡಿಯಾಗಿದ್ದಾರೆ. ಟೋಕಿಯೊ ಕ್ರೀಡೆಗಳಲ್ಲಿ ಇದೇ ಓಟಗಾರ್ತಿ ಎರಡು ಚಿನ್ನ (5,000 ಮತ್ತು 10,000 ಮೀ. ಓಟ) ಮತ್ತು ಒಂದು ಕಂಚಿನ ಪದಕ (1,500 ಮೀ. ಓಟ) ಗೆದ್ದುಕೊಂಡಿದ್ದರು. ಭಾನುವಾರ ನಡೆದ ಓಟದಲ್ಲಿ ಸಿಫಾನ್ 2 ಗಂಟೆ 22.55 ಸೆ.ಗಳಲ್ಲಿ ಮುಕ್ತಾಯದ ರೇಖೆ ದಾಟಿದರು. ಇದು ಒಲಿಂಪಿಕ್ ದಾಖಲೆ. ಅವರಿಗೆ ತೀವ್ರ ಪೈಪೋಟಿ ನೀಡಿದ ಇಥಿಯೋಪಿಯಾದ ಅಸೀಫಾ (2:22.58) ಮೂರು ಸೆಕೆಂಡುಗಳ ಅಂತರದಲ್ಲಿ ಬೆಳ್ಳಿ ಗೆದ್ದರು. ಕೆನ್ಯಾದ ಹೆಲೆನ್ ಒಬಿರಿ (2:23.10) ಕಂಚಿನ ಪದಕ ಗೆದ್ದುಕೊಂಡರು. ಶನಿವಾರ ನಡೆದ ಪುರುಷರ ವಿಭಾಗದ ರೇಸ್‌ನಲ್ಲಿ ಇಥಿಯೋಪಿಯಾದ ತಮಿರತ್ ತೋಲಾ ಚಿನ್ನ ಗೆದ್ದಿದ್ದರು. ಅಸಿಫಾ ಪೈಪೋಟಿ ನೋಡಿದಾಗ, ಇಥಿಯೋಪಿಯಾ ಮಹಿಳಾ ವಿಭಾಗದ ಚಿನ್ನವೂ ದಕ್ಕುವಂತೆ ಕಂಡಿತ್ತು. ಆದರೆ ಕೊನೆಯಲ್ಲಿ ಸಿಫಾನ್ ಗೆದ್ದರು.

ಐತಿಹಾಸಿಕ ಮಾರ್ಗ

42 ಕಿ.ಮೀ. ದೂರವಿರುವ ಈ ಓಟ ಸೆಂಟ್ರಲ್ ಪ್ಯಾರಿಸ್‌ನಿಂದ ವರ್ಸೈಲ್ ಮಾರ್ಗದಲ್ಲಿತ್ತು. ಹಿಂದೆ ಫ್ರೆಂಚ್ ಕ್ರಾಂತಿಯ ಸಂದರ್ಭದಲ್ಲಿ (1789ರ ಅಕ್ಟೋಬರ್ 5ರಂದು) ಮಹಿಳೆಯರು ಇದೇ ಮಾರ್ಗದಲ್ಲಿ ಪ್ರತಿಭಟನಾ ಮೆರವಣಿಗೆಯಲ್ಲಿ ಸಾಗಿದ್ದರು. ಕೆನ್ಯಾದ ಮೂವರು ಪ್ರಮುಖ ಓಟಗಾರ್ತಿಯರಾದ ಶರೊನ್ ಲೊಕೆಡಿ, ಟೋಕಿಯೊದಲ್ಲಿ ಚಿನ್ನ ಗೆದ್ದಿದ್ದ ಪೆರೆಸ್ ಮತ್ತು ಒಬಿರಿ ಅವರು ಸುಮಾರು 30 ಕಿ.ಮೀ. ವರೆಗೆ ಇಥಿಯೋಪಿಯಾ ಓಟಗಾರ್ತಿಯರಿಗೆ ತೀವ್ರ ಸ್ಪರ್ಧೆ ನೀಡಿದರು.

ಸಮಾಚಾರ ಸಣ್ಣದಲ್ಲ

ಬಿಂದ್ರಾಗೆ ವಿಶೇಷ ಗೌರವ

ದೆಹಲಿ: 10 ಮೀಟರ್ ಏರ್ ರೈಫಲ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದು, ಭಾರತಕ್ಕೆ ಮೊದಲ ವೈಯಕ್ತಿಕ ಒಲಿಂಪಿಕ್ ಪದಕ ಗೆದ್ದ ಅಭಿನವ್ ಬಿಂದ್ರಾ ಅವರು ಒಲಿಂಪಿಕ್ ಆರ್ಡರ್ ಗೌರವ ಸ್ವೀಕರಿಸಿದ್ದಾರೆ. ಶನಿವಾರ ರಾತ್ರಿ ನಡೆದಿದ್ದ ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿಯ 142 ನೇ ಅಧಿವೇಶನದಲ್ಲಿ ಬಿಂದ್ರಾಗೆ ಈ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಒಲಿಂಪಿಕ್ ಆಂದೋಲನಕ್ಕೆ ನೀಡಿದ ಗಣನೀಯ ಕೊಡುಗೆಗಾಗಿ ಅವರಿಗೆ ಈ ಗೌರವ ಸಂದಿದೆ. 41 ವರ್ಷ ವಯಸ್ಸಿನ ಅಭಿನವ್ ಬಿಂದ್ರಾ, 2008ರ ಬೀಜಿಂಗ್ ಕ್ರೀಡೆಗಳಲ್ಲಿ ಅವರು ಪುರುಷರ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ವಿಜೇತರಾಗಿದ್ದರು. ಅವರು 2010 ರಿಂದ 2020ರವರೆಗೆ ಇಂಟರ್ ನ್ಯಾಷನಲ್ ಶೂಟಿಂಗ್ ಸ್ಪೋರ್ಟ್ಸ್ ಫೆಡರೇಷನ್‌ನ ಅಥ್ಲೀಟ್ಸ್ ಸಮಿತಿ ಸದಸ್ಯರಾಗಿದ್ದರು. 2014ರಲ್ಲಿ ಅಧ್ಯಕ್ಷತೆ ವಹಿಸಿದ್ದರು. 2018ರಿಂದ ಅವರು ಐಒಸಿ ಅಥ್ಲೀಟ್ಸ್ ಕಮಿಷನ್ ಸದಸ್ಯರಾಗಿದ್ದಾರೆ.

ಮೊದಲ ಬ್ರೇಕಿಂಗ್ ವಿಜೇತೆ ಅಮಿ

ಪ್ಯಾರಿಸ್: ಒಲಿಂಪಿಕ್ಸ್‌ನಲ್ಲಿ ಇದೇ ಮೊಟ್ಟ ಮೊದಲ ಬಾರಿಗೆ ಬ್ರೇಕಿಂಗ್ ಈವೆಂಟ್ ಅನ್ನು ಸೇರ್ಪಡೆಗೊಳಿಸಿದ್ದು, ಬ್ರೇಕಿಂಗ್ ಈವೆಂಟ್‌ನಲ್ಲಿ ಜಪಾನ್‌ನ ಬಿ-ಗರ್ಲ್ ಅಮಿ ಮೊದಲ ಚಿನ್ನದ ಪದಕವನ್ನು ಗೆದ್ದಿದ್ದಾರೆ.

16 ಡ್ಯಾನ್ಸರ್‌ಗಳಿದ್ದ ಅಖಾಡದಲ್ಲಿ ಅಮಿ ಯುವಾಸಾ ಅವರು ಸ್ಪಿನ್ನಿಂಗ್, ಫ್ಲಿಪ್ಪಿಂಗ್ ಹಾಗೂ ಟಾಪ್‌ಪ್ರಾಕ್ ಮಾಡುವ ಮೂಲಕ ಒಲಿಂಪಿಕ್ಸ್‌ನ ಮೊದಲ ಬ್ರೇಕಿಂಗ್ ಈವೆಂಟ್‌ನ ಚಿನ್ನದ ಪದಕವನ್ನು ತಮ್ಮದಾಗಿಸಿಕೊಂಡಿದ್ದಾರೆ. ಅಮಿ ಯುವಾಸಾ ಅವರು ಲಿಥುವೇನಿಯಾದ ಬಿ-ಗರ್ಲ್ ನಿಕಾ ವಿರುದ್ಧದ ಪಂದ್ಯದಲ್ಲಿ ಎಲ್ಲ ಮೂರು ಸುತ್ತುಗಳನ್ನು ಗೆದ್ದು ಚಿನ್ನವನ್ನು ದೋಚಿದ್ದಾರೆ. ಪ್ಲೇಸ್ ಡೆ ಲಾ ಕಾನ್ಕಾರ್ಡ್ ಕ್ರೀಡಾಂಗಣದಲ್ಲಿ ಸುದೀರ್ಘ ಲಯಕ್ಕೆ ಹೆಜ್ಜೆ ಹಾಕಿ ತಮ್ಮ ಕೌಶಲ್ಯ ಪ್ರದರ್ಶಿಸಿದರು. ಮಧ್ಯಾಹ್ನ ಆರಂಭಗೊಂಡು ರಾತ್ರಿ 10 ಗಂಟೆಯ ಮೊದಲು ಮುಕ್ತಾಯಗೊಂಡ ಬ್ರೇಕಿಂಗ್ ಈವೆಂಟ್ ನೋಡಲು ಸಂಜೆ ಉದ್ದಕ್ಕೂ ಅಭಿಮಾನಿಗಳು ಉತ್ಸಾಹದಿಂದ ಸೇರಿದ್ದರು.

ಚಿನ್ನ ಗೆದ್ದ ಅರ್ಷದ್‌ಗೆ ಭಾರೀ ಗೌರವ



ಪ್ಯಾರಿಸ್: ಪಾಕಿಸ್ತಾನದ ಜಾವೆಲಿನ್ ಎಸೆತಗಾರ ಅರ್ಷದ್ ನದೀಮ್ ಚಿನ್ನದ ಪದಕ ಗೆದ್ದು ದಾಖಲೆ ಬರೆದಿದ್ದರು. ಇದರೊಂದಿಗೆ ಪಾಕಿಸ್ತಾನ ದೇಶದ ಕ್ರೀಡಾ ವಲಯದಲ್ಲಿ ಅತ್ಯುನ್ನತ ಸಾಧನೆ ಮಾಡಿದ ಕೀರ್ತಿಗೆ ಭಾಜನರಾದರು. 92.97 ಮೀಟರ್ ದೂರಕ್ಕೆ ಜಾವೆಲಿನ್ ಎಸೆದು ಪಾಕಿಸ್ತಾನಕ್ಕೆ 32 ವರ್ಷಗಳ ನಂತರ ಮೊದಲ ಒಲಿಂಪಿಕ್ ಪದಕ ಗೆದ್ದು ಕೊಟ್ಟ ಅರ್ಷದ್‌ಗೆ ಪಾಕಿಸ್ತಾನದಲ್ಲಿ ಉನ್ನತ ಗೌರವ ದೊರಕಿದೆ. ದೇಶದ ಚಿನ್ನದ ಹುಡುಗನಿಗೆ ಹತ್ತು ಹಲವಾರು ನಗದು ಬಹುಮಾನಗಳು ಮತ್ತು ಪ್ರಶಸ್ತಿಗಳನ್ನು ಘೋಷಣೆ ಮಾಡಲಾಗಿದೆ.

ಪಾಕಿಸ್ತಾನದ ಮಾಧ್ಯಮ ವರದಿಗಳ ಪ್ರಕಾರ, ಅರ್ಷದ್ ನದೀಮ್ ಅವರಿಗೆ ಪಾಕಿಸ್ತಾನ ವಿವಿಧ ರಾಜ್ಯ ಹಾಗೂ ಕೇಂದ್ರ ಸರಕಾರದಿಂದ 150 ಮಿಲಿಯನ್ ಪಾಕಿಸ್ತಾನ ರುಪಾಯಿಗಳಿಗಿಂದ ಹೆಚ್ಚು ನಗದು ಬಹುಮಾನ ಸಿಗಲಿದೆ. ಭಾರತೀಯ ರುಪಾಯಿ ಮೌಲ್ಯದಲ್ಲಿ ಇದು 4.5 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು. ಇದರಲ್ಲಿ ಪಾಕಿಸ್ತಾನದ ಪಂಜಾಬ್ ರಾಜ್ಯದ ಮುಖ್ಯಮಂತ್ರಿ ಮರಿಯಮ್ ನವಾಜ್ ಅವರು ಒಟ್ಟು ಬಹುಮಾನದ ಮೊತ್ತದಲ್ಲಿ 100 ಮಿಲಿಯನ್ ಪಾಕಿಸ್ತಾನ ರು. ಬಹುಮಾನ ಘೋಷಿಸಿದ್ದಾರೆ ಎಂದು ಪಾಕ್ ಮೂಲದ ಸುದ್ದಿ ಸಂಸ್ಥೆ ಡಾನ್ ವರದಿ ಮಾಡಿದೆ. ಪಂಜಾಬ್ ರಾಜ್ಯಪಾಲ ಸದಾರ್ರ ಸಲೀಮ್ ಹೈದರ್ ಖಾನ್ ಅವರು 2 ಮಿಲಿಯನ್ ಬಹುಮಾನ ಘೋಷಿಸಿ ದರೆ, ಸಿಂಧ್ ಸಿಎಂ 50 ಮಿಲಿಯನ್ ನಗದು ಘೋಷಿಸಿದ್ದಾರೆ.

ನಿಶಾನ್-ಇ-ಪಾಕಿಸ್ತಾನ್ ಗೌರವ: ರೇಡಿಯೋ ಪಾಕಿಸ್ತಾನದ ವರದಿಯ ಪ್ರಕಾರ, ಪಾಕಿಸ್ತಾನ ಸಂಸತ್ತಿನ ಕೆಳಮನೆಯು ನದೀಮ್ ಅವರಿಗೆ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯನ್ನು ನೀಡಿ ಗೌರವಿಸಲು ಸರಕಾರಕ್ಕೆ ಶಿಫಾರಸು ಮಾಡುವ ನಿರ್ಣಯವನ್ನು ಅಂಗೀಕರಿಸಿದೆ. ಹೀಗಾಗಿ ನದೀಮ್ ಅವರಿಗೆ ನಿಶಾನ್-ಇ-ಪಾಕಿಸ್ತಾನದ ಗೌರವ ಸಿಗಲಿದೆ.

ವಿಶ್ವವಾಣಿ ಆರಾಮ
@vishwavaninews
ಬೆಂಗಳೂರು | ಸೋಮವಾರ 12 | 08 | 2024
ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ತ ವಿಹಾರ

ಇರಲಿ ಒಂದಷ್ಟು ವಿವೇಕ

ಮನುಷ್ಯನ ಸ್ವಭಾವವೇ ಹೀಗೆ. ಯಾವುದಾದರೊಂದು ಸಂಗತಿನ್ನು ಆತುರಾತುರವಾಗಿ ಗ್ರಹಿಸುತ್ತೇವೆ. ಕಣ್ಣಿಗೆ ಗೋಚರಿಸುವದಷ್ಟನ್ನೇ ಕಂಡು ತೀರ್ಮಾನವನ್ನು ನೀಡುತ್ತೇವೆ. ತಲಸ್ಪರ್ಶಿಯಾಗಿ ಯೋಚಿಸಿದೇ ಪೂರ್ವಗ್ರಹಗಳ ಆಧಾರದಲ್ಲಿಯೇ ಸಿದ್ಧಾಂತಗಳನ್ನು ಕಟ್ಟಲು ಹವಣಿಸುತ್ತೇವೆ. ಪಂಚತಂತ್ರದ ಕಥೆಯಲ್ಲಿನ ಮಂಗ ನೇರಳೆ ಹಣ್ಣನ್ನು ನೀಡಿ ಮೊಸಳೆಯ ಸ್ನೇಹ ಸಂಪಾದಿಸಿದ ನಂತರ ಅದನ್ನು ಅತಿಯಾಗಿ ನಂಬುತ್ತದೆ. ಗಂಡು ಮೊಸಳೆಯು ತನ್ನ ಹೆಂಡತಿಗೆ ಮಂಗನ ಹೃದಯದ ರುಚಿ ನೋಡುವ ಆಸೆ ಬಂದಾಗ, ಅದನ್ನು ನಿರಾಕರಿಸಲಾಗದೇ ಮಂಗವನ್ನು ಕರೆತರಲು ಒಪ್ಪಿಕೊಳ್ಳುತ್ತದೆ. ಮಂಗನನ್ನು ಆಹ್ವಾನಿಸುತ್ತದೆ. ಹಿಂದು ಮುಂದೆ ಯೋಚಿಸದೇ ಒಪ್ಪಿಕೊಂಡು ಮಂಗ ಜೀವಕ್ಕೆ ಅಪಾಯವನ್ನು ತಂದುಕೊಳ್ಳುವ ಸಂಗತಿ ಅಪರಿಚಿತವಾದುದೇನಲ್ಲ.

ಇಂಥವು ಸಲ್ಲದ ನಡೆಗಳೇ. ಇಂಥ ಅನಗತ್ಯವಾದ ನಡೆಗಳು ನೂರೆಂಟು ತವಕ-ತಲ್ಲಣಗಳಿಗೆ ಕಾರಣವಾಗುತ್ತದೆ. ಅಪನಿಂದೆ, ಅವಮಾನ, ಅನುಭವಿಸುವಂತೆ ಮಾಡುತ್ತದೆ. ವಸ್ತುಗಳು, ಸಂಗತಿಗಳು ಸೃಜಿಸುವ ಭಾವಾತಿರೇಕದ ಭ್ರಮಾತ್ಮಕತೆಯ ಸುಳಿಯನ್ನು ನಾವು ದಾಟಿ ಬರಬೇಕು. ಸಾಧ್ಯವಾದಷ್ಟು ಎಲ್ಲವುಗಳನ್ನು ಎಲ್ಲ ದೃಷ್ಟಿಕೋನಗಳಿಂದ ಅವಲೋಕಿಸಬೇಕು. ಸ್ಪಷ್ಟವಾಗಿ ಆಲೋಚಿಸುವುದನ್ನು ಕಲಿಯಬೇಕು. ಇದಕ್ಕೆ ಖಂಡಿತವಾಗಿಯೂ ಒಂದಷ್ಟು ಸಮಯ ಬೇಕು.

ಒಂದೊಮ್ಮೆ ಇದು ಸಿದ್ಧಿಸಿದರೆ ಮುಂದೆಂದೂ ನಾವು ಮೋಸ ಹೋಗುವ ಸಾಧ್ಯತೆ ಇಲ್ಲವೇ ಇಲ್ಲ. ಇದು ನಾಳಿನ ಬದುಕಿನ ಹಾದಿಯನ್ನು ಇನ್ನಷ್ಟು ಖಚಿತವಾಗಿಸುತ್ತದೆ. ಬದುಕನ್ನು ನಿಯಂತ್ರಿಸುವ ಇಕ್ಕಟ್ಟುಗಳಿಂದ ಪಾರು ಮಾಡಿ ಬದುಕನ್ನು ಹದಗೊಳಿಸುತ್ತದೆ.

• ಮಹಾದೇವ ಬಸರಕೋಡ

ಇತಿಹಾಸಕ್ಕೊಂದು ಕಿಂಡಿ

ಬಹುದೂರದ ಜೈಲು!

ಈಗ ಯೆಮೆನ್ ದೇಶದಲ್ಲಿರುವ ಬಂದರು ಪಟ್ಟಣವಾಗಿರುವ ಏಡನ್‌ನಲ್ಲಿ, 1951ರ ತನಕ ನಮ್ಮ ದೇಶದ ರುಪಾಯಿಗಳು ಚಲಾವಣೆಯಲ್ಲಿದ್ದವು ಎಂದರೆ ಅಚ್ಚರಿ ಎನಿಸಬಹುದು! ಅದಕ್ಕೆ ಕಾರಣವೆಂದರೆ, 1839ರಿಂದ 1963ರ ತನಕ ಏಡನ್ ಪಟ್ಟಣವು ಬ್ರಿಟಿಷರ ವಶದಲ್ಲಿತ್ತು! 1839ರಿಂದ ಭಾರತದಿಂದಲೇ ಅದನ್ನು ಅವರು ಆಳುತ್ತಿದ್ದುದರಿಂದ, ಬ್ರಿಟಿಷ್ ಇಂಡಿಯಾದ ಭಾಗವಾಗಿತ್ತು; 1937ರಲ್ಲಿ ಅದನ್ನು ಭಾರತದಿಂದ ಪ್ರತ್ಯೇಕಗೊಳಿಸಿ, ನೇರ ಆಳ್ವಿಕೆಗೆ ತೆಗೆದುಕೊಂಡು, 'ಏಡನ್ ಕಾಲೊನಿ' ಎಂದು ಹೆಸರಿಸಿದರು. 1951ರ ತನಕವೂ ಇಲ್ಲಿ

ಚಲಾವಣೆಯಾಗುತ್ತಿದ್ದುದು ರುಪಾಯಿಗಳು; ನಂತರ 1963ರ ತನಕ ಪೂರ್ವ ಆಫ್ರಿಕನ್ ಶಿಲ್ಲಿಂಗ್ ಚಲಾವಣೆಯಲ್ಲಿತ್ತು. ಈಗ ಯೆಮೆನ್ ದೇಶದೊಂದಿಗೆ ಏಡನ್ ಸೇರಿ ಹೋಗಿದೆ. 1930ರ ದಶಕದಲ್ಲಿ ಏಡನ್‌ನಲ್ಲಿ ಸುಮಾರು 7,000 ಭಾರತೀಯರಿದ್ದರು. ಆಗ ಒಟ್ಟು ಜನಸಂಖ್ಯೆ 30,000. ಬ್ರಿಟಿಷರ ಬಲವಾದ ಸೇನಾ ತುಕಡಿ ಅಲ್ಲಿತ್ತು. ಇಲ್ಲಿದ್ದ ಜೈಲಿಗೆ ನಮ್ಮ ದೇಶದ ಸ್ವಾತಂತ್ರ್ಯ ಹೋರಾಟಗಾರ ವಾಸುದೇವ ಬಲವಂತ ಫಡ್ಕೆ ಅವರನ್ನು 1880ರಲ್ಲಿ ಸಾಗಹಾಕಲಾಗಿತ್ತು. ಹತ್ತಿರದ ಅಂಡಮಾನ್‌ಗೆ ಕಳಿಸಿದರೆ ತಪ್ಪಿಸಿಕೊಳ್ಳುತ್ತಾರೆಂಬ ಗುಮಾನಿ ಇದ್ದಿರಬಹುದು. ಆದರೆ ಫಡ್ಕೆ ಧೈರ್ಯಶಾಲಿ. ಏಡನ್ ಜೈಲಿನಿಂದಲೇ ತಪ್ಪಿಸಿಕೊಂಡರು. ಪುನಃ ಸೆರೆಯಾದರು. 1883ರಲ್ಲಿ ಜೈಲಿನಲ್ಲೇ ಮಡಿದರು.

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ
ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ
ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine
@gmail.com

ಸ್ನೇಹಜ್ಯೋತಿ ಅಂಧರ ಶಾಲೆಗೆ ಪ್ರತಿ ದಿನ ಐದು ಸಾವಿರ ರು. ಸಹಾಯ ಮಾಡುತ್ತಿರುವ ಸ್ನೇಹಕೂಟ

ಹಸಿದ ಅಂಧ ಮಕ್ಕಳ ಹೊಟ್ಟೆ ತಣ್ಣಗಾಗಿಸುವ ವಾಟ್ಸಪ್ ಗ್ರೂಪ್

• **ವಿನಾಯಕ ಮಠಪತಿ** ಬೆಳಗಾವಿ

ಜನ್ಮದಿನ, ಮದುವೆ ವಾರ್ಷಿಕೋತ್ಸವ ಬಂದಾಗಲೆಲ್ಲಾ ವಿಜೃಂಭಣೆ ಕಾರ್ಯಕ್ರಮ ಮಾಡಿ ಲಕ್ಷಾಂತರ ರುಪಾಯಿ ಖರ್ಚು ಮಾಡುವುದು ಇತ್ತೀಚಿನ ದಿನಗಳಲ್ಲಿ ಒಂದು ಫ್ಯಾಷನ್ ಆಗಿದೆ. ಅಂತಹ ಕಾರ್ಯಕ್ರಮಗಳನ್ನೇ ನೆಪವಾಗಿಸಿಕೊಂಡು ಮೋಜು ಮಸ್ತಿ ಮಾಡಿ ನೀರಿನಂತೆ ದುಡ್ಡು ಸುರಿಯುವ ಜನರಿಗೇನು ಕಡಿಮೆ ಇಲ್ಲ. ಆದರೆ ಇಲ್ಲೊಂದು ಯುವಕರ ಗುಂಪು ಜನ್ಮದಿನ, ಮದುವೆ ವಾರ್ಷಿಕೋತ್ಸವದಂತಹ ಕಾರ್ಯಕ್ರಮಗಳಿಗೆ ಖರ್ಚಾಗುವ ಅಲ್ಪ ಹಣವನ್ನು ಅನಾಥ ಮಕ್ಕಳಿಗಾಗಿ ಮೀಸಲಾಗಿಡುವ ಮೂಲಕ ಅರ್ಥಪೂರ್ಣವಾಗಿ ಆಚರಿಸುವ ಉದ್ದೇಶ ಹೊಂದಿದ್ದಾರೆ. ಹೌದು..! ಬೆಳಗಾವಿ ಜಿಲ್ಲೆಯ ಅಥಣಿಯಲ್ಲಿರುವ ಸ್ನೇಹಜ್ಯೋತಿ ಅಂಧ ಮತ್ತು ಅನಾಥ ಮಕ್ಕಳ ಶಾಲೆಯ ವಿದ್ಯಾರ್ಥಿಗಳ ಊಟ, ಜೀವನ ಕೌಶಲ ಕಲಿಕೆ, ಕಂಪ್ಯೂಟರ್ ಶಿಕ್ಷಣ ಮತ್ತು ಓದಿನ ಖರ್ಚಿಗಾಗಿ 365 ಸದಸ್ಯರ ವಾಟ್ಸಾಪ್ ಗ್ರೂಪ್ ಒಂದನ್ನು ರಚಿಸಿಕೊಂಡು ಪ್ರತಿದಿನ ಒಬ್ಬೊಬ್ಬರು ಕನಿಷ್ಠ ಐದು ಸಾವಿರ ರುಪಾಯಿಗಳನ್ನು ಈ ಮಕ್ಕಳಿಗಾಗಿ ಮೀಸಲಿಡುತ್ತಿದ್ದಾರೆ. ಆ ಮೂಲಕ ಈ ಸಂಸ್ಥೆಗೆ ಆಸರೆ ಬಯಸಿ ಬಂದಿರುವ ಅದೆಷ್ಟೋ ಮಕ್ಕಳ ಆರೋಗ್ಯ, ಶೈಕ್ಷಣಿಕ ಜೀವನಕ್ಕೂ ಭದ್ರ ಬುನಾದಿ ಹಾಕುತ್ತಿದ್ದಾರೆ. ಅಂಧರ ಶಾಲೆಗೆ ಪ್ರತಿದಿನ ಐದು ಸಾವಿರ ರು. ಸಹಾಯ: ಇನ್ನೊಂದು ವಿಶೇಷವೆಂದರೆ ಈ ವಾಟ್ಸಾಪ್ ಗುಂಪಿನ ಸದಸ್ಯರು ಯಾರೊಬ್ಬರೂ ತಮ್ಮ ಖಾತೆಗಳಿಗೆ ಹಣ ಜಮೆ ಮಾಡಿಕೊಳ್ಳುವುದಿಲ್ಲ. ನೇರವಾಗಿ ಆಶ್ರಮದ ಬ್ಯಾಂಕ್ ಖಾತೆಗೆ ಹಣ ಜಮೆ ಮಾಡುವ ಮೂಲಕ ಪಾರದರ್ಶಕತೆ ಕಾಯ್ದುಕೊಂಡು ಬರುತ್ತಿದ್ದಾರೆ. ಈ ಸ್ನೇಹ ಬಳಗ ಕೊಟ್ಟ ಹಣದಿಂದ ಊಟ ಮಾತ್ರವಲ್ಲದೇ ಕಂಪ್ಯೂಟರ್, ಬ್ರೈಲ್ ಶಿಕ್ಷಣಕ್ಕೆ ಬೇಕಾಗುವ ಸಾಮಗ್ರಿ, ಮಕ್ಕಳ ಆರೋಗ್ಯ ಕಾಳಜಿ, ಪ್ರತಿ ತಿಂಗಳು ಔಷಧಿ ಖರೀದಿಗೂ ಬಳಸಿಕೊಳ್ಳಲು ಇಚ್ಛಿಸಿರುವುದು ಇನ್ನೊಂದು ವಿಶೇಷ. 1998ರಲ್ಲಿ ಆರಂಭಗೊಂಡ ಈ ಅಂಧರ ಶಾಲೆಯಲ್ಲಿ ಇಲ್ಲಿಯವರೆಗೆ ಸುಮಾರು 500ಕ್ಕೂ ಹೆಚ್ಚು ಅಂಧ ಮಕ್ಕಳು ವಿದ್ಯೆ ಪಡೆದಿದ್ದಾರೆ. ಸದ್ಯ 40 ಮಕ್ಕಳು ಇಲ್ಲಿ ವಿದ್ಯೆ ಪಡೆಯುತ್ತಿದ್ದು, ಈ ಮಕ್ಕಳಿಗೆ ವಿದ್ಯೆ ನೀಡುವುದರೊಂದಿಗೆ ವಸತಿ, ಬಟ್ಟೆ,ಆಹಾರ ಸೇರಿದಂತೆ ಎಲ್ಲವನ್ನು ವ್ಯವಸ್ಥೆ ಮಾಡಿಕೊಳ್ಳಲು ಸಹೃದಯರ ಸಹಕಾರವೇ ಒಂದು ಶಕ್ತಿ.

'ವಿಶ್ವದಲ್ಲಿ ಅಂದಾಜು 45 ಮಿಲಿಯನ್ ಜನರು ದೃಷ್ಟಿ ವಿಕಲಚೇತನರಿದ್ದಾರೆ ಮತ್ತು ಅವರಲ್ಲಿ ಮೂವರಲ್ಲಿ ಒಬ್ಬರು ಭಾರತದಲ್ಲಿದ್ದಾರೆ. ಭಾರತದಲ್ಲಿ ಅಂದಾಜು 15 ಮಿಲಿಯನ್ ಜನರು ಅಂಧರು ಇದ್ದಾರೆ. ಈ ಜನರಿಗೆ ಮೂಲಭೂತ ಶಿಕ್ಷಣದ ಏಕೈಕ ಸಾಧನವೆಂದರೆ ಬ್ರೈಲ್. ಸ್ಥಳೀಯ ಭಾಷೆಗಳಲ್ಲಿ ಬ್ರೈಲ್ ಪುಸ್ತಕಗಳ ಲಭ್ಯತೆ ಅತ್ಯಂತ ಸೀಮಿತವಾಗಿದೆ ಮತ್ತು ಗ್ರಾಮೀಣ ಬಡವರಿಗೆ ಇದು ಅಸ್ತಿತ್ವದಲ್ಲಿಲ್ಲ. ಶಾಲಾ ಪಠ್ಯ ಪುಸ್ತಕಗಳ ಹೊರತಾಗಿ ಅಂಧ ಮಕ್ಕಳು ಓದುವ ವಸ್ತುಗಳಿಂದ ಸಂಪೂರ್ಣವಾಗಿ ವಂಚಿತರಾಗಿದ್ದಾರೆ. ಅಂತಹ ಮಕ್ಕಳು ಹೊಟ್ಟೆ ತುಂಬ ತಿಂದು ನಮ್ಮ ನಿಮ್ಮಂತೆಯೇ ಓದಿ ಸಮಾಜದಲ್ಲಿ ಮುಖ್ಯ ವಾಹಿನಿಗೆ ಬರಬೇಕು' ಎನ್ನುತ್ತಾರೆ ಈ ಗುಂಪಿನ ಸದಸ್ಯ, ಅರಣ್ಯ ಇಲಾಖೆಯ ಪ್ರಥಮ ದರ್ಜೆ ಸಹಾಯಕ ಪ್ರವೀಣ್ ಪಡನಾಡ.

'ಇದು ಕ್ರಿಶ್ಚಿಯನ್ ಧರ್ಮದಿಂದ ನಡೆಸುವ ಸಂಸ್ಥೆಯಾಗಿದ್ದು, ಇಲ್ಲಿ ಧರ್ಮ ಪರಿವರ್ತನೆಯಾಗುತ್ತದೆ ಎಂದು ಅನೇಕರಿಗೆ ಯೋಚನೆ ಬಂದಿರಬಹುದು. ಆದರೆ 1998ರಿಂದ ಈ ಶಾಲೆಯನ್ನು ಗಮನಿಸುತ್ತಿದ್ದು, ಈವರೆಗೂ ಯಾವುದೇ ಒಬ್ಬ ವಿದ್ಯಾರ್ಥಿಯೂ ಧರ್ಮ ಪರಿವರ್ತನೆಗೆ ಒಳಗಾಗಿಲ್ಲ. ಶಾಲೆಗೆ ಸೇರುವಾಗ ಮಗು ಯಾವ ಧರ್ಮದಲ್ಲಿ ಇರುತ್ತದೆಯೋ ಅಲ್ಲಿಂದ ಹೊರಹೋಗುವಾಗಲೂ ಅದೇ ಧರ್ಮದಲ್ಲಿ ಇರುತ್ತದೆ. ಮುಂದೆಯೂ ಆ ಧರ್ಮದಲ್ಲೇ ಬದುಕು ಕಟ್ಟಿಕೊಳ್ಳುತ್ತಾನೆ. ಹೀಗಾಗಿ ಆ ಕುರಿತು ಯಾವುದೇ ಗೊಂದಲ ಬೇಡ' ಎನ್ನುತ್ತಾರೆ ವಾಟ್ಸಾಪ್ ಗುಂಪಿನ ಮತ್ತೊಬ್ಬ ಸದಸ್ಯ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸಚಿನ್ ಪಾಟೀಲ್.ಈಗಾಗಲೇ ಈ ವಾಟ್ಸಾಪ್ ಗುಂಪಿಗೆ 123 ಸದಸ್ಯರು ಸೇರಿಕೊಂಡಿದ್ದು, 365 ಸದಸ್ಯರ ಸೇರಿಸಿಕೊಳ್ಳುವ ಗುರಿ ಹೊಂದಿದ್ದಾರೆ. ಈ ಗುಂಪಿಗೆ ಸೇರಬಯಸುವವರು 8971351001, 8971385068 ಸಂಪರ್ಕಿಸಬಹುದು.

ಪ್ರವೀಣ್ ಪಡನಾಡ ಮತ್ತು ಅವರ ಸ್ನೇಹಬಳಗದ ವತಿಯಿಂದ '365 ದಿನ; ಅಂಧ ಮಕ್ಕಳಿಗೆ ಭೋಜನ' ಎಂಬ ಮಹತ್ತರ ಕಾರ್ಯವನ್ನು ಹಮ್ಮಿಕೊಳ್ಳುವ ಮೂಲಕ ಸ್ನೇಹಜ್ಯೋತಿ ಶಾಲೆಯ ಅಂಧ ಮಕ್ಕಳ ಹಸಿವನ್ನು ಶಾಶ್ವತವಾಗಿ ಪರಿಹರಿಸುವ ಮಹತ್ತರ ಕಾರ್ಯ ಹಮ್ಮಿಕೊಂಡಿರುವುದು ಸಂತೋಷದ ಸಂಗತಿ. ಈ ಕಾರ್ಯಕ್ಕೆ ಯಾವುದೇ ಅಡ್ಡಿ, ಆತಂಕ ಬರದೇ ಯಶಸ್ವಿಯಾಗಿ ನಡೆಯಲಿ. ಆ ಮೂಲಕ ಅಂಧ ಮಕ್ಕಳ ಬಾಳಿಗೆ ಬೆಳಕಾಗಲಿ.

– **ಸುನೀಲ್ ಸಿ.ಪಿ** ಸಂಸ್ಥೆಯ ನಿರ್ದೇಶಕರು

ಕೈಲಾದ ಅಳಿಲು ಸೇವೆ

'ಹಸಿವು ಎಂಬುದು ಯಾವುದೇ ಧರ್ಮಕ್ಕೆ ಸಂಬಂಧಿಸಿದ್ದಲ್ಲ. ಅಂಧತ್ವ, ಅಂಗವಿಕಲತೆ ಯಾವುದೇ ಜಾತಿಗೆ ಸಂಬಂಧಿಸಿದಲ್ಲ. ಮಾನವಿಯತೆ ಎಂಬುದು ಈ ದೇಶದ ಸಂಸ್ಕೃತಿ. ನಮ್ಮ ತಾತ, ಮುತ್ತಾತ ಕಾಲದಿಂದಲೂ ಈ ಸಮಾಜದಲ್ಲಿ ಬಡವರಿಗೆ, ಶೋಷಿತರಿಗೆ ಆರ್ಥಿಕವಾಗಿ ಸಹಾಯ ಮಾಡುತ್ತಾ ಬಂದಿದೆ. ನನ್ನ ತಂದೆ, ತಾಯಿ ಮತ್ತು ಹಿರಿಯರ ಆಶೀರ್ವಾದಿಂದ ಇಂತಹ ಸೇವೆ ಮಾಡಬೇಕು ಎಂಬ ಪರಿಕಲ್ಪನೆ ಬಂದಿದೆ. ದೀಪದಿಂದ ದೀಪವ ಹಚ್ಚಬೇಕು ಮಾನವ ಎನ್ನುವ ಪರಿಕಲ್ಪನೆಯೊಂದಿಗೆ ಈ ಅಂಧ ಮಕ್ಕಳಿಗೆ ಕೈಲಾದಷ್ಟು ಸಹಾಯ ಮಾಡಬೇಕೆಂದು ಸ್ನೇಹಿತರೆಲ್ಲ ಸೇರಿ ನಿರ್ಧಾರ ಮಾಡಿದ್ದೇವೆ. ಇದು ನಮ್ಮ ಕೈಲಾದ ಅಳಿಲು ಸೇವೆಯಷ್ಟೇ. ಪ್ರತಿ ತಾಲೂಕಿಗೆ ಈ ರೀತಿ ಮಾನವೀಯ ಹೃದಯ ಹೊಂದಿದ ಸ್ನೇಹಿತರು ಸೇರಿ ಗ್ರೂಪ್ ಮಾಡಿಕೊಂಡು ನೇರವಾಗಿ ಆಶ್ರಮಕ್ಕೆ ಕೊಟ್ಟು, ಅದರ ಸದುಪಯೋಗದ ಬಗ್ಗೆ ಗ್ರೂಪ್‌ಗೆ ಮಾಹಿತಿಯನ್ನು ಹಂಚಿದರೆ ಅನಾಥ ಮಕ್ಕಳ ಹಸಿವಿಗೆ ಶಾಶ್ವತ ಪರಿಹಾರವಾಗುತ್ತದೆ' ಎನ್ನುತ್ತಾರೆ ವಾಟ್ಸಾಪ್ ಗುಂಪಿನ ಪರಿಕಲ್ಪನೆಯ ರೂವಾರಿ ಅಥಣಿ ತಾಲೂಕಿನ ಸಂಕೋನಟ್ಟಿ ಗ್ರಾಮದ ಪ್ರವೀಣ್ ಸುಭಾಷ್ ಪಡನಾಡ.

ನಗೆಯುಕ್ಕಿಸಿದ ವ್ಯಂಗ್ಯ ಚಿತ್ರಗಳು

• **ಪ್ರಶಾಂತ ನಾಯಕ (ಭಾರತ)**

ಧಾರವಾಡದಲ್ಲಿ ಇತ್ತೀಚೆಗೆ ರಾಜ್ಯಮಟ್ಟದ ವ್ಯಂಗ್ಯಚಿತ್ರ ಪ್ರದರ್ಶನ ನಡೆಯಿತು. ಇದೇ ಸಮಯದಲ್ಲಿ ಶ್ರೀನಿವಾಸ್ ಹುದ್ದಾರ್ ಅವರ 'ಹಾಸ್ಯ ಪಯಣ' ಪುಸ್ತಕವೂ ಬಿಡುಗಡೆಯಾಗಿತ್ತು. ಮನದಲ್ಲಿ ಹಾಸ್ಯವನ್ನು ಉಕ್ಕಿಸುವ ಹಲವು ವ್ಯಂಗ್ಯ ಚಿತ್ರಗಳನ್ನು ನೋಡಲು, ಜನರು ಕಿಕ್ಕಿರಿದು ಸೇರಿದ್ದರು. ಪುಟ್ಟ ಬಾಲಕ ಕುಮಾರ ಪ್ರಥಮ ನಾಯಕ ರಚಿಸಿದ ವ್ಯಂಗ್ಯಚಿತ್ರ ಎಲ್ಲರ ಗಮನ ಸೆಳೆದಿತ್ತು.

ನಾಡಿನ ವ್ಯಂಗ್ಯಚಿತ್ರಕಾರರಾದ ಬದರಿ ಪುರೋಹಿತ್, ಯು.ರಮೇಶ, ಮಧುಕರ ಯಕ್ಕೇರಿ, ವಿಜಯಾನಂದ ಕಾಲವಾಡ ಇನ್ನಿತರರು ಪಾಲ್ಗೊಂಡಿದ್ದರು. ರಾಜ್ಯದ ವ್ಯಂಗ್ಯಚಿತ್ರಕಾರರಾದ ಸುಬ್ರಹ್ಮಣ್ಯ ಎಂಎನ್, ನಾಗನಾಥ ಜಿಎಸ್, ರಘುಪತಿ ಶೃಂಗೇರಿ, ವಿಆರ್‌ಸಿ ಶೇಖರ, ಅಶೋಕ ಜೋಶಿ, ಪ್ರಶಾಂತ ಭಾರತ, ಶರಣು ಚಟ್ಟಿ, ಆರ್‌ಜಿ ಕುಲಕರ್ಣಿ, ನಂಜುಂಡ ಸ್ವಾಮಿ, ರಾಮಚಂದ್ರ ನಾಡಿಗ್, ರಂಗನಾಥ ಸಿದ್ಧಾಪುರ, ವಿಜಯಾನಂದ ಕಾಲವಾಡ, ಮಧುಕರ ಯಕ್ಕೇರಿ, ಈರಣ್ಣ ಬೆಂಗಾಲಿ, ಜಿಎಂ ಬೊಮ್ಮನಳ್ಳಿ, ಬಾಲು ಪಟಗಾರ, ಗೋಪಿ ಹಿರೇಬೆಟ್ಟು, ರಾಮಚಂದ್ರ ಕೊಪ್ಪಲು, ಅರುಣ ಕುಮಾರ, ಬದರಿನಾರಾಯಣ ಪುರೋಹಿತ, ದೇವಿದಾಸ ಸುವರ್ಣ, ಯು. ರಮೇಶ, ಶ್ರೀಕಾಂತ ಬಿ.ಎನ್, ಕೊರಲಕುಂಟೆ ದಯಾನಂದ, ರಾಜೇಶ ಮಂಜುಗುಣಿ, ಅನಿಲ ಕಾಮತ್, ಪ್ರಶಾಂತ ಶೇಟ್, ಎಸ್.ಎಲ್.ವರಲಕ್ಷ್ಮೀ, ಸಾವಿತ್ರಮ ಓಂಕಾರ್, ಕುಮಾರ ಪ್ರಥಮ ನಾಯಕ ಇವರ ವ್ಯಂಗ್ಯಚಿತ್ರಗಳು ಪ್ರದರ್ಶನ ಕಂಡವು.









ಸ್ವತಃ ಇತಿಹಾಸ ಸೃಷ್ಟಿಸಿದ ಇತಿಹಾಸಕಾರ ಬಾಬು ಕೃಷ್ಣಮೂರ್ತಿ

• **ಮಂಜುನಾಥ ಅಜ್ಜಂಪುರ**



ಬಹುಮುಖೀ ಪ್ರತಿಭೆಯ ಬಾಬು ಕೃಷ್ಣಮೂರ್ತಿ ಅವರ ಸಾಹಿತ್ಯ ಸಾಧನೆಯು ಅವರ ಇನ್ನಿತರ ಸಾಧನೆಗಳಿಗಿಂತ ಮಿಗಿಲಾದುದು. ತಾಯಿ ಭಾರತಿಯ ಮುಕ್ತಿಗಾಗಿ ರಕ್ತ-ತರ್ಪಣ ಮಾಡಿದ ನೂರಾರು ಕ್ರಾಂತಿಕಾರಿಗಳ ಬಗೆಗೆ ಕನ್ನಡದಲ್ಲಿ ಅವರಷ್ಟು ಬರೆದವರು ಬೇರಾರೂ ಇಲ್ಲ.

ಅವರ ಸಾಧನೆಗೆ ಅನೇಕ ಪ್ರಶಸ್ತಿಗಳು ಅವರನ್ನು ಅರಸಿ ಬಂದಿವೆ. ಆದರೆ, ಅವರ ಸಾಹಿತ್ಯ ನಿರ್ಮಿತಿ ನೋಡಿದರೆ ಓದಿದರೆ, ಅವರ ಸಾಹಿತ್ಯವೇ ಕನ್ನಡಕ್ಕೆ, ಕನ್ನಡಿಗರಿಗೆ ಅವರೇ ನೀಡಿದ ಪ್ರಶಸ್ತಿ ಎನಿಸುತ್ತದೆ. ನಿಜ, ಅವರೇ ಒಂದು ಪ್ರಶಸ್ತಿ. ಮೂಲ ದಾಖಲೆಗಳ ಸಂಗ್ರಹ ಮತ್ತು ಅಧ್ಯಯನ ಅವರ ಶಕ್ತಿ. ಕಠಿಣಾತಿಕಠಿಣ ಪರಿಶ್ರಮ ಅವರ ಕೃತಿಗಳ ಹಿಂದಿನ ನಿಜ-ಸಂಪನ್ಮೂಲ.

ಕೆಲವು ಗ್ರಂಥಗಳೇ ಹಾಗೆ. ಜೀವನಗತಿಯನ್ನೇ ಬದಲಿಸಿಬಿಡುತ್ತವೆ. ಓದುವಾಗ, ಓದಿ ಮುಗಿಸಿದಾಗ ಹೊಟ್ಟೆ ಕಲಕಿದಂತಾಗಿಬಿಡುತ್ತದೆ. ಹೃದಯ ಹಿಂಡಿದಂತಾಗಿಬಿಡುತ್ತದೆ. ಐವತ್ತು ವರ್ಷಗಳ ಹಿಂದೆ ಲೋಕಾರ್ಪಣೆಗೊಂಡ 'ಅಜೇಯ' ಕೃತಿಯಿಂದ ಚಂದ್ರಶೇಖರ ಆಜಾದರು ಕನ್ನಡಿಗರ ಮನೆಮನೆಯ ಮಾತಾಗಿಬಿಟ್ಟರು.

1950-60ರ ದಶಕಗಳಲ್ಲಿ (ಅನಂತರವೂ) ಸ್ವಾತಂತ್ರ್ಯಕ್ಕಾಗಿ ರಕ್ತಧಾರೆಯೆರೆದ ಕ್ರಾಂತಿಕಾರಿಗಳ ಹೆಸರೇ ಎಲ್ಲೂ ಪ್ರಸ್ತಾಪವಾಗುತ್ತಿರಲಿಲ್ಲ. ಭಗತ್ ಸಿಂಗ್, ರಾಜಗುರು, ಸುಖದೇವ್ ಬಗೆಗೆ ಇದ್ದುದೂ ಕೆಲವು ಸಾಲುಗಳು ಮಾತ್ರವೇ. ಉಳಿದ ಸಹವರ್ತಿಗಳ ಪಟ್ಟಿಯಿರಲಿ, ಆಜಾದ್ ಚಂದ್ರಶೇಖರ್ ಅವರ ಹೆಸರೇ ಕೇಳಿರಲಿಲ್ಲ. ಅಂತಹ ಅಂಧಕಾರದ ಕಾಲಾವಧಿಯಲ್ಲಿ ಪ್ರಕಟವಾದ 'ಅಜೇಯ' ನಿಜಕ್ಕೂ ಒಂದು ಅದ್ಭುತ. ಕನ್ನಡ ಸಾಹಿತ್ಯಕ್ಕೇ ಒಂದು ತಿರುವು ನೀಡಿದ, ನಿಜ-ಇತಿಹಾಸಾಧಾರಿತ ಕಥನಗಳನ್ನು ಕನ್ನಡದ ಓದುಗರಿಗೆ ಪರಿಚಯಿಸಿದ ಮಹಾನ್ ಕೃತಿ, ಈ ಅಜೇಯ.

ಅಂದಿನ ಕಾಲಘಟ್ಟವೇ ವಿಚಿತ್ರ. ರಾಷ್ಟ್ರೀಯ ವಿಚಾರಧಾರೆಯ ಬಗೆಗೆ, ಕ್ರಾಂತಿಕಾರಿಗಳ ಸ್ವಾತಂತ್ರ್ಯ ಹೋರಾಟದ ಬಗೆಗೆ ಮಾಧ್ಯಮಗಳಲ್ಲಿ ಏನೂ ಬರುತ್ತಿರಲಿಲ್ಲ. ಆಕಾಶವಾಣಿ ಮತ್ತು ಪ್ರಮುಖ ಪತ್ರಿಕೆಗಳು ನೆಹರೂ - ಇಂದಿರಾ ಅವರ ಬಗೆಗೆ, ಅವರ ಪಕ್ಷದ ಬಗೆಗೆ ಮಾತ್ರವೇ ಒದರುತ್ತಿದ್ದವು. ನಮಗಾಗ ಕ್ರಾಂತಿಕಾರಿಗಳ ಬಗೆಗೆ ಮಾಹಿತಿ ಸಿಕ್ಕುತ್ತಿದ್ದುದು ವಿಕ್ರಮ, ಉತ್ಥಾನ ಪತ್ರಿಕೆಗಳಿಂದ, ಇಲ್ಲವೇ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರಿಂದ. ಬಾಬರ್, ಅಕ್ಬರ್, ಷಹಜಹಾನ್, ಔರಂಗಜೇಬ್ ಮೊದಲಾದವರ ಬಗೆಗೆ ತಿಳಿದಿತ್ತೇ ಹೊರತು, ನಮಗೆ ಮಹಾರಾಣಾ ಪ್ರತಾಪ ಸಿಂಹ, ಶಿವಾಜಿ ಮಹಾರಾಜರ ಬಗೆಗೆ ಸಹ ಹೆಚ್ಚಿನ ಸಂಗತಿಗಳೇ ಗೊತ್ತಿರಲಿಲ್ಲ.

ಅಜೇಯ ಕೃತಿ ರಚನೆಯು ಬಾಬು ಅವರ ಆರು ವರ್ಷಗಳ ತಪಸ್ಸು ಮತ್ತು ಪ್ರವಾಸಗಳ ಪ್ರತಿಫಲ. ಇಂದಿನಂತೆ ಅಂತರಜಾಲ, ಸನಿಹವಾಣಿ, ಸಾಮಾಜಿಕ ಮಾಧ್ಯಮಗಳು, ಅಷ್ಟೇಕೆ, ಒಂದು ಸ್ಥಿರ ದೂರವಾಣಿ ಸಹ ಕೈಗೆಟುಕದಂತಹ ದಿನಗಳು ಅವು. ಆಗ ಕ್ಯಾಮೆರಾಗಳು ದೇವದುರ್ಲಭವಾಗಿದ್ದವು. ಕೆಲವು ತಾಣಗಳ ಛಾಯಾಚಿತ್ರಗಳು ಲಭ್ಯವಾಗದೆ, ಸ್ವತಃ ಬಾಬು ರೇಖಾಚಿತ್ರ ರಚಿಸಿ ಗ್ರಂಥ ನಿರ್ಮಾಣ ಮಾಡಿದರು.

ಸುವರ್ಣ ಸಂಭ್ರಮ

ಬಾಬು ಕೃಷ್ಣಮೂರ್ತಿ ಅವರ ಈ 'ಅಜೇಯ' ಮಹತ್-ಕೃತಿಗೆ ಇದೀಗ ಸುವರ್ಣ ಸಂಭ್ರಮ. ಆ ಕಾಲಘಟ್ಟದಲ್ಲಿ ಕರ್ನಾಟಕದಾದ್ಯಂತ ಸಂಚಲನ, ಆಂದೋಲನ ಉಂಟು ಮಾಡಿದ ದಾಖಲೆಯ ಕೃತಿಯಿದು. ಅನಂತರ ಬಿಡಿ, ಅದು ದೇಶದ ಮನೆಮಾತಾಯಿತು. ಕೆಲವು ಗ್ರಂಥಗಳೇ ಹಾಗೆ. ಜೀವನಗತಿಯನ್ನೇ ಬದಲಿಸಿಬಿಡುತ್ತವೆ. ಓದುವಾಗ, ಓದಿ ಮುಗಿಸಿದಾಗ ಹೊಟ್ಟೆ ಕಲಕಿದಂತಾಗಿಬಿಡುತ್ತದೆ. ಹೃದಯ ಹಿಂಡಿದಂತಾಗಿಬಿಡುತ್ತದೆ. ಅಜೇಯ ಕೃತಿಯಿಂದ ಚಂದ್ರಶೇಖರ ಆಜಾದರು ಕನ್ನಡಿಗರ ಮನೆಮನೆಯ ಮಾತಾಗಿಬಿಟ್ಟರು. ಅಪರಿಚಿತರಾಗಿದ್ದ ಕ್ರಾಂತಿಕಾರಿಗಳು ಸುಪರಿಚಿತರಾಗಿಬಿಟ್ಟರು.



ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಕುತಂತ್ರದಿಂದಾಗಿ, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ನಿಜವಾದ ಹೋರಾಟಗಾರರ ಪರಿಚಯವೇ ಯಾರಿಗೂ ಇರಲಿಲ್ಲ. ಅಹಿಂಸೆಯ ಹೆಸರಿನಲ್ಲಿ ಬ್ರಿಟಿಷರಿಗೆ ಪ್ರೀತಿಪಾತ್ರರಾಗಿದ್ದವರ ವಿನಃ ಬೇರೆ ಯಾರ ಹೆಸರುಗಳೂ ನಮ್ಮ ಇತಿಹಾಸ ಪಠ್ಯಪುಸ್ತಕಗಳಲ್ಲಿ ಬರಲಿಲ್ಲ; ಬರಲೇ ಇಲ್ಲ. ಭಾರತದ ದುರಂತವೆಂದರೆ, ಇಂದಿಗೂ ಇತಿಹಾಸ ಪಠ್ಯದಲ್ಲಿ ಆಗಲೇಬೇಕಾದ ಬದಲಾವಣೆಗಳು ಆಗಿಯೇ ಇಲ್ಲ.

1970ರ ದಶಕದ ಆ ಕಾಲದಲ್ಲಿ ಕ್ರಾಂತಿಕಾರಿಗಳ ಬಗೆಗಿನ ಇಂತಹ ಸತ್ಯಕಥಾನಕಗಳನ್ನೇ ಜನರಿಂದ ಮುಚ್ಚಿಡಲಾಗಿತ್ತು. ಬಾಬು ಕೃಷ್ಣಮೂರ್ತಿ ಅವರು ಅನೇಕ ವರ್ಷಗಳ ಕಾಲ ಸಂಶೋಧನಾತ್ಮಕ ಅಧ್ಯಯನ ನಡೆಸಿದ್ದರು. ಘಟನಾವಳಿ ನಡೆದ ಅನೇಕ ತಾಣಗಳಿಗೇ ಹೋಗಿ ಮಾಹಿತಿಯನ್ನು ಮತ್ತು ಕೆಲವು ಛಾಯಾಚಿತ್ರಗಳನ್ನು ಸಂಗ್ರಹಿಸಿದ್ದರು.

ಕ್ರಾಂತಿಕಾರಿ, ಕ್ರಾಂತಿಯ ಸೂತ್ರಧಾರಿ ಚಂದ್ರಶೇಖರ್ ಆಜಾದ್ ಅವರನ್ನು ಕೇಂದ್ರವಾಗಿಟ್ಟುಕೊಂಡು ಬರೆದ 'ಅಜೇಯ' ಒಂದು ಅನನ್ಯ ಕೃತಿ. ಆ ಕಾಲಕ್ಕೆ ಭಗತ್ ಸಿಂಗ್, ಆಜಾದ್ ಚಂದ್ರಶೇಖರ್, ಭಗವಾನ್ ದಾಸ್ ಮಾಹೋರ್, ಸದಾಶಿವ ರಾವ್ ಮಲಕಾಪುರಕರ್, ಭಕ್ಷಿದಾದಾ ಎಂದೇ ಖ್ಯಾತರಾಗಿದ್ದ ಶಚೀಂದ್ರನಾಥ ಭಕ್ಷಿ, ಮನ್ಮಥನಾಥ ಗುಪ್ತ, ಪಂಡಿತ್ ರಾಮಪ್ರಸಾದ ಬಿಸ್ಮಿಲ್, ಅಶ್ಫಾಕ್ ಉಲ್ಲಾ ಖಾನ್, ರಾಜಗುರು, ಸುಖದೇವ್, ಬಟುಕೇಶ್ವರ ದತ್ ಮೊದಲಾದ ಕ್ರಾಂತಿಕಾರಿಗಳ ಬಗೆಗೆ ಬಾಬು ಅವರು ಬರೆದುದನ್ನು ಓದುವಾಗ ರೋಮಾಂಚನವಾಗುತ್ತಿತ್ತು.

ಅರ್ಧ ಶತಮಾನದ ಹಿಂದೆ ನಡೆದ 'ಅಜೇಯ' ಕೃತಿಯ ಲೋಕಾರ್ಪಣೆ ಕಾರ್ಯಕ್ರಮವೂ ಐತಿಹಾಸಿಕವೇ ಆಗಿಹೋಯಿತು. ಆಜಾದರ ಸಹವರ್ತಿಗಳಾದ ಶಚೀಂದ್ರನಾಥ ಭಕ್ಷಿ, ಸದಾಶಿವ ಮಲಕಾಪುರಕರ್, ಭಗವಾನ್ ದಾಸ್ ಮಾಹೋರ್ ಮೊದಲಾದವರು ಈ ಕೃತಿಯ ಲೋಕಾರ್ಪಣೆಗೆ ಬೆಂಗಳೂರಿಗೆ ಬಂದುದೇ ಒಂದು ಅಪೂರ್ವ ಕ್ಷಣ. ಸ್ವತಃ ಬಾಲ-ಕ್ರಾಂತಿಕಾರಿಣಿ ಡಾ. ಸುನೀತಿ ಚೌಧರಿ ಘೋಷ್ ಅವರು ಲೋಕಾರ್ಪಣೆ ಮಾಡಿದುದೂ ಚಾರಿತ್ರಿಕವೇ.

ಅದಮ್ಯ

ಭಾರತದ ಇತಿಹಾಸದಲ್ಲಿ ವಾಸುದೇವ ಬಲವಂತ ಫಡಕೆಯವರ ಜೀವನವೇ ಒಂದು ರೋಮಾಂಚಕ ಅಧ್ಯಾಯ. 'ಅದಮ್ಯ' ಹೆಸರೇ ತುಂಬ ಸೂಕ್ತವಾಗಿದೆ, ಪ್ರಾತಿನಿಧಿಕವಾಗಿದೆ. 'ಅದಮ್ಯ' ಕೃತಿಯು ಕನ್ನಡಿಗರ ಕೈಸೇರಿ ಇದೀಗ ನಾಲ್ಕು ದಶಕಗಳು. ಇದು ಸಹ ಬಾಬು ಅವರ ಅಸೀಮ - ಅನನ್ಯ ಸೃಷ್ಟಿಗಳಲ್ಲೊಂದು.

19ನೆಯ ಶತಮಾನವೇ ಭಯಂಕರ, ಈಗ ಕಲ್ಪಿಸಿಕೊಳ್ಳುವುದೂ ಕಷ್ಟವೇ. ಭಾರತದಂತಹ ಹತ್ತಾರು ಸಾವಿರ ವರ್ಷಗಳ ಸಮೃದ್ಧ ಪರಂಪರೆಯ ದೇಶವು ಪರಾಕ್ರಾಂತವಾದ ಅನಂತರ, ಹೀಗೆ ಅಂಧಕಾರದ, ಅಜ್ಞಾನದ, ದಾರಿದ್ರ್ಯದ, ಅಸ್ಮಿತಾವಿಹೀನವಾದ ಒಂದು ಮೂರ್ಖ ಸಮುದಾಯವಾಗಿಹೋಯಿತು! ಅಂತಹ ದುರ್ಭರ ಕಾಲದ ಪುನಾಸೃಷ್ಟಿ ಮಾಡಿದ್ದಾರೆ, ಲೇಖಕರು.

ಈ ವಾಸುದೇವ ಬಲವಂತ ಫಡಕೆ (1845 - 1883) ಬಾಲಗಂಗಾಧರ ತಿಲಕರಿಗೇ ಪ್ರತಿಜ್ಞಾವಿಧಿ ನೀಡಿದ ಆದ್ಯ ಕ್ರಾಂತಿಕಾರಿ. ಪ್ರವಾಸ ಮಾಡಿ ಅಂದಿನ ಬ್ರಿಟಿಷ್ ಇಂಡಿಯಾವನ್ನು ಅರ್ಥ ಮಾಡಿಕೊಂಡಿದ್ದು; ತಾತ್ಯಾ ಟೋಪೆ, ಝಾನ್ಸಿರಾಣಿ ಲಕ್ಷ್ಮೀಬಾಯಿ, ನಾನಾ ಸಾಹೇಬ್ ಮೊದಲಾದವರ ಮಾರ್ಗದ ಮುಂದುವರಿಕೆಯಾಗಿ, ಸಶಸ್ತ್ರ ಕ್ರಾಂತಿಯೊಂದೇ ಸ್ವಾತಂತ್ರ್ಯದ ಗುರಿ ಸಾಧನೆಯ ಅನಿವಾರ್ಯ ಮಾರ್ಗ ಎಂದು ಕಂಡುಕೊಂಡಿದ್ದು; ಸಮಾಜ ಕಂಟಕರಾದ, ದರೋಡೆಕೋರರಾದ ರಾಮೋಶಿಗಳನ್ನೂ ಪರಿವರ್ತಿಸಿ ಹೋರಾಟಗಾರರನ್ನಾಗಿ ಮಾಡಿದ್ದು; ಅನೇಕ ಗುಪ್ತ ಸಂಘಟನೆಗಳನ್ನು ಹುಟ್ಟುಹಾಕಿದ್ದು, ತರಬೇತಿ ನೀಡಿದ್ದು; ಬೇರೆಬೇರೆ ಕಡೆ ಏಕಕಾಲದಲ್ಲಿ ಬಂಡಾಯ ಎಬ್ಬಿಸಿದ್ದು ಇತ್ಯಾದಿ ಅತ್ಯಂತ ರೋಚಕ ಘಟನಾವಳಿಗಳಾಗಿವೆ. ಫಡಕೆ ನಿದ್ದೆಯಲ್ಲಿದ್ದಾಗ ಬ್ರಿಟಿಷರು ಮೋಸದಿಂದ ಬಂಧಿಸಿದ್ದು; ಅನಂತರದ ಜೀವಾವಧಿ ಶಿಕ್ಷೆ; ದೂರದ ಅರೇಬಿಯಾದ ಏಡನ್ ಸೆರೆಮನೆಗೆ ಹಾಕಿದ್ದು, ಅಲ್ಲಿಯೂ ಎಣ್ಣೆಗಾಣ ತಿರುಗಿಸುವ ಭಯಾನಕ ಶಿಕ್ಷೆ, 1880ರಲ್ಲಿ ಪಲಾಯನ ಮತ್ತು ಸೆರೆಸಿಕ್ಕಿದ ತಪ್ಪಿಗೆ ಇನ್ನಷ್ಟು ತೀವ್ರ ಶಿಕ್ಷೆಗೆ ಸಿಲುಕಿದ್ದು, ಇತ್ಯಾದಿಗಳನ್ನು ಓದಿಯೇ ಆ ಅದ್ಭುತ ಕಾಲಘಟ್ಟವನ್ನು ನಾವು ಅರಗಿಸಿಕೊಳ್ಳಬೇಕು.

ಉಪವಾಸ ಮಾಡಿ ಆತ್ಮಾರ್ಪಣೆ ಮಾಡಿಕೊಂಡ ವಾಸುದೇವರು, ತುಂಬಾ ಜತನದಿಂದ ಕಾಪಿಟ್ಟುಕೊಂಡಿದ್ದ ಭಾರತದ ಮಣ್ಣನ್ನು ತಮ್ಮ ಅಂತ್ಯಕಾಲದಲ್ಲಿ ಬಾಯಿಗೆ ಹಾಕಿಕೊಂಡಿದ್ದು ಓದುಗರ ದುಃಖಾಶ್ರುಗಳಿಗೆ ಕಾರಣವಾಗುತ್ತದೆ.

ಭಾರತದ ಕ್ರಾಂತಿಕಾರಿಗಳಿಗೆ ಸ್ಫೂರ್ತಿ ನೀಡಿದ ವಾಸುದೇವ ಬಲವಂತ ಫಡಕೆಯವರಿಗೆ 1943ರಲ್ಲಿ ಸಾವರಕರ್ ಅವರು ಶ್ರದ್ಧಾಂಜಲಿ ಸಲ್ಲಿಸಿದರು ಮತ್ತು ಈ ಕಾರಣದಿಂದ, ಭಾರತೀಯರಿಗೆ ಈ ಆದ್ಯ ಕ್ರಾಂತಿಕಾರಿಯ ಜೀವನದ ಪರಿಚಯವಾಯಿತು.